Yojana (Kannada) January 2015
"Registered" Reg.No.RNP/KA/BGS/2024/2013-2015
Date of Publication 3rd January, Posted at Bengaluru GPO on 10th January
Total No. of Pages : 72 + 4 Cover Pages
ISSN 0971-8737
Regd.No. RNI 43034/85

ಹರಿಪ್ರಸಾದ್
ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

KAS (Prelims cum Mains - as per New Syllabus)

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿದ್ಯಮಾನಗಳ ಬಗ್ಗೆ ಚರ್ಚೆ
(Exclusive Current Affairs classes)

OPTIONAL SUBJECTS
* ಕನ್ನಡ ಸಾಹಿತ್ಯ (ಖ್ಯಾತಸಾಹಿತಿ ಮತ್ತು ವಿಮರ್ಶಕರಿಂದ) * ಇತಿಹಾಸ
* ಮಾನವ ಶಾಸ್ತ್ರ (Anthropology) * ಸಾರ್ವಜನಿಕ ಆಡಳಿತ
* ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ (Rural Development & Cooperation)

KAS MAINS CLASSES FOR GENERAL STUDIES AND OPTIONALS AS PER NEW SYLLABUS (KANNADA AND ENGLISH MEDIUM)

FREE UPDATES ON CURRENT EVENTS @
www.ambitionias.com


G. HARIPRASAD
DIRECTOR

# 6, 4th Cross, 5th Main, B/h. Hampinagar Post Office, (Next to SBM), Vijayanagar 2nd Stage, Bangalore-104
Ph: 080-23354445, 9740472728, 9482013522

Printed & Published by Dr. (Ms) Sadhana Rout, Additional Director General and Head on behalf of Publications Division Soochna Bhawan, C.G.O. Complex, Lodhi Road, New Delhi - 110 003. & Printed at Omkar Offset Printers, 3/3, 1st Main Road, New Tharagupet, Bengaluru - 560 002. Ph. : 080-26708186/7 and Published at 1st Floor, 'F' Wing, Kendriya Sadana, Koramangala, Bengaluru - 560 034. Ph : 080 2553 7244 Chief Editor : Rajesh K. Jha, Senior Editor : B.S. Meenakshi.

# ಯೋಜನಾ

ವಿಶೇಷ ಸಂಚಿಕೆ

ಜನವರಿ 2015 ಅಭಿವೃದ್ಧಿ ಮಾಸಪತ್ರಿಕೆ ₹ 20/-

## ನೈರ್ಮಲ್ಯ, ಅಭಿವೃದ್ಧಿ ಮತ್ತು ಸಾಮಾಜಿಕ ಬದಲಾವಣೆ


ನೈರ್ಮಲ್ಯ ಮತ್ತು ಸಾಮಾಜಿಕ ಬದಲಾವಣೆ
ವಿಜಯನ್ ಕೆ. ಪಿಳ್ಳೈ ಮತ್ತು ರೂಪಾಲ್ ಪರೇಖ್

ಸಂಪೂರ್ಣ ಶೌಚಾಲಯ
ಗ್ರೇಗೊರಿ ಪೀಯರ್ಸ್

ನಗರ ನೈರ್ಮಲ್ಯ – ತಿರುಚಿದ ಬೆಳವಣಿಗೆ
ತ್ರಿಶಾ ಅಗರ್‌ವಾಲ್

ವಿಶೇಷ ಲೇಖನ
ಆದಾಯ ಅಸಮಾನತೆಗಳು
ತುಳಸಿ ಜಯಕುಮಾರ್

ಕೇಂದ್ರ ಪ್ರಜ್ಞೆ
ಹಸಿರು ಕ್ರಾಂತಿ : ತಂತ್ರಜ್ಞಾನ
ಟಿ.ಎನ್. ಶ್ರೀನಿವಾಸನ್ ಮತ್ತು ಪವನ್ ಕಾಟ್ಕರ್






# ಅಭಿವೃದ್ಧಿ ಹೊಂದಿದ ದೇಶಕ್ಕಾಗಿ ದೂರದೃಷ್ಟಿ

**ಉತ್ತಮ ಆಡಳಿತ ದಿನ**

ದೇಶದ ಮಾಜಿ ಪ್ರಧಾನಮಂತ್ರಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನ ಡಿಸೆಂಬರ್ 25ನ್ನು 'ರಾಷ್ಟ್ರೀಯ ಉತ್ತಮ ಆಡಳಿತ ದಿನ'ವನ್ನಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಉತ್ತಮ ಆಡಳಿತದ ಬಗ್ಗೆ ಮಾನ್ಯ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರಿಗಿರುವ ಚಿಂತನೆಗಳನ್ನು ಅವರ ಭಾಷಣಗಳಿಂದಾಯ್ದು ಸಾದರಪಡಿಸಲಾಗಿದೆ.

## ಉತ್ತಮ ಆಡಳಿತ; ಪಾರದರ್ಶಕ, ಉತ್ತರದಾಯಿತ್ವ ಮತ್ತು ವಿಶ್ವಾಸಾರ್ಹತೆ

ಉತ್ತಮ ಆಡಳಿತಕ್ಕೆ ಅತಿ ಮುಖ್ಯವಾದ ಅಂಶಗಳೆಂದರೆ

* ಸಮಗ್ರವಾದ ಕಾನೂನು ಚೌಕಟ್ಟು ಮತ್ತು ಅದನ್ನು ಪ್ರತಿಪಾದಿಸಿ, ಜಾರಿಗೊಳಿಸುವ ಸಶಕ್ತ ನ್ಯಾಯಾಂಗ ವ್ಯವಸ್ಥೆ.
* ಉತ್ತರದಾಯಿತ್ವದ, ಮುಕ್ತ ಮತ್ತು ಪಾರದರ್ಶಕ ಕಾರ್ಯಕಾರಿ ನಿರ್ಧಾರ – ಜತೆಗೆ ಸಮರ್ಥ, ದಕ್ಷ ಮತ್ತು ಜನ – ಸ್ನೇಹಿ ಅಧಿಕಾರ ವರ್ಗ
* ಕಡೆಯದಾದರೂ ಕಡಿಮೆಯಿಲ್ಲದ – ನಾಗರಿಕ ಸಮಾಜದ ಸಕ್ರಿಯ ಭಾಗವಹಿಸುವಿಕೆ

ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಉತ್ತಮ ಸರ್ಕಾರಕ್ಕೆ ಪರೀಕ್ಷಾ ಹಂತಗಳಿದ್ದಂತೆ. ಇವು ಸರ್ಕಾರದ ಚಟುವಟಿಕೆ ಮತ್ತು ಕಾರ್ಯಕ್ರಮಗಳ ದಕ್ಷ ಜಾರಿಯನ್ನು ಖಾತರಿಪಡಿಸುತ್ತವೆ; ಮಾತ್ರವಲ್ಲ, ಆಯ್ಕೆ ಮಾಡಿದ ಜನರ ಕಂಗಳಲ್ಲಿ ವಿಶ್ವಾಸಾರ್ಹತೆ ಮೂಡಿಸುತ್ತದೆ. ಸರ್ಕಾರದ ರಾಜಕೀಯ, ನ್ಯಾಯಯುತ ಅಸ್ತಿತ್ವಕ್ಕೆ ಬಹುಮತ ಬೆಂಬಲ ಹೇಗೆ ಅವಶ್ಯವೊ ಸರ್ಕಾರದ ನೈತಿಕ ಅಸ್ತಿತ್ವಕ್ಕೆ ನ್ಯಾಯಸಮ್ಮತೆಯೂ ಅಷ್ಟೇ ಪ್ರಾಮುಖ್ಯ.

ಆದ್ದರಿಂದ ಭಾರತೀಯ ಪ್ರಜಾತಂತ್ರ, ಪಾರದರ್ಶಕತೆ ಮತ್ತು ಉತ್ತರದಾಯಿತ್ವದ ನಿಯಮಾವಳಿಗಳಿಗೆ ಮಿಳಿತವಾದ ಬಲವಾದ ಸಾಂಸ್ಥಿಕ ಚೌಕಟ್ಟನ್ನು ರೂಪಿಸಿದೆ.

ಕರದಾತರ ಹಣವನ್ನು ಸರ್ಕಾರ ಎಲ್ಲಿ ಮತ್ತು ಹೇಗೆ ಖರ್ಚು ಮಾಡುತ್ತದೆ ಎಂಬುದರ ಬಗ್ಗೆ ಲಕ್ಷ್ಯ ವಹಿಸುವುದು ಶಾಸಕರ ಬಹು ಮುಖ್ಯ ಕರ್ತವ್ಯವಾಗಿದೆ.

## ದೇಶಕ್ಕಾಗಿ ಕೆಲಸ; ತ್ವರಿತ ಮತ್ತು ಉತ್ತಮ ಕೆಲಸ

ಆರ್ಥಿಕತೆಯ ಎಲ್ಲ ರಂಗಗಳಲ್ಲಿ ಉತ್ಪಾದಕತೆ ಹೆಚ್ಚಳಕ್ಕೆ ಆದ್ಯತೆ ನೀಡಬೇಕು. ಇದಕ್ಕಾಗಿ ಪ್ರತಿ ಕೆಲಸಗಾರ ಮತ್ತು ಪ್ರತಿ ಸಂಸ್ಥೆಗಳಲ್ಲಿ ನನ್ನ ಮನವಿ. ಬೇಗ ಕೆಲಸ ಮಾಡಿ, ಉತ್ತಮವಾಗಿ ಕೆಲಸ ಮಾಡಿ, ದೇಶಕ್ಕಾಗಿ ಕೆಲಸ ಮಾಡಿ.

## ನ್ಯಾಯಸಮ್ಮತೆ, ಸಮತೆ, ಸುಸ್ಥಿರತೆ

ಸರ್ಕಾರ, ವ್ಯಾಪಾರ ಮತ್ತು ಆಡಳಿತದಲ್ಲಿರುವವರ ಮುಂದಿರುವ ಬೃಹತ್ ಸವಾಲೆಂದರೆ ನ್ಯಾಯಸಮ್ಮತವಾಗಿ, ಸಮತೆಯಿಂದ, ಸುಸ್ಥಿರವಾಗಿ, ಜಾಗತಿಕ ವ್ಯಾಪಾರ ವಾಣಿಜ್ಯವನ್ನು ವೃದ್ಧಿಸುವುದು. ಜಾಗತೀಕರಣ ಮುಂದೆ ಅಪೇಕ್ಷಿತ ಫಲಿತಾಂಶ ನೀಡಬೇಕೆಂದರೆ ಮುಂದಿನ ಅಂಶಗಳು ನಮ್ಮ ಮಂತ್ರವಾಗಿರಬೇಕು.

* ಸರ್ವರ ಸುಖಕ್ಕಾಗಿ, ಕೆಲವರ ದುರಾಸೆಗಾಗಿ ಅಲ್ಲ.
* ದೀರ್ಘಾವಧಿಯ ಅಭಿವೃದ್ಧಿ, ಅಲ್ಪಾವಧಿಯ ಲಾಭವಲ್ಲ.
* ಪರಸ್ಪರ ಪೂರಕ ಒತ್ತಾಸೆ ಸಾಮರ್ಥ್ಯಗಳನ್ನು ಆಧರಿಸಿದ ಸಹಕಾರ, ಆದರೆ ಅನಾರೋಗ್ಯಕರ ಸ್ಪರ್ಧೆಯ ಸಂಘರ್ಷಗಳಲ್ಲ.

## ಭಾರತದ ಸಾಮರ್ಥ್ಯ

ಅಭಿವೃದ್ಧಿ ಹೊಂದುತ್ತಿರುವ ಹಾಗೂ ಅಭಿವೃದ್ಧಿ ಹೊಂದಿದ ದೇಶಗಳ ಜನರು, ಉದಾರೀಕರಣ ಮತ್ತು ಜಾಗತೀಕರಣಗಳನ್ನು ಬೆಂಬಲಿಸಲು ಸಿದ್ಧರಿದ್ದಾರೆ. ಆದರೆ, ಅವರಿಗೆ ಈ ಮುಂದಿನ ವಿಚಾರಗಳಲ್ಲಿ ಖಾತರಿಯ ಅವಶ್ಯಕತೆ ಇದೆ.

* ಈ ಸುಧಾರಣೆಗಳಿಂದ ಪ್ರತಿಯೊಬ್ಬರೂ ವಿಶೇಷವಾಗಿ ಬಡವರು ಮತ್ತು ಅವಕಾಶ ವಂಚಿತ ಸಮುದಾಯದ ಜನರಿಗೆ ಪ್ರಯೋಜನವಾಗುತ್ತವೆ.
* ಪರಿಸರದ ಸಂರಕ್ಷಣೆಯಾಗುತ್ತದೆ.
* ಅವರ ರಾಷ್ಟ್ರೀಯ ಮತ್ತು ಸಾಂಸ್ಕೃತಿಕ ಪರಂಪರೆ ಸಂರಕ್ಷಿತವಾಗಿರುತ್ತದೆ.

ಪ್ರತಿ ಭಾರತೀಯ – ಭಾರತದಲ್ಲಿ ನೆಲೆಸಿರುವ ಅಥವಾ ವಿದೇಶದಲ್ಲಿರುವವರಾಗಿರಬಹುದು; ಭಾರತ ಮಹಾನ್ ದೇಶ ಎಂಬುದು ಅವರ ಅವಿರತ ನಂಬಿಕೆ ಮತ್ತು ಈ ಸರ್ವಕಾಲಿಕ ಸತ್ಯವನ್ನು ವಿಶ್ವ ಏಕೆ ವ್ಯಕ್ತಪಡಿಸುತ್ತಿಲ್ಲವೆಂದು ಅಚ್ಚರಿಪಡುತ್ತಾರೆ. ಈ ಅಂತರ ಏಕೆಂದರೆ, ಬಹುಷ್ಯಃ ನಾವು ನಮ್ಮನ್ನು ಸಾಮರ್ಥ್ಯಗಳಿಂದ ಅಳೆದುಕೊಳ್ಳುತ್ತೇವೆ; ಇತರರು ನಮ್ಮ ಸಾಧನೆಗಳಿಂದ ನಮ್ಮನ್ನು ಅಳೆಯುತ್ತಾರೆ. ಆದರೆ ಈಗ ನಮ್ಮ ಸಾಮರ್ಥ್ಯ ಹಾಗೂ ಸಾಧನೆಗಳ ನಡುವಿನ ಅಂತರ ಕಡಿಮೆಯಾಗುತ್ತದೆ. ಭಾರತ ಬದಲಾಗುತ್ತಿದೆ; ತ್ವರಿತವಾಗಿ ಬದಲಾಗುತ್ತಿದೆ. ಈ ಬದಲಾವಣೆಯ ಛಾಯೆ ಸುಸ್ಪಷ್ಟವಾಗುತ್ತಿದೆ; ಗಾಢವಾಗುತ್ತಿದೆ. ಹೆಚ್ಚು ಗಮನಕ್ಕೆ ಬರುತ್ತಿದೆ. ಬೆಳಕಿಗೆ ಬರುತ್ತಿದೆ. ಮಾಹಿತಿ ತಂತ್ರಜ್ಞಾನ ಹಾಗೂ ಜ್ಞಾನಾಧಾರಿತ ಆರ್ಥಿಕತೆಯಲ್ಲಿರುವ ನಮ್ಮ ಶಕ್ತಿ ಸಾಮರ್ಥ್ಯವನ್ನು ಜಗತ್ತು ಈಗ ಗುರುತಿಸುತ್ತಿದೆ. ಬೆಳೆಯುತ್ತಿರುವ ಮಾರುಕಟ್ಟೆ ಮತ್ತು ಕ್ಷಿಪ್ರವಾಗಿ ವಿಸ್ತೃತಗೊಳ್ಳುತ್ತಿರುವ ನಮ್ಮ ಆರ್ಥಿಕತೆ ಜಾಗತಿಕವಾಗಿ ಕಡ್ಡಾಯವಾಗಿ ಮಾನ್ಯತೆ ನೀಡುವಂತೆ ಮಾಡಿವೆ. ಜಾಗತೀಕರಣ ಮತ್ತು ತಂತ್ರಜ್ಞಾನ ಕ್ರಾಂತಿಗಳಿಂದಾಗಿ ಭಾರತದ ಉದ್ದಿಮೆಗಳು ಜಾಗತಿಕವಾಗಿ ಸ್ಪರ್ಧಾತ್ಮಕವಾಗಿರುವುದನ್ನು ಕಲಿತಿವೆ. ಇಂದು 'ಮೇಡ್ ಇನ್ ಇಂಡಿಯಾ' (ಭಾರತದಲ್ಲಿ ತಯಾರಾಗಿದ್ದು) 'ಸೋರ್ಸ್‌ಡ್ ಫ್ರಂ ಇಂಡಿಯಾ' (ಭಾರತದ ಮೂಲದ್ದು) ಎನ್ನುವ ಲೇಬಲ್‌ಗಳು, ಉತ್ಪನ್ನ ಶೀರ್ಷಿಕೆಗಳು ರಾಷ್ಟ್ರೀಯ ಹೆಮ್ಮೆಯ ವಿಚಾರಗಳಾಗಿವೆ.

## ನಮಗೆ ಸಾಧ್ಯವಿದೆ, ನಾವು ಸಾಧಿಸಲೇ ಬೇಕು

ನಮ್ಮ ದೇಶದ ಪ್ರತಿ ಆರ್ಥಿಕ ಸಂಘಟನೆಗಳು ಕಲಿಕೆಯ ಸಂಘಟನೆಗಳಾಗಲಿ. ಭಾರತ ಸ್ವಯಂಪಾಠಿ ದೇಶವಾಗಲಿ. ಹೊಸ ರಾಷ್ಟ್ರೀಯ ಕಾರ್ಯ ಸಂಸ್ಕೃತಿಯನ್ನು ಸೃಷ್ಟಿಸಬೇಕೆನ್ನುವ ನಮ್ಮ ಪ್ರಯತ್ನ ನಮ್ಮ ಪುರಾತನ **ಸೇವೆ** ಪರಿಕಲ್ಪನೆ ಆಧರಿಸಿದ್ದರೆ ಮಾತ್ರ ಅಪೇಕ್ಷಿತ ಫಲ ಪಡೆಯಬಹುದು.

ಕೆಲಸವನ್ನು **ಸಮಾಜ ಸೇವೆ** ಮತ್ತು **ರಾಷ್ಟ್ರಸೇವೆ** ಎಂಬ ಭಾವನೆಯಿಂದ ಮಾಡಿದಾಗ ಮಾತ್ರ ಕೆಲಸ ಕರ್ತವ್ಯಕ್ಕಿಂತ ಹೆಚ್ಚಿನದಾಗುತ್ತದೆ; ಕೆಲಸವೇ ಪೂಜೆಯಾಗುತ್ತದೆ.

ಭಾರತ ಇಂದು ದೊಡ್ಡ ಸವಾಲ್ನೆದುರಿಸುತ್ತಿದೆ. ನಮ್ಮದು ಪ್ರಜಾತಂತ್ರವಾಗಿಯೇ ಉಳಿಯಲಿದೆ; ನಿಜ. ಅದುವೇ ಭಾರತ ಹೆಮ್ಮೆ ಮತ್ತು ಬಲ. ಆದರೆ, ನಮ್ಮ ಮುಂದಿರುವ ಸವಾಲುಗಳೆಂದರೆ –

* ನಮ್ಮ ಪ್ರಜಾಸತ್ತೆ, ಅಭಿವೃದ್ಧಿಯ ವಿಚಾರದ ಸುತ್ತ ಮುತ್ತ ಒಂದು ಸಾಮಾನ್ಯ ರಾಷ್ಟ್ರೀಯ ಉದ್ದೇಶವೊಂದನ್ನು ಹುಟ್ಟ ಹಾಕಬಲ್ಲದೇ ಮತ್ತು ನಮ್ಮೆಲ್ಲರ ಕನಸಿನೆತ್ತರಕ್ಕೆ ಸಾಕಾರಗೊಳಿಸಬಲ್ಲದೆ?
* ನಾವು ಪ್ರಾದೇಶಿಕ ಮತ್ತು ಸಾಮಾಜಿಕ ಅಸಮಾನತೆಯನ್ನು ನಗರ – ಗ್ರಾಮೀಣ ಅಂತರವನ್ನು ತ್ವರಿತವಾಗಿ ನಿವಾರಿಸಬಲ್ಲೆವೆ?
* ಗಮನೀಯ ಸಂಖ್ಯೆಯಲ್ಲಿರುವ ನಮ್ಮ ಯುವ ಜನತೆಯ ಆಶೋತ್ತರಗಳಿಗೆ ಸಮನಾಗಿ, ಅವಕಾಶಗಳನ್ನು ಕ್ರಿಪ್ತವಾಗಿ ಹಿಗ್ಗಿಸಬಲ್ಲೆವೆ?
* ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಭಾರತವನ್ನು 2020ರ ವೇಳೆಗೆ ಸಮಗ್ರವಾಗಿ ಅಭಿವೃದ್ಧಿ ಹೊಂದಿದ ದೇಶವನ್ನಾಗಿಸಬಲ್ಲೆವೆ?
* ಒಂದು ತಲೆಮಾರಿನ ಅವಧಿಯೊಳಗೆ?

**ಹೌದು,ನಾವು ಮಾಡಬಲ್ಲೆವು. ನಾವು ಮಾಡಲೇ ಬೇಕು.**

**ಮೂಲ : 'ಸೆಲೆಕ್ಟೆಡ್ ಸ್ಪೀಚಸ್ ಆಫ್ ಪ್ರೈಮ್ ಮಿನಿಸ್ಟರ್ ಅಟಲ್ ಬಿಹಾರಿ ವಾಜಪೇಯಿ"**
**ಪ್ರಕಾಶನ ವಿಭಾಗ, ವಾರ್ತಾ ಮತ್ತು ಪ್ರಸಾರ ಸಚಿವಾಲಯ ಭಾರತ ಸರ್ಕಾರದಿಂದ ಪ್ರಕಟಿತ**

ಜನವರಿ 2015 ಸಂಚಿಕೆ – 6 ಸಂಪುಟ – 30

# ಯೋಜನಾ

ಮುಖ್ಯ ಸಂಪಾದಕ
**ರಾಜೇಶ್ ಕೆ. ಝಾ**

ಹಿರಿಯ ಸಂಪಾದಕಿ
**ಬಿ.ಎಸ್. ಮೀನಾಕ್ಷಿ**

ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : yojanakannada@yahoo.com

## ಈ ಸಂಚಿಕೆಯಲ್ಲಿ ..........

ಸಂಪಾದಕೀಯ .......... 2

ನೈರ್ಮಲ್ಯ ಮತ್ತು ಸಾಮಾಜಿಕ ಬದಲಾವಣೆ .......... 3
**– ವಿಜಯನ್ ಕೆ. ಪಿಳ್ಳೈ ಮತ್ತು ರೂಪಾಲ್ ಪರೇಖ್**

ಸಂಪೂರ್ಣ ಶೌಚಾಲಯ .......... 9
**– ಗ್ರೇಗೊರಿ ಪೀಯರ್ಸ್**

ನಗರ ನೈರ್ಮಲ್ಯ – ತಿರುಚಿದ ಬೆಳವಣಿಗೆ .......... 13
**– ತ್ರಿಶಾ ಅಗರ್‌ವಾಲ್**

ಜೈವಿಕ ಶೌಚಾಲಯ .......... 18
**– ಡಾ. ಹುಜೈಫಾ ಕೊರಕಿವಾಲಾ**

ಸ್ವಚ್ಛ ಭಾರತ ಅಭಿಯಾನ: ಮುಖ್ಯವಾಹಿನಿಯೆಡೆಗೆ .......... 20
**– ಪೂರ್ಣಿಮಾ ಚಿಕರ್ಮನೆ**

ಆದಾಯ ಅಸಮಾನತೆಗಳು .......... 25
**– ತುಳಸಿ ಜಯಕುಮಾರ್**

ಹಸಿರು ಕ್ರಾಂತಿ: ತಂತ್ರಜ್ಞಾನ .......... 33
**– ಪ್ರೊ. ಟಿ. ಎನ್. ಶ್ರೀನಿವಾಸನ್ ಮತ್ತು ಪವನ್ ಕಾಟ್ಕರ್**

ಸ್ವಚ್ಛ ಭಾರತ ಅಭಿಯಾನ .......... 42
**– ಕೆ.ಎನ್. ಪಾಠಕ್**

ಬುಡಕಟ್ಟು ಜನಾಂಗದ ಬವಣೆ ಮತ್ತು ಅಭಿವೃದ್ಧಿಯ ತೊಡಕು .. 48
**– ಡಾ. ಎನ್. ಜಗದೀಶ್ ಕೊಪ್ಪ**

ತ್ಯಾಜ್ಯದಿಂದ ಬದುಕು .......... 52
**– ಎನ್.ವಿ. ವಾಸುದೇವ ಶರ್ಮಾ**

ಮೌಢ್ಯದಲ್ಲಿ ನಲುಗುತ್ತಿರುವ ಮಹಿಳೆಯರು .......... 57
**– ಶಿವರುದ್ರಯ್ಯ ಜಿ.ವಿ.**

ಮಹಿಳಾ ಸುಧಾರಣೆಯಲ್ಲಿ ಕುದ್ರೋಳಿಯ ಹೆಜ್ಜೆ .......... 61
**– ಸ್ವಯಂಪ್ರಭಾ**

ಮನದ ಮಲಿನವೂ ಪರಿಸರದ ಮಾಲಿನ್ಯವೂ .......... 64
**– ಅರುಣ್ ಕುಮಾರ್**

ಡಿಜಿಟಲ್ ಯುಗದ ಮುಂಚೂಣಿಯಲ್ಲಿ ಕರ್ನಾಟಕ .......... 67
**– ಎನ್.ಎಸ್.ಶ್ರೀಧರ ಮೂರ್ತಿ**

ಕೆರೆ ಹೂಳಿನ ಸದ್ಬಳಕೆ .......... 69
**– ಪ್ರೊ॥ ಎಂ. ರುದ್ರಾರಾಧ್ಯ**

ನಿಮಗಿದು ತಿಳಿದಿದೆಯೇ? .......... 71

ವಾರ್ತಾ ವಿಶೇಷ .......... 72

ಮುಖಪುಟ ವಿನ್ಯಾಸ : ಗಜಾನನ ಪಿ. ಧೋಪೆ

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 100.00 |
| ಎರಡು ವರ್ಷಗಳಿಗೆ | 180.00 |
| ಮೂರು ವರ್ಷಗಳಿಗೆ | 250.00 |


**ಚಂದಾ ಹಣವನ್ನು ಮನಿಯಾರ್ಡರ್ ಮೂಲಕವೇ ನಮ್ಮ ವಿಳಾಸಕ್ಕೆ ಕಳಿಸಿರಿ.**

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ವಿಳಾಸಕ್ಕೆ ಕಳುಹಿಸಬೇಕು.**

ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ.

ಮುಖ್ಯ ಸಂಪಾದಕರ ಲೇಖನಿಯಿಂದ

# ಯಾರೆಂಬ ಪ್ರಶ್ನೆ




ಇದು ಗಾಂಧೀಜಿಯವರ ಜೀವನದಲ್ಲಿ ನಡೆದ ಸಂಗತಿ. ಅದು 1898. ಗಾಂಧೀಜಿ ದಕ್ಷಿಣ ಆಫ್ರಿಕಾದ ಡರ್ಬನ್‌ನಲ್ಲಿ ವಕೀಲರಾಗಿ ಕೆಲಸ ಮಾಡುತ್ತಿದ್ದ ಸಮಯ. ಅವರ ಕಚೇರಿ ಗುಮಾಸ್ತರೆಲ್ಲ ಬಹಳಷ್ಟು ವೇಳೆ ಅವರೊಂದಿಗೆ ಮನೆಯಲ್ಲಿಯೆ ಉಳಿಯುತ್ತಿದ್ದರು. ಒಮ್ಮೆ **ಪಂಚಮ** ಸಂಜಾತ ಕ್ರಿಶ್ಚಿಯನ್ ಗುಮಾಸ್ತನೊಬ್ಬ ಅವರೊಂದಿಗಿದ್ದ. ಅವರ ಮನೆಯ ಕೊಠಡಿಯೊಂದಕ್ಕೆ ಶೌಚ ಕುಂಡ ಸೌಕರ್ಯವಿತ್ತು. ಶೌಚ ಕುಂಡದಲ್ಲಿ ಸಂಗ್ರಹವಾದ ಮಲಮೂತ್ರವನ್ನು ಗಾಂಧೀಜಿ ಪತ್ನಿ ಕಸ್ತೂರಬಾ ಅವರೇ ಪ್ರತಿದಿನ ಬೆಳಗ್ಗೆ ಶುಚಿಗೊಳಿಸುತ್ತಿದ್ದರು. ಆದರೆ, ಕಸ್ತೂರಬಾ ಅವರಿಗೆ ಈ ವ್ಯಕ್ತಿ ಕೆಳಜಾತಿಯನೆಂಬ ಕಾರಣಕ್ಕೆ ಆತನ ಶೌಚ ಸಂಗ್ರಹವನ್ನು ತಾವು ಶುಚಿಗೊಳಿಸುವುದು ಇಷ್ಟವಾಗುತ್ತಿರಲಿಲ್ಲ; ಅಥವಾ ಪತಿ ಗಾಂಧೀಜಿಯವರು ಶುಚಿಗೊಳಿಸಿದರೂ ಸೇರ ಬರುತ್ತಿರಲಿಲ್ಲ. ಗಾಂಧೀಜಿಯವರಾದರೊ ತಮ್ಮ ಪತ್ನಿ ಮನಸೋ ಇಚ್ಛೆಯಿಂದ ಈ ಕೆಲಸ ಮಾಡಬೇಕೆಂದು ಬಯಸಿದ್ದರು. ಪದೇ ಪದೇ ಹೇಳುತ್ತಿದ್ದರು ಕೂಡಾ. ಗಾಂಧೀಜಿ ತಮ್ಮ ಆತ್ಮ ಚರಿತ್ರೆಯಲ್ಲಿ ಈ ವಿದ್ಯಮಾನದ ಬೆಳವಣಿಗೆಯನ್ನು ಈ ರೀತಿ ಪ್ರಸ್ತಾಪಿಸಿದ್ದಾರೆ. "ಒಮ್ಮೆ ನಾನೇ ನನ್ನನ್ನು ಮರೆತಿದ್ದೆ, ಈ ವಿಚಾರದಲ್ಲಿ ನನಗೆ ಆಕೆ ಬಗ್ಗೆ ಅನುಕಂಪದ ಸೆಲೆಯೇ ಬತ್ತಿ ಹೋಗಿತ್ತು. ಆಕೆಯ ಕೈ ಹಿಡಿದು, ಅಸಹಾಯಕಳಾಗಿದ್ದ ಅವಳನ್ನು ಹೊರಗೆ ದಬ್ಬಲು ಗೇಟಿನವರೆಗೂ ಎಳೆದೊಯ್ದಿದ್ದೆ" ಎಂದು ತಮ್ಮ ವರ್ತನೆ ಬಗ್ಗೆ ತಾವೇ ನಾಚಿಕೆ ಪಟ್ಟುಕೊಂಡು ಘಟನೆ ಸ್ಮರಿಸಿದ್ದಾರೆ.

ಇದು, ಸ್ವಚ್ಛತೆ ಮತ್ತು ಜಾತಿ ಆಯಾಮಕ್ಕೆ ಇರುವ ಸಂಬಂಧಗಳ ಬಗ್ಗೆ ಗಾಂಧೀಜಿಯವರಿಗೆ, ಇದ್ದ ಪರಿಕಲ್ಪನೆ ಕುರಿತು ಬೆಳಕು ಚೆಲ್ಲುತ್ತದೆ. ಶೌಚ ನೈರ್ಮಲ್ಯೀಕರಣ, ವೈಯಕ್ತಿಕ ಅಥವಾ ನಗರ ಶುಚೀಕರಣವನ್ನೂ ಮೀರಿ ನಿಲ್ಲುತ್ತದೆ, ಅವರ ಸಮಗ್ರ ಪರಿಕಲ್ಪನೆ, ವ್ಯಕ್ತಿ, ಸಮಾಜ, ಸರ್ಕಾರಗಳ ನಡುವಿನ ಬಹುಮುಖ ಸಂಕೀರ್ಣ ಸಂಬಂಧಗಳನ್ನು ಅನಾವರಣಗೊಳಿಸುತ್ತದೆ. ದಕ್ಷಿಣ ಆಫ್ರಿಕಾದಲ್ಲಿ ಶೌಚ ನೈರ್ಮಲ್ಯೀಕರಣ ಒಂದು ರಾಜಕೀಯ ಮುಖವಾಡವನ್ನು ಹೊತ್ತಿದೆ ಹಾಗೂ ಬ್ರಿಟಿಷರ ಜಾತಿ ತಾರತಮ್ಯದ ವರ್ಣಭೇದ ನೀತಿಯ ಕುಮ್ಮಕ್ಕಾಗಿದೆ ಎಂದು ಗಾಂಧೀಜಿ ಅರಿತಿದ್ದರು. ನೈರ್ಮಲ್ಯೀಕರಣ ಮತ್ತು ವೈಯಕ್ತಿಕ ಶುಚಿಗಳ ತಾರತಮ್ಯ ವಿರುದ್ಧದ ಹೋರಾಟವನ್ನು ಭಾರತೀಯರ ಮತ್ತು ಆಫ್ರಿಕನ್ ಮೂಲನಿವಾಸಿಗಳ ಹಕ್ಕು ಕುರಿತ ಹೋರಾಟದಿಂದ ಬೇರ್ಪಡಿಸಲಾಗದು ಎನ್ನುವುದು ಅವರ ಬಲವಾದ ಪ್ರತಿಪಾದನೆಯಾಗಿತ್ತು. ದಕ್ಷಿಣ ಆಫ್ರಿಕಾದ ದಿನಗಳಿಂದ ಮನಸ್ಸಿನಲ್ಲಿ ನೆಲೆಯೂರಿದ್ದ ಈ ವಿಚಾರಧಾರೆ ಅವರು ಒಮ್ಮೆ ದೆಹಲಿಯ, ಮಲ ಬಳಿಯುವವರ ಕಾಲೋನಿಯಲ್ಲಿ ಕೆಲ ಕಾಲ ತಂಗಿದ್ದುದರ ಮೂಲಕ ಚಲಾವಣೆ ಪಡೆಯಿತು. ಶೌಚ ವಿಚಾರದಲ್ಲಿರುವ ಸಂಕುಚಿತ ಅಮಾನವೀಯ ಭಾವನೆ ಮತ್ತು ಸಾಮಾಜಿಕ ಬೇರ್ಪಡೆ ವ್ಯವಸ್ಥೆಯನ್ನು ಬಗ್ಗಿಸದ ಹೊರತು ಶೌಚ-ವ್ಯವಸ್ಥೆ ಬಗ್ಗೆ ಕೇವಲ ಮಾತನಾಡುವುದು ಅರ್ಥಹೀನ ಎಂದು ಗಾಂಧೀಜಿ ನಂಬಿದ್ದರು. ಇದೀಗ ಮತ್ತೆ ಕೇಂದ್ರ ಸರ್ಕಾರ ಶುಚಿತ್ವದ ದೇಶವ್ಯಾಪ್ತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರೊಂದಿಗೆ ನೈರ್ಮಲ್ಯೀಕರಣ ಕೇಂದ್ರ ಪ್ರಶ್ನೆ ವಿಷಯವಾಗಿದೆ. ಈ ಹಿಂದೆ ಸ್ವಚ್ಛತಾ ಕಾರ್ಯಕ್ರಮಗಳು ಸರ್ಕಾರದ ನೀತಿಯ ಭಾಗವಾಗಿದ್ದರೂ ಕೂಡಾ ಈಗ ಆಡಳಿತಾತ್ಮಕ ಪ್ರಯತ್ನ ಮತ್ತು ಮಾಧ್ಯಮಗಳ ದೃಷ್ಟಿ ಎರಡರಿಂದಲೂ ದೊರಕುತ್ತಿರುವ "ಬೃಹತ್ ಮುನ್ನೂಕು" ಹಿಂದೆಂದೂ ಸಿಕ್ಕಿರಲಿಲ್ಲ. ಸರ್ಕಾರ ನಗರ ತ್ಯಾಜ್ಯ ನಿರ್ವಹಣೆ, ಶೌಚಾಲಯಗಳ ನಿರ್ಮಾಣ; ಸ್ವಚ್ಛತೆ, ವೈಯಕ್ತಿಕ ಸ್ವಾಸ್ಥ್ಯ ಕ್ಷೇತ್ರಕ್ಕಾಗಿ ಬೃಹತ್ ಮೊತ್ತದ ಹಣವನ್ನು ರಾಜ್ಯ ಸರ್ಕಾರಗಳು ಉದ್ದಿಮೆ, ಕಾರ್ಪೊರೆಟ್, ಸ್ವಯಂ ಸೇವಾ ಸಂಘಟನೆಗಳ ಸಹಕಾರದೊಂದಿಗೆ ವ್ಯಯಿಸಲು ಬದ್ಧವಾಗಿದೆ.

ಈ ಸಂದರ್ಭದಲ್ಲಿ ಒಳಚರಂಡಿ, ಪಾಯಿಖಾನೆ, ಕಛೇರಿ, ನಗರಸಭೆ ಪಾಲಿಕೆ. ಸಾರ್ವಜನಿಕ ಸ್ಥಳಗಳ ಸ್ವಚ್ಛತೆಯ ದಿನನಿತ್ಯದ ಉಸ್ತುವಾರಿ ಜವಾಬ್ದಾರಿ ಹೊತ್ತಿರುವ ಜನರ ಬಗ್ಗೆ ವಿಶೇಷ ಗಮನ ನೀಡುವುದು ಅತ್ಯಗತ್ಯ. ನೈರ್ಮಲ್ಯೀಕರಣ ವ್ಯವಸ್ಥೆಯಲ್ಲಿ ಅತಿ ಕಡಿಮೆ ವೇತನಕ್ಕೆ ದುಡಿಯುವ ಲಕ್ಷಾಂತರ ಕೆಲಸಗಾರರಿದ್ದಾರೆ. ಅವರು ಅಮಾನವೀಯ ಕಾರ್ಯ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಸಾಮಾಜಿಕವಾಗಿ ಈ ಕೆಲಸಗಾರರು ಸಮಾಜದ ದುರ್ಬಲ ವರ್ಗಕ್ಕೆ ಸೇರಿದವರು. ಇದಲ್ಲದೆ ಸಾಕಷ್ಟು ಪ್ರಮಾಣದ ಕಸ ಆಯುವವರು ಕಸ ಸಂಗ್ರಹಿಸುವವರು ಇದ್ದಾರೆ. ಇವರಲ್ಲಿ ಅನೇಕರು 14 ವರ್ಷ ವಯಸ್ಸನ್ನೂ ದಾಟಿಲ್ಲ. ಅವರಿಗೆ ಸಾಮಾಜಿಕ ಭದ್ರತೆ ಇಲ್ಲ. ಆಘಾತಕಾರಿ ವಿಷಯ ಎಂದರೆ ಭಾರತದ ಶೇಕಡ 90 ರಷ್ಟು ಶುಚಿ ಕೆಲಸಗಾರರು 60 ವರ್ಷ ಕಾಣುವುದರೊಳಗೆ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗಿ ಸಾವಿಗೀಡಾಗುತ್ತಿದ್ದಾರೆ. ಈ ಸಂದರ್ಭದಲ್ಲಿ ಹಣಕಾಸು ಸಂಪನ್ಮೂಲ ಮತ್ತು ಯೋಜನೆಗಳ ಆಡಳಿತಾತ್ಮಕ ಬದಲಾವಣೆ ಬಗ್ಗೆ ತೋರುವ ಕಾಳಜಿ, ಆರೋಗ್ಯ ಮತ್ತು ಗೌರವ ರಕ್ಷಣೆ ವಿಚಾರದಲ್ಲಿ ಕೂಡಾ ಮುಂಚೂಣಿಯಲ್ಲಿರಬೇಕಾಗಿದೆ.

ಸರ್ಕಾರದ ಈ ಕಾರ್ಯಕ್ರಮಕ್ಕೆ ಗಾಂಧೀಜಿ ಸಕಾರಣದಿಂದಲೇ ಸ್ಫೂರ್ತಿಯ ಪ್ರೇರಕಶಕ್ತಿಯಾಗಿದ್ದಾರೆ. ಗಾಂಧೀಜಿ ದೃಷ್ಟಿ 'ಕನ್ನಡಕ' ಈ ಕಾರ್ಯಕ್ರಮದ ಲಾಂಛನ. ಎಲ್ಲ ನಗರ, ಪಟ್ಟಣ, ಹಳ್ಳಿಗಳಲ್ಲಿ ಆಧುನಿಕ ಶೌಚ ನೈರ್ಮಲ್ಯೀಕರಣದ ವ್ಯವಸ್ಥೆ ಆಧುನೀಕರಣಗೊಂಡು ಪೂರ್ಣಪ್ರಮಾಣದಲ್ಲಿ ಜಾರಿಯಾಗಲಿ. ಎಲ್ಲ ವರ್ಗದ ಜನರು 'ಸಫಾಯಿ ಕರ್ಮಚಾರಿ' ಕೆಲಸ ಕೈಗೊಳ್ಳಲು ಮುಂದಾಗುವಂತಾಗಲಿ; ಗಾಂಧೀಜಿಯವರ ಮುಖದಲ್ಲಿ ಸಮಾಧಾನದ ನಗೆ ಮೂಡಲಿ. ಇದಕ್ಕಾಗಿ ಬಹಳ ಕಾಲ ಕಾಯದಂತಾಗಲಿ. ಬಾಪು, ಇದಕ್ಕಾಗಿ ನಮ್ಮನ್ನು ಹರಸು. ❑

# ನೈರ್ಮಲ್ಯ ಮತ್ತು ಸಾಮಾಜಿಕ ಬದಲಾವಣೆ

ವಿಜಯನ್ ಕೆ. ಪಿಳ್ಳೈ
ರೂಪಾಲ್ ಪರೇಖ್
ಕನ್ನಡಕ್ಕೆ : ವಾಗೀಶ್ ಕುಮಾರ್



ಪ್ರಸಕ್ತ ಭಾರತದಲ್ಲಿರುವ 'ಸಂಪೂರ್ಣ ನೈರ್ಮಲ್ಯ ಆಂದೋಲನ', 'ಮಹಾತ್ಮ ಗಾಂಧಿ ಸ್ವಚ್ಛ ಭಾರತ ಕಾರ್ಯಕ್ರಮ' ಮೊದಲಾದ ಆಂದೋಲನಗಳು, ಪ್ರತಿ ಮನೆಗೂ ಪ್ರತ್ಯೇಕ ಶೌಚಾಲಯ ಒದಗಿಸುವ ಮೂಲಕ ಬಯಲಿನಲ್ಲಿ ಮಲ ವಿಸರ್ಜನೆ ಮಾಡುವ ಪಿಡುಗನ್ನು ಮೂಲೋತ್ಪಾಟನೆ ಮಾಡುವ ಗುರಿ ಹೊಂದಿವೆ.

ವಿಶ್ವದಲ್ಲಿ ಶೌಚಾಲಯ ಸೌಲಭ್ಯವಿಲ್ಲದ ಒಟ್ಟು 2.6 ಶತಕೋಟಿ ಜನರ ಪೈಕಿ 650 ದಶಲಕ್ಷ ಜನರು ಭಾರತದಲ್ಲಿ ವಾಸಿಸುತ್ತಿದ್ದಾರೆ. ದೇಶವನ್ನು ಕಾಡುತ್ತಿರುವ ಬಹುದೊಡ್ಡ ಸಮಸ್ಯೆಗಳ ಪೈಕಿ ಒಂದಾದ ನೈರ್ಮಲ್ಯದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಭಾರತ ಸರ್ಕಾರ 'ಮಹಾತ್ಮ ಗಾಂಧಿ ಸ್ವಚ್ಛ ಭಾರತ ಕಾರ್ಯಕ್ರಮ' ವನ್ನು ಆರಂಭಿಸಿದೆ. ಈ ಕಾರ್ಯಕ್ರಮದ ಯಶಸ್ಸು ಮತ್ತು ಅದರ ಸದೃಢತೆ, ಶುಚಿತ್ವದ ಮಟ್ಟಿಗೆ ಅಷ್ಟೇನೂ ಗಮನ ನೀಡದ ಸಾಮಾಜಿಕ ರಚನಾ ಶಕ್ತಿಗಳ ಜೊತೆಗಿನ ಹೊಂದಾಣಿಕೆಯನ್ನು ಅವಲಂಬಿಸಿದೆ. ಸಾಮಾಜಿಕ ರಚನೆಯ ದೃಷ್ಟಿಕೋನದಲ್ಲಿ ಭಾರತದಲ್ಲಿ ನೈರ್ಮಲ್ಯವನ್ನು ಸಾಧಿಸುವ ಕುರಿತ ಮಾರ್ಗೋಪಾಯಗಳನ್ನು ಕಂಡುಹಿಡಿಯುವುದು ಈ ಅಧ್ಯಯನದ ಉದ್ದೇಶವಾಗಿದೆ. ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆ – ಐಐಐ ಇದರ ದತ್ತಾಂಶಗಳ ಮೂಲಕ ನೈರ್ಮಲ್ಯದ ಬಹು ಸ್ತರ ಮಾದರಿ ಹಾಗೂ ಅದರ ಪ್ರಯೋಗಾತ್ಮಕತೆಯ ಅಂಗೀಕಾರರ್ಹತೆಯ ಮೌಲ್ಯಮಾಪನವನ್ನು ನಾವು ಇಲ್ಲಿ ಪ್ರಸ್ತಾಪಿಸುತ್ತಿದ್ದೇವೆ. ಶುಚಿತ್ವದ ಈಗಿರುವ ಸನ್ನಿವೇಶವನ್ನು ಸುಧಾರಿಸುವಲ್ಲಿ ಆಧುನೀಕರಣ ಬಹು ಮುಖ್ಯ ಪಾತ್ರ ವಹಿಸುತ್ತದೆ ಎಂಬುದನ್ನು ನಾವು ಕಂಡುಕೊಂಡಿದ್ದೇವೆ. ಅದಕ್ಕೂ ಮುಖ್ಯವಾಗಿ, ಈ ಕಾರ್ಯಕ್ರಮವು ಯಶಸ್ವಿಯಾಗಬೇಕಾದರೆ, ನಮಗೆ ಪ್ರಬಲ ರಾಜಕೀಯ ಇಚ್ಛಾಶಕ್ತಿ ಅಗತ್ಯ. ಈ ಮೂಲಕ ಆರೋಗ್ಯ ಶಿಕ್ಷಣ ಮತ್ತು ಆಧುನಿಕ ಸೌಲಭ್ಯಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸುವ ಕೆಲಸವಾಗಬೇಕಿದೆ.

2050ರ ಹೊತ್ತಿಗೆ ವಿಶ್ವದ ಜನಸಂಖ್ಯೆ 9.6 ಶತಕೋಟಿಗೆ ತಲುಪುವ ನಿರೀಕ್ಷೆಯಿದೆ. ಅದರಲ್ಲಿ ಸುಮಾರು ಶೇ. 66ರಷ್ಟು ಜನರು ನಗರ ಪ್ರದೇಶದಲ್ಲಿ ವಾಸಿಸಲಿದ್ದಾರೆ (ಪೋರ್ಟರ್, ಡೈಬಾಲ್, ದುಮರೆಸ್ಕ್, ಡ್ಯೂಟ್ಸೆಚ್ ಮತ್ತು ಮತ್ಸುದ, 2014; ಇವಾನ್ಸ್, 1998). ಇದರರ್ಥ, 2050ರಲ್ಲಿ ನಗರ ಪ್ರದೇಶಗಳಲ್ಲಿ ಈಗಿರುವ ಜನಸಂಖ್ಯೆಯಲ್ಲಿ ಶೇ. 12ರಷ್ಟು ಏರಿಕೆಯಾಗಿ ನಗರ ಜನಸಂಖ್ಯೆಗೆ ಸುಮಾರು 2.4 ಶತಕೋಟಿ ಹೆಚ್ಚುವರಿ ಸೇರ್ಪಡೆಯಾಗಲಿದೆ. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಒಟ್ಟಾರೆ ಫಲವತ್ತತೆ ಪ್ರಮಾಣ ಇತ್ತೀಚಿನ ದಶಕಗಳಲ್ಲಿ ಇಳಿಮುಖವಾಗಿದ್ದರೂ, ಜನಸಂಖ್ಯೆಯ ಪ್ರಮಾಣ ವೇಗವಾಗಿ ಏರುತ್ತಲೇ ಇದೆ (ಚಂದ್ರಶೇಖರ್ 2013). ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೋಲಿಸಿದರೆ ಮುಂದುವರಿಯುತ್ತಿರುವ ರಾಷ್ಟ್ರಗಳ ನಗರಗಳ ಸಂಖ್ಯೆ ಕಡಿಮೆಯಿದ್ದರೂ, ವಿಶ್ವದ ಒಟ್ಟು ನಗರ ಜನಸಂಖ್ಯೆ ಸುಮಾರು ಶೇ. 53ರಷ್ಟು ಪಾಲು ಜನಸಂಖ್ಯೆ ಏಷ್ಯಾ ದೇಶಗಳ ನಗರಗಳಲ್ಲಿವೆ. ಪ್ರಾಯಶಃ ಜನಸಂಖ್ಯೆ ಏರಿಕೆ ಮತ್ತು ನಗರೀಕರಣದ ನಾಗಾಲೋಟವೇ ನೈರ್ಮಲ್ಯದ ಸಂಪೂರ್ಣ ಕುಸಿತ ಮತ್ತು ಅದರ ಫಲಿತಾಂಶವಾಗಿ ಜನರ ಆರೋಗ್ಯ ಮಟ್ಟದ ಕುಸಿತದಂತಹ ಪ್ರಮುಖ ಸಮಸ್ಯೆಗೆ ಕಾರಣವಾಗಿರಬಹುದು (ರೈನೆರ್ ಆಂಡ್ ಲಾಂಗ್, 2013).

ಮೂಲಭೂತ ನೈರ್ಮಲ್ಯದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಬಹುತೇಕ ಮುಂದುವರಿದ ರಾಷ್ಟ್ರಗಳಲ್ಲಿ ಆರಂಭಿಸಲಾದ ಸಾರ್ವಜನಿಕ ಕಾರ್ಯಕ್ರಮಗಳು ಮತ್ತು

* ಪ್ರಾಧ್ಯಾಪಕರು, ** ಸಂಶೋಧನಾರ್ಥಿ, ಸ್ಕೂಲ್ ಆಫ್ ಸೋಶಿಯಲ್ ವರ್ಕ್, ಟೆಕ್ಸಾಸ್ ಯುನಿವರ್ಸಿಟಿ.
* email : pillai@uta.edu ** Rupal.Parekh@mavs.uta.edu

ನೀತಿಗಳು ವಿಫಲವಾಗಿದ್ದು, ವಾಸ್ತವವಾಗಿ 1990 ಮತ್ತು 2008ರ ನಡುವೆ ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ ಮೂಲಭೂತ ಶುಚಿತ್ವದ ಸೌಲಭ್ಯ ಪಡೆದವರ ಸಂಖ್ಯೆ ಶೇ. 54ರಿಂದ ಶೇ. 61ಕ್ಕೆ ಏರಿದೆ. ಆದರೂ ಈಗಲೂ ವಿಶ್ವದಾದ್ಯಂತ 2.6 ಶತಕೋಟಿ ಜನರು ಶೌಚಾಲಯವಿಲ್ಲದೆ ನೈರ್ಮಲ್ಯದ ಕೊರತೆಯನ್ನು ಎದುರಿಸುತ್ತಿದ್ದಾರೆ (ಮಜ್ರಾ ಮತ್ತು ಗುರ್, 2008 ; ಮೋ ಮತ್ತು ರೈಂಗನ್ಸ್, 2006). ಸಮಸ್ಯೆಯ ಗಂಭೀರತೆಯೇ 2000ರಲ್ಲಿ ಶತಮಾನದ ಅಭಿವೃದ್ಧಿ ಗುರಿ ಸ್ಥಾಪನೆಗೆ ದಾರಿ ಮಾಡಿಕೊಟ್ಟಿತು. ಈ ಮೂಲಕ ಮುಂದುವರಿದ ರಾಷ್ಟ್ರಗಳಲ್ಲಿ ಶೌಚಾಲಯ ಸೌಲಭ್ಯವಿಲ್ಲದ ಜನರ ಸಂಖ್ಯೆಯನ್ನು ಅರ್ಧದಷ್ಟು ಇಳಿಸುವ ಗುರಿ ಹಾಕಿಕೊಳ್ಳಲಾಯಿತು(ಕನಡೇ, 2011; ಬರ್ಟ್ರಾಮ್ ಮತ್ತು ಕೈರ್ನ್‌ಕ್ರಾಸ್, 2010).

ಕಳಪೆ ನೈರ್ಮಲ್ಯವು ಹಲವಾರು ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳ ಜೊತೆಗೆ ನಂಟು ಹೊಂದಿದೆ. ಶುದ್ಧ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮ ವರದಿಯನ್ವಯ, ಅಸಮರ್ಪಕ ಶುಚಿತ್ವವು 2006ರಲ್ಲಿ 53.8 ಶತಕೋಟಿ ಅಮೆರಿಕನ್ ಡಾಲರ್ ನಷ್ಟಕ್ಕೆ ಕಾರಣವಾಗಿದ್ದು, ಇದು ಭಾರತದ ಒಟ್ಟು ಆಂತರಿಕ ಉತ್ಪನ್ನ (ಜಿಡಿಪಿ) ಯ ಶೇ. 6.4ರಷ್ಟಾಗುತ್ತದೆ (ವಾಟರ್ ಆಂಡ್ ಸ್ಯಾನಿಟೇಶನ್ ಪ್ರೋಗ್ರಾಮ್, 2011). ಇದರ ಪೈಕಿ ಶೇ. 72ರಷ್ಟು ಭಾಗ ಆರೋಗ್ಯದ ಸಮಸ್ಯೆಗಳಿಗೆ ಸಂಬಂಧಿಸಿವೆ. ಕಳಪೆ ನೈರ್ಮಲ್ಯವು ಯಾವ ರೀತಿ ಸಾಮಾಜಿಕ ಸಮಸ್ಯೆ ಸೃಷ್ಟಿಸುತ್ತದೆ ಎಂಬ ಬಗ್ಗೆ ಸೂಕ್ತವಾದ ಪರಿಶೀಲನೆ ಇನ್ನೂ ನಡೆದಿಲ್ಲ. ಸಾಮಾಜಿಕ ಸಮಸ್ಯೆ ಸೃಷ್ಟಿಯ ಕುರಿತ ಬಹುತೇಕ ಪುರಾವೆಗಳು ಕಳಪೆ ದಾಖಲೀಕರಣ ಮತ್ತು ಅಸಮರ್ಪಕ ಸಂಶೋಧನೆಗಳಿಂದ ಕೂಡಿರುವುದನ್ನು ಎತ್ತಿ ತೋರಿಸುತ್ತಿವೆ. (ಚು. 2013).



ಭಾರತದಲ್ಲಿ 650 ದಶಲಕ್ಷ ಜನರು ಶೌಚಾಲಯ ಸೌಲಭ್ಯದಿಂದ ವಂಚಿತರಾಗಿದ್ದಾರೆ. ನೈರ್ಮಲ್ಯೀಕರಣದ ಬಹುದೊಡ್ಡ ಸಮಸ್ಯೆಯ ನಿವಾರಣೆಗೆ ಸರ್ಕಾರ ಮತ್ತು ಸರ್ಕಾರೇತರ ಸಂಘಟನೆ ಎನ್‌ಜಿಓಗಳ ಸಹಭಾಗಿತ್ವದ ದ್ವಿಮುಖ ಯೋಜನೆಯು ಅತ್ಯವಶ್ಯಕ ಎಂದು ಕಾಣಿಸುತ್ತದೆ. ಸರ್ಕಾರದ ಯೋಚನೆಗಳು ಮುಖ್ಯವಾಗಿ ಸಮುದಾಯ ಆಂದೋಲನಗಳತ್ತ ಗಮನ ಹರಿಸಿವೆ. 2017ರೊಳಗೆ ಬಯಲು ಶೌಚಾಲಯದ ನಿವಾರಣೆಯು ಮುಖ್ಯ ಗುರಿಯಾಗಿದ್ದು, ಇಂತಹ ವ್ಯವಸ್ಥೆಯಡಿಯಿರುವ ಜನರ ಮೇಲೆ ಒತ್ತಡ ಮತ್ತು ಸಮುದಾಯಗಳಿಗೆ ಉತ್ತೇಜನ ನೀಡುವ ಮೂಲಕ 'ಬಯಲು ಶೌಚಾಲಯ ಮುಕ್ತ' ಹೆಗ್ಗಳಿಕೆಯನ್ನು ಸಾಧಿಸಬಹುದಾಗಿದೆ. ಸುಮಾರು 1000 ನಗರಗಳ ನೈರ್ಮಲ್ಯೀಕರಣ ಮತ್ತು ಮಲ ಹೊರುವ ಪದ್ಧತಿ ಅಥವಾ ಕೈಯಿಂದ ಸ್ವಚ್ಛಗೊಳಿಸುವ ವ್ಯವಸ್ಥೆಯನ್ನು ತೊಡೆದು ಹಾಕಲು ಪ್ರಸಕ್ತ ಸರ್ಕಾರ 'ಮಹಾತ್ಮ ಗಾಂಧಿ ಸ್ವಚ್ಛ ಭಾರತ ಯೋಜನೆ'ಆರಂಭಿಸಿದೆ. ಈ ಕಾರ್ಯಕ್ರಮದ ಯಶಸ್ಸು ಮತ್ತು ಅದರ ಸದೃಢತೆ, ಶುಚಿತ್ವದ ಮಟ್ಟಿಗೆ ಅಷ್ಟೇನೂ ಗಮನ ನೀಡದ ಸಾಮಾಜಿಕ ರಚನಾ ಶಕ್ತಿಗಳ ಜೊತೆಗಿನ ಹೊಂದಾಣಿಕೆಯನ್ನು ಅವಲಂಬಿಸಿದೆ. ಈ ಅಧ್ಯಯನದ ಉದ್ದೇಶವು ಭಾರತದ ನಾಗರಿಕರಲ್ಲಿರುವ ನೈರ್ಮಲ್ಯ ಕುರಿತಾದ ವಿಷಯಗಳ ಕುರಿತ ವಾಸ್ತವಾಂಶಗಳ ಮೇಲೆ ಬೆಳಕು ಚೆಲ್ಲುವುದಾಗಿದೆ.

ಭಾರತದ ತೃತೀಯ ರಾಷ್ಟ್ರ ಕೌಟುಂಬಿಕ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಹೆಚ್‌ಎಸ್–3) ರ ದತ್ತಾಂಶಗಳನ್ನು ಈ ಸಮೀಕ್ಷೆಯಲ್ಲಿ ಬಳಸಿಕೊಳ್ಳಲಾಗಿದೆ (ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಪಾಪ್ಯುಲೇಶನ್ ಸೈನ್ಸ್, 2006).

**ಮಾಪನ, ವಿಶ್ಲೇಷಣೆ ಮತ್ತು ಫಲಿತಾಂಶ :** ಸೈದ್ಧಾಂತಿಕ ಮಟ್ಟದಲ್ಲಿ ಹೇಳುವುದಾದರೆ ಶುಚಿತ್ವದ ಸ್ಥಿತಿಗತಿ ಆಧುನೀಕರಣದ ವಿಸ್ತರಣೆ, ಬಡತನದ ಪ್ರಮಾಣ, ಧಾರ್ಮಿಕ ವಿಧಿ ಮತ್ತು ಶಿಕ್ಷಣದ ಹಂತವನ್ನು ಅವಲಂಬಿಸಿದೆ. ಈ ಅಧ್ಯಯನದ ಪ್ರಮುಖ ಗುರಿ, ನೈರ್ಮಲ್ಯೀಕರಣದ ಹಂತ ಇವುಗಳನ್ನು ಪ್ರಾಥಮಿಕ ಹಂತದಲ್ಲಿ ಮೂರು ಮಾನದಂಡಗಳಲ್ಲಿ ತೋರಿಸುತ್ತದೆ. ಶೌಚಾಲಯದ ಲಭ್ಯತೆ, ಶೌಚಾಲಯ ಇಲ್ಲದ ಸ್ಥಿತಿ, ಫ್ಲಶ್ ಇಲ್ಲದ ಸಾಮಾನ್ಯ ಶೌಚಾಲಯ (ಗುಂಡಿ ಶೌಚಾಲಯ) ಮತ್ತು ನೀರಿನ ಸೋರುವಿಕೆ. ಈ ಅಧ್ಯಯನದಲ್ಲಿ ಭಾಗಿಯಾದ ಪ್ರತಿಯೊಬ್ಬ ವ್ಯಕ್ತಿಗಳ ಪ್ರಮಾಣವನ್ನು ಕೋಷ್ಟಕ–1ರಲ್ಲಿ ನೀಡಲಾಗಿದೆ. ಪಡೆದುಕೊಂಡ ಮಾದರಿಯಲ್ಲಿ ಸುಮಾರು ಶೇ. 51ರಷ್ಟು ಜನರು ನೀರು ಪೂರೈಕೆಯಿರುವ ಶೌಚಾಲಯದ ಸೌಲಭ್ಯ ಹೊಂದಿದ್ದರೆ, ಶೇ. 40ರಷ್ಟು ಜನರಿಗೆ ಶೌಚಾಲಯ ಸೌಕರ್ಯವೇ ಇಲ್ಲ. ಪ್ರಸಕ್ತ ಮಾದರಿಯಲ್ಲಿ ಭಾಗಿಯಾದ ನೀರಿರುವ ಶೌಚಾಲಯ

**ಕೋಷ್ಟಕ 1 : ಅವಲಂಬಿತ ಅಸ್ಥಿರ ಅಂಶಗಳ ಆವರ್ತನ (ಅನುಪಾತಗಳು), ನೈರ್ಮಲ್ಯದ ಹಂತ. ಎನ್‌ಎಫ್‌ಹೆಚ್‌ಎಸ್ – ಐಐಐ (ಎನ್=124,385).**

| ನೈರ್ಮಲ್ಯ ವಿಭಾಗ | ವಿವರಣೆ | ಆವರ್ತನ |
|---|---|---|
| ಸೌಲಭ್ಯ ಇಲ್ಲ | ಸೌಲಭ್ಯ ಇಲ್ಲ/ಪೊದೆಗಳ ಬಳಕೆ/ ಬಯಲು ಪ್ರದೇಶ | 50,298(40.5%) |
| ಗುಂಡಿ ಶೌಚ | ಗುಂಡಿ ಶೌಚದ ಎಲ್ಲಾ ವಿಧಗಳು | 9,878 (7.9%) |
| ಫ್ಲಶ್ | ಹಲವು ವಿಧದ ಫ್ಲಶ್ ಶೌಚಾಲಯ | 64,096 (51.5%) |

| ಕೋಷ್ಟಕ 2 : ಭಾರತದ ರಾಜ್ಯಗಳ ಮಾದರಿ ಜನಸಂಖ್ಯೆಯಲ್ಲಿ ಫ್ಲಶಿಂಗ್ ಶೌಚ ಬಳಕೆದಾರರ ಹಂಚಿಕೆ | | |
|---|---|---|
| ರಾಜ್ಯ | ಫ್ಲಶಿಂಗ್ ಶೌಚಗಳ ಶೇಕಡಾವಾರು ಮಾದರಿ | ಶ್ರೇ–ಯಾಂ–ಕ |
| ಕೇರಳ | 88.3 | 29.0 |
| ದೆಹಲಿ | 87.9 | 28.0 |
| ಸಿಕ್ಕಿಂ | 78.2 | 27.0 |
| ಮಿಜೊರಾಂ | 72.1 | 26.0 |
| ಮಹಾರಾಷ್ಟ್ರ | 69.3 | |
| ನಾಗಾಲ್ಯಾಂಡ್ | 66.5 | 24.0 |
| ಗೋವಾ | 65.9 | 23.0 |
| ಆಂಧ್ರ ಪ್ರದೇಶ | 62.5 | 22.0 |
| ಪಂಜಾಬ್ | 62.0 | 21.0 |
| ಪಶ್ಚಿಮ ಬಂಗಾಳ | 61.9 | 20.0 |
| ಉತ್ತರಾಂಚಲ | 57.0 | 19.0 |
| ತಮಿಳು ನಾಡು | 53.7 | 18.0 |
| ಗುಜರಾತ್ | 53.1 | 17.0 |
| ಮಣಿಪುರ | 51.3 | 16.0 |
| ಹಿಮಾಚಲ ಪ್ರದೇಶ | 50.9 | 15.0 |
| ಮೇಘಾಲಯ | 50.8 | 14.0 |
| ಮಧ್ಯ ಪ್ರದೇಶ | 48.4 | 13.0 |
| ತ್ರಿಪುರಾ | 47.8 | 12.0 |
| ಹರಿಯಾಣ | 45.4 | 11.0 |
| ಅಸ್ಸಾಂ | 42.7 | 10.0 |
| ಉತ್ತರ ಪ್ರದೇಶ | 41.7 | 9.0 |
| ಅರುಣಾಚಲ ಪ್ರದೇಶ | 36.8 | 8.0 |
| ಕರ್ನಾಟಕ | 36.6 | 7.0 |
| ಬಿಹಾರ | 34.6 | 6.0 |
| ಜಮ್ಮು ಮತ್ತು ಕಾಶ್ಮೀರ | 33.4 | 5.0 |
| ರಾಜಸ್ತಾನ | 32.0 | 4.0 |
| ಜಾರ್ಖಂಡ್ | 29.0 | 3.0 |
| ಛತ್ತೀಸ್‌ಗಢ | 24.1 | 2.0 |
| ಒಡಿಶಾ | 19.6 | 1.0 |



ಹೊಂದಿದ ವ್ಯಕ್ತಿಗಳನ್ನು 29 ರಾಜ್ಯಗಳಿಂದ ಆಯ್ದುಕೊಳ್ಳಲಾಗಿದ್ದು, ಅದನ್ನು ಕೋಷ್ಟಕ –2ರಲ್ಲಿ ನೀಡಲಾಗಿದೆ. ಶೌಚಾಲಯ ಸೌಕರ್ಯವಿರುವ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿರುವ ನಾಲ್ಕು ರಾಜ್ಯಗಳೆಂದರೆ ಕೇರಳ, ದೆಹಲಿ, ಸಿಕ್ಕಿಂ ಮತ್ತು ಮಿಜೊರಾಂ. ಕೊನೆಯ ನಾಲ್ಕು ಸ್ಥಾನಗಳಲ್ಲಿ ರಾಜಸ್ತಾನ, ಜಾರ್ಖಂಡ್, ಛತ್ತೀಸ್‌ಗಢ ಮತ್ತು ಒಡಿಶಾ ಇವೆ.

ಒಂಭತ್ತು ಅಸ್ಥಿರ ಅಂಶಗಳನ್ನು ಮಾಪನವಾಗಿರಿಸಿಕೊಂಡು ಸೈದ್ಧಾಂತಿಕ ನಿರ್ಣಾಯಕದ ಕುರಿತು ಸಲಹೆ ನೀಡಲಾಗಿದೆ. ಇವುಗಳ ಪೈಕಿ ಐದು ಈ ರೀತಿ ಇವೆ : ನಲ್ಲಿ ನೀರಿನ ಲಭ್ಯತೆ, ವಿದ್ಯುತ್, ಟಿವಿ, ಉದ್ಯೋಗದ ವಿಧ (ಆಧುನಿಕ ಮತ್ತು ಔಪಚಾರಿಕ ಕ್ಷೇತ್ರದ ಉದ್ಯೋಗ) ಮತ್ತು ಹೆಚ್‌ಐವಿ ಸೋಂಕು ಪ್ರಸರಣವು ಆಧುನೀಕರಣದ ಯಾವ ಹಂತದ ಜೊತೆಗೆ ಸಂಬಂಧ ಹೊಂದಿದೆ ಎಂಬ ಬಗ್ಗೆ ಜ್ಞಾನ. ಈ ಮಾಪನಗಳು ಆಧುನಿಕ ಸೌಲಭ್ಯಗಳಾದ ವಿದ್ಯುತ್, ನೀರು, ಟಿವಿಯಂತಹ ವಸ್ತುಗಳ ಬಳಕೆಯ ಜೊತೆ ಸಂಬಂಧ ಹೊಂದಿವೆ.

**ಅಸ್ಥಿರ ಮಾಪನ :** ಇದರಲ್ಲಿ ಉದ್ಯೋಗ (ಆಧುನಿಕ ಅಥವಾ ಅಲ್ಲ), ಆಧುನಿಕ ವೈಜ್ಞಾನಿಕ ಕೆಲಸ ಮತ್ತು ಸಂಘಟನೆಗಳಿಗೆ ತೆರೆದುಕೊಳ್ಳುವ ಮೂಲಕ ಆಧುನಿಕತೆಯು ಯಾವ ಮಟ್ಟಕ್ಕೆ ಬೆಳೆಯಬಹುದು ಎನ್ನುವ ಅರಿವು ಸೇರಿವೆ. ಶುಚಿತ್ವ ಮತ್ತು ನೈರ್ಮಲ್ಯೀಕರಣಕ್ಕೆ ಅನಿವಾರ್ಯವಾದ ಆಧುನಿಕ ಆರೋಗ್ಯ ಪರಿಕಲ್ಪನೆಯ ಜಾಗೃತಿಯನ್ನು ಹೆಚ್‌ಐವಿ ಕುರಿತಾದ ಅರಿವು ತೋರಿಸಿಕೊಡುತ್ತದೆ. ಧಾರ್ಮಿಕ ವಿಧಿಗಳನ್ನು ಹಿಂದೂ ಅಥವಾ ಅಲ್ಲ ಎಂಬ ಡಮ್ಮಿ ಮಾಪನದ ಮೂಲಕ ಅಳೆಯಲಾಗಿದೆ. ಬಡತನವನ್ನು ಎನ್‌ಎಫ್‌ಹೆಚ್‌ಎಸ್ ಸಂಪತ್ತು ಮಾನದಂಡದ ಮಾಪನದ ಮೂಲಕ ಕಂಡುಕೊಳ್ಳಲಾಗಿದೆ. ಮಧ್ಯಮ ಮತ್ತು ಅದಕ್ಕಿಂತ ಮೇಲಿನ ವಿಭಾಗಗಳನ್ನು 0 ಹಾಗೂ ಉಳಿದವಕ್ಕೆ 1 ಎಂದು ಕೋಡ್ ಕೊಡಲಾಗಿದೆ. ಶಿಕ್ಷಣವು ಡಮ್ಮಿ ವೇರಿಯೇಬಲ್‌ನಿಂದ ಪ್ರತಿನಿಧಿಸಲ್ಪಟ್ಟಿದ್ದು, ಪ್ರಾಥಮಿಕ ಶಿಕ್ಷಣಕ್ಕಿಂತ ಹೆಚ್ಚಿನ ಶಿಕ್ಷಣ ಪಡೆದವರಿಗೆ 1 ಹಾಗೂ ಉಳಿದವರಿಗೆ 0 ಕೋಡ್ ನೀಡಲಾಗಿದೆ. ಹಲವಾರು ವಿಭಾಗಗಳಲ್ಲಿ ನಿರ್ಣಾಯಕ ಅಂಶಗಳ ಬಗ್ಗೆ ಪ್ರತಿಕ್ರಿಯಿಸಿದವರ ಶೇಕಡಾವಾರು ಹಂಚಿಕೆಯನ್ನು ಕೋಷ್ಟಕ – 3ರಲ್ಲಿ ನೀಡಲಾಗಿದೆ. ಕೋಷ್ಟಕ – 4ರಲ್ಲಿ ಮೂರು ಅವಲಂಬಿತ ಅಸ್ಥಿರ ಅಂಶಗಳ ವಿಭಾಗಗಳಾದ ಸೌಲಭ್ಯವಿಲ್ಲ, ಗುಂಡಿ ಶೌಚ ಮತ್ತು ನೀರಿನ ಸೌಲಭ್ಯ ಜೊತೆಗೆ ಒಂಭತ್ತು ಸ್ವತಂತ್ರ ಅಸ್ಥಿರ ಅಂಶಗಳ ಅಡ್ಡ ಅಂಕಣ ಪಟ್ಟಿ ನೀಡಲಾಗಿದೆ.

ಅಸ್ಥಿರ ಅಂಶಗಳ ಫಲಿತಾಂಶವು ಬಹು ವಿಭಾಗಗಳಲ್ಲಿರುವುದರಿಂದ ನಾವು ಸಮೀಕ್ಷೆಯ ಫಲಿತಾಂಶವು ಹಲವು ವಿಭಾಗಗಳಲ್ಲಿ ಬರುವುದರಿಂದ ಬಹುಪದ ಸಮಾನ ಹಂತದ ಹಿಂಜರಿತ (ಮಲ್ಟಿನಾಮಿಯಲ್ ಲಾಜಿಸ್ಟಿಕ್ ರಿಗ್ರೆಶನ್) ವನ್ನು ಬಳಸಿ ನೈರ್ಮಲ್ಯದ ಹಂತದ ಕುರಿತು ಅಸ್ಥಿರ ಅಂಶಗಳ ಸ್ವತಂತ್ರ ಪರಿಣಾಮವನ್ನು ಲೆಕ್ಕ ಹಾಕಿದ್ದೇವೆ. ಈ ಹಿಂಜರಿತದ ಫಲಿತಾಂಶವನ್ನು ಕೋಷ್ಟಕ – 5ರಲ್ಲಿ ನೀಡಲಾಗಿದೆ. ಮೂಲ ವಿಭಾಗವು 'ಸೌಲಭ್ಯ ಇಲ್ಲ'. ಕೋಷ್ಟಕವು ಮೊದಲ ವಿಭಾಗದಲ್ಲಿ 'ಫ್ಲಶಿಂಗ್ ಶೌಚಾಲಯ' ದ ವಿರುದ್ಧ 'ಸೌಲಭ್ಯ

ಇಲ್ಲ' ಎಂಬ ಕುರಿತ ಸಾಧ್ಯಾಸಾಧ್ಯತೆಯನ್ನು ಪ್ರತಿನಿಸುತ್ತದೆ. ಎರಡನೇ ವಿಭಾಗವು 'ಗುಂಡಿ ಶೌಚ' ದ ವಿರುದ್ಧ 'ಸೌಲಭ್ಯ ಇಲ್ಲ'ದ ಅನುಪಾತವನ್ನು ಪ್ರತಿನಿಸುತ್ತದೆ. ಸಾಧ್ಯಾಸಾಧ್ಯತೆಯ ಅನುಪಾತವನ್ನು ಆರನೇ ಕಾಲಂನಲ್ಲಿ ನೀಡಲಾಗಿದ್ದು, ಇದು ಪ್ರತಿ ಸ್ವತಂತ್ರ ಅಸ್ಥಿರ ಅಂಶದಿಂದ 'ಫ್ಲಶಿಂಗ್ ಶೌಚಾಲಯ (ಅಥವಾ ಮಲ ಹೊಂಡ)' ಹೊಂದಿರುವ ಸಾಧ್ಯತೆಯ ಮೇಲೆ ಯಾವ ರೀತಿ ಪ್ರಭಾವ ಬೀರುತ್ತದೆ ಎಂಬ ಮಾಹಿತಿ ನೀಡುತ್ತದೆ. ಮನೆಯಲ್ಲಿ ವಿದ್ಯುತ್ ಸೌಲಭ್ಯ ಇರುವವರು ಈ ಸೌಲಭ್ಯ ಇಲ್ಲದವರಿಗಿಂತ ಮೂರು ಪಟ್ಟು ಹೆಚ್ಚು 'ಫ್ಲಶಿಂಗ್ ಶೌಚಾಲಯ' ಹೊಂದಿರುವ ಸಾಧ್ಯತೆಯಿದೆ. ವಿದ್ಯುತ್ ಸಂಪರ್ಕ ಇರುವುದು 'ಗುಂಡಿ ಶೌಚ (ಪಿಟ್ ಲ್ಯಾಟ್ರಿನ್)' ಸಾಧ್ಯತೆಯನ್ನೂ ಹೆಚ್ಚಿಸಿದೆ. ಆದಾಗ್ಯೂ, 'ಶೌಚ ಹೊಂಡ' ಕ್ಕೆ ಬದಲಾಗಿ 'ಫ್ಲಶಿಂಗ್ ಶೌಚಾಲಯ' ಹೊಂದುವ ಕುರಿತು ಒಲವಿನ ಸಾಧ್ಯತೆ ಅತಿ ಹೆಚ್ಚಿದೆ.

ಪ್ರಾಥಮಿಕ ಶಿಕ್ಷಣಕ್ಕಿಂತ ಹೆಚ್ಚಿನ ವಿದ್ಯಾಭ್ಯಾಸ, ಮನೆಗೆ ನಲ್ಲಿ ನೀರು ಸಂಪರ್ಕ, ಟೆಲಿವಿಷನ್ ಮತ್ತು ಇತರ ಪ್ರಕಾರದ ಉದ್ಯೋಗಗಳ ಬದಲಾಗಿ ಆಧುನಿಕ ಕ್ಷೇತ್ರದ ಉದ್ಯೋಗ ಅಥವಾ ಕೈಗೆಲಸದ ಉದ್ಯೋಗ ಮತ್ತು ಹೆಚ್‌ಐವಿ ಸೋಂಕು ಪ್ರಸರಣದ ಬಗ್ಗೆ ಮಾಹಿತಿಯು 'ಫ್ಲಶಿಂಗ್ ಶೌಚಾಲಯ' ಹೊಂದುವ ಸಾಧ್ಯತೆಯನ್ನು ಹೆಚ್ಚಿಸಿದೆ. ಎರಡು ಅಸ್ಥಿರ ಅಂಶಗಳಾದ 'ಹಿಂದೂ' ಆಗಿರುವುದು ಮತ್ತು ಬಡತನವು 'ಫ್ಲಶಿಂಗ್ ಶೌಚಾಲಯ' ಹೊಂದುವ ಸಾಧ್ಯತೆಗೆ ಮಾರಕವಾಗಿ ಕಾಣುತ್ತಿವೆ.

'ಪಿಟ್ ಶೌಚಾಲಯ' ಮತ್ತು 'ಸೌಲಭ್ಯ ಇಲ್ಲ' ಇವೆರಡರ ನಡುವಿನ ಆಯ್ದ ಸ್ವತಂತ್ರ ಅಸ್ಥಿರ ಅಂಶಗಳು ಒಳಗೊಂಡಿರುವ ಮಾರ್ಗವು 'ಫ್ಲಶಿಂಗ್ ಶೌಚಾಲಯ' ಹೊಂದಿರುವ ಮಾರ್ಗಕ್ಕೆ ಸಮಾನವಾಗಿದೆ. ಆದಾಗ್ಯೂ, 'ಫ್ಲಶಿಂಗ್ ಶೌಚಾಲಯ' ವನ್ನು ಮನೆಯಲ್ಲಿ ಹೊಂದಿರುವುದು 'ಪಿಟ್ ಶೌಚಾಲಯ' ಹೊಂದಿರುವುದಕ್ಕಿಂತ ಹೆಚ್ಚು ಪ್ರಬಲ ಸ್ವತಂತ್ರ ಅಸ್ಥಿರ ಅಂಶಗಳನ್ನು ಒಳಗೊಂಡಿದೆ. ಸಾಮಾನ್ಯವಾಗಿ ಅಧ್ಯಯನದಲ್ಲಿ ಕಂಡು ಬರುವ ಅಂಶವೆಂದರೆ, ಹಿಂದೂಗಳು ಸಾಮಾನ್ಯವಾಗಿ ಮನೆಯೊಳಗಿನ ಶುಚಿತ್ವಕ್ಕೆ ಹೋಲಿಸಿದರೆ ಮನೆಯ ಹೊರಗಡೆಯ ನೈರ್ಮಲ್ಯವನ್ನು ಕಡೆಗಣಿಸುತ್ತಾರೆ ಎಂಬ ಸಾಮಾನ್ಯ ನಂಬಿಕೆಯನ್ನು ಬಲವಾಗಿ ಸಮರ್ಥಿಸುತ್ತದೆ. ಇತರ ಸಮುದಾಯಗಳಿಗೆ ಹೋಲಿಸಿದರೆ ಹಿಂದೂಗಳಲ್ಲಿ 'ಸೌಲಭ್ಯ ಇಲ್ಲ' ಸಾಧ್ಯತೆಯು ಹೆಚ್ಚು ಎನ್ನುವುದು ನಮಗೆ ಕಂಡು ಬಂದಿದೆ. ಇತರ ಅಂಶಗಳಿಗೆ ಹೋಲಿಸಿದರೆ ಆಧುನಿಕ ಸೌಲಭ್ಯಗಳಾದ ವಿದ್ಯುತ್, ನಲ್ಲಿ ನೀರು ಮತ್ತು ಟೆಲಿವಿಷನ್‌ಗಳು 'ಫ್ಲಶಿಂಗ್ ಶೌಚ' ಹೊಂದುವುದರ ಜೊತೆಗೆ ಹೆಚ್ಚು ಹೊಂದಾಣಿಕೆಯನ್ನು ತೋರಿಸುತ್ತಿದೆ. ಉಳಿದಂತೆ, ಆಧುನಿಕ ಕ್ಷೇತ್ರಗಳಲ್ಲಿ ಉದ್ಯೋಗ ಮಾಡುತ್ತಿರುವವರ ದಿನ ನಿತ್ಯದ ಅನುಭವ ವೈಜ್ಞಾನಿಕ ಮತ್ತು ವಿವೇಚನೆಯಿಂದ ಪ್ರಭಾವಿತವಾಗಿ 'ಫ್ಲಶಿಂಗ್ ಶೌಚ' ಸೇರಿದಂತೆ ನೈರ್ಮಲ್ಯದ ಆಧುನಿಕ ವಿಧಾನಗಳನ್ನು ಅಳವಡಿಸಿಕೊಳ್ಳುವ ಸಾಧ್ಯತೆ ಹೆಚ್ಚುತ್ತಾ ಹೋಗಿದೆ. ಇನ್ನು ಸಾಮಾಜಿಕ–ಆರ್ಥಿಕ ಮಟ್ಟವು ಕೂಡ ನೈರ್ಮಲ್ಯದ ವಿಚಾರವನ್ನು ತರ್ಕಿಸುತ್ತಿರುವುದು ನಮಗೆ ಕಂಡು ಬಂದಿದೆ. ಅಂದರೆ ಕಡಿಮೆ ಶಿಕ್ಷಣ ಮತ್ತು ಕಡಿಮೆ ಆದಾಯವು ಜನರನ್ನು 'ಸೌಲಭ್ಯ ಇಲ್ಲ'



**ಕೋಷ್ಟಕ 3 : ನೈರ್ಮಲ್ಯದ ಹಂತಗಳ ಜೊತೆಗೆ ಸಂಬಂಧ ಹೊಂದಿರುವ ಆಯ್ದ ಅಸ್ಥಿರ ಅಂಶಗಳ ವಿವರಣಾತ್ಮಕ ಅಂಕಿ ಅಂಶ**

| ಅಸ್ಥಿರ ಅಂಶದ ಹೆಸರು | ವಿವರಣೆ | ಮೌಲ್ಯ | ಆವರ್ತನ (%) |
|---|---|---|---|
| ಶಿಕ್ಷಣ | ಪ್ರಾಥಮಿಕ ಶಿಕ್ಷಣಕ್ಕಿಂತ ಹೆಚ್ಚು | 1 | 66848 (53.7) |
| | ಪ್ರಾಥಮಿಕ ಅಥವಾ ಕಡಿಮೆ | 0 | 57525 (46.3) |
| ಸುರಕ್ಷಿತ ನೀರು | ನಲ್ಲಿ ನೀರು / ಬಾಟಲ್ ನೀರು | 1 | 99382 (79.9) |
| | ಇತರ ಮೂಲಗಳು | 0 | 24990(20.1) |
| ವಿದ್ಯುತ್ | ವಿದ್ಯುತ್ ಸಂಪರ್ಕ | 1 | 95764(77.0) |
| | ವಿದ್ಯುತ್ ಸಂಪರ್ಕ ಇಲ್ಲ | 0 | 28598 (23.0) |
| ಟೆಲಿವಿಷನ್ | ಟೆಲಿವಿಷನ್ ಇದೆ | 1 | 71081 (57.1) |
| | ಟೆಲಿವಿಷನ್ ಇಲ್ಲ | 0 | 53304 (42.9) |
| ಹಿಂದೂ | ಹಿಂದೂ | 1 | 89957 (72.4) |
| | ಇತರ ಧರ್ಮ | 0 | 34270 (27.6) |
| ಸಂಪತ್ತು | ಕಡಿಮೆ ಅಥವಾ ಅತಿ ಕಡಿಮೆ ಆದಾಯ ವಿಭಾಗ | 1 | 31729 (25.5) |
| | ಮಧ್ಯಮ ಆದಾಯ ಅಥವಾ ಉನ್ನತ ಆದಾಯ | 0 | 92656 (74.5) |
| ಆಧುನಿಕ | ಸಂಗಾತಿಗೆ ಆಧುನಿಕ ಉದ್ಯೋಗ | 1 | 33460 (26.9) |
| | ಸಂಗಾತಿ ಆಧುನಿಕ ಕ್ಷೇತ್ರದಲ್ಲಿಲ್ಲ | 0 | 90634 (72.9) |
| ದೈಹಿಕ ಶ್ರಮದ ಕೆಲಸ | ಸಂಗಾತಿಗೆ ದೈಹಿಕ ಶ್ರಮದ ಕೆಲಸ | 1 | 34385 (27.7) |
| | ಸಂಗಾತಿಗೆ ದೈಹಿಕ ಶ್ರಮದ ಹೊರತ ಉದ್ಯೋಗ | 0 | 89729 (72.3) |
| ಏಡ್ಸ್ ಜ್ಞಾನ | ಹೆಚ್‌ಐವಿ/ಏಡ್ಸ್ ಬಗ್ಗೆ ಮಾಹಿತಿ | 1 | 71025 (57.1) |
| | ಹೆಚ್‌ಐವಿ/ಏಡ್ಸ್ ಬಗ್ಗೆ ಕಡಿಮೆ ಅಥವಾ ಮಾಹಿತಿಯೇ ಇಲ್ಲ | 0 | 53360 (42.9) |



ಎಂಬ ಶುಚಿತ್ವದ ಗುಂಪಿಗೆ ಸೇರಿಸುವ ಸಾಧ್ಯತೆ ಹೆಚ್ಚಿರುವುದು ಕೂಡ ನಮಗೆ ಕಂಡು ಬಂದಿದ್ದು, ಇದೇನೂ ಆಶ್ಚರ್ಯದ ವಿಷಯವಲ್ಲ.

**ಉಪಸಂಹಾರ**

ಒಟ್ಟಿನಲ್ಲಿ ಆಧುನೀಕರಣವು ಶುಚಿತ್ವದ ಮಟ್ಟವನ್ನು ಹೆಚ್ಚಿಸುವ ಮೂಲಕ ಪ್ರತಿಯೊಬ್ಬರಿಗೂ ಆರೋಗ್ಯ ಭಾಗ್ಯವನ್ನು ತಂದು ಕೊಡುತ್ತದೆ ಎಂಬ ಸಾರ್ವಜನಿಕ ಆರೋಗ್ಯ ಕ್ಷೇತ್ರದ ಕುರಿತಾಗಿ ಈಗಾಗಲೇ ಕಂಡು ಕೊಂಡಿರುವ ಅಂಶಗಳನ್ನು ನಮ್ಮ ಅಧ್ಯಯನದ ಫಲಿತಾಂಶವು ಬೆಂಬಲಿಸುತ್ತಿದೆ. ಪ್ರಸಕ್ತ ಭಾರತದಲ್ಲಿರುವ 'ಸಂಪೂರ್ಣ ನೈರ್ಮಲ್ಯ ಆಂದೋಲನ', 'ಮಹಾತ್ಮ ಗಾಂಧಿ ಸ್ವಚ್ಛ ಭಾರತ ಕಾರ್ಯಕ್ರಮ' ಮೊದಲಾದ ಆಂದೋಲನಗಳು, ಪ್ರತಿ ಮನೆಗೂ ಪ್ರತ್ಯೇಕ ಶೌಚಾಲಯ ಒದಗಿಸುವ ಮೂಲಕ ಬಯಲಿನಲ್ಲಿ ಮಲ ವಿಸರ್ಜನೆ ಮಾಡುವ ಪಿಡುಗನ್ನು ಮೂಲೋತ್ಪಾಟನೆ ಮಾಡುವ ಗುರಿ ಹೊಂದಿದೆ. ಇದುವರೆಗೆ ಸಾಧಿಸಲು ಅಸಾಧ್ಯವಾದ ಫ್ಲಶಿಂಗ್ ಶೌಚ ಮತ್ತು ಗುಂಡಿ ಶೌಚಾಲಯದ ಅವಶ್ಯಕತೆಯನ್ನು ಮನಗಂಡು ಇಂತಹ ಆಂದೋಲನಗಳು ಹುಟ್ಟಿಕೊಂಡಿವೆ.

ಆದರೂ, ಇಂತಹ ಶೌಚಗಳನ್ನು ಮನೆ ಮಂದಿ ಬಳಕೆ ಮಾಡಿಕೊಳ್ಳುತ್ತಾರೆಯೇ ಇಲ್ಲ ಹಾಗೆಯೇ ಬಿಡುತ್ತಾರೆಯೇ ಎಂಬುದು ಮುಂದಿರುವ ಪ್ರಮುಖ ಪ್ರಶ್ನೆ. ಇದಕ್ಕಿಂತ ಹೆಚ್ಚಾಗಿ ಶೌಚ ವ್ಯವಸ್ಥೆಯ ಹೆಚ್ಚಳದಿಂದ ಸೋಂಕು ರೋಗಗಳ ಪ್ರಕರಣ, ಮಲ ಸೇರಿದಂತೆ ಮಲಿನ ವಸ್ತುಗಳಿಂದ ಅವುಗಳ ಹರಡುವಿಕೆಯ ಪ್ರಮಾಣ ಕಡಿಮೆಯಾಗಬಹುದೆಂದು ಅಂದಾಜಿಸಲಾಗಿದ್ದರೂ ಅದರ ಸರಿಯಾದ ಪರಿಶೀಲನೆ ಇನ್ನೂ ಆಗಿಲ್ಲ. ನೈರ್ಮಲ್ಯದ

**ಕೋಷ್ಟಕ 4 : ನೈರ್ಮಲ್ಯದ ಹಂತಗಳ ಜೊತೆ ಸ್ವತಂತ್ರ ಅಸ್ಥಿರ ಅಂಶಗಳ ಅಡ್ಡ ಗಣಕ ಪಟ್ಟಿ**

| ಅಸ್ಥಿರ ಅಂಶಗಳು | ನೈರ್ಮಲ್ಯ ಸೌಲಭ್ಯದ ನಮೂನೆ | | | | |
|---|---|---|---|---|---|
| | % | % | % | ಎನ್ | |
| | ಸೌಲಭ್ಯ ಇಲ್ಲ | ಗುಂಡಿ ಶೌಚ | ಫ್ಲಶ್ ಶೌಚ | ಒಟ್ಟು | ವ್ಯಕ್ತಿ – ಸ್ಕ್ವೇರ್ (ಪಿ–ಮೌಲ್ಯ) |
| ಪ್ರಾಥಮಿಕ ಶಿಕ್ಷಣಕ್ಕಿಂತ ಹೆಚ್ಚು ಶಿಕ್ಷಣ | 23.5 | 7.4 | 69.2 | 66,797 | 19050 (0.000) |
| ನಲ್ಲಿ ನೀರು / ಬಾಟಲ್ ನೀರು | 35.8 | 6.5 | 57.7 | 57,296 | 7560 (0.000) |
| ವಿದ್ಯುತ್ ಸೌಲಭ್ಯ | 28.4 | 7.5 | 64.0 | 95,687 | 27590 (0.000) |
| ಮನೆಯಲ್ಲಿ ಟೆಲಿವಿಷನ್ | 20.4 | 6.2 | 74.4 | 71,020 | 32440 (0.000) |
| ಹಿಂದೂ | 46.1 | 5.2 | 48.7 | 89,878 | 6090 (0.000) |
| ಕಡಿಮೆ ಅಥವಾ ಅತಿ ಕಡಿಮೆ ಆದಾಯ ವಿಭಾಗ | 84.5 | 9.2 | 6.2 | 31,693 | 37470 (0.000) |
| ಸಂಗಾತಿ ಆಧುನಿಕ ಉದ್ಯೋಗ | 22.9 | 6.5 | 70.6 | 33,452 | 6819 (0.000) |
| ದೈಹಿಕ ಶ್ರಮದ ಕೆಲಸ | 45.3 | 7.5 | 47.2 | 34,353 | 459 (0.000 |
| ಏಡ್ಸ್ ಅರಿವು | 26.0 | 8.4 | 65.6 | 70,971 | 14890 (0.000) |

ಯೋಜನೆಗಳು ಸಾರ್ವಜನಿಕ ಆರೋಗ್ಯ ವೃದ್ಧಿ ಗುರಿಯನ್ನು ಸಾಧಿಸುವಲ್ಲಿ ಅರ್ಥಪೂರ್ಣ ಬದಲಾವಣೆ ತರುವುದಂತೂ ಸ್ಪಷ್ಟ. ಈ ನಿಟ್ಟಿನಲ್ಲಿ ನಮ್ಮ ಅಧ್ಯಯನದ ಫಲಿತಾಂಶವು, ಇಂತಹ ಆಂದೋಲನಗಳ ಮೂಲ ತಳಹದಿಯಾದ ಸಾಮಾಜಿಕ ರಚನೆ ಮತ್ತು ಸಾಂಸ್ಕೃತಿಕ ದೃಷ್ಟಿಕೋನದಲ್ಲಿ ಆಗಬಹುದಾದ ಪರಿಣಾಮಗಳನ್ನು ಒಳಗೊಂಡಿದೆ. ನಮ್ಮ ಅಧ್ಯಯನವು ನೈರ್ಮಲ್ಯದ ವಿವಿಧ ಹಂತಗಳ ಜೊತೆ ತಳಕು ಹಾಕಿಕೊಂಡಿರುವ ಸಾಮಾಜಿಕ–ರಚನಾತ್ಮಕ ಮತ್ತು ಸಾಂಸ್ಕೃತಿಕ ಎರಡೂ ವಿಭಾಗಗಳ ಹಲವಾರು ಅಸ್ಥಿರ ಅಂಶಗಳನ್ನು ಪ್ರಸ್ತುತ ಪಡಿಸಿದೆ.

ಅಸ್ಥಿರ ಅಂಶಗಳಾದ ಶಿಕ್ಷಣ ಮತ್ತು ಉದ್ಯೋಗ ಕೂಡ ನೈರ್ಮಲ್ಯದ ವಿವಿಧ ಹಂತಗಳ ಜೊತೆಗೆ ಸಂಬಂಧ ಹೊಂದಿವೆ. ಸ್ಥೂಲವಾಗಿ ಹೇಳಬೇಕೆಂದರೆ, ಶಾಲೆ, ಕಾರ್ಮಿಕ ಮಾರುಕಟ್ಟೆ ಮೊದಲಾದ ಸಾಮಾಜಿಕ ಸಂಸ್ಥೆಗಳು ಶುಚಿತ್ವದ ವಿವಿಧ ಹಂತಗಳ ಮೇಲೆ ಪ್ರಭಾವ ಬೀರುತ್ತವೆ. ಮಾರುಕಟ್ಟೆಯನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ ಇದರ ರಚನೆಯು ಅನೌಪಚಾರಿಕದಿಂದ ಔಪಚಾರಿಕ ಉದ್ಯೋಗಿಗಳಿಗೆ ಬದಲಾಗುತ್ತಿದ್ದು, ಇದರಿಂದ ಶುಚಿತ್ವದ ವಿವಿಧ ಹಂತಗಳಲ್ಲಿ ಲಾಭವಾಗುವ ಸಾಧ್ಯತೆಯಿದೆ.

ಈ ಹಂತದಲ್ಲಿ ಧಾರ್ಮಿಕ ಸಂಘಟನೆಗಳು, ಶಾಲೆಗಳು ಮತ್ತು ಕಾರ್ಮಿಕ ಮಾರುಕಟ್ಟೆಯನ್ನು ನೈರ್ಮಲ್ಯೀಕರಣದ ಆಂದೋಲನದಲ್ಲಿ ಪಾಲ್ಗೊಳ್ಳುವಂತೆ ಮಾಡುವುದು ಅನಿವಾರ್ಯವಾಗಿದೆ. ಕಳಪೆ ಶುಚಿತ್ವದಿಂದಾಗುವ ಸಾಮಾಜಿಕ ಸಮಸ್ಯೆಗಳ ಕುರಿತು ಅರಿವು ಮೂಡಿಸುವ ಸಾಹಿತ್ಯದ ಕೊರತೆ ಎದ್ದು ಕಾಣುತ್ತಿದೆ ಎಂಬುದನ್ನು ನಾವು ಒತ್ತಿ ಹೇಳಿದ್ದೇವೆ.

ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಈ ಅಧ್ಯಯನ ಯಾವುದೇ ಪ್ರಯತ್ನ ಮಾಡಿಲ್ಲವಾದರೂ, ಜನರ ಆರೋಗ್ಯ ಸುಧಾರಣೆಯಲ್ಲಿ ಕಳಪೆ ನೈರ್ಮಲ್ಯದಿಂದಾಗುವ ಸಮಸ್ಯೆಗಳ ಕುರಿತು

ಸಂಶೋಧನೆ ಅತ್ಯಗತ್ಯವಾಗಿದೆ. ಕಳಪೆ ಶುಚಿತ್ವದಿಂದಾಗುವ ಸಾಮಾಜಿಕ ಸಮಸ್ಯೆಗಳ ಕುರಿತು ಈ ಕೆಳಗಿನ ಉಲ್ಲೇಖಗಳೊಂದಿಗೆ ಈ ಅಧ್ಯಯನ ವರದಿಯನ್ನು ಕೊನೆಗೊಳಿಸುತ್ತಿದ್ದೇವೆ.

ಸೂಕ್ತವಾದ ಶುಚಿತ್ವದ ಮೂಲಸೌಕರ್ಯಗಳನ್ನು ಒದಗಿಸಲು ಸಾರ್ವಜನಿಕ ವಲಯ (ಸರ್ಕಾರ) ವಿಫಲವಾಗಿರುವುದು ಸಾರ್ವಜನಿಕ ನೈರ್ಮಲ್ಯದ ಗುರಿಯನ್ನು ತಲುಪುವಲ್ಲಿ ಖಾಸಗಿ ಕ್ಷೇತ್ರಕ್ಕೆ ಅವಕಾಶ ಒದಗಿಸಿಕೊಟ್ಟಿದೆ. ಆದಗ್ಯೂ, ಖಾಸಗಿ ವಲಯ ಒದಗಿಸುತ್ತಿರುವ ನೈರ್ಮಲ್ಯ ಸೇವೆಯು ನೈರ್ಮಲ್ಯದ ಕೊರತೆಯಿಂದ ಎದುರಾಗುವ ಸಾರ್ವಜನಿಕ ಆರೋಗ್ಯದ ಸಮಸ್ಯೆ ನಿವಾರಣೆಗೆ ಸರ್ಕಾರಕ್ಕೆ ಸಿಕ್ಕ ಕರೆಯಾಗಿದೆ.

ಗುಣಮಟ್ಟದ ಸಾರ್ವಜನಿಕ ನೈರ್ಮಲ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಯೋಜನೆಗಳ ಜಾರಿ, ನಿಯಂತ್ರಣ ಮತ್ತು ನಿರ್ವಹಣೆಯಲ್ಲಿ ದುರ್ಬಲ ಸರ್ಕಾರಿ ಸಂಘಟನೆಗಳು ವಿಫಲವಾಗಿವೆ (ಟ್ರೆಮೊಲೆಟ್, ಕಾರ್ಡೋನ್ ಮತ್ತು ಫೊನ್ಸೆಕ, 2013).

ಇದು ಹಲವಾರು ಖಾಸಗಿ ಕಂಪನಿಗಳಿಗೆ ಶೌಚಾಲಯ ಸೌಲಭ್ಯ ಒದಗಿಸಲು ಅವಕಾಶ ನೀಡಿದ್ದು, ಅವು ಕಾನೂನು ಬಾಹಿರವಾಗಿ ನಗರ ಪ್ರದೇಶಗಳಲ್ಲಿ ಅನಧಿಕೃತವಾಗಿ ಮಲ ತ್ಯಾಜ್ಯವನ್ನು ಸುರಿಯುವ ಮೂಲಕ ಅಸಹನೀಯ ವಾತಾವರಣ ನಿರ್ಮಾಣಕ್ಕೆ ಕಾರಣವಾಗಿದೆ. ಇಂತಹ ಪ್ರದೇಶಗಳಲ್ಲಿ ವಾಸಿಸುವವರನ್ನು ಕೀಳಾಗಿ ನೋಡುವ ಮತ್ತು ಸಾಮಾಜಿಕವಾಗಿ ಶೋಷಣೆಗೆ ಅವರು ಒಳಗಾಗುವ ಸಾಧ್ಯತೆಗಳು ಹೆಚ್ಚಿವೆ (ಅಗರ್‌ವಾಲ್, 2014).

ಇಕ್ಕಟ್ಟಾದ ನಗರ ಪ್ರದೇಶಗಳಲ್ಲಿ ಸಾರ್ವಜನಿಕ ಶೌಚಾಲಯಕ್ಕೆ ಜಾಗದ ಕೊರತೆ ಎದುರಾಗಿ ಮಕ್ಕಳು ಮೊದಲಾದವರು ಗುಂಪಿನಲ್ಲಿ ಕುಳಿತು ಮಲ ವಿಸರ್ಜನೆ ಮಾಡುವ ಪರಿಸ್ಥಿತಿ ಇದೆ. ಇದು ಅವರು ಹಲವು ರೋಗಗಳಿಗೆ ತುತ್ತಾಗುವ ಅವಕಾಶವನ್ನು ಮತ್ತು ಅವರಲ್ಲಿ ಅಸಹನೆಯನ್ನು ಮೂಡಿಸುವ ಸಾಧ್ಯತೆಯಿದೆ.

ಅಂತಿಮವಾಗಿ, ಯುವ ಜನಾಂಗ ನೈರ್ಮಲ್ಯ ಮತ್ತು ಶುಚಿತ್ವದ ಮಹತ್ವದ ಬಗ್ಗೆ ಹೆಚ್ಚಿನ ಅರಿವು ಹೊಂದಿದ್ದು, ತಮ್ಮೊಳಗೆ ಈ ಬಗ್ಗೆ ಹೆಚ್ಚಿನ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ. ಕಳಪೆ ನೈರ್ಮಲ್ಯದ ಸನ್ನಿವೇಶಕ್ಕೆ ಹಿರಿಯರ ಅಜ್ಞಾನ ಕಾರಣವೆಂದು ಅವರು ದೂರಬಹುದು. ಇದು ಸಮುದಾಯದ ಸಾಮಾಜಿಕ ಹಿತಾಸಕ್ತಿಗೆ ಗಂಭೀರ ಅಪಾಯ ಆಗುವ ಬೆದರಿಕೆ ಒಡ್ಡಿದೆ. (ಬಿರಿಟ್ವಂ, ಮೆನಸ್ಸಾ, ಮಿನಿಕಹಸಿ, ಯಾಸನ್, ನೈಡೂ, ಚಟರ್ಜಿ ಮತ್ತು ಕೋವಲ್, 2013). ❑

**ಕೋಷ್ಟಕ 5 : ಒಂಭತ್ತು ಆಯ್ದ ವಿಭಾಗೀಯ ಅಸ್ಥಿರ ಅಂಶಗಳ ಜೊತೆ ನೈರ್ಮಲ್ಯದ ಹಂತಗಳ ಬಹುಪದ ಸಮಾನ ಹಂತದ ಹಿಂಜರಿತ.**

**ಫ್ಲಶಿಂಗ್ ಸೌಲಭ್ಯವಿಲ್ಲ**

| ಅಸ್ಥಿರ ಅಂಶ | ಬಿ | ಎಸ್‌ಇ ಬಿ | ವಾಲ್ಡ್‌ಸ್ ಆ ಸ್ಕ್ವೇರ್ (ಡಿಎಫ್ =1) | ಪಿ ಮೌಲ್ಯ | ಎಕ್ಸ್‌ಪಿ (ಬಿ) | ಸಿಐ ಗರಿಷ್ಠ | ಸಿಐ ಕನಿಷ್ಠ |
|---|---|---|---|---|---|---|---|
| ಇಂಟರ್‌ಸೆಪ್ಟ್ | –1.825 | .034 | 2892.0 | 0.000 | | | |
| ಶಿಕ್ಷಣ | .928 | .018 | 2655.0 | 0.000 | 2.530 | 2.442 | 2.621 |
| ಸುರಕ್ಷಿತ ನೀರು | .887 | .021 | 1731.0 | 0.000 | 2.427 | 2.328 | 2.531 |
| ವಿದ್ಯುತ್ | 1.177 | .027 | 1911.0 | 0.000 | 3.245 | 3.078 | 3.421 |
| ಟೆಲಿವಿಷನ್ | .932 | .019 | 2426.0 | 0.000 | 2.541 | 2.448 | 2.637 |
| ಹಿಂದೂ | –1.087 | .020 | 3090.0 | 0.000 | .337 | .325 | .350 |
| ಸಂಪತ್ತು | –2.067 | .028 | 5476.0 | 0.000 | .127 | .120 | .134 |
| ಆಧುನಿಕ | .813 | .020 | 1617.0 | 0.000 | 2.255 | 2.168 | 2.346 |
| ದೈಹಿಕ ಶ್ರಮ | .420 | .019 | 464.7 | 0.000 | 1.522 | 1.465 | 1.582 |
| ಏಡ್ಸ್ ಅರಿವು | .441 | .018 | 622.5 | 0.000 | 1.554 | 1.501 | 1.609 |

**ಪಿಟ್ ಸೌಲಭ್ಯವಿಲ್ಲ**

| ಅಸ್ಥಿರ ಅಂಶ | ಬಿ | ಎಸ್‌ಇ ಬಿ | ವಾಲ್ಡ್‌ಸ್ ಆ ಸ್ಕ್ವೇರ್ (ಡಿಎಫ್ =1) | ಪಿ ಮೌಲ್ಯ | ಎಕ್ಸ್‌ಪಿ (ಬಿ) | ಸಿಐ ಗರಿಷ್ಠ | ಸಿಐ ಕನಿಷ್ಠ |
|---|---|---|---|---|---|---|---|
| ಇಂಟರ್‌ಸೆಪ್ಟ್ | –1.038 | .040 | 679.846 | 0.000 | | | |
| ಶಿಕ್ಷಣ | .364 | .027 | 184.926 | 0.000 | 1.440 | 1.366 | 1.517 |
| ಸುರಕ್ಷಿತ ನೀರು | –.202 | .027 | 184.926 | 0.000 | .817 | .777 | .860 |
| ವಿದ್ಯುತ್ | .449 | .031 | 211.259 | 0.000 | 1.566 | 1.474 | 1.664 |
| ಟೆಲಿವಿಷನ್ | .249 | .029 | 74.496 | 0.000 | 1.283 | 1.213 | 1.358 |
| ಹಿಂದೂ | –1.703 | .024 | 4833.0 | 0.000 | .182 | .174 | .191 |
| ಸಂಪತ್ತು | –.383 | .031 | 157.795 | 0.000 | .682 | .642 | .724 |
| ಆಧುನಿಕ | .271 | .031 | 78.629 | 0.000 | 1.311 | 1.235 | 1.392 |
| ದೈಹಿಕ ಶ್ರಮ | .002 | .028 | .005 | 0.944 | 1.002 | .948 | 1.058 |
| ಏಡ್ಸ್ ಅರಿವು | .532 | .026 | 406.452 | 0.000 | 1.702 | 1.616 | 1,792 |

ಸಾಧ್ಯತೆ ಅನುಪಾತ ಪರೀಕ್ಷೆ : 69050 (ಚಿ–ಸ್ಕ್ವೇರ್), 18 (ಡಿಎಫ್), ಪಿ = 0.000, ಕಾಕ್ಸ್ ಆಂಡ್ ಸ್ನೆಲ್ ಆರ್ ಘನ = 0.427, ನಗೆಲ್ಕೆರ್ಕೆ ಆರ್ ಘನ (ಮ್ಯಾಕ್ಸ್ ಮರು ಮಾಪನ ಆರ್ ಘನ) = 0.510, ಮೆಕ್‌ಫಡೆನ್ =0.307.


'ಫ್ಲಶಿಂಗ್ ಶೌಚಾಲಯ'ವನ್ನು ಯಾರಿಗೆ ವಿದ್ಯುತ್ ಸೌಲಭ್ಯ ಇಲ್ಲವೇ ಅವರ ಜೊತೆ ಹೋಲಿಕೆ ಮಾಡಲಾಗಿದೆ. ವಿದ್ಯುತ್ ಸಂಪರ್ಕ ಹೊಂದಿರುವುದು ಗುಂಡಿ ಶೌಚಾಲಯ/ಪಿಟ್ ಶೌಚಾಲಯ ಹೊಂದುವ ಸಾಧ್ಯತೆಯನ್ನು ಹೆಚ್ಚಿಸಿದೆ.

ಅಧ್ಯಯನ ಮಾದರಿ ವಿಶ್ಲೇಷಣೆ

ಬದ್ಧತೆ

# ಸಂಪೂರ್ಣ ಶೌಚಾಲಯ

ಗ್ರೇಗೊರಿ ಪೀಯರ್ಸ್
ಕನ್ನಡಕ್ಕೆ : ಮಹೇಶ್



**ಶೌಚಾಲಯ ಸೌಲಭ್ಯ, ಕೊರತೆಯು ನೇರವಾಗಿ ಹೆಚ್ಚಿನ ಪ್ರಮಾಣದಲ್ಲಿ ಅನಾರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತಅವೆ. ಶೌಚಾಲಯ ಸಮಸ್ಯೆಗೆ ಪರಿಹಾರ ಕುರಿತು ಕಂಡುಕೊಳ್ಳಲು ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಅಧ್ಯಯನ, ಒತ್ತು ನೀಡಿದರೂ ಕೂಡಾ ಗ್ರಾಮಗಳು ಹಾಗೂ ಸಣ್ಣ ಪ್ರಮಾಣದ ಪ್ರದೇಶಗಳಲ್ಲಿ ಈಗಲೂ ಶೌಚಾಲಯದ ಬಳಕೆ ಕುರಿತ ಜಾಗೃತಿ ಕಡಿಮೆ. ಈ ಲೇಖನವು ಜಿಲ್ಲಾ ಹಂತದಲ್ಲಿ ಶೌಚಾಲಯದ ಬಳಕೆಗೆ ಇರುವ ಅಡೆತಡೆಗಳನ್ನು ವಿವರಿಸಅದೆ. ಜಾಗತಿಕವಾಗಿ ಶೌಚಾಲಯದ ಬಳಕೆಗೆ ಮೇಲೆ ಅನೇಕ ಸಾಮಾಜಿಕ, ಆರ್ಥಿಕ ವಿವರಣೆಗಳು ಇದ್ದು, ರಾಜ್ಯದ ನೀತಿಗಳು ಭಿನ್ನವಾಗಿರುತ್ತವೆ. ಅಧ್ಯಯನದ ಫಲಿತಾಂಶಗಳು, ಶೌಚಾಲಯದ ಬಳಕೆಯ ಮೇಲೆ ಪರಿಣಾಮ ಬೀರುವ ಅಂಶಗಳನ್ನು ಅರಿತುಕೊಳ್ಳಲು ಸಾಕಷ್ಟು ಅವಕಾಶವಿದೆ ಎಂಬುದನ್ನು ಬಿಂಬಿಸುತ್ತದೆ.**

**ಒಂದು ಜಿಲ್ಲೆಯಲ್ಲಿ ಶೌಚಾಲಯದ ಬಳಕೆ ಮತ್ತು ಸೌಲಭ್ಯವನ್ನು ಒದಗಿಸುವಲ್ಲಿ ಆಗಿರುವ ಸಾಧನೆಯು ಆಸುಪಾಸಿನ ಜಿಲ್ಲೆಗಳಲ್ಲಿಯೂ ಸೇವೆಯನ್ನು ಉತ್ತಮಪಡಿಸಲು ಪ್ರೇರೇಪಣೆ ಆಗಬಹುದು. ಇನ್ನೊಂದು ಕಡೆ, ನೀತಿ ನಿರೂಪಕರು ಜಿಲ್ಲಾ ಹಂತದಲ್ಲಿ ಸಂಪನ್ಮೂಲದ ಬಳಕೆಗೆ ಏಕರೂಪದ ವ್ಯವಸ್ಥೆ ಮಾಡಬಹುದು.**

ಭಾರತದಲ್ಲಿ ಅಸಮರ್ಪಕವಾದ ಶೌಚಾಲಯದ ಬಳಕೆಯು ನೇರವಾಗಿ ಅನಾರೋಗ್ಯದ ಸಮಸ್ಯೆಗಳು ಹೆಚ್ಚಲು ಕಾರಣವಾಗಲಿದ್ದು, ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ. ಜಾಗತಿಕ ಜನಸಂಖ್ಯೆಯ ಅಂದಾಜು ಕಾಲುಭಾಗದ ಜನಸಂಖ್ಯೆ ಭಾರತದಲ್ಲಿ ಇದೆ. ಸುಮಾರು 600 ಮಿಲಿಯನ್ ಜನರು ಭಾರತದಲ್ಲಿ ಈಗಲೂ ಬಹಿರ್ದೆಸೆಗೆ ಬಯಲು ಪ್ರದೇಶವನ್ನು ಅವಲಂಬಿಸಿದ್ದಾರೆ. (ಯುನಿಸೆಫ್ 2012). ಶೌಚಾಲಯದ ಸೌಲಭ್ಯದ ಕೊರತೆ ಹಾಗೂ ಬಳಕೆಯ ಪ್ರಮಾಣ ಕುಗ್ಗಿರುವುದರ ಪರಿಣಾಮ ಭಾರತದ ಜಿಡಿಪಿ ಮೇಲೂ ಆಗುತ್ತಿದ್ದು, ವಾರ್ಷಿಕ ಶೇ 6.4ರಷ್ಟು ಕಡಿಮೆ ಆಗುತ್ತಿದೆ (ಡಬ್ಲ್ಯೂಎಸ್‌ಪಿ 2011; ಚೇಂಬರ್ಸ್ ಅಂಡ್ ವೊನ್ ಮೆಡಿಜಾ 2013). ಶೌಚಾಲಯ ಸೌಲಭ್ಯವನ್ನು ಒದಗಿಸಲು ಹೆಚ್ಚಿನ ಅಧ್ಯಯನ ಮತ್ತು ಪ್ರೋತ್ಸಾಹ ನೀಡಿದ ನಂತರವೂ ಶೌಚಾಲಯ ಸೌಲಭ್ಯ ಇನ್ನೂ ಕಳಪೆಯಾಗಿದೆ.

ಈ ಲೇಖನವು ವಿವಿಧ ಪ್ರಾದೇಶಿಕ ವಿಶ್ಲೇಷಣಾ ತಂತ್ರಗಳನ್ನು ಭಾರತದಲ್ಲಿ ಜಿಲ್ಲಾ ಹಂತದಲ್ಲಿ ಶೌಚಾಲಯ ಬಳಕೆಯ ವಸ್ತು ಸ್ಥಿತಿಯನ್ನು ವಿವರಿಸಲು ಬಳಕೆ ಮಾಡಿದೆ. ಜಾಗತಿಕವಾಗಿ ನಡದಿರುವ ಅಧ್ಯಯನಗಳು ಶೌಚಾಲಯದ ಬಳಕೆ ಜಿಲ್ಲೆ ಹಂತದಲ್ಲಿ ಬಲಯುತಗೊಳ್ಳಬೇಕು ಎಂಬುದನ್ನು ಬಲವಾಗಿ ದೃಢಪಡಿಸಿದೆ. ಸ್ಥಳೀಯವಾದ ವಸ್ತುಸ್ಥಿತಿಯ ಅಧ್ಯಯನದ ಪ್ರಕಾರ, ಕಳಪೆ ಗುಣಮಟ್ಟದ ಶೌಚಾಲಯ ಹಾಗೂ ಸೌಲಭ್ಯದ ಅಲಭ್ಯತೆಯ ಐದು ವರ್ಷದೊಳಗಿನ ಮಕ್ಕಳ ಸಾವಿನ ಪ್ರಮಾಣದ ಮೇಲೆ ನೇರ ಪರಿಣಾಮ ಬೀರಲಿದೆ. ಪ್ರಾದೇಶಿಕ ವಸ್ತುಸ್ಥಿತಿ ಅಧ್ಯಯನವನ್ನು ಸಾಮಾನ್ಯವಾದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಥಿಕವಾದ ಸ್ಥಿತಿಗತಿಗಳನ್ನು ಪರಿಗಣಿಸಿದ ನಂತರವೂ ವಿವರಿಸಲು ಬಳಸಲಾಗಿದೆ. ಈ ಅಧ್ಯಯನ ವಾತಾವರಣ ಮತ್ತು ಜಿಲ್ಲಾ ಹಂತದಲ್ಲಿ ಇದರನ್ನು ವಿವರಿಸುವಲ್ಲಿನ ಸಾಮರ್ಥ್ಯ ರಾಜ್ಯ ಮಟ್ಟದ ವಿಶ್ಲೇಷಣೆಯಲ್ಲಿ ಬಿಂಬಿತವಾಗಲಿದೆ.

ಪ್ರಾದೇಶಿಕ ಅಧ್ಯಯನಗಳು ಬಹುತೇಕವಾಗಿ ಶೌಚಾಲಯ ಸೌಲಭ್ಯದ ಬಳಕೆಯು ಗ್ರಾಮ ಮತ್ತು ಆಸುಪಾಸಿನ ಪ್ರದೇಶಗಳಲ್ಲಿ ಇರುವುದರತ್ತಲೇ ಕೇಂದ್ರೀಕೃತವಾಗಿದೆ. ಅಥವಾ ರಾಜ್ಯ ಅಥವಾ ಅದಕ್ಕೂ ಮೀರಿದ ಹಂತದ್ದಾಗಿದೆ (ಮನಿಕುಟ್ಟಿ 1998, ಚೇಂಬರ್ಸ್ 2009). ಇತ್ತೀಚಿನ ಸೂಕ್ಷ್ಮ ಅಥವಾ ಅತಿ ಸೂಕ್ಷ್ಮವಾದ ಒತ್ತು

ನಗರ ಯೋಜನಾ ಇಲಾಖೆ, ಯುಸಿಎಲ್‌ಎ ಲಸ್ಕಿನ್ ಸ್ಕೂಲ್ ಆಫ್ ಪಬ್ಲಿಕ್ ಅಫೇರ್ಸ್, ಲಾಸ್ ಏಂಜಲೀಸ್, ಕ್ಯಾಲಿಫೋರ್ನಿಯಾ. e-mail : gspierce@ucla.edu

ಎಂದರೆ ಶೌಚಾಲಯದ ಬಳಕೆ ಕುರಿತು ಪ್ರಚಾರ ಸಾಮಗ್ರಿಯು ಜಿಲ್ಲಾ ಹಂತದಲ್ಲಿ ಲಭ್ಯವಿರುವುದು.

ಕೇಂದ್ರ ಸರ್ಕಾರ ಸಮಗ್ರ ನೈರ್ಮಲ್ಯ ಆಂದೋಲನವನ್ನು (ಟಿಎಸ್‌ಸಿ) ಭಾರತದ ಶೇ 95ರಷ್ಟು ಜಿಲ್ಲೆಗಳಲ್ಲಿ ಹಮ್ಮಿಕೊಂಡಿದೆ. ಈ ಆಂದೋಲನದ ಅನುಸಾರ ಅನುದಾನವನ್ನು ರಾಜ್ಯ ಮಟ್ಟಕ್ಕೆ ವರ್ಗಾಯಿಸಲಾಗುತ್ತದೆ; ಅಲ್ಲಿಂದ ಜಿಲ್ಲಾ ಹಂತ ಹಾಗೂ ತದನಂತರ ಗ್ರಾಮ ಮಟ್ಟಕ್ಕೆ ವರ್ಗಾವಣೆ ಆಗಲಿದೆ. ಎಲ್ಲ ಗ್ರಾಮಗಳಲ್ಲಿ ಬಯಲು ಬಹಿರ್ದೆಸೆ ಪದ್ಧತಿಯನ್ನು ನಿರ್ಮೂಲನೆ ಮಾಡುವ ಗುರಿ ಇದ್ದರೂ, ಮೂಲ ಮೌಲ್ಯಮಾಪನ ಮತ್ತು ನಿಯಂತ್ರಣ ಜಿಲ್ಲಾ ಹಂತದಲ್ಲಿಯೇ ಉಳಿದುಕೊಂಡಿದೆ.

ಇತ್ತೀಚಿನವರೆಗೂ ಭಾರತದಲ್ಲಿ ಶೌಚಾಲಯ ಕೊರತೆ ಇರುವುದರ ಕುರಿತು ಸಮಗ್ರ, ಆಳವಾದ ಅಧ್ಯಯನ ಆಗಿಯೇ ಇಲ್ಲ (ಯುನಿಸೆಫ್ 2008). ದೇಶವ್ಯಾಪಿ ಅಂಕಿ–ಅಂಶಗಳನ್ನು ಈ ನಿಟ್ಟಿನಲ್ಲಿ ಆಗಿರುವ ಗಮನಾರ್ಹ ಬದಲಾವಣೆ, ಮಕ್ಕಳ ಬೆಳವಣಿಗೆ ಹಾಗೂ ಸಾವಿನ ಪ್ರಮಾಣವನ್ನು ಅಂದಾಜಿಸಲು ಬಳಕೆ ಮಾಡಲಾಗುತ್ತದೆ. ಪೂರಕವಾಗಿ ಸಮಗ್ರ ನೈರ್ಮಲ್ಯ ಆಂದೋಲನದಲ್ಲಿ ಜಿಲ್ಲಾ ಮಟ್ಟದಲ್ಲಿ ಬಿಡುಗಡೆಯಾದ ಅಂದಾಜು ಮೊತ್ತವನ್ನು ಪರಿಗಣಿಸಲಾಗುತ್ತದೆ (2012).


ಇನ್ನೊಂದು ಕಡೆ ಸ್ಪಾಟ್‌ನಿಟ್ಜ್ (2012) ಅವರು, ಟಿಎಸ್‌ಸಿ ಕಾರ್ಯಕ್ರಮ 2008ರಲ್ಲಿ ಇದ್ದಂತೆ, ದೇಶಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ಶೌಚಾಲಯದ ಮಾಲೀಕತ್ವವನ್ನು ಗಮನಾರ್ಹ ರೀತಿಯಲ್ಲಿ ಒದಗಿಸಲು ಆಗಿಲ್ಲ ಎಂದು ಅಂಕಿ ಅಂಶಗಳೊಂದಿಗೆ ತೋರಿಸಿದ್ದಾರೆ. ಹ್ಯೂಸೋ ಮತ್ತು ಬೆಲ್ ಅವರು, ಗುಣಾತ್ಮಕ ವಿವರಣೆ ನೀಡುತ್ತಲೇ ಸ್ಥಳೀಯವಾಗಿ ಟಿಎಸ್‌ಸಿ ಬಳಕೆಯ ಕ್ರಮವನ್ನು ಉಲ್ಲೇಖಿಸುತ್ತಾರೆ. ಬೇಡಿಕೆಯನ್ನು ಹೆಚ್ಚಿಸಲು ಆಗದಿರುವುದನ್ನು ಪ್ರಸ್ತಾಪಿಸುತ್ತಾರೆ. 2001–2011ರ ಜನಗಣತಿ ಅಂಕಿ ಅಂಶವನ್ನು ಉಲ್ಲೇಖಿಸಿ ಘೋಷ್ ಮತ್ತು ಕೇಮ್‌ಕ್ರಾಸ್ ಅವರು, ದೇಶಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ಪ್ರಾದೇಶಿಕವಾಗಿ ಶೌಚಾಲಯದ ಬಳಕೆಗೂ ಮಹಿಳಾ ಸಾಕ್ಷರತೆ ಮತ್ತು ನಗರೀಕರಣಕ್ಕೂ (2013) ಹೋಲಿಕೆ ಮಾಡುತ್ತಾರೆ. ಪ್ರಸ್ತುತ ಅಧ್ಯಯನದ ಅನುಸಾರ, ದೇಶಾದ್ಯಂತ ಜಿಲ್ಲಾ ಹಂತದ ಪ್ರಗತಿಯನ್ನು ಶೌಚಾಲಯದ ಬಳಕೆಯ ವ್ಯತ್ಯಾಸವನ್ನು ಅರಿಯಲು ಬಳಕೆ ಮಾಡಲಾಗುತ್ತದೆ.

## ಶೌಚಾಲಯ ಬಳಕೆಯ ಪ್ರಾದೇಶಿಕ ಆಯಾಮ : ಜಿಲ್ಲೆಗಳ ಪಾತ್ರ

ಶೌಚಾಲಯ ಬಳಸುವ ಬದ್ಧತೆ ಕುರಿತಂತೆ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಗತಿಯನ್ನು ಗಮನಿಸಿದ ಬಳಿಕ ಭೌಗೋಳಿಕ ಸ್ಥಿತಿಯತ್ತಲೂ ದೃಷ್ಟಿ ಹರಿಸಿದ ಅಧ್ಯಯನಗಳು ಕಡಿಮೆ. ಪರಸ್ಪರ ಹೋಲಿಕೆ ಆಗಿರಬಹುದು. ಆದರೆ, ಪ್ರಾದೇಶಿಕ ಭಿನ್ನತೆಯನ್ನು ಗಮನಿಸಿದರೆ ಆರೋಗ್ಯದ ಸ್ಥಿತಿಗತಿಗೂ ಶೌಚಾಲಯ ಸೌಲಭ್ಯಕ್ಕೂ ನೇರ ಸಂಪರ್ಕವಿದೆ. ಐದು ವರ್ಷದೊಳಗಿನ ಮಕ್ಕಳ ಸಾವು ಕುರಿತ ಅಂಕಿ ಅಂಶಗಳನ್ನು ಕುರಿತ ಪ್ರಸ್ತುತ ಅಧ್ಯಯನವನ್ನು ಗಮನಿಸಬಹುದು. (ಸಿಂಗ್, ಪಾಠಕ್ ಮತ್ತು ಚೌಹಾಣ್ 2011, ಕುಮಾರ್, ಸಿಂಗ್ ಮತ್ತು ರೈ 2012).

ಮೇಲೆ ಉಲ್ಲೇಖಿಸಿದಂತೆ ಗ್ರಾಮೀಣ ಪ್ರದೇಶಗಳು ಮತ್ತು ನಗರ ಪ್ರದೇಶಗಳಲ್ಲಿ ಎರಡರಲ್ಲೂ ಶೌಚ ವ್ಯವಸ್ಥೆ ಅಸಮರ್ಪಕವಾಗಿದೆ, ಎಂಬುದನ್ನು ಸುಲಭವಾಗಿ ಗ್ರಹಿಸಬಹುದು. ಈ ದೃಷ್ಟಿಯಿಂದ ನೇರವಾದ, ಬಯಲು ಬಹಿರ್ದೆಸೆಯಿಂದ ನಕಾರಾತ್ಮಕ ಪರಿಣಾಮ ಆಗುವುದನ್ನು ಗುರುತಿಸ ಬಹುದು. (ಕ್ಯಾಮ್ ಮತ್ತು ಹರದಾ 2002, ಜಾರ್ಜ್ 2009). ಕೆಲವು ಕುಟುಂಬಗಳು ಬಯಲು ಪ್ರದೇಶದಲ್ಲಿ ಬಹಿರ್ದೆಸೆಗೆ ಹೋದರೂ ರೋಗದ ಸೋಂಕುಗಳು ಸುಲಭವಾಗಿ ಇಡೀ ಸಮುದಾಯವನ್ನು ವ್ಯಾಪಿಸಬಹುದು. ಭಾರತದಲ್ಲಿ ರಾಜ್ಯಗಳು, ಇತರೆ ಉಪಖಂಡಗಳ ಸ್ಥಳೀಯ ಆಡಳಿತಕ್ಕೆ ಹೋಲಿಸಿದರೆ ದೊಡ್ಡ ಮೊತ್ತದ ಅನುದಾನವನ್ನು ಮೂಲಸೇವೆಗಳಿಗೆ ಒದಗಿಸುತ್ತವೆ. ಹೀಗಾಗಿ, ಶೌಚಾಲಯ ಸೇವೆ ವ್ಯತ್ಯಾಸವನ್ನು ನೇರವಾಗಿ ರಾಜ್ಯದ ನೀತಿಗಳಿಗೆ ಸಮೀಕರಿಸಬಹುದು (ಎಲ್ಲನ್ ಅಂಡ್ ಕಮ್ಮಿನ್ಸ್ 2012, ಘೋಷ್ ಮತ್ತು ಕೇಮ್‌ಕ್ರಾಸ್ 2013, ರಾವ್ ಮತ್ತು ಸಿಂಗ್ 2003).

ರಾಜ್ಯಗಳಲ್ಲಿ ಜಿಲ್ಲೆಗಳು ಆಡಳಿತ ಉಪ ಕೇಂದ್ರಗಳಾಗಿದ್ದು, ಕೇಂದ್ರಾಡಳಿತ ಪ್ರದೇಶಗಳು ಬಹುತೇಕ ನಗರ ಪ್ರದೇಶವನ್ನು ಅಥವಾ ಭೌಗೋಳಿಯ ಸ್ಥಿತಿಯನ್ನು ಆಧರಿಸಿ



ನೂರಾರು ಗ್ರಾಮಗಳನ್ನು ಒಳಗೊಂಡಿರ ಬಹುದು. ವೈಯಕ್ತಿಕ ಜಿಲ್ಲೆಗಳ ಜನಸಂಖ್ಯೆಯು ಕೆಲವು ನೂರು ಸಾವಿರಗಳಿಂದ ಕೆಲ ದಶಲಕ್ಷ ಜನರನ್ನು ಒಳಗೊಂಡಿರಬಹುದು. ಅದರ ಅನುಸಾರ ಪ್ರಾದೇಶಿಕ ನೀತಿ, ಜಿಲ್ಲಾ ಹಂತದ ಶೌಚಾಲಯದ ಅಗತ್ಯಕ್ಕೆ ಪೂರಕವಾಗಿಲ್ಲ. ಸ್ಪಷ್ಟವಾಗಿ ಜಿಲ್ಲಾ ಹಂತದಲ್ಲಿನ ಶೌಚಾಲಯದ ಬಳಕೆ ವಸ್ತು ಸ್ಥಿತಿಯನ್ನು ಭೌತಿಕವಾಗಿ ಜಾರಿ ಪ್ರಕ್ರಿಯೆಗೆ ಸಮೀಕರಿಸಲಾಗದು. ಬದಲಾಗಿ, ಶೌಚಾಲಯದ ಬಳಕೆಯ ಮನೋಸ್ಥಿತಿಯನ್ನು ಒಟ್ಟಾಗಿ ಗಮನಿಸಬೇಕು ಹಾಗೂ ಬೇಡಿಕೆಗೆ ಅನುಗುಣವಾಗಿ ಸೌಲಭ್ಯದ ಪೂರೈಕೆಯು ಇದೆಯಾ ಎಂಬುದನ್ನು ಗಮನಿಸಬೇಕು. ಶೌಚಾಲಯದ ಬೇಡಿಕೆಯು ಸಾಮಾನ್ಯವಾಗಿ ಸಾಮಾಜಿಕ ಮಾನದಂಡಗಳ ನಿರ್ವಹಣೆಯನ್ನು ಆಧರಿಸಿರುತ್ತದೆ; ಬೇಡಿಕೆಯು ಸಾಂಸ್ಥಿಕ ನಿರ್ವಹಣೆಯನ್ನು ಹೊಂದಿರುತ್ತದೆ. ಜಿಲ್ಲಾ ಹಂತದ ಈ ಏರಿಳಿತವನ್ನು ವಿವರಿಸಲು ಕನಿಷ್ಠ ನಾಲ್ಕು ವಿವರಣೆಗಳು ಲಭ್ಯ ಇವೆ. ಇದರ ಪೈಕಿ ಒಂದು ವಿಶ್ಲೇಷಣೆಯೂ ಜಿಲ್ಲಾ ಹಂತದ ಕಾರ್ಯವ್ಯವಸ್ಥೆಯನ್ನು ಪ್ರತಿಪಾದಿಸುತ್ತದೆ.

ಜಿಲ್ಲಾ ಹಂತದಲ್ಲಿ ಶೌಚಾಲಯ ಬಳಕೆಯ ವ್ಯತ್ಯಾಸವು ಸೌಲಭ್ಯದ ಲಭ್ಯದ ಸಮಸ್ಯೆಯನ್ನು ಬಿಂಬಿಸಲಿದೆ. ಅದರ ಅನುಸಾರ, ಜಿಲ್ಲೆಗಳ ಗಡಿಯೂ ನಿಜವಾದ ಪ್ರಾದೇಶಿಕ ಮಟ್ಟದ ಶೌಚಾಲಯ ಬಳಕೆ ಸ್ಥಿತಿಗತಿಯನ್ನು ಅಂದಾಜಿಸಲು ತೊಡಕಾಗಿದೆ. ಪರ್ಯಾಯವಾಗಿ, ಜಿಲ್ಲಾ ಹಂತದ ಏರಿಳಿತವನ್ನು ಸರಳವಾಗಿ ರಾಜ್ಯ ಮಟ್ಟದ ಪೂರೈಕೆಯ ವ್ಯತ್ಯಾಸದ ಜೊತೆಗೆ ಸಮೀಕರಿಸಬಹುದು. ಮೂರನೆಯದಾಗಿ, ಭಾರತದ ಪ್ರಸ್ತುತ ಆಡಳಿತದ ಗಡಿಗಳು, ಇತ್ತೀಚೆಗೆ ವ್ಯತ್ಯಾಸವಾಗುತ್ತಿವೆ. ಅದರ ಪ್ರಕಾರ, ಶೌಚಾಲಯದ ಬಳಕೆಗೆ ಪೂರಕವಾಗಿ

ಸಾಂಸ್ಕೃತಿಕವಾದ ಪ್ರಾಮುಖ್ಯತೆಯನ್ನು ಅಥವಾ ಬೇಡಿಕೆಯ ವಿರೋಧಾಭಾಸವನ್ನು ಬಿಂಬಿಸಬಹುದು.

ಅಂತಿಮವಾಗಿ, ನಿಜವಾದ ಜಿಲ್ಲಾ ಮಟ್ಟದ ಪರಿಣಾಮವನ್ನು ಗುರುತಿಸಲು, ಶೌಚಾಲಯ ಬಳಕೆಯ ಕ್ರಮವನ್ನು ವಿವರಿಸುವ ಪ್ರಾದೇಶಿಕ ಕ್ರಮಗಳು ಇರಬಹುದು. ಟಿಎಸ್‌ಸಿ ಪ್ರಚಾರ ಸಾಮಗ್ರಿಯಲ್ಲಿ ಉಲ್ಲೇಖಿಸಿದಂತೆ ಜಿಲ್ಲಾ ಹಂತದಲ್ಲಿ ನಿರ್ಧಾರ ತೆಗೆದುಕೊಳ್ಳುವುದು ಹಾಗೂ ಸಂಪನ್ಮೂಲದ ಹಂಚಿಕೆಯು ಶೌಚಾಲಯದ ಬಳಕೆ, ಲಭ್ಯತೆಯ ಮೇಲೂ ಪರಿಣಾಮ ಬೀರಬಹುದು. ವ್ಯಕ್ತಿಗತವಾಗಿ ಜಿಲ್ಲೆಗಳು ಈ ದೃಷ್ಟಿಯಿಂದ ಕೆಲ ನಾಯಕರ ಯತ್ನ ಹಾಗೂ ಪ್ರಚಾರಾಂದೋಲನದಿಂದ ದೊಡ್ಡ ಮಟ್ಟದ ಸಾಧನೆಯನ್ನು ಮಾಡಿರಬಹುದು.

ಒಂದು ಜಿಲ್ಲೆಯಲ್ಲಿ ಶೌಚಾಲಯದ ಬಳಕೆ ಮತ್ತು ಸೌಲಭ್ಯವನ್ನು ಒದಗಿಸುವಲ್ಲಿ ಆಗಿರುವ ಸಾಧನೆಯು ಆಸುಪಾಸಿನ ಜಿಲ್ಲೆಗಳಲ್ಲಿಯೂ ಸೇವೆಯನ್ನು ಉತ್ತಮಪಡಿಸಲು ಪ್ರೇರೇಪಣೆ ಆಗಬಹುದು. ಇನ್ನೊಂದು ಕಡೆ, ನೀತಿ ನಿರೂಪಕರು ಜಿಲ್ಲಾ ಹಂತದಲ್ಲಿ ಸಂಪನ್ಮೂಲದ ಬಳಕೆಗೆ ಏಕರೂಪದ ವ್ಯವಸ್ಥೆ ಮಾಡಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ ಟಿಎಸ್‌ಸಿ ಶೌಚಾಲಯದ ಬಳಕೆಯನ್ನು ಹೆಚ್ಚಿಸಲು ಜಿಲ್ಲಾ ಹಂತದಲ್ಲಿ ಹೆಚ್ಚು ಪರಿಣಾಮಕಾರಿಯಾಗಿದೆ.

**ವಿಧಾನಗಳು**

ಈ ಅಧ್ಯಯನ ಕ್ರಮಗಳಲ್ಲಿ ತೆಗೆದುಕೊಳ್ಳಲಾದ ಶೌಚಾಲಯ ಬಳಕೆ ಮಾಡುತ್ತಿರುವ ಕುಟುಂಬಗಳ ಶೇಕಡಾವಾರು ಪ್ರಮಾಣದಲ್ಲಿ ವ್ಯತ್ಯಾಸವಿಬರಹುದು. ಈ ಅಂಕಿ–ಅಂಶಗಳನ್ನು ಜಿಲ್ಲಾ ಹಂತದ ಕೌಟುಂಬಿಕ ಸಮೀಕ್ಷೆ (ಡಿಎಲ್‌ಎಚ್‌ಎಸ್–3) ಆಧರಿಸಿ ಪಡೆಯಲಾಗಿದೆ. ಶೌಚಾಲಯ ಬಳಸದಿರುವ ಅಥವಾ ಈ ಸೌಲಭ್ಯ ಇಲ್ಲದಿರುವ ಕುಟುಂಬಗಳು ಬಹುತೇಕ ಬಯಲನ್ನೇ ಅವಲಂಬಿಸುತ್ತವೆ. ಅಲ್ಲದೆ, ಈ ಸಮೀಕ್ಷೆಯಿಂದ ಇತರೆ ಮೂರು ವ್ಯತ್ಯಾಸಗಳನ್ನು ಗುರುತಿಸಲಾಗಿದೆ. 2001ರ ರಾಷ್ಟ್ರೀಯ ಗಣತಿಯ ಅಂಕಿ ಅಂಶಗಳಿಂದ ಭೂ ಪ್ರದೇಶದ ಲಭ್ಯತೆಯನ್ನು ಆಧರಿಸಿಲಾಗಿದೆ. ಪ್ರಾದೇಶಿಕ ವಿಶ್ಲೇಷಣೆಯನ್ನು ಮಾಡಲು ಜಿಲ್ಲೆಗಳ ನಡುವೆ ಶೌಚಾಲಯ ಬಳಕೆಗೆ ತುಲನೆಗೆ ಹೇಗೆ ಸಮೀಕರಿಸಬೇಕು ಎಂಬುದರ ಆಯ್ಕೆಯೂ ಇರಬೇಕು. ಈ ಸಮೀಕ್ಷೆಗೆ ಪೂರಕವಾಗಿ ಕ್ವೀನ್ ವೇಟಿಂಗ್ ತಂತ್ರ ಸೂಕ್ತ ಎನಿಸುತ್ತದೆ. ಉಲ್ಲೇಖಿತ ಜಿಲ್ಲೆಯು ಪಾಲಿಸಲಾಗುತ್ತಿರುವ ನೀತಿಗೆ ಅನುಗುಣವಾಗಿ ಆಸುಪಾಸಿನ ಜಿಲ್ಲೆಗಳಿಂದ ಪ್ರಭಾವಿತಗೊಂಡಿರುತ್ತದೆ. ವಸ್ತುಸ್ಥಿತಿಯನ್ನು ಅರಿಯಲು ಇರುವ ಕ್ರಮವೆಂದರೆ ಮೋರಾನ್ 1 ಟೆಸ್ಟ್. ಇದು, ಪ್ರದೇಶಗಳ ಆಸಕ್ತಿ ಮತ್ತು ಸೌಲಭ್ಯಗಳ ವಿತರಣೆಯನ್ನು ಆಧರಿಸಿದ ಫಲಶ್ರುತಿಯನ್ನು ಸಮೀಕರಿಸಿ ವಿಶ್ಲೇಷಿಸಲಾಗುತ್ತದೆ.

ಅಲ್ಲದೆ, ಜಿಲ್ಲಾ ಹಂತಗಳಲ್ಲಿ ಶೌಚಾಲಯ ಸೌಲಭ್ಯ ಕುರಿತು ಆಸಕ್ತಿ ಅಥವಾ ನಿರಾಸಕ್ತಿಯನ್ನು ಗುರುತಿಸಲು ಎಲ್‌ಐಎಸ್‌ಎ ಕ್ರಮವನ್ನು (ಲೋಕಲ್ ಇಂಡಿಕೇಟರ್ ಆಫ್ ಸ್ಪೇಷಿಯಲ್ ಆಟೊಕರಲೇಷನ್) ಅನ್ನು ಬಳಕೆ ಮಾಡಲಾಗುತ್ತದೆ. ಅಂತಿಮವಾಗಿ ಈ ಸಮಸ್ಯೆಯನ್ನು ಸಾಮಾಜಿಕ ಮತ್ತು ಆರ್ಥಿಕ ನಿಯಂತ್ರಣಗಳನ್ನು ಆಧರಿಸಿವೆಯೇ ಎಂಬುದನ್ನು ಬಿಂಬಿಸಲಿದೆ.

**ಫಲಿತಾಂಶ ಮತ್ತು ಚರ್ಚೆ**

ಜಾಗತಿಕವಾದ ಮೋರನ್ಸ್ 1 ಟೆಸ್ಟ್ –0.75 ಎಂಬುದು 0.01 ಹಂತದಲ್ಲಿ ಸೂಕ್ತ ಎನಿಸುತ್ತದೆ. ಇದು, ಶೌಚಾಲಯ ಬಳಕೆಗೆ ಪೂರಕವಾಗಿ ಸ್ಥಳೀಯವಾಗಿ ಇರುವ ಬೆಳವಣಿಗೆ ಅಂಶಗಳನ್ನು ವಿವರಿಸುತ್ತದೆ. ಇದು, ಜಿಲ್ಲೆಗಳಲ್ಲಿ ಅಧಿಕ ಶೌಚಾಲಯ ಸೇವೆ ಲಭ್ಯವಿರುವ ಸ್ಥಳಗಳು, ಆಸುಪಾಸಿನ ಜಿಲ್ಲೆಗಳನ್ನು ಬಿಂಬಿಸುತ್ತದೆ. ಹೆಚ್ಚು ಬಳಕೆಯ (ಹೈ ಡಿಸ್ಟ್ರಿಕ್ಟ್) ಜಿಲ್ಲೆಗಳೂ ದೇಶದ ದಕ್ಷಿಣ ಆಗ್ನೇಯ, ನೈರುತ್ಯ ಭಾಗದ ಕೊನೆಯಲ್ಲಿವೆ. ಇನ್ನೊಂದೆಡೆ ಕಡಿಮೆ ಬಳಕೆ ಜಿಲ್ಲೆಗಳು ಕೇಂದ್ರದ ಉತ್ತರ ಭಾಗದಲ್ಲಿವೆ.

ಡಿಎಲ್‌ಎಚ್‌ಎಸ್–2 ಮಾದರಿ ಆಧರಿಸಿ 2003–2004ರಲ್ಲಿ ನಡೆಸಿದ ಸಮೀಕ್ಷೆಯ ಅಂಕಿ ಅಂಶಗಳನ್ನು ಆಧರಿಸಿ ಸಿಂಗ್, ಪಾಠಕ್ ಮತ್ತು ಚೌಹಾಣ್ (2011) ಅವರು ಮಾಡಿದ ಐದು ವರ್ಷದೊಳಗಿನ ಮಕ್ಕಳ ಸಾವಿನ ಪ್ರಕರಣ ಕುರಿತ ದೇಶದಲ್ಲಿನ ಸ್ಥಿತಿಗತಿಯನ್ನು ಬಿಂಬಿಸುವ ಮಾಹಿತಿಯನ್ನು ನೀಡುತ್ತದೆ. ಇದು, ದೇಶದ 76 ಕೃಷಿ ಆಧಾರಿತ ಪ್ರದೇಶಗಳನ್ನು ಬಿಂಬಿಸುತ್ತದೆ.



ಪ್ರಾದೇಶಿಕ ಒಲವು ಮುಖ್ಯವಾದ ಅಂಶ ಎಂಬುದನ್ನು ಪರಿಗಣಿಸಿದ ಬಳಿಕ ಶೌಚಾಲಯ ಬಳಕೆಗಾಗಿ ಸಾಮಾಜಿಕ ಮತ್ತು ಆರ್ಥಿಕ ಅಂಶಗಳನ್ನು ನಿಯಂತ್ರಿಸಿದ ನಂತರ ಭೌಗೋಳಿಕ ಬಾಂಧವ್ಯವನ್ನೂ ಬಲಯುತಗೊಳಿಸುವುದು ಅಗತ್ಯ. ಎಲ್ಲ ಸ್ವತಂತ್ರ ಸಂಸ್ಥೆಗಳು ಪರಿಣಾಮಕಾರಿಯಾಗಿ ಶೌಚಾಲಯ ಬಳಕೆಯನ್ನು ಪ್ರೇರೇಪಿಸಲು ಒಂದುಗೂಡಬೇಕು. ಮೊದಲನೆಯದಾಗಿ, ನೀರಿನ ಲಭ್ಯತೆಯನ್ನು ಸಕಾರಾತ್ಮಕವಾಗಿ ಉತ್ತಮಪಡಿಸಬೇಕು. ಇದು, ಶೌಚಾಲಯದ ಬಳಕೆ ಉತ್ತೇಜಿಸಲು ಅಗತ್ಯ. ಅಂಕಿ–ಅಂಶಗಳನ್ನು ಗಮನಿಸಿದರೆ ಇದರ ನಡುವೆ ನಕಾರಾತ್ಮಕ ಸಂಬಂಧವಿದೆ. (ಬ್ಲಾಕ್ ಅಂಡ್ ಫಾವ್ಸೆಟ್ 2008; ಜಾರ್ಜ್ 2009; ಗಂಗೂಲಿ 2008). ಆದರೆ, ಆದಾಯ ಕುರಿತ ಅಂಕಿ ಅಂಶಗಳು ಭಾರತದಲ್ಲಿ ಲಭ್ಯವಿಲ್ಲ. ಜಿಲ್ಲೆಗಳಲ್ಲಿ ಪ್ರಾಕೃತಿಕ ಅನಿಲ ಸಂಪರ್ಕ (ಎಲ್‌ಎನ್‌ಜಿ) ಹೊಂದಿರುವ ಕುಟುಂಬಗಳ ಮಾಹಿತಿ ಇಲ್ಲ; ಇದು, ಆರ್ಥಿಕ ಸ್ಥಿತಿಗತಿಯನ್ನು ಮಾಪನ ಮಾಡಲು, ಶೌಚಾಲಯ ಬಳಕೆಗೆ ಪೂರಕವಾಗಿ ಗುರುತಿಸಲು ಆಧರಿಸಲಾಗುತ್ತದೆ (ಡೇಟನ್ ಮತ್ತು ಗ್ರೋಷ್ 2000).

ಇನ್ನೊಂದು ಮುಖ್ಯವಾದ ಅಂಶವೆಂದರೆ ಜಿಲ್ಲೆಗಳಲ್ಲಿ ಕಡು ಬಡತನದ ರೇಖೆಗಿಂತಲೂ ಕಡಿಮೆ (ಬಿಪಿಎಲ್) ಇರುವ ಕುಟುಂಬಗಳ ಸಂಖ್ಯೆ. ಬಿಪಿಎಲ್ ಕಾರ್ಡ್ ಅನ್ನು ಸಾಮನ್ಯವಾಗಿ ರಾಷ್ಟ್ರೀಯವಾಗಿ ಬಡತನ ರೇಖೆಗಿಂತಲೂ ಕೆಳಗಿರುವ ಕುಟುಂಬಗಳಿಗೆ ನೀಡಲಾಗುತ್ತದೆ. ಬಿಪಿಎಲ್

ಕಾರ್ಡ್ ಸ್ಥಿತಿಗತಿಯೂ ಶೌಚಾಲಯ ಬಳಕೆಗೆ ಪೂರಕವಾಗಿದೆ. ಆದರೆ, ಈ ಹೋಲಿಕೆ ಅಷ್ಟು ಸ್ಪಷ್ಟವಾಗಿಲ್ಲ. ಒಟ್ಟು ಭೂ ಪ್ರದೇಶ ಮತ್ತು ಜನಸಂಖ್ಯೆಯ ಒತ್ತಡ ನಗರೀಕರಣದ ಪ್ರಭಾವವನ್ನು ಹೆಚ್ಚಿಸಲಿದೆ. ನಗರೀಕರಣದ ಒತ್ತಡದ ಮತ್ತು ಶೌಚಾಲಯದ ಬಳಕೆ ಕುರಿತು ಸಿದ್ಧಾಂತಗಳು ಗೊಂದಲ ಮೂಡಿಸುತ್ತವೆ. ಅತಿ ಹೆಚ್ಚು ನಗರೀಕರಣಗೊಂಡ ಪ್ರದೇಶಗಳು ಆರ್ಥಿಕವಾಗಿ ಶೌಚಾಲಯ ವ್ಯವಸ್ಥೆ ಹೊಂದಲು ಪೂರಕವಾಗಿವೆ. ಕೆಳ ಆದಾಯದ ಪ್ರದೇಶಗಳಲ್ಲಿ, ಶೌಚಾಲಯ ವ್ಯವಸ್ಥೆಯನ್ನು ಹೊಂದುವುದು ದುಬಾರಿಯಾಗಿದೆ. ಅಧಿಕ ಒತ್ತಡ, ಜಾಗದ ಕೊರತೆ ಮೂಲ ಸೌಲಭ್ಯದ ತಂತ್ರಜ್ಞಾನವನ್ನು ಅಳವಡಿಸಲು ತೊಡಕಾಗಿರಬಹುದು (ಮಾರಾ ಅಂಡ್ ಇವಾನ್ಸ್ 2011). ಈ ಅಂಶಗಳನ್ನು ಆಧರಿಸಿದರೆ ಒತ್ತಡ ಮತ್ತು ಶೌಚಾಲಯ ಸಮಸ್ಯೆಗೂ ಪರಸ್ಪರ ಸಂಬಂಧ ಇರುವುದಿಲ್ಲ.

ಟೇಬಲ್–1 ಪ್ರಾದೇಶಿಕ ಲ್ಯಾಗ್ ಮಾದರಿಯ ಫಲಿತಾಂಶಗಳನ್ನು ಬಿಂಬಿಸಲಿದೆ. ಈ ಮಾದರಿಯು ಅಂಕಿ–ಅಂಶದ ಆಧಾರದಲ್ಲಿ .001 ಹಂತದಲ್ಲಿ ಪೂರಕವಾಗಿರಲಿದೆ. ಅಲ್ಲದೆ, ಒಎಲ್‌ಎಸ್ ಮಾದರಿಗೆ ಹೋಲಿಸಿದರೆ ಹೆಚ್ಚು ವಿವರಣಾತ್ಮಕವಾಗಿದೆ. ಇದು, ವಿವಿಧ ಭಿನ್ನತೆಗಳನ್ನು ಬಿಂಬಿಸಲಿದೆ (ಹೊಂದಾಣಿಸಲಾದುದು ಆರ್ ಸ್ಕ್ವೆಯರ್ಡ್=0.49).

ಶೌಚಾಲಯ ಬಳಕೆ ಕುರಿತು ಐದರಲ್ಲಿ ನಾಲ್ಕರಷ್ಟು ಭಿನ್ನತೆಗಳು ಪ್ರಾದೇಶಿಕ ಕೊರತೆಯನ್ನು ನಿರ್ದಿಷ್ಟವಾಗಿ ವಿವರಿಸಲಿದ್ದು, ರಾಜ್ಯ ವ್ಯಾಪಿ ವಿಶ್ಲೇಷಣೆಗೆ ಈ ಮಾದರಿ ಸೂಕ್ತವಾಗಿದೆ. ಕುಡಿಯುವ ನೀರಿನ ಲಭ್ಯತೆ, ಎಲ್‌ಎನ್‌ಜಿ ಸಂಪರ್ಕ, ಬಿಪಿಎಲ್ ಕಾರ್ಡ್‌ಗಳು ಅಂಕಿ–ಅಂಶಗಳ ದೃಷ್ಟಿಯಿಂದ ಶೌಚಾಲಯದ ಬಳಕೆಯ ಪ್ರಮಾಣವನ್ನು ಬಿಂಬಿಸುತ್ತದೆ. ಜಿಲ್ಲಾ ಹಂತದ ಅಂಕಿ ಅಂಶಗಳು ಟಿಎಸ್‌ಸಿಯಲ್ಲಿ ಉತ್ತಮ ಸಾಧನೆ ತೋರಿದರೂ ಸ್ವತಂತ್ರ ಭಿನ್ನತೆಯನ್ನು ತೋರುತ್ತವೆ. ಇದು, ವಿವಿಧ ಮಾದರಿಗಳ ಫಲಿತಾಂಶದಲ್ಲಿ ವ್ಯತ್ಯಾಸವಾಗುವುದಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ ಈ ಅಂಶಗಳು ಟಿಎಸ್‌ಸಿಯಲ್ಲಿನ ಮಾಪನಯುಕ್ತ ಅಂಕಿ–ಅಂಶಗಳ ಜೊತೆಗೆ ಹೆಚ್ಚುವರಿಯಾಗಿ ಸಾಮಾನ್ಯವಾದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯನ್ನು ಬಿಂಬಿಸುತ್ತವೆ.

**ಟೇಬಲ್ 1: ಶೌಚಾಲಯದ ಲಭ್ಯತೆ ಕುರಿತು ಸ್ಪೇಷಿಯಲ್ ಲ್ಯಾಗ್ ಮಾದರಿಯ ಮಾಹಿತಿಗಳು**

| ಅಸ್ಥಿರ ಸ್ವತಂತ್ರ ಅಂಶಗಳು | ಪರಿಣಾಮ (Standard Error) |
|---|---|
| ಕುಡಿಯುವ ನೀರು | –0.12*** (0.03) |
| ಎಲ್‌ಎನ್‌ಜಿ ಸಂಪರ್ಕ | 0.67*** (0.04) |
| ಬಿಪಿಎಲ್ ಕಾರ್ಡ್ | –0.07** (0.03) |
| ಭೂ ಭಾಗ | –0.0002 (0.000001) |
| ಒತ್ತಡ | 1.71 (0.0003) |
| ಲ್ಯಾಗ ಅವಧಿ | 0.75*** (0.02) |
| ಕನ್‌ಸ್ಟಂಟ್ ಅವಧಿ | 11.80*** (2.65) |
| ಮಾದರಿ ಅಂಕಿ–ಅಂಶಗಳು | $R^2$: 0.85<br>Moran's I: 0.065** |

N=591. *p < 0.10, **p < 0.01, ***p<0.001

**ಸಮಾಪ್ತಿ**

ಈ ಅಧ್ಯಯನ ಶೌಚಾಲಯದ ಬಳಕೆಯ ಬಹುತೇಕ ಜಿಲ್ಲಾ ಹಂತದ ಕಾರ್ಯರೂಪಗಳನ್ನು ಆಧರಿಸಿದೆ ಎಂಬುದನ್ನು ದೃಢವಾಗಿ ಬಿಂಬಿಸುತ್ತದೆ. ಸ್ಥಳೀಯ ಅಧ್ಯಯನದ ಮಾಹಿತಿಗಳು ಕೂಡಾ ಕಳಪೆ ಸ್ಥಿತಿಯಲ್ಲಿರುವ ಶೌಚಾಲಯ ಸೌಲಭ್ಯ ಕೂಡಾ ಐದು ವರ್ಷದೊಳಗಿನ ಮಕ್ಕಳ ಸಾವಿನ ಪ್ರಮಾಣದ ಮೇಲೆ ಪರಿಣಾಮ ಬೀರುತ್ತವೆ ಎಂಬುದನ್ನು ಬಿಂಬಿಸಲಿದೆ. ಹೆಚ್ಚುವರಿಯಾಗಿ ಸಾಮಾಜಿಕ–ಆರ್ಥಿಕ ವ್ಯತ್ಯಾಸಗಳನ್ನು ನಿಯಂತ್ರಿಸಿದ ಬಳಿಕವು ಪ್ರಾದೇಶಿಕ ಭಿನ್ನತೆ ಉಳಿಯಲಿದೆ.

ಅಂಕಿ ಅಂಶದ ಪ್ರಕಾರ, ಶೌಚಾಲಯದ ಬಳಕೆಯ ಮಹತ್ವ ಕುರಿತ ಸೂಕ್ಷ್ಮತೆಯು ರಾಜ್ಯದ ವ್ಯಾಪ್ತಿಗಿಂತಲೂ ಚಿಕ್ಕದಿದ್ದು, ಗ್ರಾಮ ಮತ್ತು ಆಸುಪಾಸಿನ ಪ್ರದೇಶಗಳ ವಸ್ತುಸ್ಥಿತಿಗಿಂತಲೂ ದೊಡ್ಡದಾಗಿದೆ. ಜಿಲ್ಲೆ, ನಗರ, ತಹಶೀಲ್ ಹಂತ, ಕೃಷಿ, ಹವಾಮಾನ ಪ್ರದೇಶ ಹೆಚ್ಚು ಪರಿಣಾಮಕಾರಿಯಾಗಿ ಈ ಬೆಳವಣಿಗೆಯನ್ನು ಅರಿಯಲು ಹೆಚ್ಚು ಸೂಕ್ತವಾಗಲಿದೆ. ಮಾದರಿ ಫಲಿತಾಂಶಗಳು ಜಿಲ್ಲಾ ಹಂತದಲ್ಲಿ ಟಿಎಸ್‌ಸಿ ಅಂಥ ಕಾರ್ಯಕ್ರಮಗಳು ಇನ್ನಷ್ಟು ಚುರುಕು ಪಡೆಯಬೇಕು ಎಂಬುದನ್ನು ಬಿಂಬಿಸಲಿವೆ. ಹೆಚ್ಚಿನದಾಗಿ ಕೃಷಿ–ಪರಿಸರ ಬಯಲು ಭಾಗವನ್ನು ಒಂದು ಘಟಕವಾಗಿ ವಿಶ್ಲೇಷಿಸುವ ಸಾಧ್ಯತೆಗಳು ಇನ್ನು ಬಳಕೆಯಾಗಿಲ್ಲ. ಈ ಹಂತದಲ್ಲಿ ಒಂದು ಚೌಕಟ್ಟು ರೂಪಿಸುವುದು ಗಡಿ ಭಾಗದ ಸಾಂಸ್ಕೃತಿಕ ಪರಿಸರದ ಮೇಲೂ ಪರಿಣಾಮ ಬೀರಬಹುದು ಎಂಬುದನ್ನು ರಾಜ್ಯ ಮಟ್ಟದ ವಿಶ್ಲೇಷಣೆಗಳು ಗಮನಿಸಿಲ್ಲ. ಅಂತಿಮವಾಗಿ ನಗರ ಪ್ರದೇಶಗಳಲ್ಲಿ ಒಳಚರಂಡಿ ವ್ಯವಸ್ಥೆಯ ಮೇಲೂ ಹೆಚ್ಚಿನ ಗಮನಹರಿಸಿಲ್ಲ. ಶೌಚಾಲಯದ ಬಳಕೆ ಗ್ರಾಮೀಣ ಭಾಗಗಳಿಗಿಂತಲೂ ನಗರ ಪ್ರದೇಶದಲ್ಲಿ ಹೆಚ್ಚಾಗಿದೆ ಎಂಬುದು ನಿಜವಾದರೂ ಸೂಕ್ತವಾದ ಒಳಚರಂಡಿ ವ್ಯವಸ್ಥೆಯು ಇಲ್ಲ ಎಂಬುದು ಇನ್ನೂ ಭಾರತದ ನಗರಗಳಲ್ಲಿ ಆರೋಗ್ಯದ ಮೇಲೆ ಪರಿಣಾಮ ಬಿರಿದೆ. ❑

# ನಗರ ನೈರ್ಮಲ್ಯ – ತಿರುಚಿದ ಬೆಳವಣಿಗೆ

ತ್ರಿಶಾ ಅಗರ್‌ವಾಲ್
ಕನ್ನಡಕ್ಕೆ : ಹೇಮ ಹೆಬ್ಬಗೋಡಿ



**ನಿರ್ಮಲೀಕರಣವು ಭಾರತದ ಪ್ರಮುಖ ಅಭಿವೃದ್ಧಿಯ ಸವಾಲುಗಳಲ್ಲಿ ಒಂದು. ಭಾರತದ ನಗರ ಜನಸಂಖ್ಯೆಯ ನಾಲ್ಕನೇ ಒಂದರಷ್ಟು ಜನರಿಗೆ ಸುರಕ್ಷಿತ ಶೌಚವ್ಯವಸ್ಥೆ ಲಭ್ಯವಿಲ್ಲ. ನಗರ ವಾಸಿಗಳಲ್ಲಿ ಕೇವಲ 30–40% ಜನರಿಗೆ ಮಾತ್ರ ಒಳಚರಂಡಿ ವ್ಯವಸ್ಥೆ ಮತ್ತು ಬಳಸಿದ ನೀರಿನ ಪುನರ್‌ಬಳಕೆಯ ವ್ಯವಸ್ಥೆ ಲಭ್ಯವಿದೆ. ಬಹುತೇಕ ನಗರಗಳಲ್ಲಿ ಬಯಲು ಶೌಚಾಲಯಗಳ ಬಳಕೆಯು ವ್ಯಾಪಕವಾಗಿದೆ ಮತ್ತು ಇದು ಪರಿಸರ ನೈರ್ಮಲ್ಯ ಹಾಗೂ ಸಾರ್ವಜನಿಕ ಆರೋಗ್ಯಕ್ಕೆ ಕಂಟಕವಾಗಿ ಪರಿಣಮಿಸಿದೆ.**

ಒಂದು ದೇಶದ ಅಭಿವೃದ್ಧಿಯನ್ನು ಅಳೆಯಲು ಕೇವಲ ಆರ್ಥಿಕ ಸೂಚ್ಯಂಕಗಳು ಮಾತ್ರವಲ್ಲದೆ ಮಾನವ ಅಭಿವೃದ್ಧಿ ಸೂಚ್ಯಂಕವೂ ಅವಶ್ಯ ಎಂಬುದು ಗೊತ್ತಿರುವ ಸಂಗತಿ. ನಮ್ಮ ನಿರಾಶಾದಾಯಕ ಸಾಮಾಜಿಕ ಸೂಚ್ಯಂಕಗಳನ್ನು ಗಮನಿಸಿದರೆ ಚೀನಾದ ನಂತರದ ಮಹಾನ್ ಶಕ್ತಿ ಎಂದು ಬಿಂಬಿಸಲ್ಪಟ್ಟಿರುವ ಭಾರತದ ವಿಷಯದಲ್ಲಿ ಇದು ಅನ್ವಯಿಸುವುದೇ ಇಲ್ಲವೆನಿಸುತ್ತದೆ.

ವಿಶ್ವ ಸಂಸ್ಥೆಯ ಅಧ್ಯಯನದ ಪ್ರಕಾರ ಭಾರತದಲ್ಲಿ ಬಹಳಷ್ಟು ಜನರಿಗೆ ಸುಧಾರಿತ ಶೌಚಾಲಯದ ಲಭ್ಯತೆ ಇರದಿದ್ದರೂ ಮೊಬೈಲ್ ಫೋನ್ ಬಹು ಸುಲಭವಾಗಿ ಕೈಗೆಟಕುತ್ತವೆ. ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ 626 ಮಿಲಿಯನ್ ಜನರು ಬಯಲು ಶೌಚಾಲಯವನ್ನು ಬಳಸುತ್ತಾರೆ. ಅಂದರೆ ಜಗತ್ತಿನಲ್ಲಿ ಬಯಲು ಶೌಚಾಲಯ ಬಳಸುವವರಲ್ಲಿ 60% ಜನರು ಭಾರತದಲ್ಲಿಯೇ ಇದ್ದಾರೆ. ಜೊತೆಗೆ ಭಾರತದ ನಿರ್ಮಲೀಕರಣದ ಕೊರತೆಯ ಒಟ್ಟಾರೆ ವಾರ್ಷಿಕ ಆರ್ಥಿಕ ಪರಿಣಾಮವನ್ನು ರೂ. 2.44 ಟ್ರಿಲಿಯನ್ (53.8 ಬಿಲಿಯನ್ ಅಮೆರಿಕನ್ ಡಾಲರ್) ಎಂದು ಅಂದಾಜಿಸಲಾಗಿದೆ.

ಇದು ನಮ್ಮ ದೇಶದ 2006ರ ಜಿಡಿಪಿ ಯ 6.4%ಕ್ಕೆ ಸಮ. (ನೀರು ಮತ್ತು ನಿರ್ಮಲೀಕರಣ ಯೋಜನೆ–2007) ಕೇಂದ್ರ ಕುಡಿಯುವ ನೀರು ಮತ್ತು ನಿರ್ಮಲೀಕರಣ ಇಲಾಖೆಯು 2020ರ ವೇಳೆಗೆ ಬಯಲು ಶೌಚಾಲಯ ಮುಕ್ತ ಗುರಿ ತಲುಪಲು ಬದ್ಧವಾಗಿದೆಯಾದರೂ ಇದು ನಿಜಕ್ಕೂ ಸಾಧ್ಯವಾಗುವುದೇ ಎನ್ನುವುದನ್ನು ಕಾದುನೋಡಬೇಕಿದೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಜುಲೈ 2010ರಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯದ ಹಕ್ಕನ್ನು ಮೂಲಭೂತ ಹಕ್ಕಾಗಿ ಗುರುತಿಸಿರುವುದು, ಈ ಕ್ಷೇತ್ರಕ್ಕೆ ಶಿಕ್ಷಣ, ಆಹಾರ ಭದ್ರತೆ ಮತ್ತು ಆರೋಗ್ಯದಂತಾ ಇತರ ಮೂಲಭೂತ ಹಕ್ಕೊತ್ತಾಯದ ಚಳವಳಿಗಳ ನಡುವೆ ಸ್ಥಾನ ದೊರಕಿಸುವಲ್ಲಿ ಪ್ರೇರಕಶಕ್ತಿಯಾಗಿ ಕೆಲಸ ಮಾಡಿದೆ.

ಸ್ವಚ್ಛ ಕುಡಿಯುವ ನೀರು ಮತ್ತು ಸುಧಾರಿತ ಶೌಚವ್ಯವಸ್ಥೆ ಇವೆರಡು ಬಡತನ ನಿವಾರಣೆಯಲ್ಲಿ ಪ್ರಮುಖ ಪಾತ್ರ ವಹಿಸುವುದಲ್ಲದೆ ಎಲ್ಲ ಮೂಲಭೂತ ಮಾನವ ಹಕ್ಕುಗಳ ಸಾಧನೆಗೂ ತಳಪಾಯ ಒದಗಿಸುತ್ತದೆ. (ಯುಎನ್‌ಡಿಪಿ, 2011) ಇದರ ಜೊತೆಗೇ ಸಾಕಷ್ಟು ಪ್ರಮಾಣದ ಹಣಕಾಸನ್ನು ಒದಗಿಸುವುದು ಸಹಾ ಕುಡಿಯುವ ನೀರು ಮತ್ತು ನಿರ್ಮಲೀಕರಣ ಯೋಜನೆಗಳ ಯಶಸ್ವೀ ಅನುಷ್ಠಾನ ಅತ್ಯವಶ್ಯಕ.

ವಿಶ್ವಸಂಸ್ಥೆಯ 'ಕುಡಿಯುವ ನೀರು ಮತ್ತು ನೈರ್ಮಲ್ಯದ ಮಾನವ ಹಕ್ಕು' ಕುರಿತ ವರದಿಯ ಪ್ರಕಾರ ಸಾಕಷ್ಟು ಪ್ರಮಾಣದ ಹಣಕಾಸು ಒದಗಿಸುವುದು ಎಂಬುದು ಕುಡಿಯುವ ನೀರು ಮತ್ತು ನಿರ್ಮಲೀಕರಣ ಸೌಲಭ್ಯ ಒದಗಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಅದು ಯೋಜನೆಯ ನಿಯಂತ್ರಕ ಕ್ರಮಗಳ ವೆಚ್ಚ, ಸಂಬಂಧಿಸಿದ ಸಂಸ್ಥೆಗಳ ಬಲವರ್ಧನೆ ಹಾಗೂ ಇಡೀ ಯೋಜನೆಯ ಯಶಸ್ಸಿಗೆ

ನೀರು, ಶೌಚ ಮತ್ತು ಪರಿಸರ ನ್ಯಾಯಕ್ಷೇತ್ರದ ಸ್ವತಂತ್ರ ಸಂಶೋಧಕಿ. e-mail : trisha14@gmail.com

ಸಂಬಂಧಿಸಿದ್ದಾಗಿರುತ್ತದೆ. (ಯುಎನ್ ಮತ್ತು ಮಾನವ ಹಕ್ಕುಗಳ ಆಯೋಗ – 2011)

### ಭಾರತದಲ್ಲಿ ನಗರ ನೈರ್ಮಲ್ಯದ ಸ್ಥಿತಿ ಗತಿ


ಮೊದಲನೇ ಪಂಚವಾರ್ಷಿಕ ಯೋಜನೆ ಜಾರಿಯಾದಂದಿನಿಂದಲೂ ಕುಡಿಯುವ ನೀರು ಮತ್ತು ನಿರ್ಮಲೀಕರಣದ ಯೋಜನೆಗಳು ಜಾರಿಯಲ್ಲಿವೆ. ಗ್ರಾಮೀಣ ಪ್ರದೇಶಗಳಲ್ಲಿನ ನಿರ್ಮಲೀಕರಣದ ಜವಾಬ್ದಾರಿ ರಾಜ್ಯ ಸರ್ಕಾರದ್ದಾದರೆ, ನಗರಗಳಲ್ಲಿ ಮುನಿಸಿಪಾಲಿಟಿ ಮತ್ತು ರಾಜ್ಯ ಸರ್ಕಾರಗಳೆರಡೂ ಇದಕ್ಕೆ ಹೊಣೆದಾರರು. ಕೇಂದ್ರ ಸರ್ಕಾರವು ಈ ನಿಟ್ಟಿನಲ್ಲಿ ಸಹಾಯ ಮತ್ತು ಬೆಂಬಲಗಳನ್ನು ಒದಗಿಸುತ್ತದೆ. ಇತರ ಕ್ಷೇತ್ರಗಳ ತುಲನೆಯಲ್ಲಿ ಈ ಕ್ಷೇತ್ರಕ್ಕೆ ಸ್ವತಂತ್ರ ಸ್ಥಾನವೇನು ಇಲ್ಲ.

ಈ ಕ್ಷೇತ್ರದ ಮೇಲಣ ಸರ್ಕಾರದ ವೆಚ್ಚ 1% ಕ್ಕಿಂತ ಕಡಿಮೆ ಎಂಬುದನ್ನು ಗಮನಿಸಿದರೆ ಈ ವಿಷಯ ಮತ್ತಷ್ಟು ಸ್ಪಷ್ಟವಾಗುತ್ತದೆ. 2008ರಲ್ಲಿ 0.57% ರಷ್ಟಿದ್ದ ಈ ವೆಚ್ಚವು 2010ರಲ್ಲಿ 0.45ಕ್ಕೆ ಇಳಿದಿರುವುದು ಈ ಕ್ಷೇತ್ರಕ್ಕೆ ಒದಗಿಸುವ ಹಣಕಾಸಿನ ತೀವ್ರ ಕೊರತೆಯನ್ನು ತೋರಿಸುತ್ತದೆ. (ವಾಟರ್ ಏಡ್, 2001)

ಹಾಗಾಗಿ ನಿರ್ಮಲೀಕರಣವು ಭಾರತದ ಪ್ರಮುಖ ಅಭಿವೃದ್ಧಿಯ ಸವಾಲುಗಳಲ್ಲಿ ಒಂದು. ಭಾರತದ ನಗರ ಜನಸಂಖ್ಯೆಯ ನಾಲ್ಕನೇ ಒಂದರಷ್ಟು ಜನರಿಗೆ ಸುರಕ್ಷಿತ ಶೌಚವ್ಯವಸ್ಥೆ ಲಭ್ಯವಿಲ್ಲ. ನಗರ ವಾಸಿಗಳಲ್ಲಿ ಕೇವಲ 30–40% ಜನರಿಗೆ ಮಾತ್ರ ಒಳಚರಂಡಿ ವ್ಯವಸ್ಥೆ ಮತ್ತು ಬಳಸಿದ ನೀರಿನ ಪುನರ್‌ಬಳಕೆಯ ವ್ಯವಸ್ಥೆ ಲಭ್ಯವಿದೆ. 2001ರಲ್ಲಿ 27.8 ರಷ್ಟಿದ್ದ ನಗರೀಕರಣದ ಮಟ್ಟವು 2011ರ ವೇಳೆಗೆ 31.2 ರಷ್ಟಾಗಿದೆ. (2011ರ ಜನಗಣತಿ) ಆದರೆ ಬಹುತೇಕ ನಗರಗಳಲ್ಲಿ ಬಯಲು ಶೌಚಾಲಯಗಳ ಬಳಕೆಯು ವ್ಯಾಪಕವಾಗಿದೆ ಮತ್ತು ಇದು ಪರಿಸರ ನೈರ್ಮಲ್ಯ ಹಾಗೂ ಸಾರ್ವಜನಿಕ ಆರೋಗ್ಯಕ್ಕೆ ಕಂಟಕವಾಗಿ ಪರಿಣಮಿಸಿದೆ.

### ನಗರ ನಿರ್ಮಲೀಕರಣದ ಯೋಜನೆಗಳು

ನಗರ ನಿರ್ಮಲೀಕರಣದ ಸಂಪೂರ್ಣ ಚಿತ್ರಣ ಸಿಗಬೇಕಿದ್ದರೆ, ಈ ಕುರಿತ ಕೇಂದ್ರ ಸರ್ಕಾರ ಮಟ್ಟದ ಯೋಜನೆಗಳ ಸೂಕ್ಷ್ಮ ಅಧ್ಯಯನ ಅವಶ್ಯಕ. ಇಂತಹ ಕೆಲವು ಪ್ರಮುಖ ಯೋಜನೆಗಳು ಇಂತಿವೆ;



- ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಯೋಜನೆ (JNNURM)
  ಅ) ನಗರವಾಸಿಗಳಿಗೆ ಮೂಲ ಸೌಕರ್ಯ (BSUP)
  ಆ) ರಾಜೀವ ಆವಾಸ್ ಯೋಜನೆ (RAY)
  ಇ) ಸಮಗ್ರ ವಸತಿ ಮತ್ತು ಕೊಳಗೇರಿ ಅಭಿವೃದ್ಧಿ ಯೋಜನೆ (IHSDP)
- ರಾಷ್ಟ್ರೀಯ ನಗರ ನಿರ್ಮಲೀಕರಣ ಕಾರ್ಯನೀತಿ, 2008
- ರಾಷ್ಟ್ರೀಯ ನಗರವಾಸಿ ಮತ್ತು ವಸತಿ ಯೋಜನೆ,2007
- ಕಡಿಮೆ ವೆಚ್ಚದ ಸಮಗ್ರ ಶೌಚವ್ಯವಸ್ಥೆ ಯೋಜನೆ (ILCS)

ನಗರಾಭಿವೃದ್ಧಿ ಸಚಿವಾಲಯದ ಕೆಳಗೆ ಬರುವ JNNURM ಯೋಜನೆಯು ನಗರದಲ್ಲಿ ನೀರು ಮತ್ತು ಶೌಚ ವ್ಯವಸ್ಥೆ ಒದಗಿಸುವುದಲ್ಲದೆ (ಅ) ನಗರಗಳ ಆರ್ಥಿಕ ಹಾಗೂ ಸಾಮಾಜಿಕ ಮೂಲಸೌಕರ್ಯದ ಅಭಿವೃದ್ಧಿ (ಆ) ನಗರದ ಬಡಜನರಿಗೆ ಕಡಿಮೆ ದರದಲ್ಲಿ ವಸತಿಯ ಜೊತೆಗೆ ಇತರ ಮೂಲ ಸೌಕರ್ಯಗಳನ್ನು ಒದಗಿಸುವುದು (ಇ)74ನೇ ಸಾಂವಿಧಾನಿಕ ತಿದ್ದುಪಡಿಯ ಅನ್ವಯ ಮುನಿಸಿಪಾಲಿಟಿ ಮತ್ತು ಅದರ ಕಾರ್ಯವೈಖರಿಯನ್ನು ಬಲಗೊಳಿಸುವ ಗುರಿಯನ್ನು ಸಹಾ ಹೊಂದಿದೆ. ನಗರದ ಬಡಜನರಿಗೆ ಮೂಲ ಸೌಕರ್ಯಗಳನ್ನು ಒದಗಿಸುವುದರಲ್ಲಿ ಮುಖ್ಯವಾದದ್ದು ನೀರು ಸರಬರಾಜು ಮತ್ತು ಶೌಚ ವ್ಯವಸ್ಥೆ ಒದಗಿಸುವುದಾಗಿದೆ. ಇದು ಮುಖ್ಯವಾಗಿ ಸ್ಥಳೀಯ ಆಡಳಿತದ ಕಾರ್ಯಕ್ಷಮತೆಯ ಮೇಲೆ ಆಧಾರಿತವಾಗಿದೆ. JNNURM ಯೋಜನೆಯಡಿಯಲ್ಲಿ ಬರುವ ನಗರಗಳು ಅದರ ಉದ್ದೇಶಗಳಿಗನುಗುಣವಾಗಿ ನಗರಾಭಿವೃದ್ಧಿ ಯೋಜನೆಗಳನ್ನು (CDPs) ರೂಪಿಸಬೇಕು. JNNURM ನ ಅಡಿ ಎಲ್ಲ ನಗರಗಳಿಗೂ ಯೋಜನೆಯನ್ನು ರೂಪಿಸಿದ್ದರೂ, ಇದರ ಮುಖ್ಯ ಲೋಪವೆಂದರೆ ಸಮಾಜದ ಎಲ್ಲ ವರ್ಗಗಳ ಜೊತೆಗೆ ಸಮಾಲೋಚಿಸದಿರುವುದು. ಈ ಲೋಪಕ್ಕೆ ಮೂಲ ಕಾರಣ ಸ್ಥಳೀಯ ಆಡಳಿತ ಸಂಸ್ಥೆಗಳ (ULB) ಅದಕ್ಷತೆ. 74ನೇ ಸಾಂವಿಧಾನಿಕ ತಿದ್ದುಪಡಿಯ ಅನ್ವಯ JNNURM ಯೋಜನೆಯ ಹಣಕಾಸಿನ ಹಂಚಿಕೆ ಮತ್ತು ಕಾರ್ಯಕ್ರಮಗಳ ಅನುಷ್ಠಾನ ಈ ಸ್ಥಳೀಯ ಆಡಳಿತ ಸಂಸ್ಥೆಗಳ ಜವಾಬ್ದಾರಿಗೆ ಒಳಪಟ್ಟಿದೆ.

JNNURM ನ ಅಡಿ ಬರುವ ನಗರವಾಸಿಗಳಿಗೆ ಮೂಲ ಸೌಕರ್ಯ (BSUP) ಯೋಜನೆಯು ನಗರದ ಬಡಜನರಿಗೆ ಕುಡಿಯುವ ನೀರು ಮತ್ತು ಶೌಚ ವ್ಯವಸ್ಥೆ ಸೌಲಭ್ಯ ಒದಗಿಸುವುದಕ್ಕೆ ಒತ್ತು ನೀಡುತ್ತದೆ. ಸಂಪನ್ಮೂಲದ ಸೃಷ್ಟಿ ಮತ್ತು ಸಂಪನ್ಮೂಲ ನಿರ್ವಹಣೆಯ ನಡುವೆ ಸಶಕ್ತ ಸಂಬಂಧವನ್ನು ರೂಪಿಸುವುದರ ಮೂಲಕ ಈ ಸೌಕರ್ಯಗಳನ್ನು ಒದಗಿಸುವುದು ಈ ಯೋಜನೆಯ ಮೂಲೋದ್ದೇಶಗಳಲ್ಲೊಂದು. ಆದರೆ ಈ ಯೋಜನೆಯಡಿ ನೀರು ಮತ್ತು ಶೌಚ ವ್ಯವಸ್ಥೆ ಸೌಲಭ್ಯ ಒದಗಿಸುವುದಕ್ಕಾಗಿ

ಪ್ರತ್ಯೇಕ ಹಣಕಾಸು ವ್ಯವಸ್ಥೆಯ ಬಗ್ಗೆ ಯಾವುದೇ ಉಲ್ಲೇಖವಿಲ್ಲ.

ರಾಜೀವ ಆವಾಸ್ ಯೋಜನೆ (RAY) ಕೊಳಗೇರಿ ಮುಕ್ತ ರಾಜ್ಯದ ಉದ್ದೇಶ ಹೊಂದಿದೆ. ಈ ಯೋಜನೆಯು ಸದ್ಯ ಇರುವ ಕೊಳಗೇರಿಗಳನ್ನು ಮುಖ್ಯವಾಹಿನಿಯೊಂದಿಗೆ ಸೇರಿಸುವ ಜೊತೆ ಜೊತೆಗೇ ಕೊಳಗೇರಿಗಳ ಸೃಷ್ಟಿಯ ಕಾರಣವಾಗುವ ಸೂಕ್ಷ್ಮ ವಿಷಯಗಳನ್ನೂ ಅಭ್ಯಸಿಸುತ್ತದೆ. ಸ್ಥಳೀಯ ಸಂಸ್ಥೆಗಳ ಆಯವ್ಯಯದ ಮಿತಿಯಲ್ಲಿಯೇ ನಗರದ ಬಡಜನರಿಗೆ ಮೂಲಸೌಕರ್ಯ ಒದಗಿಸುವತ್ತ ಈ ಯೋಜನೆ ಗಮನಹರಿಸುತ್ತದೆ. ಈ ಯೋಜನೆಯೂ ಸಹಾ ನಗರದ ಬಡಜನರಿಗೆ ಕುಡಿಯುವ ನೀರು ಮತ್ತು ಶೌಚ ವ್ಯವಸ್ಥೆ ಸೌಲಭ್ಯ ಒದಗಿಸುವುದನ್ನೇ ತನ್ನ ಮೂಲೋದ್ದೇಶಗಳಲ್ಲೊಂದು ಎಂದು ಹೇಳಿದರೂ, ಈ ಉದ್ದೇಶದ ಈಡೇರಿಕೆಗೆ ಯಾವುದೇ ಪ್ರತ್ಯೇಕ ಹಣಕಾಸಿನ ವ್ಯವಸ್ಥೆ ಇಲ್ಲವೆಂಬ ಸತ್ಯವನ್ನು ಇದು ಮರೆಮಾಚುತ್ತದೆ.

ಸಮಗ್ರ ವಸತಿ ಮತ್ತು ಕೊಳಗೇರಿ ಅಭಿವೃದ್ಧಿ ಯೋಜನೆಯು (IHSDP) ಇರುವ ಮನೆಗಳನ್ನು ಮೇಲ್ದರ್ಜೆಗೆ ಏರಿಸುವುದರೊಂದಿಗೆ ಹೊಸ ಮನೆಗಳ ನಿರ್ಮಾಣದ ಮೂಲಕ ನಗರದ ಬಡಜನರಿಗೆ ಆಶ್ರಯ ಕಲ್ಪಿಸುವ ಮೂಲೋದ್ದೇಶ ಹೊಂದಿದೆ. ಜೊತೆಗೇ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ, ನೀರು ಸರಬರಾಜು, ಪ್ರವಾಹ ಒಳಚರಂಡಿಗಳ ನಿರ್ಮಾಣ, ಸಾರ್ವಜನಿಕ ಸ್ನಾನಗೃಹಗಳ ನಿರ್ಮಾಣ, ಬೀದಿ ದೀಪ, ರಸ್ತೆಗಳ ಅಗಲೀಕರಣ ಇವೆಲ್ಲವೂ ಈ ಯೋಜನೆಯ ವ್ಯಾಪ್ತಿಗೇ ಬರುತ್ತವೆ. ಈ ಯೋಜನೆಯ ಹಣಕಾಸು ವ್ಯವಸ್ಥೆಯನ್ನು ವಿಸ್ತೃತವಾಗಿ ವಿವರಿಸಲಾಗಿದೆ.

ರಾಷ್ಟ್ರೀಯ ನಗರ ನಿರ್ಮಲೀಕರಣ ಕಾರ್ಯನೀತಿಯು (2008) ನಗರದ ಬಡವರು ಮತ್ತು ಮಹಿಳೆಯರನ್ನು ಕೇಂದ್ರವನ್ನಾಗಿಟ್ಟುಕೊಂಡ ಒಂದು ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಇದು ನಗರ-ಭಾರತವನ್ನು ಸಾರ್ವತ್ರಿಕ ನೈರ್ಮಲ್ಯ ವ್ಯವಸ್ಥೆಯುಳ್ಳ, ಸಮುದಾಯ ಚಾಲಿತ, ಆರೋಗ್ಯವಂತ, ವಾಸಯೋಗ್ಯ ನಗರ ಮತ್ತು ಪಟ್ಟಣಗಳಾಗಿ ಪರಿವರ್ತಿಸುವ ಉದ್ದೇಶ ಹೊಂದಿದೆ. ಭಾರತದ ಎಲ್ಲ ನಗರಗಳೂ ಸಂಪೂರ್ಣ ಶೌಚವ್ಯವಸ್ಥೆಯುಳ್ಳ, ಆರೋಗ್ಯಕರ, ವಾಸಯೋಗ್ಯ ನಗರಗಳಾಗಿಸಿ, ಎಲ್ಲರಿಗೂ ಉತ್ತಮ ಆರೋಗ್ಯ ಮತ್ತು ಉತ್ತಮ ಪರಿಸರ ಒದಗಿಸುವ ಗುರಿ ಹೊಂದಿದೆ. ಈ ಯೋಜನೆಯ ಮುಖ್ಯ ಉದ್ದೇಶ ಜನರಲ್ಲಿ ಜಾಗೃತಿ ಮೂಡಿಸಿ ಅವರ ನಡವಳಿಕೆಯಲ್ಲಿ ಧನಾತ್ಮಕ ಪರಿವರ್ತನೆ ತರುವುದು, ತನ್ಮೂಲಕ ನಗರ ನೈರ್ಮಲ್ಯ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ, ಸಮಗ್ರ ಶೌಚವ್ಯವಸ್ಥೆಯ ಅನುಷ್ಠಾನ ಮತ್ತು ನಿರ್ವಹಣೆಯ ಮೂಲಕ ಬಯಲು ಶೌಚಾಲಯ ಮುಕ್ತ ನಗರಗಳ ಗುರಿಯನ್ನು ಸಾಕಾರಗೊಳಿಸುವುದೇ ಆಗಿದೆ. ಇದರ ಪ್ರಕಾರ ಪ್ರತಿ ರಾಜ್ಯ ತನ್ನದೇ 'ರಾಜ್ಯ ನಿರ್ಮಲೀಕರಣ' ಮತ್ತು 'ನಗರ ನಿರ್ಮಲೀಕರಣ' ಯೋಜನೆಗಳನ್ನು ರೂಪಿಸಿಕೊಳ್ಳಬೇಕಿದೆ. ನಗರದ ಬಡಜನರ ಮುಖ್ಯ ಸಮಸ್ಯೆ ಭೂ ಗೇಣಿಯ ಪರಿಣಾಮವಾಗಿ ವಸತಿಗೆ ಸಂಬಂಧಿಸಿದಂತೆ ಅವರು ಎದುರಿಸುವ ಅನಿಶ್ಚಿತತೆ ಮತ್ತು ಅಸುರಕ್ಷಿತತೆ. ಒಕ್ಕಲೆಬ್ಬಿಸುವ ನಿರಂತರ ಭಯದೊಂದಿಗೇ ಬದುಕುವ ಅವರಿಗೆ ಕುಡಿಯುವ ನೀರು ಮತ್ತು ಶೌಚವ್ಯವಸ್ಥೆಯಂತ ಮೂಲಭೂತ ಸೌಕರ್ಯಗಳೂ ಲಭ್ಯವಿರುವುದಿಲ್ಲ. ಇಂತಹ ಕೊಳಗೇರಿಗಳಲ್ಲಿ ನೀರು ಸಂಗ್ರಹಿಸುವ ಮತ್ತು ನೈರ್ಮಲ್ಯ ಕಾಪಾಡುವ ಹೆಚ್ಚಿನ ಹೊಣೆಯು ಮಹಿಳೆಯರ ಮೇಲೆಯೇ ಇರುತ್ತದೆ. ರಾಷ್ಟ್ರೀಯ ನಗರ ನಿರ್ಮಲೀಕರಣ ಕಾರ್ಯನೀತಿಯು ಈ ಎಲ್ಲ ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತದೆಯಾದರೂ, ಈ ಸಂಬಂಧ ಇರುವ ಅನೇಕ ಇಲಾಖೆಗಳ ನಡುವೆ ಹೇಗೆ ಸಮನ್ವಯ ಸಾಧಿಸಬೇಕೆನ್ನುವ ಬಗ್ಗೆ ಮತ್ತು ಇದರಿಂದ ಬಾಧಿಸಲ್ಪಡುವ ವಿವಿಧ ಜನರ ಸಮಸ್ಯೆಯನ್ನು ಹೇಗೆ ನಿಭಾಯಿಸಬೇಕೆನ್ನುವ ಬಗ್ಗೆ ಏನನ್ನೂ ಹೇಳುವುದಿಲ್ಲ.



ರಾಷ್ಟ್ರೀಯ ನಗರವಾಸಿ ಮತ್ತು ವಸತಿ ಯೋಜನೆಯು (2007) ಸಮಾಜದ ಎಲ್ಲ ವರ್ಗದವರಿಗೂ ಭೂಮಿಯ ಸಮಾನ ಹಂಚಿಕೆ, ಮತ್ತು ಕೈಗೆಟುಕುವ ದರದಲ್ಲಿ ವಸತಿ ಲಭ್ಯತೆಯನ್ನು ಕಲ್ಪಿಸುವ ಗುರಿ ಹೊಂದಿದೆ. ವಸತಿ ಯೋಜನೆ ರೂಪಿಸುವ ಮತ್ತು ಅನುಷ್ಠಾನಗೊಳಿಸುವ ಎಲ್ಲ ಹಂತಗಳಲ್ಲಿಯೂ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಖಾತ್ರಿಗೊಳಿಸುವ ಸಲುವಾಗಿ ಕಾರ್ಯಕ್ರಮಗಳನ್ನು ಯೋಜಿಸಿದೆ. ಈ ಯೋಜನೆಯು ವೃತ್ತಿನಿರತ ಮಹಿಳೆಯರ, ಒಂಟಿ ಮಹಿಳೆಯರ, ಮಹಿಳಾ ಒಡೆತನದ ಕುಟುಂಬಗಳ ಮಹಿಳೆಯರ, ವಿಶೇಶ ಅಗತ್ಯಗಳನ್ನು ಗುರುತಿಸುವುದರೊಂದಿಗೆ ನೀರು ಮತ್ತು ಶೌಚವ್ಯವಸ್ಥೆಯನ್ನೊಳಗೊಂಡಂತೆ ಮೂಲಸೌಕರ್ಯದ ಕೊರತೆಯಿಂದ ಬಾಧಿಸಲ್ಪಟ್ಟ ಮಹಿಳೆಯರ ಅಗತ್ಯಗಳನ್ನೂ ಗಮನಕ್ಕೆ ತೆಗೆದುಕೊಳ್ಳುತ್ತದೆ. ಇದೊಂದು ಯೋಜನೆಯು ಮಾತ್ರ ತನ್ನ ಮಾರ್ಗಸೂಚಿಯಲ್ಲಿ ಮಹಿಳೆಯರನ್ನು ಒಳಗೊಳ್ಳಲು ಪ್ರಯತ್ನಿಸಿದೆ. ವಸತಿ ಮತ್ತು ನಗರ ಬಡತನ ನಿರ್ಮೂಲನಾ ಸಚಿವಾಲಯವು ಕೇಂದ್ರ ಸರ್ಕಾರದ ಅನುದಾನಿತ 'ಕಡಿಮೆ ವೆಚ್ಚದ ಸಮಗ್ರ ಶೌಚವ್ಯವಸ್ಥೆ ಯೋಜನೆ (ILCS) ಯೋಜನೆಯನ್ನು (ನಗರಗಳಿಗಾಗಿ) ನಿರ್ವಹಿಸುತ್ತದೆ. ಸದ್ಯ ಇರುವ ಒಣ ಪಾಯಖಾನೆಗಳನ್ನು ನೀರು - ಸಹಿತ ಪಾಯಖಾನೆಯುಕ್ತ ಶೌಚವ್ಯವಸ್ಥೆಯಾಗಿ

ಪರಿವರ್ತಿಸುವುದು (water seal toilets with super structures) ಮತ್ತು ಪಾಯಖಾನೆ ಹೊಂದಿಲ್ಲದ ಆರ್ಥಿಕವಾಗಿ ಹಿಂದುಳಿದ (EWS) ವರ್ಗಕ್ಕೆ ಸೇರಿದ ಕುಟುಂಬದ ಮನೆಗಳಲ್ಲಿ ಹೊಸ ಪಾಯಖಾನೆಗಳ ನಿರ್ಮಾಣ ಈ ಯೋಜನೆಯ ಮುಖ್ಯ ಉದ್ದೇಶಗಳು. ಇವು ನಗರಗಳ ಒಟ್ಟಾರೆ ನೈರ್ಮಲ್ಯವನ್ನು ಹೆಚ್ಚಿಸುತ್ತವೆ. ಅದಕ್ಕಿಂತ ಮುಖ್ಯವಾಗಿ ಇದು ಅಮಾನವೀಯವಾದ ಮಲಹೊರುವ ಪದ್ಧತಿಯನ್ನು ನಿರ್ಮೂಲನೆಗೊಳಿಸುವಲ್ಲಿ ಸಹಾಯಕವಾಗಿದೆ. ILCS ನ ಮೌಲ್ಯಮಾಪನ ವರದಿಯ (ವಸತಿ ಮತ್ತು ನಗರ ಬಡತನ ನಿರ್ಮೂಲನಾ ಸಚಿವಾಲಯ, 2007) ಪ್ರಕಾರ ಈ ಯೋಜನೆಯ ಅತಿ ಮುಖ್ಯ ಪರಿಣಾಮವೆಂದರೆ, ಹೀಗೆ ಶೌಚಾಲಯ ಹೊಂದಿರುವ ಮನೆಗಳ ಒಡೆಯರ ಸಾಮಾಜಿಕ ವರ್ಚಸ್ಸು ಹೆಚ್ಚಾಗಿರುವುದು.

ಇಷ್ಟೆಲ್ಲಾ ಯೋಜನೆಗಳಲ್ಲಿ ನಿರ್ಮಲೀಕರಣದ ವಿಷಯ ಪ್ರಸ್ತಾಪವಾಗಿದ್ದರೂ, ನಗರ ನಿರ್ಮಲೀಕರಣಕ್ಕಾಗಿ ಈ ಯೋಜನೆಗಳಲ್ಲಿ ಲಭ್ಯವಿರುವ ಹಣದ ಮೊತ್ತವನ್ನು ಕಂಡುಹಿಡಿಯುವುದು ಕಷ್ಟಸಾಧ್ಯ. ILCS ಯೋಜನೆ ಒಂದರಲ್ಲಿ ಮಾತ್ರವೇ ಇದಕ್ಕಾಗಿ ಮೀಸಲಿಟ್ಟ ಮೊತ್ತವು ತಿಳಿಯುತ್ತದೆ. Table 1ರಲ್ಲಿ HUPA ಆಯವ್ಯಯದಲ್ಲಿ ILCS ಯೋಜನೆಗಾಗಿ ಮೀಸಲಿಟ್ಟ ಹಣದ ಪ್ರಮಾಣ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಾ ಬರುತ್ತಿರುವುದನ್ನು ಕಾಣಬಹುದು. 2011ರ ಮನೆ ಗಣತಿಯ ಪ್ರಕಾರ ಇನ್ನೂ 7.94 ಲಕ್ಷ ಪಾಯಖಾನೆಗಳನ್ನು ಜನರು ಕೈಯಿಂದ ಸ್ವಚ್ಛಗೊಳಿಸುತ್ತಾರೆ. ಇದು ಮಲಹೊರುವ ಅಮಾನವೀಯ ಪದ್ಧತಿ ನಮ್ಮ ದೇಶದಲ್ಲಿ ಜೀವಂತವಿರುವುದಕ್ಕೆ ಸಾಕ್ಷಿ.

'ಕಡಿಮೆ ವೆಚ್ಚದ ಸಮಗ್ರ ಶೌಚವ್ಯವಸ್ಥೆ ಯೋಜನೆ' (ILCS) ಯೋಜನೆಯೊಂದನ್ನು ಹೊರತುಪಡಿಸಿ ಮತ್ಯಾವುದೇ ಯೋಜನೆಯೂ ನೇರವಾಗಿ ನೀರು ಸರಬರಾಜು ಮತ್ತು ನಿರ್ಮಲೀಕರಣವನ್ನು ಪ್ರಸ್ತಾಪಿಸುವುದಿಲ್ಲ. ನೀರು ಸರಬರಾಜು ಮತ್ತು ನಿರ್ಮಲೀಕರಣವು ವಸತಿ ಯೋಜನೆಗಳ ಭಾಗವಾಗಿ ಇಲ್ಲವೇ ಉದ್ಯೋಗ ಸೃಷ್ಟಿಯಭಾಗವಾಗಿ ಪ್ರಸ್ತಾಪಿಸಲ್ಪಡುತ್ತವೆಯೇ ಹೊರತು, ಇದೇ ಒಂದು ಪ್ರಮುಖ ಮತ್ತು ಪ್ರತ್ಯೇಕ ಸಮಸ್ಯೆಯಾಗಿ ಪರಿಗಣಿಸಲ್ಪಟ್ಟಿಲ್ಲ.

**ಪಟ್ಟಿ 1 : MoHUPA ಆಯವ್ಯಯದಲ್ಲಿ ILCS ಯೋಜನೆಗಾಗಿ ಮೀಸಲಿಟ್ಟ ಹಣದ ಪ್ರಮಾಣ (ರೂ. ಕೋಟಿಗಳಲ್ಲಿ)**

| 2009–10 | 2010–11 | 2011–12 | 2012–13 | | 2013–14 | | 2014–15 |
|---|---|---|---|---|---|---|---|
| | | | BE | RE | BE | RE | BE |
| 55 | 106.01 | 69.76 | 25 | 100 | 125 | 22 | 5 |

ಮೂಲ : ವಿವಿಧ ವರ್ಷಗಳ ಮುಂಗಡ ಪತ್ರದ ವೆಚ್ಚದ ಪಟ್ಟಿ Vol. II

ಇದು ನಗರದ ಬಡಜನರ ಅದರಲ್ಲೂ ಕೊಳಗೇರಿ ನಿವಾಸಿಗಳ ನೀರು ಮತ್ತು ಶೌಚವ್ಯವಸ್ಥೆಯ ಅವಶ್ಯಕತೆಗಳ ಕಡೆಗೆ ಯೋಜನೆ ರೂಪಿಸುವವರ ನಿರ್ಲಕ್ಷ್ಯವನ್ನೇ ತೋರುತ್ತದೆ.

### ನಗರದ ಬಡತನ ಮತ್ತು ನಿರ್ಮಲೀಕರಣ

ನಗರದಲ್ಲಿನ ಬಡತನ ಢಾಳಾಗಿ ಕಾಣುವುದು ನಗರದ ಕೊಳಗೇರಿಗಳಲ್ಲಿ. ನಗರದ ಕೊಳಗೇರಿಗಳ ಕೆಲವು ಮುಖ್ಯ ಸೂಚ್ಯಂಕಗಳನ್ನು ಪಟ್ಟಿ–2 ರಲ್ಲಿ ತೋರಿಸಲಾಗಿದೆ. ಒಟ್ಟಾರೆ ಕೊಳಗೇರಿಗಳ ಪೈಕಿ 42% ಗುರುತಿಸದಿರುವ ಕೊಳಗೇರಿಗಳು ಮತ್ತು ಅವುಗಳಲ್ಲಿ 45% ಕೊಳಗೇರಿಗಳಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲ. ನಿರ್ಮಲೀಕರಣ ಎನ್ನುವುದು ಕೇವಲ ಶೌಚಾಲಯಗಳ ನಿರ್ಮಾಣಕ್ಕೆ ಸೀಮಿತವಾದದ್ದಲ್ಲ. ಬದಲಿಗೆ ಬದುಕುವುದಕ್ಕೆ ಸ್ವಚ್ಛವಾದ ವಾತಾವರಣ ಕಲ್ಪಿಸುವುದೂ ಅದರ ಭಾಗವೇ ಆಗಿದೆ. ಹಾಗಾಗಿ ಕಸದ ವಿಲೇವಾರಿಯನ್ನೂ ಇಲ್ಲಿ ನಿರ್ಮಲೀಕರಣದ ಭಾಗವಾಗಿ ಪರಿಗಣಿಸಿದರೆ, ಕೇವಲ 38% ಗುರುತಿಸದಿರುವ ಕೊಳಗೇರಿಗಳಲ್ಲಿ ಮಾತ್ರವೇ ಕಸ ವಿಲೇವಾರಿಯ ವ್ಯವಸ್ಥೆ ಇದೆ.

ನಗರಾಡಳಿತ, ಸಮುದಾಯ ಮತ್ತು ಸರ್ಕಾರೇತರ ಸಂಸ್ಥೆಗಳು ಸೇರಿ ಹೇಗೆ ನಗರದ ನಿರ್ಮಲೀಕರಣದ ಸಮಸ್ಯೆಯನ್ನು ಬಗೆಹರಿಸಬಹುದೆಂಬುದಕ್ಕೆ ತಮಿಳುನಾಡಿನ ತಿರುಚನಾಪಲ್ಲಿ ಒಂದು ಉದಾಹರಣೆ. ನಗರದ ಕೊಳಗೇರಿ ನಿವಾಸಿಗಳಿಗಾಗಿ ಸಮುದಾಯ ನಿರ್ವಹಣೆಯ ಶೌಚಗೃಹ ಮತ್ತು ಸ್ನಾನಗೃಹಗಳನ್ನು ನಿರ್ಮಿಸಲಾಯಿತು. (Water Aid India, 2008) ಮುಖ್ಯವಾಗಿ ಇದು ಸಾಧ್ಯವಾದದ್ದು ತೆರೆದ ಮನಸ್ಸಿನ ನಗರಾಡಳಿತ, ಸಮುದಾಯ ಮತ್ತು ಸರ್ಕಾರೇತರ ಸಂಸ್ಥೆಗಳು ಒಟ್ಟಾಗಿ ಕೈಜೋಡಿಸಿದ್ದರಿಂದ. ಕೊಳಗೇರಿಗಳಲ್ಲಿ ಆರೋಗ್ಯವನ್ನು ಮತ್ತು ನೈರ್ಮಲ್ಯವನ್ನು ಸಾಧಿಸಲು ದೊಡ್ಡ ಮೊತ್ತದ ಹಣ ಬೇಕಿಲ್ಲ; ಬದಲಿಗೆ ಬೇಕಿರುವುದು ಕೊಳಗೇರಿ ಜನರ ಕಷ್ಟಗಳಿಗೆ ಕಿವಿಗೊಡುವ ತೆರೆದ ಮನಸ್ಸಿನ ನಗರಾಡಳಿತ, ಸಹಾಯಕ ಸಮುದಾಯ ಮತ್ತು ಸರ್ಕಾರೇತರ ಸಂಸ್ಥೆಗಳ ನೆರವು. ಸಮುದಾಯಗಳು ಶೌಚಾಲಯಗಳನ್ನು ತಾವೇ ನಿರ್ವಹಿಸುತ್ತಿದ್ದರಿಂದ ಇದು ಮಹಿಳಾ ಸಬಲೀಕರಣಕ್ಕೂ ದಾರಿ ಮಾಡಿಕೊಟ್ಟಿತಲ್ಲದೇ ವೈಯಕ್ತಿಕ ಹಾಗೂ ಸಮುದಾಯದ ಅಭಿವೃದ್ಧಿಯ ಮೇಲೂ ಸಾಕಷ್ಟು ಸಕಾರಾತ್ಮಕ ಪರಿಣಾಮವನ್ನೇ ಬೀರಿತು. ಇದಕ್ಕೆ ತದ್ವಿರುದ್ಧವಾಗಿ 'ಜಾಗೋರಿ ಮತ್ತು ಅಂತಾರಾಷ್ಟ್ರೀಯ ನಗರಗಳಲ್ಲಿ ಮಹಿಳೆಯರು' ನಡೆಸಿದ ಅಂತರಾಷ್ಟ್ರೀಯ ಅಭಿವೃದ್ಧಿ ಮತ್ತು ಸಂಶೋಧನಾ ಕೇಂದ್ರದ "ಏಷ್ಯಾದ ನಗರಗಳಲ್ಲಿ ಮಹಿಳೆಯ ಹಕ್ಕುಗಳು ಹಾಗೂ ನೀರು ಮತ್ತು ಶೌಚವ್ಯವಸ್ಥೆಯ

**ಪಟ್ಟಿ–2 ನಗರದ ಕೊಳಗೇರಿಗಳ ಕೆಲವು ಮುಖ್ಯ ಸೂಚ್ಯಂಕಗಳು**

| ನಗರದ ಕೊಳಗೇರಿಗಳ ಮುಖ್ಯ ಸೂಚ್ಯಂಕಗಳು | ಗುರುತಿಸಲ್ಪಟ್ಟ ಕೊಳಗೇರಿಗಳು | ಗುರುತಿಸಲ್ಪಡದ ಕೊಳಗೇರಿಗಳು |
|---|---|---|
| ಪಾಯಖಾನೆ ವ್ಯವಸ್ಥೆ ಇಲ್ಲದಿರುವುದು | 16% | 42% |
| ಒಳಚರಂಡಿ ವ್ಯವಸ್ಥೆ ಇಲ್ಲದಿರುವುದು | 11% | 45% |
| ಕಸ ವಿಲೇವಾರಿಯ ವ್ಯವಸ್ಥೆ ಇಲ್ಲದಿರುವುದು | 11% | 38% |

ಮೂಲ : ಭಾರತದ ನಗರದ ಕೊಳಗೇರಿಗಳ ಕೆಲವು ಮುಖ್ಯ ಸೂಚ್ಯಂಕಗಳು – NSS 69ನೇ ಸುತ್ತು

ಲಭ್ಯತೆ (2009–2011) ವರದಿಯ ಪ್ರಕಾರ ದೆಹಲಿಯ ಸರ್ಕಾರ ಜೆಜೆ ಕಾಲೋನಿಯ ಪ್ರತಿಯೊಬ್ಬರ ಮೇಲೆ ನೀರಿಗಾಗಿ ಖರ್ಚು ಮಾಡುವ ಮೊತ್ತ ಕೇವಲ ರೂ.30/– ($0.66) ಮತ್ತು ನಿರ್ಮಲೀಕರಣಕ್ಕಾಗಿ ವ್ಯಯಿಸುವುದು ರೂ.60/– ($1.78) ಮಾತ್ರ. (2011 – 2012) ದೆಹಲಿಯಲ್ಲಿ ನೀರು ಮತ್ತು ನಿರ್ಮಲೀಕರಣವನ್ನು ವಿವಿಧ ಸಂಸ್ಥೆಗಳು ನಿರ್ವಹಿಸುತ್ತಿದುದರಿಂದ ಯಾವುದೇ ಸಂಸ್ಥೆಯೂ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಿರಲಿಲ್ಲ. ಜೊತೆಗೆ ಇದು ನೀರು ಮತ್ತು ನಿರ್ಮಲೀಕರಣದ ವ್ಯವಸ್ಥೆಯನ್ನು ಸುಧಾರಿಸುವಲ್ಲಿ ರಾಜಕಾರಣಿಗಳ ಇಚ್ಛಾಶಕ್ತಿಯ ಕೊರತೆಯನ್ನೂ ತೋರುತ್ತದೆ. ಈ ಎರಡು ಉದಾಹರಣೆಗಳು ದೇಶದಾದ್ಯಂತ ಹೇಗೆ ನೀರು ಮತ್ತು ನಿರ್ಮಲೀಕರಣದ ವ್ಯವಸ್ಥೆ ಭಿನ್ನವಾಗಿದೆ ಎಂಬುದನ್ನು ತೋರಿಸುವುದರ ಜೊತೆಗೇ ಹೇಗೆ ಬೇರೆ ಬೇರೆ ಸಂದರ್ಭಗಳಲ್ಲಿ ವಿಭಿನ್ನ ಅಂಶಗಳು ಇದರ ಮೇಲೆ ಪರಿಣಾಮ ಬೀರುತ್ತವೆ ಎಂಬುದನ್ನೂ ಸ್ಪಷ್ಟಪಡಿಸುತ್ತದೆ. ಒಟ್ಟಾರೆಯಾಗಿ 'ಒಂದೇ ಮಂತ್ರ' ಎಲ್ಲ ಕಡೆಗೂ ಹೊಂದುವುದಿಲ್ಲ ಎಂಬುದನ್ನು ಅರಿಯುವುದು ಬಹು ಮುಖ್ಯ.



ಭಾರತದ ಅಭಿವೃದ್ಧಿಯ ಗಾಥೆ ಆಸಕ್ತಿದಾಯಕವಾಗಿದ್ದರೂ, ನಿರ್ಮಲೀಕರಣದ ಅಂಕಿ ಅಂಶಗಳನ್ನು ಗಮನಿಸಿದಾಗ ಹೇಳಿಕೊಳ್ಳುವುದಕ್ಕೆ ಅಲ್ಲಿ ಹೆಚ್ಚೇನೂ ಇಲ್ಲ. ಒಂದೇ ಸಮನೆ ಹೆಚ್ಚುತ್ತಿರುವ ಕೊಳಗೇರಿಯ ಜನಸಂಖ್ಯೆಯ ಜೊತೆಗೆ ನೀರು ಮತ್ತು ಶೌಚ ವ್ಯವಸ್ಥೆಗಳಂತ ಮೂಲಭೂತ ಸೌಕರ್ಯಗಳ ಮೇಲೆ ಒತ್ತಡ ತೀವ್ರವಾಗುತ್ತಲೇ ಇದೆ. ಶೌಚಾಲಯಗಳ ನಿರ್ಮಾಣ ಸಮಗ್ರ ನಿರ್ಮಲೀಕರಣ ವ್ಯವಸ್ಥೆಯ ಒಂದು ಭಾಗ ಮಾತ್ರ. ಒಳಚರಂಡಿ ವ್ಯವಸ್ಥೆ, ನೀರಿನ ಪುನರ್‌ಬಳಕೆ, ಘನತ್ಯಾಜ್ಯ ನಿರ್ವಹಣೆ ಇವೆಲ್ಲವನ್ನೂ ಜೊತೆಗೇ ನಿರ್ವಹಿಸುವುದು ಅತ್ಯವಶ್ಯಕ ಮತ್ತು ಇದರಲ್ಲಿ ನಗರಾಡಳಿತ ಮುಖ್ಯ ಪಾತ್ರ ವಹಿಸಬೇಕಿದೆ.

ಕೊಳಗೇರಿಗಳಲ್ಲಿ ಸುರಕ್ಷಿತ ಮತ್ತು ಸಮರ್ಥ ನೈರ್ಮಲ್ಯವನ್ನು ಸಾಧಿಸುವುದು ಮಹಿಳೆಯರ ಮತ್ತು ಹೆಣ್ಣು ಮಕ್ಕಳ ಸುರಕ್ಷತೆ, ಆರೋಗ್ಯ ಸುಧಾರಸುವಲ್ಲಿ ಹಾಗೂ ಅವರ ಖಾಸಗಿತನ ಮತ್ತು ಆತ್ಮಗೌರವವನ್ನು ಕಾಪಾಡುವಲ್ಲಿ ಬಹಳ ಸಹಾಯಕವಾಗಿದೆ. ಆದರೆ ನಗರ ನಿರ್ಮಲೀಕರಣದ ಬಹಳಷ್ಟು ಯೋಜನೆ, ಕಾರ್ಯಕ್ರಮಗಳಲ್ಲಿ ಮಹಿಳೆಯರು ಕಾಣುವುದೇ ಇಲ್ಲ. ಮಲಹೊರುವ ಪದ್ಧತಿ ಇನ್ನೂ ಚಾಲ್ತಿಯಲ್ಲಿದೆ ಎನ್ನುವು ಅಂಶವೇ, ಒಣ ಪಾಯಖಾನೆಗಳ ಬಳಕೆಯನ್ನು ನಿಲ್ಲಿಸುವ ಹಾಗೂ ನೀರು – ಸಹಿತ ಪಾಯಖಾನೆಯುಕ್ತ ಶೌಚವ್ಯವಸ್ಥೆಯನ್ನು ಬಳಕೆಗೆ ತರುವ ಕೆಲಸ ಪರಿಣಾಮಕಾರಿಯಾಗಿ ಆಗಿಲ್ಲ ಎಂಬುದನ್ನು ತೋರಿಸುತ್ತದೆ. "ಶೌಚಾಲಯದ ಹಕ್ಕು" ಕುರಿತಾಗಿ ಇನ್ನು ಸಮರ್ಥವಾದ ಮತ್ತು ತೀವ್ರವಾದ ಪ್ರಚಾರಾಂದೋಲನವನ್ನು ದೊಡ್ಡ ಮಟ್ಟದಲ್ಲಿ ಕೈಗೊಳ್ಳಬೇಕಾದ ಅಗತ್ಯವಿದೆ. ಇದು ಪ್ರಮುಖವಾಗಿ ಮಲಹೊರುವ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನಗೊಳಿಸುವತ್ತ ಗಮನ ಕೇಂದ್ರೀಕರಿಸಬೇಕಿದೆ. ಜನಜಾಗೃತಿ ಮೂಡಿಸುವ ಮೂಲಕ ಸುರಕ್ಷಿತ ಶೌಚವ್ಯವಸ್ಥೆಯ ಬಳಕೆಯನ್ನು ಉತ್ತೇಜಿಸುವುದರ ಜೊತೆಗೇ ಶೌಚ ವ್ಯವಸ್ಥೆಯಲ್ಲಿ ಹೊಸ ಮತ್ತು ಆವಿಷ್ಕಾರಿ ತಂತ್ರಜ್ಞಾನವನ್ನೂ ಪ್ರೋತ್ಸಾಹಿಸಬೇಕಿದೆ.



ಕೊಳಗೇರಿ ನಿವಾಸಿಗಳ ಭೂಮಿಯ ಹಕ್ಕು, ಜೀವನೋಪಾಯದ ಅವಕಾಶಗಳು, ಶಿಕ್ಷಣ ಮತ್ತು ಆರೋಗ್ಯದಂತ ಪ್ರಮುಖ ಸಮಸ್ಯೆಗಳನ್ನು ಪರಿಹರಿಸುವುದು ಸಹಾ ನಗರದ ಕೊಳಗೇರಿಗಳ ನಿರ್ಮಲೀಕರಣದ ಯೋಜನೆಗಳ ಯಶಸ್ಸಿಗೆ ಸಹಕಾರಿಯಾಗಿದೆ (ಪಾಂಡ ಮತ್ತು ಅಗರ್‌ವಾಲ್, 2013). ಸಾಕಷ್ಟು ಹಣಕಾಸಿನ ನೆರವು ಮತ್ತು ಸಶಕ್ತ ಅನುಷ್ಠಾನದ ಹೊರತು ನಗರ ನಿರ್ಮಲೀಕರಣದ ಯೋಜನೆಗಳು ಮತ್ತು ಕಾರ್ಯಕ್ರಮಗಳು ಪರಿಣಾಮಕಾರಿಯಾಗಲಾರವು. ಸರ್ಕಾರ ಮತ್ತು ನಗರಾಡಳಿತಗಳ ಪ್ರಬಲ ರಾಜಕೀಯ ಇಚ್ಛಾಶಕ್ತಿಯು ನಗರ ನಿರ್ಮಲೀಕರಣದ ವಿಚಾರದಲ್ಲಿ ಸಾಕಷ್ಟು ಬದಲಾವಣೆ ತರಬಲ್ಲವು. "ಸ್ಮಾರ್ಟ್ ಸಿಟಿ" ಎಂಬುದು ಹೊಸಮಂತ್ರವಾಗಿರುವ ಈ ದಿನಗಳಲ್ಲಿ ಪ್ರಸಕ್ತ ಕೇಂದ್ರ ಸರ್ಕಾರವು ನೈರ್ಮಲ್ಯವನ್ನು ಕೇಂದ್ರವಾಗಿಸಿಕೊಂಡು 'ಸ್ವಚ್ಛಭಾರತ ಅಭಿಯಾನ'ವನ್ನು ರೂಪಿಸಿರುವುದು ಸ್ವಾಗತಾರ್ಹ. ಎಂದಿಗೆ ಶೌಚವ್ಯವಸ್ಥೆ ಎಂಬುದು ಒಂದು ಕೊಳಕು ಪದ ಎಂಬುದು ಕರಗಿ ಅದು ನಮ್ಮ ಆದ್ಯತೆಯ ಕ್ಷೇತ್ರವಾಗುತ್ತೆಂಬುದನ್ನು ಕಾಲವೇ ನಿರ್ಧರಿಸಬೇಕಿದೆ. ❑

# ಜೈವಿಕ ಶೌಚಾಲಯ

ಡಾ. ಹುಜೈಫಾ ಕೊರಕಿವಾಲಾ
ಕನ್ನಡಕ್ಕೆ : ಡಾ. ಬಿ. ಎನ್. ಹೇಮಾದೇವಿ



ಜೈವಿಕ ಶೌಚಾಲಯದ ಪರಿಕಲ್ಪನೆಯು ಸಕಾರಾತ್ಮಕ ಪ್ರಭಾವವನ್ನು ಉಂಟುಮಾಡುತ್ತದೆ. ಸೆಪ್ಟಿಕ್ ಟ್ಯಾಂಕ್ ಅಥವಾ ಹೀರು ಗುಂಡಿಯ ಬದಲಿಗೆ ಇಲ್ಲಿ ಜೈವಿಕ ಜೀರ್ಣಕ ಟ್ಯಾಂಕನ್ನು ಬಳಸಲಾಗುತ್ತದೆ. ಮಲವನ್ನು ಆಧುನಿಕ ಜೈವಿಕ ತತ್ವದ ಬಳಕೆಯ ಮೂಲಕ ವಿಘಟಿಸಲಾಗುತ್ತದೆ.

ಬಯಲಿನಲ್ಲಿ ಅಥವಾ ತೆರೆದ ಸ್ಥಳಗಳಲ್ಲಿ ಮಲವಿಸರ್ಜನೆ ಮಾಡುವ ಸಮಸ್ಯೆಯ ಕುರಿತ ಸುದ್ದಿಯನ್ನು ನಮ್ಮ ದೇಶದಲ್ಲಿ ನಾವು ಆಗಾಗ್ಗೆ ಓದುತ್ತಿರುತ್ತೇವೆ. ಬಹುತೇಕ ಇದನ್ನು ಒಂದು ರೀತಿಯಲ್ಲಿ ನಮ್ಮ ರಾಷ್ಟ್ರೀಯ ಲಕ್ಷಣ ಅಥವಾ ಹಿಂದಿನ ಕಾಲದ ಆನೆಗಳು ಮತ್ತು ಹಾವಾಡಿಗರ ಸಂಗತಿಗಳಂತೆ ಸಂಕೇತವಾಗಿ ಗುರುತಿಸಲ್ಪಡಲಾಗಿದೆ. ಇಡಿ ವಿಶ್ವದಲ್ಲೇ ಭಾರತವು ಶೇಕಡ 60ರಷ್ಟು ತೆರೆದ ಸ್ಥಳದಲ್ಲಿ ಮಲವಿಸರ್ಜನೆ ಮಾಡುವವರ ವಾಸಸ್ಥಳವೆಂಬ ಅಪಕೀರ್ತಿಗೆ ಒಳಪಟ್ಟಿದೆ. ನಮ್ಮಲ್ಲಿ 62 ಕೋಟಿಗಿಂತಲೂ ಹೆಚ್ಚಿನ ಜನರು ಅಥವಾ ಸರಿಸುಮಾರು ದೇಶದ ಅರ್ಧಕ್ಕಿಂತ ಹೆಚ್ಚಿನ ಜನಸಂಖ್ಯೆ ತೆರೆದ ಸ್ಥಳದ ಅಥವಾ ಬಯಲಿನಲ್ಲಿ ಮಲವಿಸರ್ಜನೆ ಮಾಡುವ ಅಭ್ಯಾಸವನ್ನು ಹೊಂದಿದ್ದಾರೆ. ಈ ಮುಂದಿನ ದಿನಗಳಲ್ಲಿ ಈ ಸಂಖ್ಯೆಯು ಕಡಿಮೆಯಾಗುವ ಸೂಚನೆಯಿಲ್ಲ. ನಗರ ಪ್ರದೇಶದಲ್ಲೂ ಸುಮಾರು 16% ಜನರು ತೆರೆದ ಬಯಲಿನಲ್ಲಿ ಮಲವಿಸರ್ಜನೆ ಮಾಡುವ ಸಮಸ್ಯೆಯು ಕಂಡುಬಂದಿದ್ದು ಇಂದಿಗೂ ಗ್ರಾಮೀಣ ಭಾರತದ ಸುಮಾರು 69% ಜನರು ತೆರೆದ ಬಯಲಿನಲ್ಲಿ ಮಲವಿಸರ್ಜನೆ ಮಾಡುತ್ತಿದ್ದಾರೆ. ಶೌಚಾಲಯ ಸೌಲಭ್ಯದ ಅಭಾವದ ದುಷ್ಪರಿಣಾಮವು ಶೈಕ್ಷಣಿಕ ರಂಗದಲ್ಲೂ ತೀವ್ರವಾಗಿ ಕಂಡುಬಂದಿದೆ. ಗ್ರಾಮೀಣ ಪ್ರದೇಶದ ಬಹಳಷ್ಟು ಕಡೆಗಳಲ್ಲಿ ಹುಡುಗಿಯರಿಗಾಗಿ ಪ್ರತ್ಯೇಕ ಶಾಲೆಗಳನ್ನು ಹಾಗೂ ಶಿಕ್ಷಕರನ್ನು ಒದಗಿಸಲು ಸಾಧ್ಯವಾಗಿರದ ಕಾರಣ ಬಹುತೇಕ ಶಾಲೆಗಳಲ್ಲಿ ಹುಡುಗ ಮತ್ತು ಹುಡುಗಿಯರಿಬ್ಬರೂ ಒಟ್ಟಿಗೆ ಓದುತ್ತಾರೆ. ಮಾಧ್ಯಮಿಕ ಶಾಲೆಗೆ ಬರುವಷ್ಟರಲ್ಲಿ ಬಹಳಷ್ಟು ಹೆಣ್ಣು ಮಕ್ಕಳು ತಮ್ಮ ಶಾಲಾ ಆವರಣದಲ್ಲಿ ಶೌಚಾಲಯವಿಲ್ಲದಿರುವುದರಿಂದ ತಮ್ಮ ವೈಯಕ್ತಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳಲು ಸಾಧ್ಯವಾಗದೆ ಪ್ರೌಢಾವಸ್ಥೆಗೆ ತಲುಪುತ್ತಿದ್ದಂತೆ ಶಾಲೆಯನ್ನು ಬಿಡುತ್ತಿದ್ದಾರೆ.

### ಇದು ಸೌಂದರ್ಯಪ್ರಜ್ಞೆಯ ವಿಚಾರ ಮಾತ್ರವಲ್ಲ

ಸೌಂದರ್ಯ ಪ್ರಜ್ಞೆಯ ದೃಷ್ಟಿಕೋನವನ್ನು ಹೊರತು ಪಡಿಸಿದರೂ, ತೆರೆದ ಬಯಲಿನಲ್ಲಿ ಮಲವಿಸರ್ಜನೆ ಮಾಡುವುದು ಪ್ರಮುಖ ಆರೋಗ್ಯ ಅಪಾಯಗಳಿಗೆ ಎಡೆಮಾಡಿಕೊಡುತ್ತದೆ. ವಿಶೇಷವಾಗಿ ಮಳೆಗಾಲದಲ್ಲಿ ಮಲ ತ್ಯಾಜ್ಯವು ಸರಾಗವಾಗಿ ಹಾಗೂ ಸುಲಭವಾಗಿ ಹೊಳೆ, ಕೊಳ ಮತ್ತು ನೀರಿನ ತೊಟ್ಟಿ (ಟ್ಯಾಂಕು)ಗಳಲ್ಲಿ ಸೇರುವುದರಿಂದ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಗೃಹ ಕಾರ್ಯಗಳಿಗೆ ಬಳಸುವ ನೀರಿಗಾಗಿ ಆಧುನಿಕ ನೀರು ನೈರ್ಮಲ್ಯೀಕರಣ ವ್ಯವಸ್ಥೆಯಿಲ್ಲದೆ ಇರುವುದರಿಂದ ಕುಡಿಯುವ ಮತ್ತು ಬಳಸುವ ನೀರು ಸಾಕಷ್ಟು ಕಲುಷಿತವಾಗಿರುತ್ತದೆ. ಇದರಿಂದಾಗಿಯೇ ಈ ಪ್ರದೇಶಗಳಲ್ಲಿ ಟೈಫಾಯಿಡ್, ಅತಿಸಾರ, ಹೆಪಾಟೈಟಿಸ್, ಕರುಳಿನಲ್ಲಿ ಹುಳುಗಳ ತೊಂದರೆ ಮತ್ತಿತರ ಜಲಜನ್ಯ ರೋಗಗಳು ಅವ್ಯಾಹತವಾಗಿ ಉಂಟಾಗುವಂತಹ ತೀವ್ರ ಸಮಸ್ಯೆಗಳು ಉದ್ಭವವಾಗಿವೆ.

### ಸೆಪ್ಟಿಕ್ ಟ್ಯಾಂಕ್ ಸಾಕಾಗುವುದಿಲ್ಲ

ಪ್ರತಿಯೊಂದು ಮನೆಯಲ್ಲೂ ಒಂದು ಶೌಚಾಲಯವನ್ನು ನಿರ್ಮಿಸುವುದು

ಸಿಇಓ, ವೊಕಾರ್ಡ್ ಫೌಂಡೇಷನ್. e-mail : ceo@wockhardtfoundation.org

ಒಂದು ಪ್ರಶಂಸನೀಯ ವಿಷಯವಾದರೂ ಮಾಡಬೇಕಾಗಿರುವುದು ಸಾಕಷ್ಟಿದೆ. ಸ್ಟಾಂಡರ್ಡ್ ಸೆಪ್ಟಿಕ್ ಟ್ಯಾಂಕ್ (ಪ್ರಮಾಣಿತ ಭೂಗತ ಮಲಸಂಗ್ರಹಗಾರ) ಮತ್ತು ಹೀರು ಗುಂಡಿಗಳು ಸುಲಭ ಹಾಗೂ ಕಡಿಮೆ ಹಣದಿಂದಾಗುವ ಪರಿಹಾರ ಕ್ರಮಗಳೆಂದು ಕಂಡುಬಂದರೂ ಅವುಗಳನ್ನು ಸೂಕ್ತವಾಗಿ ವಿನ್ಯಾಸಗೊಳಿಸಿ ನಿರ್ಮಿಸದಿರುವುದರಿಂದ ಮಲವು ಮಣ್ಣಿನೊಳಗೆ ಜಿನುಗುವು ಅಪಾಯವಿದೆ. ಇಲ್ಲಿ ಮಲ ತ್ಯಾಜ್ಯವು ವರ್ಷವಿಡೀ ಜಿನುಗುತ್ತದೆ. ಅದನ್ನು ಪರೀಕ್ಷಿಸುವುದು ಅಥವಾ ನಿಯಂತ್ರಿಸುವುದು ಸುಲಭವಲ್ಲ. ಏಕೆಂದರೆ ಇಲ್ಲಿ ಸ್ಥಳೀಯವಾಗಿ ಕ್ರಮ ತೆಗೆದುಕೊಳ್ಳಲು ಹೊರಗಿನಿಂದ ಏನೂ ಕಾಣುವುದಿಲ್ಲ. ಇದರಿಂದ ಸುರಕ್ಷತೆಯಿದೆ ಎಂಬ ಮಿಥ್ಯಾಭಾವವು ಉಂಟಾಗಿ ಸಾರ್ವನಿಕ ಆರೋಗ್ಯಕ್ಕೆ ತೀವ್ರ ಅಪಾಯ ಉಂಟಾಗುತ್ತದೆ.

### ಜೈವಿಕ ಶೌಚಾಲಯದ ಪರಿಕಲ್ಪನೆ

ಈ ಹಿನ್ನೆಲೆಯಲ್ಲಿ ಜೈವಿಕ ಶೌಚಾಲಯದ ಪರಿಕಲ್ಪನೆಯು ಸಕಾರಾತ್ಮಕ ಪ್ರಭಾವವನ್ನು ಉಂಟುಮಾಡುತ್ತದೆ. ಸೆಪ್ಟಿಕ್ ಟ್ಯಾಂಕ್ ಅಥವಾ ಹೀರು ಗುಂಡಿಯ ಬದಲಿಗೆ ಇಲ್ಲಿ ಜೈವಿಕ ಜೀರ್ಣಕ ಟ್ಯಾಂಕನ್ನು ಬಳಸಲಾಗುತ್ತದೆ. ಮಲವನ್ನು ಆಧುನಿಕ ಜೈವಿಕ ತತ್ವದ ಬಳಕೆಯ ಮೂಲಕ ವಿಘಟಿಸಲಾಗುತ್ತದೆ. ಸೆಪ್ಟಿಕ್ ಟ್ಯಾಂಕ್‌ನಲ್ಲಾದರೆ ತ್ಯಾಜ್ಯ ವಸ್ತುವು ರಾಡಿ ಮತ್ತು ಗೊಬ್ಬರವಾಗಿ ಕ್ರಮೇಣವಾಗಿ ಪರಿವರ್ತಿತಗೊಳ್ಳಲು ಕಾಯಬೇಕಾಗುತ್ತದೆ. ಇದಕ್ಕೆ ಹಲವು ತಿಂಗಳುಗಳ ಕಾಲ ಬೇಕು. ಆ ಸಮಯದಲ್ಲಿ ಸೆಪ್ಟಿಕ್ ಟ್ಯಾಂಕಿನಲ್ಲಿ





ತ್ಯಾಜ್ಯವು ಅನಿಯಂತ್ರವಾಗಿ ಮತ್ತು ಗಮನಕ್ಕೆ ಬಾರದಂತೆ ಭೂಮಿಯೊಳಗೆ ಜಿನುಗುತ್ತಾ ಹೋಗುತ್ತದೆ. ಆದರೆ ಜೈವಿಕ ಶೌಚಾಲಯದಲ್ಲಿ ಕ್ರಿಯಾಶೀಲವಾಗಿ, ಸಮರ್ಥವಾಗಿ ತ್ಯಾಜ್ಯವನ್ನು ವಿಘಟಿಸುವ ಕಾರ್ಯನಡೆಯುತ್ತದೆ.

ಇಲ್ಲಿನ ಮುಚ್ಚಿದ ಟ್ಯಾಂಕಿನಲ್ಲಿ ಆಮ್ಲಜನಕವು ಸಂಪೂರ್ಣವಾಗಿ ಇಲ್ಲದಿದ್ದು ಇದು ನಿರ್ವಾಯು ಬ್ಯಾಕ್ಟೀರಿಯಾಗಳು ಸಂವೃದ್ಧವಾಗಿ ಹೆಚ್ಚುತ್ತಾ ಹೋಗುವ ವಾತಾವರಣವನ್ನು ಸೃಷ್ಟಿ ಮಾಡುತ್ತದೆ. ಈ ಬ್ಯಾಕ್ಟೀರಿಯಾಗಳು ತ್ಯಾಜ್ಯವನ್ನು ಸಂಪೂರ್ಣವಾಗಿ ವಿಘಟಿಸಿ ಅದನ್ನು ನೀರು ಮತ್ತು ಜೈವಿಕ ಅನಿಲವಾಗಿ ಪರಿವರ್ತಿಸುತ್ತವೆ. ಇನ್ನೊಂದು ಅರ್ಥದಲ್ಲಿ ಈ ತಂತ್ರಜ್ಞಾನದಲ್ಲಿ ಕ್ರಿಯಾಶೀಲ ವಿಘಟನೆಯಿರುತ್ತದೆ. ಆದರೆ ಹಳೆಯ ವಿಧಾನದಲ್ಲಿ ಜಡ ವಿಘಟನೆ ನಡೆಯುತ್ತದೆ.

ಜೈವಿಕ ಶೌಚಾಲಯದ ಇನ್ನೊಂದು ಪ್ರಯೋಜನವೆಂದರೆ ಇದು ಸೆಪ್ಟಿಕ್ ಟ್ಯಾಂಕ್ ಅಥವಾ ಹೀರು ಗುಂಡಿಗಳ ಮೂರನೆಯ ಒಂದು ಭಾಗದಷ್ಟು ಸ್ಥಳವನ್ನು ಮಾತ್ರ ಆಕ್ರಮಿಸಲಿದ್ದು ಹೆಚ್ಚು ಸಮಗ್ರವಾಗಿರುತ್ತದೆ. ಸೆಪ್ಟಿಕ್ ಅಥವಾ ಹೀರು ಗುಂಡಿಗಳನ್ನು ಕಾಲಕಾಲಿಕವಾಗಿ ಕೆಲವು ತಿಂಗಳಿಗೊಮ್ಮೆಯಾದರೂ ಶುಚಿ ಮಾಡುವ ಮತ್ತು ಅದರೊಳಗಿನ ತ್ಯಾಜ್ಯವನ್ನು ಪೂರ್ತಿಯಾಗಿ ತೆಗೆಯುವ ಅಗತ್ಯವಿರುತ್ತದೆ. ಆದರೆ ಜೈವಿಕ ಶೌಚಾಲಯದಲ್ಲಿ ಶೇಕಡ ತೊಂಬತ್ತರಷ್ಟು ತಾಜ್ಯವು ವಿಘಟನೆಗೊಳ್ಳುವುದರಿಂದ ಅದನ್ನು ತೆಗೆಯುವ ಅಗತ್ಯವಿಲ್ಲ. ಇಲ್ಲಿ ಸುಮಾರು 50 ವರ್ಷಗಳಷ್ಟು ಕಾಲ ನಿರ್ವಹಣೆಯ ಅಗತ್ಯವಿರುವುದಿಲ್ಲ. ಆದರೆ ಸೆಪ್ಟಿಕ್ ಟ್ಯಾಂಕನ್ನು ಪ್ರತಿ ವರ್ಷ ಶುಚಿಮಾಡಬೇಕಾಗುತ್ತದೆ ಮತ್ತು ಪ್ರತಿ ಐದು ವರ್ಷಕ್ಕೊಮ್ಮೆ ಬದಲಿಸಬೇಕಾಗುತ್ತದೆ.

### ನೀರಿನ ಅಭಾವ

ನಮ್ಮ ದೇಶದಲ್ಲಿ ತೆರೆದ ಬಯಲಿನಲ್ಲಿ ಮಲ ವಿಸರ್ಜನೆ ಮಾಡುವ ಅಭ್ಯಾಸವು ಮುಂದುವರೆಯಲು ನೀರು ಸಿಗದಿರುವುದೂ ಕೂಡ ಪ್ರಮುಖ ಕಾರಣಗಳಲ್ಲೊಂದು. ಸಾಕಷ್ಟು ನೀರನ್ನು ಹಾಯಿಸದಿರುವುದರಿಂದ ಶೌಚಾಲಯಗಳು ಕಟ್ಟಿಕೊಳ್ಳುವುದರಿಂದ ಚೆನ್ನಾಗಿ ರೂಪಿಸಿದ ಶೌಚಾಲಯಗಳನ್ನು ಕೆಲವೇ ವಾರಗಳಲ್ಲಿ ಬಳಸದಿರುವುದನ್ನು ನಾವು ಆಗಾಗ್ಗೆ ಕಾಣುತ್ತೇವೆ.

ಹಳ್ಳಿಗರು ಮತ್ತು ನಗರದ ಕೊಳೆಗೇರಿ ನಿವಾಸಿಗಳಿಗೆ ಸ್ನಾನಕ್ಕೆಂದು ಒಂದು ತಂಬಿಗೆ ನೀರು ಮಾತ್ರ ಸಿಗುವಂತಿದ್ದು ಮಲ ನಿವಾರಣೆಗೆ ಒಂದು ಬಕೀಟಿನಷ್ಟು ನೀರು ಸಿಗುವುದು ಅಸಾಧ್ಯವಾಗಿರುತ್ತದೆ. ಏಕೆಂದರೆ ಅವರಿಗೆ ನೀರು ಸಿಗುವುದಿಲ್ಲ ಅಥವಾ ಸಿಕ್ಕರೂ ಅದನ್ನು ಸಾರ್ವಜನಿಕ ಶೌಚಾಲಯದವರೆಗೆ ನೀರು ಒಯ್ಯುವುದು ಭಾರದ ಅಥವಾ ಕಷ್ಟದ ಕೆಲಸವೆನಿಸಬಹುದು. ಇದರಿಂದಾಗಿ ನಮ್ಮ ಮುಂದಿನ ಅಗತ್ಯವೆಂದರೆ ಸಮರ್ಪಕ ನೀರು ಪೂರೈಕೆ. ಏಕೆಂದರೆ ಅವುಗಳು ಕೆಲವೇ ವಾರಗಳಲ್ಲಿ ಕಟ್ಟಿಕೊಳ್ಳುವಂತಾದರೆ ಕೇವಲ ಶೌಚಾಲಯಗಳನ್ನು ಕಟ್ಟುವುದರಲ್ಲಿ ಪ್ರಯೋಜನವಿರುವುದಿಲ್ಲ. ❑

# ಸ್ವಚ್ಛ ಭಾರತ ಅಭಿಯಾನ: ಮುಖ್ಯವಾಹಿನಿಯೆಡೆಗೆ

ಪೂರ್ಣಿಮಾ ಚಿಕರ್ಮನೆ
ಕನ್ನಡಕ್ಕೆ : ಹರ್ಷ ಕುಮಾರ್ ಕೆ. ಎಸ್.



ಕಸ ನಿರ್ವಹಣೆಯ ಸಮಸ್ಯೆಯನ್ನು ಅನೌಪಚಾರಿಕ ಕೆಲಸಗಾರರ ದೃಷ್ಟಿಯಿಂದ ಅಂದರೆ ಪೂರೈಕೆ ಬದಿಯಿಂದ ನೋಡಿದಾಗ ನಮಗೆ ಅಲ್ಲಿ ಅಂತಹ ಕೆಲಸಗಾರರ ದಾಖಲಾತಿ ಅಥವಾ ಗುರುತಿಸುವ ಒಂದು ವ್ಯವಸ್ಥೆಯೇ ಇಲ್ಲದಿರುವುದು ಕಾಣುತ್ತದೆ. ರದ್ದಿ ಆಯುವ ಕೆಲಸ ಎಂದರೆ ಕೀಳೆಂದು ಪರಿಗಣಿಸಲ್ಪಟ್ಟಿರುವಂತದ್ದು. ಇದರಲ್ಲಿ ತೊಡಗಿರುವವರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಂಚಿನಲ್ಲಿರುವ ಪರಿಶಿಷ್ಟರು ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಜನರು ಎಂಬಂತಾಗಿದೆ.

ಹಿಂದಿನ ಸರ್ಕಾರದ ನಿರ್ಮಲ ಭಾರತ್ ಅಭಿಯಾನವಿರಲಿ ಅಥವಾ ಈಗಿನ ಸರ್ಕಾರದ ಸ್ವಚ್ಛ ಭಾರತ ಅಭಿಯಾನವಿರಲಿ, ಇಂತಹ ಸ್ವಚ್ಛತಾ ಅಭಿಯಾನಗಳಿಗೆ ಪೊರಕೆ ಹಿಡಿದ ಬ್ರಿಗೇಡುಗಳನ್ನು ನಿಲ್ಲಿಸುವಕ್ಕೂ ಹೆಚ್ಚಿನ ಪಾತ್ರವಿದೆ. ಈ ಲೇಖನವು ಈ ಸ್ವಚ್ಛತಾ ಅಭಿಯಾನಗಳು ಯಾವುದರ ತಳಹದಿಯ ಮೇಲೆ ಸಂರಚನೆಗೊಂಡಿವೆಯೋ ಆ ಕೊಳೆತು ನಾರುತ್ತಿರುವ ತಳಮಟ್ಟವನ್ನು ಮುಟ್ಟುವ ಪ್ರಯತ್ನ ಮಾಡುತ್ತದೆ. ಭಾರತದ ನಗರಗಳಲ್ಲಿ ಕಸದ ವಿಲೇವಾರಿಯಲ್ಲಿನ ಒಳ್ಳೆಯ ನಿರ್ವಹಣೆ ಮತ್ತು ಕೆಟ್ಟ ನಿರ್ವಹಣೆಗಳು ಹೇಗಿವೆ ಎಂಬುದನ್ನು ಉದಾಹರಣೆಗಳ ಸಮೇತ ಈ ಲೇಖನದಲ್ಲಿ ತಿಳಿಸಲಾಗಿದೆ. ಇಲ್ಲಿರುವ ಔಪಚಾರಿಕವಾದ ವ್ಯವಸ್ಥೆ ಎಂದರೆ ಸಂವಿಧಾನಬದ್ಧವಾಗಿ ರಚನೆಗೊಂಡು ನೇರವಾಗಿ ಇಲ್ಲವೇ ಪರೋಕ್ಷವಾಗಿ ಅದರ ಗುತ್ತಿಗೆದಾರರ ಮೂಲಕ ಘನತ್ಯಾಜ್ಯ ನಿರ್ವಹಣೆಯನ್ನು ನಡೆಸುವ ಮುನಿಸಿಪಾಲಿಟಿ ಅಥವಾ ನಗರಪಾಲಿಕೆಯ ಸಂಸ್ಥೆಯಿಂದ ನಡೆಯುವ ಕಸ ನಿರ್ವಹಣೆ ವ್ಯವಸ್ಥೆ. ಅದೇ ರೀತಿ ಇಲ್ಲಿರುವ ಅನೌಪಚಾರಿಕ ವ್ಯವಸ್ಥೆ ಎಂದರೆ ಅನಧಿಕೃತವಾಗಿ ರದ್ದಿ ಆಯುವವರ ಮತ್ತು ಬೀದಿ ಸುತ್ತುತ್ತ ರದ್ದಿ/ಗುಜರಿ ಸಾಮಾನು ಕೊಳ್ಳುವವರು ಹಾಗೂ ಮರುತಯಾರಿಕೆಗಾಗಿ ಕಸವನ್ನು ಸಂಗ್ರಹಿಸುವರೆಲ್ಲ ಸೇರಿದ ಒಂದು ಸರಪಳಿ ವ್ಯವಸ್ಥೆ. ಯಾವುದೇ ಸ್ವಚ್ಛತಾ ಅಭಿಯಾನವು ಉತ್ತಮ ಪರಿಸರ ನೀಡುವ ಜೊತೆಜೊತೆಗೆ ಘನತ್ಯಾಜ್ಯದನಿರ್ವಹಣೆಯ ಔಪಚಾರಿಕಮತ್ತುಅನೌಪಚಾರಿಕವ್ಯವಸ್ಥೆಗಳಲ್ಲಿ ತೊಡಗಿಕೊಂಡಿರುವ ಕೆಲಸಗಾರಿಗೆ ಗೌರವ ಮತ್ತು ನ್ಯಾಯವನ್ನು ಖಾತರಿಪಡಿಸುವುದನ್ನು ಮುಖ್ಯವಾಗಿಸಿಕೊಂಡು ನಡೆಯಬೇಕು. ಸೂಕ್ತ ಸಾಂಸ್ಥಿಕ ಏರ್ಪಾಡುಗಳ ಮೂಲಕ ಔಪಚಾರಿಕ ಮತ್ತು ಅನೌಪಚಾರಿಕ ವ್ಯವಸ್ಥೆಗಳ ನಡುವೆ ಪರಸ್ಪರ ಸಂಬಂಧವನ್ನು ನೆಲೆಗೊಳಿಸಿ ಗಟ್ಟಿಗೊಳಿಸಬೇಕಾಗಿದೆ.

### ಪೀಠಿಕೆ

ಒಂದರ ನಂತರ ಒಂದಾಗಿ ಅಧಿಕಾರ ವಹಿಸಿಕೊಂಡು ಬಂದ ಭಾರತದ ಸರ್ಕಾರಗಳಿಗೆ ಘನತ್ಯಾಜ್ಯ ನಿರ್ವಹಣೆಯ ಔಪಚಾರಿಕ ಮತ್ತು ಅನೌಪಚಾರಿಕ ವ್ಯವಸ್ಥೆಗಳ ನಡುವೆ ಇರುವ ಸಂಬಂಧಗಳ ಬಗ್ಗೆ ಮತ್ತು ಅನೌಪಚಾರಿಕ ಕಸ ನಿರ್ವಹಣೆಯ ವ್ಯವಸ್ಥೆಯನ್ನು ಔಪಚಾರಿಕ ವ್ಯವಸ್ಥೆಯೊಳಗೆ ಒಳಗೊಳ್ಳುವ ಬಗ್ಗೆ ಕಾಲ ಕಾಲಕ್ಕೆ ರಚಿಸಲಾದ ಸಮಿತಿಗಳು ಮನವರಿಕೆ ಮಾಡಿಕೊಟ್ಟಿವೆ. 1995ರಲ್ಲಿ ಭಾರತದಲ್ಲಿ ನಗರ ಘನತ್ಯಾಜ್ಯ ನಿರ್ವಹಣೆ ಕುರಿತ ಉನ್ನತಾಧಿಕಾರ ಸಮಿತಿಯು, ಜೆ.ಎಸ್. ಬಜಾಜ್ ಅವರ ಅಧ್ಯಕ್ಷತೆಯಲ್ಲಿ ಕೆಲವು ಉತ್ತಮವಾದ ಅಂಶಗಳನ್ನು ತಿಳಿಸಿತ್ತು. ಅದರಲ್ಲಿ ಕೆಲವು ಅಂಶಗಳನ್ನು ಮುಂದೆ ನೀಡಲಾಗಿದೆ. "ಭಾರತವು ಮುಂದುವರಿದ ದೇಶಗಳಿಗೆ ಮಾದರಿಯಾಗಿದೆ. ಕಾಗದ, ಪ್ಲಾಸ್ಟಿಕ್, ಗಾಜು ಮತ್ತು ಬಟ್ಟೆಗಳನ್ನು ಸಹ ಮರುತಯಾರಿಕೆಗೆ (ರಿಸೈಕ್ಲಿಂಗ್‌ಗೆ)ಒಳಪಡಿಸುವ ಮೂಲಕ ನಗರದಲ್ಲಿ ಉತ್ಪತ್ತಿಯಾಗುವ ಗಟ್ಟಿ ಕಸದಲ್ಲಿ ಯಾವುದನ್ನೂ ಉಳಿಯಗೊಡುವುದಿಲ್ಲ. ಕಸವನ್ನು ಮರುತಯಾರಿಕೆ ಮತ್ತು ಮರುಬಳಕೆ ಮಾಡುವುದನ್ನು ಪ್ರೋತ್ಸಾಹಿಸಬೇಕು ಮತ್ತು ಈ ಪ್ರಕ್ರಿಯೆಯನ್ನು ಬಲಪಡಿಸಬೇಕಿದೆ. ಇದರಲ್ಲಿ

ಪ್ರಾಧ್ಯಾಪಕಿ, ಎಸ್‌ಎನ್‌ಡಿಟಿ ವಿಮೆನ್ ಯುನಿವರ್ಸಿಟಿ, ಪುಣೆ e-mail : pchikarmane1@gmail.com

ಸಂಗ್ರಹಿಸುವ ವೆಚ್ಚದ ಹೊರತಾಗಿ ಇನ್ನಾವ ವೆಚ್ಚವೂ ಇರುವುದಿಲ್ಲ. ಮರುತಯಾರಿಕೆಗೆ ಬೇಕಾದ ವಸ್ತುಗಳನ್ನು ಅವುಗಳ ಮೂಲದಲ್ಲಿಯೇ ಬೇರ್ಪಡಿಸಬೇಕಿರುತ್ತದೆ. ನಗರದ ಗಟ್ಟಿ ಕಸದಿಂದ ಮರುತಯಾರಿಕೆಗೆ ಬಳಸಬಹುದಾದ ವಸ್ತುಗಳನ್ನು ಸಂಗ್ರಹಿಸುವಲ್ಲಿ ರದ್ದಿ ಆಯುವವರ ಅನೌಪಚಾರಿಕ ಕ್ಷೇತ್ರವು ಪ್ರಮುಖ ಕೊಡುಗೆ ನೀಡುತ್ತಿದೆ. ಆದರೆ, ಈ ರದ್ದಿ ಆಯುವವರು– ಬಹುತೇಕ ಮಂದಿ ಹೆಂಗಸರು ಮತ್ತು ಮಕ್ಕಳು– ಅತ್ಯಂತ ಅನಾರೋಗ್ಯಕರ ಸ್ಥಿತಿಯಲ್ಲಿ ಕೆಲಸ ಮಾಡುತ್ತಾ ಬದುಕು ಸಾಗಿಸುತ್ತಿದ್ದಾರೆ. ಮರುಬಳಸುವ ವಸ್ತುಗಳನ್ನು ಸಂಗ್ರಹಿಸುವ ಮತ್ತು ಬಳಸುವ ಹಾಲಿ ವ್ಯವಸ್ಥೆಯನ್ನು ಉತ್ತಮಪಡಿಸುವುದು ಅತ್ಯಗತ್ಯವಾಗಿದೆ. ರದ್ದಿ ಆಯುವವರ ಸಹಕಾರಿಗಳನ್ನು ರಚಿಸಿ ಅವುಗಳಡಿಯಲ್ಲಿ ಅವರನ್ನು ಸಂಘಟಿಸಬಹುದಾಗಿದೆ. ನಂತರ ಕೆಲಸಗಾರರು ಮನೆಗಳ ಹಂತದಲ್ಲಿಯೇ ಅಂದರೆ ಮೂಲದಲ್ಲಿಯೇ ಮರುಬಳಸಬಲ್ಲ ವಸ್ತುಗಳನ್ನು ಸಂಗ್ರಹಿಸಬಹುದು. ಅದೇ ವೇಳೆಗೆ ಅವರು ಗಟ್ಟಿ ಕಸದ ಜೊತೆಯಲ್ಲಿ ಜೈವಿಕ ಕಸವನ್ನೂ ಮನೆಗಳಿಂದ ಸಂಗ್ರಹಿಸಿಕೊಂಡು ರಸ್ತೆಬದಿಯ ಕಸದ ತೊಟ್ಟಿಗಳಲ್ಲಿ ಹಾಕುವಂತೆ ಮಾಡಬಹುದು. ರಸ್ತೆಬದಿಯ ಕಸದ ತೊಟ್ಟಿಗಳಿಂದ ನಗರದ ಬಡವರು ಕಸ ಎತ್ತುವ ಈಗಿರುವ ವ್ಯವಸ್ಥೆಯ ಜಾಗದಲ್ಲಿ ವಾರ್ಡ್ ಮಟ್ಟದಲ್ಲಿ ಕಸ ಸಾಗಣೆ ವಾಹನಗಳಿಗೆ ಕಸವನ್ನು ಎತ್ತಿ ಹಾಕುವ ಕಸ ವರ್ಗಾವಣೆ ಠಾಣೆಗಳು ಮತ್ತು ಮರುಬಳಸುವ ಕಸವನ್ನು ಸಂಗ್ರಹಿಸುವ ಕಸ ಸಂಗ್ರಹ ಕೇಂದ್ರಗಳಿರುವ ಒಂದು ಸುಸಂಘಟಿತವಾದ ವ್ಯವಸ್ಥೆಯನ್ನು ಸ್ಥಾಪಿಸಬಹುದು. ರದ್ದಿ ಆಯುವವರ ಸಹಕಾರಿಗಳು ಇಲ್ಲವೇ ಎನ್‌ಜಿಒಗಳು ಈ ಸಂಗ್ರಹ ಕೇಂದ್ರಗಳ ಉಸ್ತುವಾರಿ ನೋಡಿಕೊಳ್ಳುವಂತೆ ಮಾಡಬಹುದು. ಬದಲಾಗಿ ಹೀಗೂ ಮಾಡಬಹುದು. ಮರುಬಳಸುವ ವಸ್ತುಗಳನ್ನು ಸಂಗ್ರಹಿಸುವ ಕೆಲಸಕ್ಕಾಗಿ ನಗರಪಾಲಿಕೆಗಳೇ ರದ್ದಿ ಆಯುವವರಿಗೆ ಉದ್ಯೋಗ ನೀಡಿ ನೇಮಿಸಿಕೊಳ್ಳಬಹುದು. ಇದರಿಂದಾಗಿ ರದ್ದಿ ಆಯುವವರಿಗೆ ನಗರ ಕಸ ಸಂಗ್ರಹ ಮತ್ತು ಮರುತಯಾರಿಕೆ ವ್ಯವಸ್ಥೆಗಳ ನಡುವೆ ತಾವೊಂದು ಪ್ರಮುಖ ಕೊಂಡಿಯಾಗಿದ್ದೇವೆಂಬ ಭಾವನೆ ಬರುತ್ತದೆ. ಜೊತೆಯಲ್ಲಿ ಕಸದ ರಾಶಿಗಳಲ್ಲಿ ರದ್ದಿ ಹೆಕ್ಕುವಾಗ ಉಂಟಾಗುವ ಆರೋಗ್ಯದ ಸಮಸ್ಯೆಗಳನ್ನು ತಪ್ಪಿಸಿ ಅವರಿಗೆ ಉತ್ತಮ ಕೆಲಸದ ಪರಿಸರವನ್ನು ನಿರ್ಮಿಸಿ ಉತ್ತಮ ಆದಾಯ ಬರುವಂತೆ ಮಾಡಬಹುದಾಗಿದೆ. ಹಾಗೆಯೇ ಮರುತಯಾರಿಕೆ ವ್ಯಾಪಾರದೊಂದಿಗೆ ಅವರಿಗೆ ನಿಕಟ ಸಂಪರ್ಕವುಂಟಾಗುವುದರಿಂದ ಮರುತಯಾರಿಕೆಗೆ ಬಳಸಬಹುದಾದ ವಸ್ತುಗಳನ್ನು ಗರಿಷ್ಠ ಮಟ್ಟದಲ್ಲಿ ಬಳಸಿಕೊಳ್ಳುವ ಬಗ್ಗೆ ಅವರಿಗೆ ತಿಳಿವಳಿಕೆ ಉಂಟಾಗುವುದಲ್ಲದೆ ಮುಂದೊಂದು ದಿನ ಅವರ ಸಹಕಾರಿ ಸಂಸ್ಥೆಗಳ ಮೂಲಕವೇ ಸಣ್ಣ ಮರುತಯಾರಿಕಾ ಘಟಕಗಳನ್ನು ಆರಂಭಿಸಿ ಅವು ಲಾಭದಾಯಕವಾಗಿ ಬೆಳೆದು ನಗರ ಘನ ತ್ಯಾಜ್ಯದಲ್ಲಿ ಜೈವಿಕವಾಗಿ ಕೊಳೆಯದ ಕಸದ ಹೊರೆಯನ್ನು ತಗ್ಗಿಸುತ್ತವೆ. ಕಚ್ಚಾವಸ್ತುಗಳ ಏರುತ್ತಿರುವ ಬೆಲೆ ಮತ್ತು ಪರಿಸರ ರಕ್ಷಣೆಯ ದೃಷ್ಟಿಯಿಂದ ಕಸದಿಂದ ಮರುತಯಾರಿಕೆ ಎನ್ನುವುದು ಬಹಳ ಮುಖ್ಯವಾಗಿದ್ದು ಅದನ್ನು ಎಲ್ಲಾ ಹಂತಗಳಲ್ಲಿ ಉತ್ತೇಜಿಸಬೇಕಿದೆ. ನಗರದಲ್ಲಿ ಕಸ ವಿಲೇವಾರಿಯ ಬೃಹತ್ ವೆಚ್ಚ ದಿನೇ ದಿನೇ ಏರುತ್ತಿರುವುದನ್ನು ಪರಿಗಣಿಸಿದಾಗ ರದ್ದಿ ಆಯುವವರು ನಗರಗಳಲ್ಲಿ ಮರುಬಳಸಬಲ್ಲ, ಪುನರುತ್ಪಾದಿಸುವ ಮತ್ತು ಕೈಗಾರಿಕೆಗಳಿಗೆ ಬೇಕಾದ ವಸ್ತುಗಳನ್ನು ಕಸದಿಂದ ಬೇರ್ಪಡಿಸಿ ಕೊಂಡೊಯ್ಯುತ್ತಿರುವುದರಿಂದ ನಗರ ಆರ್ಥಿಕತೆಗೆ ಬೇಕಾದ ಶ್ರಮವನ್ನು ಪೂರೈಸುತ್ತಿದ್ದಾರೆನ್ನಬಹುದು. ಈ ಸಂಗತಿಯ ಬೆಳಕಿನಲ್ಲಿ ನೋಡುವುದಾದರೆ ರದ್ದಿ ಆಯುವವರು ಒಂದು ಪ್ರಮುಖವಾದಂತಹ ಉದ್ಯೋಗ ಸಮೂಹವಾಗಿದ್ದು ಈ ಸಮೂಹಕ್ಕೆ ದಕ್ಕಬೇಕಾದ ಮನ್ನಣೆ ಮತ್ತು ಸಂಘಟನೆಯನ್ನು ನೀಡಬೇಕಿದೆ. ನಗರ ಘನತ್ಯಾಜ್ಯ ನಿರ್ವಹಣೆಯ ಕ್ರಿಯಾಯೋಜನೆಯ ಮುಖ್ಯ ಅಂಶಗಳಲ್ಲಿ ಎನ್‌ಜಿಒಗಳ ಸಹಭಾಗಿತ್ವದಲ್ಲಿ ರದ್ದಿ ಆಯುವವರ ಸಹಕಾರಿಗಳನ್ನು ಸ್ಥಾಪಿಸುವುದನ್ನು ಸಹ ಸೇರಿಸಿಕೊಳ್ಳಲಾಗುವುದು. 'ಭಾರತದ ವಿವಿಧ ನಗರಗಳಲ್ಲಿ ಘನತ್ಯಾಜ್ಯ ನಿರ್ವಹಣೆ ಕುರಿತ ವರದಿ' ಮತ್ತು 'ಎರಡನೇ ರಾಷ್ಟ್ರೀಯ ಕಾರ್ಮಿಕ ಆಯೋಗದ ವರದಿಗಳು' ಮೇಲೆ ತಿಳಿಸಿದ ಬಜಾಜ್ ಸಮಿತಿಯಲ್ಲಿನ ಅಂಶಗಳನ್ನೇ ಪುನರುಚ್ಚರಿಸಿವೆ. ಅದೇ ಬಗೆಯ ಶಿಫಾರಸುಗಳನ್ನು ಸಲ್ಲಿಸಿವೆ. ಟಿ.ಎಸ್.ಆರ್ ಸುಬ್ರಹ್ಮಣ್ಯನ್ ಅಧ್ಯಕ್ಷತೆಯಲ್ಲಿ ರಚಿತವಾಗಿದ್ದ ಅರಣ್ಯ ಮತ್ತು ಪರಿಸರಕ್ಕೆ ಸಂಬಂಧಿಸಿದ ಕಾನೂನುಗಳ ಕುರಿತ ಉನ್ನತಾಧಿಕಾರ ಸಮಿತಿಯು ತೀರಾ ಇತ್ತೀಚೆಗೆ ಅಂದರೆ ನವೆಂಬರ್ 2014ರಂದು ನೀಡಿರುವ ತನ್ನ




ವರದಿಯಲ್ಲಿ ಇದೇ ಬಗೆಯ ಶಿಫಾರಸುಗಳನ್ನು ನೀಡಿದೆ. ಈ ಸಮಿತಿಗಳ ಶಿಫಾರಸುಗಳಲ್ಲಿ ಭಾರತದ ಮರುತಯಾರಿಕಾ ಕೈಗಾರಿಕೆಯು ಮಾರುಕಟ್ಟೆಗೆ ಪೂರಕವಾದ ಲಕ್ಷಣಗಳನ್ನು ಹೊಂದಿರುವುದು ಮತ್ತು ಅದು ಸರ್ಕಾರದ ಬೆಂಬಲವಿಲ್ಲದೇ ಕೆಲಸ ಮಾಡಬಲ್ಲದು ಎಂಬ ಸಂಗತಿಯನ್ನು ಗುರುತಿಸಿರುವುನ್ನು ಗಮನಿಸಬಹುದು. ಲ್ಯಾಂಡ್‌ಫಿಲ್‌ಗಳಲ್ಲಿ ಮುಚ್ಚಿಹಾಕಿಬಿಡುವಂತಹ ನೂರಾರು ಸಾವಿರಾರು ಟನ್ನುಗಳಷ್ಟು ಸಂಗ್ರಹಿಸಿದ ವಸ್ತುಗಳು ಮರುತಯಾರಿಕಾ ಕೈಗಾರಿಕೆಗೆ ಈ ಮೂಲಕ ಮರುಪ್ರವೇಶಿಸುವುದರಿಂದಾಗಿ ಪ್ರಕೃತಿ ಸಂಪನ್ಮೂಲಗಳು, ಶಕ್ತಿ ಮತ್ತು ಹಣದ ಉಳಿತಾಯವಾಗುತ್ತಿದೆ. ಮರುತಯಾರಿಕೆಯ ಸರಪಣಿಯು ಕಸವನ್ನು ಕಸದ ತೊಟ್ಟಿಗಳಿಂದ ಉತ್ಪಾದನಾ ಬಳಕೆಗೆ ತಿರುಗಿಸಿ ಉದ್ಯೋಗವನ್ನು ಒದಗಿಸುತ್ತದೆ. ನಗರಗಳ ಶೇಕಡಾ 1–2ರಷ್ಟು ಕೆಲಸಗಾರರು ಈ ರದ್ದಿಯ ಸಂಗ್ರಹ, ವ್ಯಾಪಾರ ಮತ್ತು ವಸ್ತುಗಳನ್ನು ಪುನಃ ಉತ್ಪಾದನೆಯ ಪ್ರಕ್ರಿಯೆಗೊಳಪಡಿಸುವ ಧಾರೆಗೆ ಸಾಗಿಸುವ ಮಧ್ಯಂತರ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡಿದ್ದಾರೆಂದು ಅಂದಾಜಿಸಲಾಗಿದೆ.

### ಘನತ್ಯಾಜ್ಯ ನಿರ್ವಹಣೆ ಮತ್ತು ಮರುತಯಾರಿಕೆಯ ಸಮಾನಾಂತರ ದಾರಿಗಳು

ಒಮ್ಮೆ ಬಳಸಿದ ವಸ್ತುಗಳಿಂದ ಹೊಸವಸ್ತುಗಳ ಮರುತಯಾರಿಕೆ ಎನ್ನುವುದು ನಿಶ್ಚಿತವಾಗಿಯೂ ಲಾಭದಾಯಕವಾಗಿದ್ದಲ್ಲಿ ಮತ್ತು ಔಪಚಾರಿಕವಾದ ಕಸ ನಿರ್ವಹಣೆಯೊಂದಿಗೆ ಅನೌಪಚಾರಿಕ ಕಸ ನಿರ್ವಹಣೆಯನ್ನು ಸಮ್ಮಿಳಿತಗೊಳಿಸಬೇಕೆನ್ನುವುದನ್ನು ತಜ್ಞರೇ ತಿಳಿಸಿದ್ದಾಗ್ಯೂ ಈ ಶಿಫಾರಸುಗಳ ಜಾರಿ

ಮಾತ್ರ ಕಳೆದ ಎರಡು ದಶಕಗಳಿಂದಲೂ ಆಮೆಗತಿಯಲ್ಲಿ ಸಾಗುತ್ತಿರುವುದೇಕೆ ಎನ್ನುವ ಪ್ರಶ್ನೆ ಎದುರಾಗುತ್ತದೆ. ದೇಶದೆಲ್ಲೆಡೆಯ ನಗರಪಾಲಿಕೆ ಆಡಳಿತಾಧಿಕಾರಿಗಳಿಗೆ ನಗರ ಘನ ತ್ಯಾಜ್ಯ ನಿರ್ವಹಣೆಯ ಹೊಣೆಯನ್ನು ನಗರ ನೈರ್ಮಲ್ಯ ಮತ್ತು ಸಾರ್ವಜನಿಕ ಆರೋಗ್ಯ ಕಾರ್ಯಕ್ರಮದ ಭಾಗವಾಗಿ ವಹಿಸಲಾಗಿದೆ. ಕಸ ಅಥವಾ ತ್ಯಾಜ್ಯ ಎಂದರೆ ಅದಕ್ಕಿರುವ ಅರ್ಥವಿವರಣೆಯ ಪ್ರಕಾರ ಉಪಯೋಗಿಸಿ ಬಿಟ್ಟ ವಸ್ತುಗಳು, ಬೇಡದ ವಸ್ತುಗಳು, ಬಳಸುವ ಯೋಗ್ಯತೆ ಕಳೆದುಕೊಂಡು ಎಸೆಯಲ್ಪಟ್ಟ ವಸ್ತುಗಳು ಎಂದೆನಿಸಿಕೊಳ್ಳುತ್ತದೆ. ಹೀಗಾಗಿ ನಗರಪಾಲಿಕೆ ವ್ಯಾಪ್ತಿಯಲ್ಲಿ ಇರುವ ಆಚರಣೆಯೆಂದರೆ ಕಸವನ್ನು ಸಂಗ್ರಹಿಸುವುದು, ಸಾಗಿಸುವುದು ಮತ್ತು ರಾಶಿ ಒಟ್ಟುವುದುಹಾಗೂ ಇತ್ತೀಚೆಗೆ ಕಸವನ್ನು ಸುಟ್ಟುಬೂದಿ ಮಾಡುವುದು ಸಹ ಸೇರಿದೆ. ಏಕೆಂದರೆ ಬಹಳ ಸಲ ನಗರಪಾಲಿಕೆಗಳು ಈ ಕಸ/ರದ್ದಿಯಲ್ಲಿ ಏನೇನಿರುತ್ತದೆ ಏನೇನಿರುವುದಿಲ್ಲ ಎಂಬ ಬಗ್ಗೆ ತಲೆಕೆಡಿಸಿಕೊಂಡಿರುವುದೇ ಇಲ್ಲ. ಮೊದಲನೆಯದಾಗಿ ಕಸದ ನಿರ್ವಹಣೆಯೆಂದರೆ ಮೂಲಭೂತವಾಗಿ ಬೇರೆ ಬೇರೆ ಮೂಲಗಳಿಂದ ಸಂಗ್ರಹವಾದ ಕಸದಲ್ಲಿ ಸೇರಿರುವ ಬೇರೆ ಬೇರೆ ಜಾತಿಯ ವಸ್ತುಗಳನ್ನು ನೋಡಿ ಬೇರ್ಪಡಿಸಿ ಯಾವುದನ್ನು ಮರುಬಳಸಬಹುದು, ಯಾವುದನ್ನು ರಿಪೇರಿ ಮಾಡಬಹುದು ಮತ್ತು ಯಾವುದನ್ನು ಹೊಸವಸ್ತು ತಯಾರಿಕೆಗೆ ಕಳಿಸಬಹುದು ಎಂಬುದನ್ನು ಇವರು ಅರ್ಥಮಾಡಿಕೊಂಡಿರುವುದಿಲ್ಲ. ಇದೆಲ್ಲ ಆದಮೇಲೆ ಉಳಿಯುವ ಉಳಿಕೆಯನ್ನಷ್ಟೇ ಲ್ಯಾಂಡ್‌ಫಿಲ್‌ನಲ್ಲಿ ಹೂಳಬೇಕಿರುತ್ತದೆ ಎಂಬುದೂ ಇವರಿಗೆ ಅರ್ಥವಾಗಿರುವುದಿಲ್ಲ. ಎರಡನೆಯದಾಗಿ, ವ್ಯಾಪಾರಿಗಳಿಂದ ಬರುವ ಬುಲೆಟ್ ತಂತ್ರಜ್ಞಾನದ ಮೂಲಕ ನಿರ್ವಹಿಸುವಂತಹ ಇಂದ್ರಜಾಲಕ್ಕೆ ನಗರಪಾಲಿಕೆಗಳು ಮರುಳಾಗಿಬಿಡುತ್ತವೆ. ಮೂರನೆಯದಾಗಿ, ನಮ್ಮ ರಾಜಕಾರಣಿಗಳಿಗೆ ಕಸ ಹಾಕುವ ಮತದಾರರಿಗೆ ನೀವು ಕಸ ನಿರ್ವಹಣೆಗೆ ಹೆಚ್ಚುವರಿ ತೆರಿಗೆ ಕಟ್ಟಿ ಎಂದು ಹೇಳಲು ಮತ್ತು ಕಸವನ್ನು ಮನೆಬಳಿಯೇ ಬೇರ್ಪಡಿಸಿ ಎಂದು ಒತ್ತಾಯಪಡಿಸುವ ಕೆಲಸ ಬಹಳ ಕಸಿವಿಸಿ ಉಂಟುಮಾಡುತ್ತದೆ. ನಾಲ್ಕನೆಯದಾಗಿ ಕಸ ಹಾಕುವವರಿಗೆ ಅವರು ಹಾಕುವ ಕಸವು ಪಕ್ಕದ ಹಳ್ಳಿಗಳಲ್ಲಿ ರಾಶಿಯಾಗುವ ಬಗ್ಗೆಯಾಗಲೀ ಅವರ ಕಸ ರಸ್ತೆಯ ಮೇಲಿನಿಂದ ತೆಗೆದ ನಂತರ ಏನಾಗುತ್ತದೆ ಎಂಬುದಾಗಲೀ ಬೇಡವಾದ ಸಂಗತಿ. ಅವರಿಗದು ಕಾಳಜಿಯ ವಿಷಯವೇ ಅಲ್ಲ. ಕೊನೆಯದಾಗಿ, ನೀತಿ ನಿರೂಪಕರು ಮತ್ತು ಸಾಂಸ್ಥಿಕ ಹೂಡಿಕೆದಾರರು ಹೆಚ್ಚು ಬಂಡವಾಳ ಹೂಡುವ, ತಂತ್ರಜ್ಞಾನ ಕೇಂದ್ರಿತವಾದ ಮತ್ತು ವಿಕೇಂದ್ರೀಕೃತ ಪರಿಹಾರಕ್ಕಿಂತಲೂ ಕೇಂದ್ರೀಕೃತ ಪರಿಹಾರಗಳ ಬಗ್ಗೆಯೇ ಹೆಚ್ಚು ಒಲವು ತೋರುತ್ತಾರೆ. ಸೇವೆ ಒದಗಿಸುವ ಹೊಣೆಗಾರಿಕೆಗಳನ್ನು ನಗರಪಾಲಿಕೆಗಳಿಗೆ ಹಂಚಲ್ಪಟ್ಟಿದ್ದರೂ ಈಗಿರುವ ತೆರಿಗೆ ವ್ಯವಸ್ಥೆಯಲ್ಲಿ ಅವಕ್ಕೆ ಹೆಚ್ಚು ಆದಾಯ ಸಂದಾಯವಾಗದ ಕಾರಣದಿಂದಾಗಿ ಅನುದಾನಕ್ಕಾಗಿ ಸ್ಥಳೀಯ ಸಂಸ್ಥೆಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನೇ ಅವಲಂಬಿಸಬೇಕಾಗಿದೆ. ಇನ್ನು ಕಸ ನಿರ್ವಹಣೆಯ ಸಮಸ್ಯೆಯನ್ನು ಅನೌಪಚಾರಿಕ ಕೆಲಸಗಾರರ ದೃಷ್ಟಿಯಿಂದ ಅಂದರೆ ಪೂರೈಕೆ ಬದಿಯಿಂದ ನೋಡಿದಾಗ ನಮಗೆ ಅಲ್ಲಿ ಅಂತಹ ಕೆಲಸಗಾರರ ದಾಖಲಾತಿ ಅಥವಾ ಗುರುತಿಸುವ ಒಂದು ವ್ಯವಸ್ಥೆಯೇ ಇಲ್ಲದಿರುವುದು ಕಾಣುತ್ತದೆ. ರದ್ದಿ ಆಯುವ ಕೆಲಸ ಎಂದರೆ ಕೀಳೆಂದು ಪರಿಗಣಿಸಲ್ಪಟ್ಟಿರುವಂತದ್ದು. ಇದರಲ್ಲಿ ತೊಡಗಿರುವವರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಂಚಿನಲ್ಲಿರುವ ದಲಿತ, ಆದಿವಾಸಿ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಜನರು ಎಂಬಂತಾಗಿದೆ. ರದ್ದಿ ಆಯುವವರು ಮತ್ತು ಹಳೆ ಸಾಮಾನುಗಳನ್ನು ಕೊಂಡೊಯ್ಯುವವರು ಒಬ್ಬೊಂಟಿಯಾಗಿಯೋ ಇಲ್ಲವೇ ಕೆಲವೊಮ್ಮೆ ಕುಟುಂಬ ಸದಸ್ಯರೊಂದಿಗೆ ಈ ಕೆಲಸದಲ್ಲಿ ತೊಡಗಿಕೊಂಡಿದ್ದು ಕಾರ್ಮಿಕ ಸಂಘಟನೆಗಳು ಇಲ್ಲವೇ ಟ್ರೇಡ್ ಯೂನಿಯನ್‌ಗಳಿಂದ ಉಪೇಕ್ಷೆಗೊಳಗಾಗಿರುತ್ತಾರೆ. ತಯಾರಿಕೆಗೆ ಮರುಬಳಸಬಲ್ಲ ವಸ್ತುಗಳನ್ನು ಬೇರ್ಪಡಿಸುವ ಮತ್ತು ವಿಂಗಡಿಸುವ ಕೆಲಸವು ಮೌಲ್ಯವರ್ಧನೆ ಪ್ರಕ್ರಿಯೆಯ ಅವಿಭಾಜ್ಯ ಅಂಗವಾಗಿದ್ದು ಕುಶಲತೆಯನ್ನು ಬೇಡುವ ಕೆಲಸವಾಗಿರುತ್ತದೆ. ವಿಂಗಡಿಸದ ವಸ್ತುಗಳಿಗೆ ಮಾರುಕಟ್ಟೆಯಿರುವುದಿಲ್ಲ. ಆದರೆ ಅದಕ್ಕೆಂದೆ ಮೀಸಲಾದ ಜಾಗವಿಲ್ಲದ ಕಾರಣ ಅವರು ಸಾರ್ವಜನಿಕ ಜಾಗಗಳಲ್ಲಿ ಈ ಕೆಲಸವನ್ನು ನಿರ್ವಹಿಸುತ್ತಾರೆ. ಇದನ್ನು ನಗರ ಪಾಲಿಕೆಗಳು ಮತ್ತು ನಗರವಾಸಿಗಳು ಬಹಳ ಸಲ ಒಂದು ಸಮಸ್ಯೆ ಎಂದು ಪರಿಗಣಿಸುವುದುಂಟು. ಆದರೆ ವಾಸ್ತವದಲ್ಲಿ



ಅವರು ಸಮಸ್ಯೆಯ ಭಾಗವಾಗಿರದೇ ಪರಿಹಾರದ ಭಾಗವಾಗಿರುತ್ತಾರೆ. ನಗರಪಾಲಿಕೆ ಕೆಲಸಗಾರರು ಮತ್ತು ಪೊಲೀಸರು ಇವರಿಗೆ ತೊಂದರೆ ಕೊಡುವುದು ಸರ್ವೇಸಾಮಾನ್ಯವಾಗಿರುತ್ತದೆ. ಅನೌಪಚಾರಿಕ ಮರುತಯಾರಿಕೆ ಉದ್ದಿಮೆ ಕೆಲಸಗಾರರು ಹೆಚ್ಚಾಗಿ ಅವಲಂಬಿಸುವುದು ಗುಜರಿ ವ್ಯಾಪಾರಿಗಳನ್ನು. ಈ ಗುಜರಿ ವ್ಯಾಪಾರಿಗಳಿಗೆ ಅವರು ತಾವು ಸಂಗ್ರಹಿಸಿದ ರದ್ದಿ ವಸ್ತುಗಳನ್ನು ಮಾರಿ ತಮ್ಮನ್ನು ರಕ್ಷಿಸಿಕೊಳ್ಳುತ್ತಾರೆ ಮತ್ತು ಬೇಕಾದಾಗ ಅವರ ಸಹಾಯ ಪಡೆಯುತ್ತಾರೆ. ಕಸ ನಿರ್ವಹಣೆಯ ಔಪಚಾರಿಕ ಮತ್ತು ಅನೌಪಚಾರಿಕ ವ್ಯವಸ್ಥೆಗಳು ಒಂದಕ್ಕೊಂದು ಸಮಾಂತರವಾಗಿ ಕೆಲಸ ಮಾಡುತ್ತವೆ. ಅನೌಪಚಾರಿಕ ಕೆಲಸಗಾರರು ಮರುಬಳಸಬಲ್ಲ ವಸ್ತುಗಳನ್ನು ಆಯುವಂತಹ ಕಸದ ರಾಶಿಗಳೇ ಈ ಎರಡೂ ವ್ಯವಸ್ಥೆಗಳು ಬಂದು ಸೇರುವ ಬಿಂದುವಾಗಿರುತ್ತದೆ.

## ಕೆಲಸಗಾರರು ಮತ್ತು ಕೆಲಸದ ವ್ಯವಸ್ಥೆಗಳನ್ನು ಒಳಗೊಳ್ಳಲು ಇರುವ ಅವಕಾಶಗಳು.

ಮೂಲದಲ್ಲಿಯೇ ವಿಂಗಡಿಸಲಾದ ಕಸವನ್ನು ಕಸ ಹಾಕುವವರಿಂದ ಸಂಗ್ರಹಿಸುವುದು ಮತ್ತು ಅವನ್ನು ಸಾಗಿಸುವಾಗ ಬೇರೆ ಬೇರೆ ಬಗೆಯ ವಸ್ತುಗಳು ಬೆರಕೆಯಾಗದಂತೆ ನೋಡಿಕೊಳ್ಳುವುದು ಇಡೀ ಘನತ್ಯಾಜ್ಯ ನಿರ್ವಹಣೆ ಮತ್ತು ಮರುತಯಾರಿಕೆ ಸರಪಳಿ ವ್ಯವಸ್ಥೆಯಲ್ಲಿ ಅತ್ಯಂತ ಪ್ರಮುಖವಾದುದು. ಸಮರ್ಪಕವಾದ ಸಂಗ್ರಹ ಮತ್ತು ಸಾಗಣೆ ವ್ಯವಸ್ಥೆಗಳ ಮೂಲಕ ಮತ್ತು ಉತ್ತಮವಾಗಿ ವಿಂಗಡಿಸಲಾದ ವಸ್ತುಗಳನ್ನು

ಮರುತಯಾರಿಕೆ ಇಲ್ಲವೇ ಮರುಬಳಕೆಯ ಉದ್ದೇಶಗಳಿಗೆ ಬಳಸಲು ಹೆಚ್ಚಿನ ಆಯ್ಕೆಗಳಿರುತ್ತವೆ. ಅದೇ ವಿಂಗಡಿಸಲಾಗದ ತೋಟದ ಕಸದ ಮತ್ತು ಮನೆಕಸಗಳನ್ನು ಲ್ಯಾಂಡ್‌ಫಿಲ್‌ಗಳಲ್ಲಿ ತುಂಬಿಸುವುದು ಅನಿವಾರ್ಯವಾಗುತ್ತದೆ. ಕಸ ಸಂಗ್ರಹಣೆ ಮತ್ತು ಗುಡಿಸುವ ಕೆಲಸಗಳು ಹೆಚ್ಚಿನ ಶ್ರಮವನ್ನು ಬೇಡುವ ಕೆಲಸಗಳಾಗಿದ್ದು ನಗರಪಾಲಿಕೆಗಳ ಪರಿಪಾಲನಾ ಇಲಾಖೆಗಳಲ್ಲಿ ಕಾರ್ಮಿಕರ ನೇಮಕಾತಿ ಇಂತಹ ಕೆಲಸಗಳಿಗೆ ಹೆಚ್ಚಿರುತ್ತದೆ. ಹೀಗಾಗಿ ಸಂಗ್ರಹ ಮತ್ತು ಸಾಗಣೆಗಳು ಘನತ್ಯಾಜ್ಯ ಮೌಲ್ಯ ಸರಪಳಿಯಲ್ಲಿನ ಎರಡು ಅತ್ಯಂತ ವೆಚ್ಚದಾಯಕ ಕ್ಷೇತ್ರಗಳಾಗಿವೆ. ಈ ಎಲ್ಲ ಕಾರಣಗಳಿಂದಾಗಿ, ಸಂಗ್ರಹದ ಹಂತದಲ್ಲಿ ಅನೌಪಚಾರಿಕ ಕೆಲಸಗಾರರನ್ನು ಒಳಗೊಳ್ಳುವುದು ಹೆಚ್ಚು ಅನುಕೂಲತೆಗಳನ್ನೊದಗಿಸುತ್ತದೆ.

### ಪುಣೆ ನಗರಪಾಲಿಕೆಯಿಂದ ಅನೌಪಚಾರಿಕ ರದ್ದಿ ಆಯುವವರನ್ನು ಒಳಗೊಳ್ಳುವ ಪ್ರಕ್ರಿಯೆ

'ಸ್ವಚ್ಛ್' ಎಂಬುದು ಸ್ವಯಂ ಉದ್ಯೋಗಿ ರದ್ದಿ ಆಯುವವರ ಮತ್ತಿತರ ನಗರ ಬಡವರ ಸ್ವಾಯತ್ತ ಸಹಕಾರಿ ಸಂಸ್ಥೆಯಾಗಿದ್ದು 2007ರಲ್ಲಿ ಕಾಗದ್ ಕಾಚ್ ಪತ್ರ ಕಷ್ಟಕಾರಿ ಪಂಚಾಯ್ತಿ ಮತ್ತು ಪುಣೆ ನಗರಪಾಲಿಕೆಗಳ ಬೆಂಬಲದಿಂದ ಅಸ್ತಿತ್ವಕ್ಕೆ ಬಂದಿದೆ. ಈ ಸ್ವಚ್ಛ ಸಂಸ್ಥೆಯ 2300 ಸದಸ್ಯರು 4 ಲಕ್ಷ ಮನೆಗಳಿಂದ (28000 ಸ್ಲಂ ಮನೆಗಳೂ ಸೇರಿದಂತೆ) ಪ್ರತಿದಿನವೂ ಮನೆಮನೆ ಕಸ ಸಂಗ್ರಹಿಸಲು ಬಳಕೆದಾರರ ಶುಲ್ಕವನ್ನು ಸಂಗ್ರಹಿಸಿ ಸೇವೆ ಒದಗಿಸುತ್ತಾರೆ. ಕನಿಷ್ಠ ಪ್ರಮಾಣದ ಬಳಕೆದಾರರ ಶುಲ್ಕವನ್ನು ವಿಧಿಸಲಾಗಿದ್ದು ಅದನ್ನು ಸೇವೆಗೈಯುವವರು ಮತ್ತು ಸೇವೆ ಪಡೆಯುವವರ ಪರಸ್ಪರ ಒಪ್ಪಿಗೆಯ ಮೇರೆಗೆ ಕಾಲಕಾಲಕ್ಕೆ ನವೀಕರಿಸಲಾಗುತ್ತದೆ. ಕೆಲಸಗಾರರು ಮರುಬಳಸಬಲ್ಲ ವಸ್ತುಗಳನ್ನು ಮಾರಿಕೊಂಡು ಹಣ ಗಳಿಸುವ ಹಕ್ಕನ್ನೂ ಹೊಂದಿರುತ್ತಾರೆ. ಪ್ರತಿಯೊಬ್ಬ 'ಸ್ವಚ್ಛ್' ಸದಸ್ಯನೂ ತನ್ನ ಗಳಿಕೆಯ ಶೇಕಡಾ 5 ರಷ್ಟನ್ನು ತಮ್ಮ ಸಹಕಾರಿ ಸಂಸ್ಥೆಗೆ ದೇಣಿಗೆ ನೀಡುತ್ತಾನೆ. 2008ರಿಂದ 2013ರ ನಡುವೆ ಪುಣೆ ನಗರಪಾಲಿಕೆ ಮತ್ತು ಸ್ವಚ್ಛ್ ನಡುವೆ ಒಪ್ಪಂದವೇರ್ಪಟ್ಟಿತ್ತು. ಈ ಒಪ್ಪಂದದ(MOU) ಪ್ರಕಾರ ಪುಣೆ ನಗರಪಾಲಿಕೆಯು ಕಚೇರಿಗೆ ಸ್ಥಳಾವಕಾಶ, ಸಮವಸ್ತ್ರ, ರೈನ್‌ಕೋಟುಗಳು, ಬೂಟುಗಳು ಮತ್ತು ಸೇಫ್ಟಿಗೇರನ್ನು ಒದಗಿಸಿಬೇಕಿತ್ತಲ್ಲದೆ, ಕಸ ಸಂಗ್ರಹಿಸಲು ಸಲಕರಣೆಗಳು (ತಳ್ಳುಗಾಡಿ ಮತ್ತು ಬಕೆಟ್‌ಗಳು); ಕಸ ವಿಂಗಡಣೆಗೆ ರಿಸೈಕ್ಲಿಂಗ್ ಶೆಡ್‌ಗಳನ್ನು ಒದಗಿಸಬೇಕಿತ್ತು; ಸ್ಲಂಗಳಿಂದ ಸಂಗ್ರಹಿಸಲು ಸಬ್ಸಿಡಿ ಮತ್ತು ಮೇಲ್ವಿಚಾರಣೆ ವೆಚ್ಚ, ತರಬೇತಿ ಹಾಗೂ ಸ್ವಚ್ಛ ಸೇವೆ ಪಡೆಯಲು ನಾಗರಿಕರಿಗೆ ಜಾಗ್ರತೆ ಮೂಡಿಸಲು ಕೆಲಸವನ್ನು ನಡೆಸಬೇಕಿತ್ತು. ಒಪ್ಪಂದದ ಪ್ರಕಾರ 5 ವರ್ಷಗಳ ಅವಧಿಗೆ ಪುಣೆ ನಗರಪಾಲಿಕೆಯು ಸ್ವಚ್ಛ್ ಮೂಲಕ ಕಸ ನಿರ್ವಹಣೆಯ ವೆಚ್ಚವಾಗಿ ತಲಾ ಮನೆಗೆ ಮೊದಲು ಅದು ವ್ಯಯಿಸುತ್ತಿದ್ದ 98 ರೂಪಾಯಿಗೆ ಬದಲಾಗಿ 206 ರೂಪಾಯಿಗಳನ್ನು ವ್ಯಯಿಸಬೇಕಿತ್ತು. ಮೊದಲ 5 ವರ್ಷಗಳ ಅನುಭವದ ಮೇರೆಗೆ ಕೆಲವು ಶರತ್ತುಗಳ ಮಾರ್ಪಾಡಿನೊಂದಿಗೆ ಈ ಒಪ್ಪಂದವು ನವೀಕರಣಗೊಳ್ಳುವ ಹಂತದಲ್ಲಿದೆ.

### ಪಿಂಪ್ರಿ ಚಿಂಚವಾಡ ನಗರಪಾಲಿಕೆಯಿಂದ ಅನೌಪಚಾರಿಕ ರದ್ದಿ ಆಯುವವರನ್ನು ಒಳಗೊಳ್ಳುವ ಪ್ರಕ್ರಿಯೆ

2012ರ ನವೆಂಬರ್‌ನಿಂದ ಪಿಂಪ್ರಿ ಚಿಂಚವಾಡ ನಗರ ಪಾಲಿಕೆಯು (PCMC) ಪರೋಕ್ಷವಾಗಿ 300 ರದ್ದಿ ಆಯುವ ಕೆಲಸಗಾರರನ್ನು ಮನೆಮನೆ ಕಸ ಸಂಗ್ರಹಿಸುವ 3 ಗುತ್ತಿಗೆಗಳಡಿ ಕೆಲಸಕ್ಕೆ ನೇಮಿಸಿದೆ. ಸ್ವಯಂ ಉದ್ಯೋಗ/ನಿರುದ್ಯೋಗಿ ವ್ಯಕ್ತಿಗಳ ಸಹಕಾರಿಸಂಸ್ಥೆಯ ಅಡಿ ಕೆಲಸ ಪಡೆದಿರುವ ಪ್ರತಿಯೊಬ್ಬ ಗುತ್ತಿಗೆದಾರನು ಕಾಯ್ದೆ ಮತ್ತು ಕರಾರಿನಡಿ ಕೆಲಸಗಾರರಿಗೆ ಕನಿಷ್ಠ ವೇತನ ನೀಡಲು ಬಾಧ್ಯನಾಗಿರುತ್ತಾನೆ. PCMCಯು ಗುತ್ತಿಗೆದಾರರರ ಮೂಲಕ ಪ್ರತಿ ಗುತ್ತಿಗೆ ಕಾರ್ಮಿಕನಿಗೆ ನಿಶ್ಚಿತವಾದ ಮಾಸಿಕ ಶುಲ್ಕವನ್ನು "ಏಕಿ–ಅತ ಮಾನಾಕನಾ' (ಏಕೀಕೃತ ಗೌರವಧನ)ದ ಹೆಸರಿನಲ್ಲಿ ನೀಡುತ್ತದೆ. ಈ ಗೌರವಧನವು ತಲಾ ಕೆಲಸಗಾರನಿಗೆ ದಿನಕ್ಕೆ 200 ರೂಪಾಯಿ ಆಗಿರುತ್ತದೆ. ಇದರಲ್ಲಿ ಕೆಲಸಗಾರರ ವೇತನ, ಸಲಕರಣೆ, ಪಿಂಚಣಿ,ಸೇವಾ ತೆರಿಗೆ (ಅನ್ವಯವಾಗುವೆಡೆಯಲ್ಲಿ), ಕಚೇರಿ ವೆಚ್ಚಗಳು, ಆಸ್ತಿ ನಿರ್ವಹಣಾ ವೆಚ್ಚ ಮತ್ತು ಗುತ್ತಿಗೆದಾರರ ಲಾಭಾಂಶ ಎಲ್ಲವೂ ಸೇರಿರುತ್ತವೆ. ವಾಸ್ತವದಲ್ಲಿ ಗುತ್ತಿಗೆದಾರರು ಕೆಲಸಗಾರರಿಗೆ ಪಾವತಿಸುವುದು ದಿನಕ್ಕೆ 75ರಿಂದ 120 ರೂಪಾಯಿ ಮಾತ್ರ. ಒಟ್ಟು ಗೌರವಧನ ಈ ಕೆಲಸಗಾರರಿಗೆ (ಸ್ವಚ್ಛತಾ ಕಾರ್ಮಿಕರಿಗೆ) ಕನಿಷ್ಠ ವೇತನ ಕಾಯ್ದೆ, 1948 ಮತ್ತು ಮಹಾರಾಷ್ಟ್ರ ಕನಿಷ್ಠ ವೇತನ ನಿಯಮಗಳು, 1963ರಲ್ಲಿ ನಿಗದಿಪಡಿಸಲಾದ ಕನಿಷ್ಠವೇತನಕ್ಕಿಂತ ಕಡಿಮೆಯಿದೆ. ಇದಕ್ಕೆ ಬಳಸುವ 'ಗೌರವಧನ' ಅಥವಾ 'ಮಾನಧನ' ಎಂಬ ಪದವೇ ಒಂದು ವಿಪರ್ಯಾಸವಾಗಿದೆ. ಯಾಕೆಂದರೆ ಈ ಹಣವು ಕೆಲಸಗಾರರಿಗೆ ಯಾವ ಗೌರವವನ್ನೂ, ಸಂಪತ್ತನ್ನೂ ನೀಡುವುದಿಲ್ಲ.

ಕೆಲಸಗಾರರಿಗೆ ಎಂಟು ಗಂಟೆ ದುಡಿಮೆಯ ದಿನ, ವಾರದ ರಜಾದಿನಗಳು, ಸಂಬಳ ನೀಡಿದ ರಜೆ, ಬೋನಸ್, ಗ್ರಾಚುಟಿ, ಆರೋಗ್ಯ ಕಾಳಜಿ ಮತ್ತು ಪ್ರಾವಿಡೆಂಟ್ ಫಂಡ್ ಹಾಗೂ ತಾಯ್ತನಕ್ಕೆ ನೀಡುವ ಸೌಲಭ್ಯಗಳಂತಹ ಶಾಸನಬದ್ಧ ಸೌಲಭ್ಯಗಳನ್ನೂ ಇವರಿಗೆ ವಂಚಿಸಲಾಗಿದೆ. ಸೂಚಿತ ಕಾಯ್ದೆಬದ್ಧ ವೇತನದನ್ವಯ (ಕನಿಷ್ಠ ವೇತನ, ಪಿಎಫ್ ಮತ್ತು ಇಎಸ್‌ಐ ಕೊಡುಗೆ, ರಜೆ, ಬೋನಸ್ ಇತ್ಯಾದಿ ಸೇರಿ) ಕೆಲಸಗಾರರಿಂದಾಗಿ ಪಾವತಿಸಬೇಕಾಗಿದ್ದ

**ಒಪ್ಪಂದದ ಐದು ವರ್ಷಗಳಲ್ಲಿ ಸಲಕರಣೆ, ಸೇಫ್ಟಿ ಗೇರ್ ಮತ್ತು ಕಲ್ಯಾಣ ಕಾರ್ಯಗಳ ಬಾಬತ್ತುಗಳ ಕೊರತೆಯಿಂದ ರದ್ದಿ ಆಯುವ ಕೆಲಸಗಾರರಿಗೆ ಆದ ಸಾಮೂಹಿಕ ನಷ್ಟವನ್ನು ತೋರಿಸುವ ಪಟ್ಟಿ.**

- ಕಲ್ಯಾಣ ಕಾರ್ಯಕ್ರಮಗಳ ಬಾಬತ್ತನ್ನು ಸಂದಾಯ ಮಾಡದಿರುವುದರಿಂದಾಗಿ ಆಗಿರುವ ನಷ್ಟ 80 ಲಕ್ಷ 50 ಸಾವಿರ ರೂಪಾಯಿ
- ಸ್ಲಂ ಸಬ್ಸಿಡಿ ಸಂದಾಯ ಮಾಡದಿರುವುದರಿಂದಾಗಿ ರದ್ದಿ ಆಯುವವರಿಗೆ ಆಗಿರುವ ನಷ್ಟ 50 ಲಕ್ಷ 16 ಸಾವಿರ ರೂಪಾಯಿ.
- ಸ್ವಚ್ಛ್‌ಗೆ ಸಲಕರಣೆ ನೀಡದಿರುವ ನಿವ್ವಳ ಬಾಬತ್ತು 4.47 ಕೋಟಿ ರೂಪಾಯಿ.
- ಸಂಗ್ರಹ ಸಲಕರಣೆಯನ್ನು ಬದಲಿಸದ ಕಾರಣದಿಂದಾಗಿ ಹೆಚ್ಚಿದ ನಿರ್ವಹಣಾ ವೆಚ್ಚದ ಬಾಬತ್ತು 1 ಕೋಟಿ 38 ಲಕ್ಷ ರೂಪಾಯಿ.
- ಒಪ್ಪಂದದ ಒಟ್ಟು ಅವಧಿಯಲ್ಲಿ ಸ್ವಚ್ ಕೆಲಸಗಾರರಿಗೆ ಆಗಿರುವ ಒಟ್ಟು ನಷ್ಟ = 2 ಕೋಟಿ 68 ಲಕ್ಷ 66 ಸಾವಿರ ರೂಪಾಯಿ



ಒಟ್ಟು ವಾರ್ಷಿಕ ಬಾಬತ್ತು 2014ರಲ್ಲಿ 2.3 ಕೋಟಿ ರೂಪಾಯಿಗಳಾಗಿತ್ತು. ಇಲ್ಲಿ ನಗರಪಾಲಿಕೆ ಸಂಸ್ಥೆ ನೇರವಾಗಿ ತಪ್ಪೆಸಗಿದೆ. ಯಾಕೆಂದರೆ ಅದು ಸಲ್ಲಿಸಿದ್ದ ಟೆಂಡರ್ ಪ್ರಸ್ತಾಪದ ಮೊತ್ತದಿಂದ ಕೆಲಸಗಾರರಿಗೆ ಕನಿಷ್ಠ ವೇತನವನ್ನೂ ನೀಡಲಾಗುವುದಿಲ್ಲ. ಇದರೊಂದಿಗೆ, ನಗರಪಾಲಿಕೆಯು ಬೇರೊಂದು ಕಂಪನಿಯೊಂದರೊಂದಿಗೆ ಕಸ ಸಂಗ್ರಹಿಸಿ ನಿರ್ವಹಿಸುವ ಮತ್ತೊಂದು ಒಪ್ಪಂದ ಮಾಡಿಕೊಂಡಿದೆ. ಗುತ್ತಿಗೆಯಲ್ಲಿ ನೇಮಿಸಿಕೊಂಡಿರುವ ಕಸ ಸಂಗ್ರಹಿಸುವ ಕೆಲಸಗಾರರಿಗೆ ಕನಿಷ್ಠ ವೇತನ ನೀಡದಿರುವುದು ಪಿಂಪ್ರಿ ಚಿಂಚವಾಡದಲ್ಲಿ ಮಾತ್ರ ಕಂಡುಬರುವ ವಿಶಿಷ್ಟ ಆಚರಣೆಯೇನಲ್ಲ. ಸಂವಿಧಾನದ 12ನೆಯ ವಿಧಿಯ ಪ್ರಕಾರ ಸ್ವಯಂ ಒಂದು 'ರಾಜ್ಯ'/'ಪ್ರಭುತ್ವ' ವಾಗಿರುವ ನಗರಪಾಲಿಕೆಯು ತನ್ನ ಕೆಲಸಗಾರರ ಕಲ್ಯಾಣವನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ಒಂದು ಮಾದರಿ ಸಂಸ್ಥೆಯಾಗಿ ಕೆಲಸ ಮಾಡಬೇಕಿತ್ತು. ಆದರೆ ಅದು ಕೆಲಸಗಾರರಿಂದ ಕೆಲಸ ಮಾಡಿಸಿಕೊಳ್ಳುತ್ತಿರುವ ರೀತಿಯನ್ನು 'ಬಲವಂತದ ದುಡಿಮೆ' ಎಂದು ಕರೆಯಬಹುದಾಗಿದೆ. (ಸಂಜಿತ್ ರಾಯ್ ವಿರುದ್ಧ ರಾಜಾಸ್ತಾನ ರಾಜ್ಯದ ಕೇಸಿನಲ್ಲಿ ಸುಪ್ರೀಂ ಕೋರ್ಟಿನ ಪ್ರಮುಖ ತೀರ್ಪಿನಿಂದ (1983 (SCC 1 525) ಬಲವಂತದ ದುಡಿಮೆ ಎಂಬ ಪದವನ್ನು ಪಡೆಯಲಾಗಿದೆ). ಗೌರವಾನ್ವಿತ ನ್ಯಾಯಾಲಯವು, "ಒಬ್ಬ ವ್ಯಕ್ತಿಯು ಮತ್ತೊಬ್ಬನಿಗೆ ಕನಿಷ್ಠ ವೇತನಕ್ಕಿಂತಲೂ ಕಡಿಮೆ ಗೌರವಧನ ಪಡೆದು ದುಡಿಮೆ ಅಥವಾ ಸೇವೆಯನ್ನು ಒದಗಿಸಿದರೆ ಆ ವ್ಯಕ್ತಿಯು ಕಾನೂನಿನ ಪ್ರಕಾರ ಪಡೆಯಬೇಕಾದ ಹಣಕ್ಕಿಂತ ಕಡಿಮೆ ಹಣದಲ್ಲಿ ಕೆಲಸ ಮಾಡುವ ಬಲವಂತದಲ್ಲಿ ಕೆಲಸ ಮಾಡುವ ಅನಿವಾರ್ಯತೆಯಲ್ಲಿದ್ದಾನೆ ಎಂದರ್ಥ. ಅಂತಹ ವ್ಯಕ್ತಿಯು ಸಂವಿಧಾನದ 23ನೇ ಅನುಚ್ಛೇದದ ಪ್ರಕಾರ ತನ್ನ ಮೂಲಭೂತ ಹಕ್ಕಿನ ಜಾರಿಗಾಗಿ ನ್ಯಾಯಾಲದ ಮೊರೆ ಹೋಗಿ ನ್ಯಾಯಾಲಯವು ಕನಿಷ್ಠ ವೇತನ ನೀಡಲು ಆದೇಶ ನೀಡುವಂತೆ ಕೇಳಿಕೊಳ್ಳಲು ಅರ್ಹನಾಗಿರುತ್ತಾನೆ. ಈ ಮೂಲಕ ಅವನನ್ನು ಬಲವಂತದ ದುಡಿಮೆಯಿಂದ ತಪ್ಪಿಸಿ 23ನೇ ಅನುಚ್ಛೇದದ ಪರಿಪಾಲನೆಯಾಗದಿರುವುದನ್ನು ತಪ್ಪಿಸಬಹುದಾಗಿದೆ. (ಪೀಪಲ್ಸ್ ಯೂನಿಯನ್ ಫಾರ್ ಡೆಮಾಕ್ರಟಿಕ್ ರೈಟ್ಸ್ ವಿರುದ್ಧ ಭಾರತ ಸರ್ಕಾರ (1982 AIR 1473)].

### ಉಪಸಂಹಾರ

ಪುಣೆಯ ಸ್ವಚ್ಛ್‌ನಲ್ಲಿ ಕೆಲಸ ಮಾಡುವ ಕಸ ಸಂಗ್ರಹಿಸುವಾಕೆ ಸ್ವತಂತ್ರವಾಗಿ ಸೇವೆ ಒದಗಿಸುವವಳಾಗಿದ್ದಾಳೆ. ಆಕೆಗೆ ತನ್ನ ಸ್ವಂತ ದುಡಿಮೆಯ ಮೇಲೆ ಮತ್ತು ಯಾಂತ್ರೀಕೃತ ಅಥವಾ ಯಾಂತ್ರೀಕೃತವಲ್ಲದ ಸಂಗ್ರಹದ ಮೇಲೆ ಹೆಚ್ಚಿನ ನಿಯಂತ್ರಣ ಹಾಗೂ ಆಯ್ಕೆಗಳಿವೆ. ಮಾರುಕಟ್ಟೆಯ ಸ್ಥಿತಿಗತಿಗಳನ್ನು ನೋಡಿಕೊಂಡು ಬಳಕೆದಾರರ ಶುಲ್ಕವನ್ನು ಹೆಚ್ಚಿಸುವ 'ಸ್ವಾತಂತ್ರ್ಯ'ವೂ ಆಕೆಗಿದೆ. ಹಾಗೆಯೇ ಕೆಲಸ ಸ್ಥಿತಿಗಳನ್ನು ಸಹ (ವಾರದ ರಜೆ, ವಾರ್ಷಿಕ ದೀಪಾವಳಿ ಬೋನಸ್ ಇತ್ಯಾದಿ) ಉತ್ತಮ ಪಡಿಸಿಕೊಳ್ಳುವ ಆಯ್ಕೆ ಆಕೆಗಿದೆ. ಮತ್ತು ಒಪ್ಪಂದದಲ್ಲೇ ನಿರ್ಧರಿಸಲಾಗಿರುವಂತೆ ಮರು ಬಳಸಬಹುದಾದ ವಸ್ತುಗಳ ಮೇಲೆಯೂ ಆಕೆಗೆ ನಿಯಂತ್ರಣವಿದೆ. ಪಿಂಪ್ರಿ ಚಿಂಚವಾಡದ ಕಸ ಆಯುವವರಿಗೆ ಹೆಸರಿಗೆ ಕನಿಷ್ಠ ವೇತನ ಕೊಟ್ಟರೂ ಸಹ ಸಂಬಳ ನೀಡಿದ ವಾರದ ರಜೆ, ರಜೆ ಇಲ್ಲವೇ ದೀಪಾವಳಿ ಬೋನಸ್ ಇದಾವುದೂ ಇರುವುದಿಲ್ಲ. ಇಲ್ಲಿ ಕೆಲಸ ಮಾಡುವಾಕೆಗೆ ಆಕೆ ಯಾಂತ್ರೀಕೃತ ಕಸ ಸಂಗ್ರಹ ವ್ಯವಸ್ಥೆಯಲ್ಲಿರುವುದರಿಂದ ಹೆಚ್ಚಿನ ಮರುಬಳಸಬಲ್ಲ ವಸ್ತುಗಳು ಸಿಗುತ್ತವೆಯಾದರೂ ಅದು ನಿರಂತರವಾಗಿ ಆತಂಕದಲ್ಲಿರುತ್ತದೆ. ಆಕೆಯ ಕುಂದುಕೊರತೆ ನಿವಾರಿಸುವ ವ್ಯವಸ್ಥೆಯೂ ಇಲ್ಲಿರುವುದಿಲ್ಲ.

ಮೇಲಿನ ಎರಡೂ ಮಾದರಿಗಳಲ್ಲಿ ಕಡಿಮೆ ಮತ್ತು ಹೆಚ್ಚು ಸಮಾನ ಅಂಶವೆಂದರೆ ಸರ್ಕಾರದ ಸಂಪೂರ್ಣ ವಿಫಲತೆ. ಇಲ್ಲಿ ನಗರದ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡುವ ತನ್ನ ಅತ್ಯಂತ ದುರ್ಬಲವಾದ ಕೆಲಸಗಾರರ ಹಕ್ಕುಗಳನ್ನು ಕಾಪಾಡುವಲ್ಲಿ ಸರ್ಕಾರ ಸಂಪೂರ್ಣವಾಗಿ ಸೋತಿದೆ. ಅದರಲ್ಲೂ PCMC ತನ್ನ ಪಾತ್ರವನ್ನು ಕಡೆಗಣಿಸಿ ಕೆಲಸಗಾರರು ತಾವೇ ತಮ್ಮ ಸಾಮರ್ಥ್ಯಕ್ಕನುಗುಣವಾಗಿ ಗುತ್ತಿಗೆದಾರರಿಂದ ಎಷ್ಟು ಸಾಧ್ಯವೋ ಅಷ್ಟು ಅನುಕೂಲತೆ ಪಡೆಯಲು ಎಂದು ಬಿಟ್ಟುಬಿಟ್ಟಿದೆ. ಹೋಲಿಕೆಯಲ್ಲಿ, ಪುಣೆ ನಗರಪಾಲಿಕೆ ತನ್ನ ಕೆಲಸಗಾರರ ಬಗೆಗೆ ಹೆಚ್ಚು ಕಾಳಜಿ ತೋರಿದೆ. PMC ಮತ್ತು PCMC ಎರಡು ಮಾದರಿಗಳು ಕೇವಲ ನಮ್ಮ ಕಣ್ಣ ಮುಂದಿರುವ ಉದಾಹರಣೆಗಳಷ್ಟೆ. ಇಡೀ ದೇಶದ ತುಂಬೆಲ್ಲ ಅನೌಪಚಾರಿಕ ರದ್ದಿ ಆಯುವ ಕೆಲಸಗಾರರು ಕೆಲಸ ಮಾಡಲಾಗದಂತಹ ಸ್ಥಿತಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ರದ್ದಿ ಆಯುವವರಿಗೆ ಕನಿಷ್ಠ ವೇತನ ಒದಗಿಸುವುದನ್ನು, ಕಾರ್ಮಿಕ ಕಾನೂನುಗಳು ಅವರಿಗೆ ಅನ್ವಯಿಸುವುದನ್ನು ಮತ್ತು ಅವರ ಆರೋಗ್ಯ ಹಾಗೂ ಸುರಕ್ಷತೆಗಳನ್ನು ಖಾತ್ರಿಗೊಳ್ಳುವಂತೆ ನೋಡುವುದು ಸರ್ಕಾರದ ಒಳಗೆ ಮತ್ತು ಹೊರಗೆ ಸ್ವಚ್ಛತಾ ಅಭಿಯಾನದಲ್ಲಿ ತೊಡಗಿಕೊಂಡವರ ಪ್ರಮುಖ ಹೊಣೆಯಾಗಿದೆ. ಕೆಲಸಗಾರರಿಗೆ ಗೌರವ, ಬಾಳ್ಗೊಡುವ ವೇತನ ಮತ್ತು ಆದಾಯ, ಸಾಮಾಜಿಕ ಭದ್ರತೆ ಮತ್ತು ಸಂಘಟನೆಗಳ ಹಕ್ಕುಗಳನ್ನು ಖಾತ್ರಿಪಡಿಸಿ ಉತ್ತಮ ಮಾದರಿಯನ್ನು ರೂಪಿಸುವ ಹೊಣೆ ಸರ್ಕಾರದ ಮೇಲಿದೆ. ❑

**ಸ್ವಚ್ಛ್ ಮುಖಾಂತರ ಪುಣೆ ನಗರ ಪಾಲಿಕೆಗೆ ಆಗಿರುವ ಉಳಿತಾಯವನ್ನು ತೋರಿಸುವ ಪಟ್ಟಿ**

- **ಪ್ರತಿವರ್ಷ ಪುಣೆ ನಗರ ಪಾಲಿಕೆಯು ಕಸ ಸಾಗಣೆ ವೆಚ್ಚದ 7 ಕೋಟಿ ರೂಪಾಯಿಗಳನ್ನು ಉಳಿಸುತ್ತಿದೆ. (ಮರುಬಳಕೆಗೆ ಮಾರ್ಪಡಿಸಲಾದ 90 MTPD x 365 ದಿನಗಳು x ಪ್ರತಿ ಟನ್‌ಗೆ 2200 ರೂಪಾಯಿ)**
- **ಮನೆಮನೆ ಕಸ ಸಂಗ್ರಹಕ್ಕೆ ನೀಡುವ ಗುತ್ತಿಗೆಯ 30 ಕೋಟಿ ರೂಪಾಯಿಗಳ ಉಳಿತಾಯ (10,000ರೂ ಕನಿಷ್ಠ ವೇತನ x 2300 ಕೆಲಸಗಾರರು x 12 ತಿಂಗಳುಗಳು = 27 ಕೋಟಿ ರೂಪಾಯಿ + ಕನಿಷ್ಠ ಶೇಕಡಾ 10ರಷ್ಟು ಸೇವೆ ಒದಗಿಸುವವರ ಆಸ್ತಿ ನಿರ್ವಹಣಾ ವೆಚ್ಚ.**
- **ಕಸ ನಿರ್ವಹಿಸುವವರಿಗೆ ನೀಡುವ ಟಿಪ್ಪಿಂಗ್ ಶುಲ್ಕ 1 ಕೋಟಿ ರೂಪಾಯಿ ಉಳಿತಾಯ.**
- **ಸ್ವಚ್ಛ ಮೂಲಕ ಪುಣೆ ನಗರ ಪಾಲಿಕೆಗೆ ಆಗಿರುವ ವಾರ್ಷಿಕ ಉಳಿತಾಯ 38 ಕೋಟಿ ರೂಪಾಯಿ**

ವಿಶೇಷ ಲೇಖನ

# ಆದಾಯ ಅಸಮಾನತೆಗಳು

**ತುಳಸಿ ಜಯಕುಮಾರ್**

**ಕನ್ನಡಕ್ಕೆ : ರಘುನಾಥ ಎನ್.ಎಸ್.**



ನಗದು ವರ್ಗಾವಣೆಯನ್ನು, ವಿಶೇಷವಾಗಿ ಗ್ರಾಮೀಣ ಕೂಲಿಕಾರರನ್ನು ಗುರಿ ಮಾಡಿಕೊಂಡು ಮಾಡಿದಲ್ಲಿ ಭಾರತದಲ್ಲಿನ ಆದಾಯ ಮೂಲದಲ್ಲಿನ ಅಸಮಾನತೆಗಳನ್ನು ತಗ್ಗಿಸಲು ಸಹಾಯವಾಗಬಹುದೇನೋ.

"ಯಾವುದೇ ನಗರವು, ಅದು ಎಷ್ಟಾದರೂ ಚಿಕ್ಕದಾಗಿರಲಿ, ವಾಸ್ತವವಾಗಿ ಎರಡಾಗಿ ವಿಂಗಡಣೆಗೊಳ್ಳುತ್ತದೆ; ಒಂದು ಬಡವರದು, ಮತ್ತೊಂದು ಶ್ರೀಮಂತರದು; ಇವೆರಡೂ ಪರಸ್ಪರ ಸಂಘರ್ಷಣೆದಲ್ಲಿ ತೊಡಗಿರುತ್ತದೆ". **ಪ್ಲೇಟೊ, ಗ್ರೀಕ್ ತತ್ವಜ್ಞಾನಿ (ಕ್ರಿ. ಪೂ. 427-347)**.

ಆದಾಯ ಹಂಚಿಕೆ (ಅದರ ಅಸಮಾನತೆಗಳು) ಮತ್ತು ಅದರ ತೊಡಕುಗಳ ಬಗೆಗಿನ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಬೌದ್ಧಿಕ ಸಂವಾದವು ಕಳೆದ ಶತಮಾನದಲ್ಲಿ 'ನಾಟಕೀಯ ಪರಿವರ್ತನೆ'ಗಳಿಗೆ ಒಳಗಾಗಿದೆ (ಗ್ಯಾಲರ್, 2011). ಅಸಮಾನತೆಯು ಬೆಳವಣಿಗೆಯ ಮೇಲೆ ಲಾಭದಾಯಕ ಪರಿಣಾಮವನ್ನುಂಟು ಮಾಡುತ್ತದೆ ಎಂಬ ಅಭಿಜಾತ ದೃಷ್ಟಿಕೋನದಿಂದ, ಮಧ್ಯಕಾಲೀನ ಯುಗದಲ್ಲಿನ ಆದಾಯ ಹಂಚಿಕೆಯು ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಮಿತಿಯ ಪಾತ್ರವಹಿಸುತ್ತದೆ ಎಂಬ ಅಭಿಪ್ರಾಯದಿಂದ ನವೀನ ಯುಗದಲ್ಲಿನ ಅಭಿಪ್ರಾಯದಂತೆ ಪ್ರತಿಕೂಲ ಪರಿಣಾಮದ ಒಳ ಸಾಧ್ಯತೆಗಳ ಬಗ್ಗೆ ಒತ್ತು ನೀಡಿರುವುದರ ಮೂಲಕ ದೃಷ್ಟಾಂತ ತಿರುವುಗಳನ್ನು ಕಾಣಬಹುದಾಗಿದೆ. ಇಷ್ಟಾಗಿ, ಪಿಕೆಟ್ಟಿಯವರ 'ಇಪ್ಪತ್ತೊಂದನೇ ಶತಮಾನದಲ್ಲಿ ಬಂಡವಾಳ' (ಪಿಕೆಟ್ಟಿ 2014) ಎಂಬ ಗ್ರಂಥದ ಪ್ರಕಟಣೆ ಹಾಗೂ ಅದು 'ಆದಾಯ ಹಂಚಿಕೆಯ ಕಾರ್ಯಾಚರಣೆ'ಯನ್ನು ಕುರಿತಂತೆ ಒತ್ತು ನೀಡಿರುವುದು, ಇಂಥ ಸಂವಾದಗಳನ್ನು ಅಭಿಜಾತ ಅರ್ಥಶಾಸ್ತ್ರಜ್ಞರ ದಿನದಿಂದಲೂ ಸಂಪೂರ್ಣ ಸ್ವರೂಪಕ್ಕೆ ತಂದಿದೆ ಎನ್ನಬಹುದಾಗಿದೆ. ಎರಡನೇ ವಿಶ್ವ ಸಮರದ ಕಾಲಾವಧಿಯಲ್ಲಿ ಅಸಮಾನತೆಯ ಕಲ್ಪನೆಯು ವೈಯಕ್ತಿಕ ಅಥವಾ ಗೃಹಕೃತ್ಯವನ್ನೊಳಗೊಂಡಂತೆ ಆದಾಯ ಹಂಚಿಕೆ ಅಂತರ್ಗತವಾಗಿದ್ದು, ಅಭಿಜಾತ ಅರ್ಥಶಾಸ್ತ್ರಜ್ಞರಲ್ಲಿ ಹೆಚ್ಚಾಗಿ ಅದು – ಕಾರ್ಯಾಚರಣೆಯ ಆದಾಯ ಹಂಚಿಕೆಯನ್ನೇ ವಸ್ತುತಃ ಕಾಳಜಿಯನ್ನಾಗಿರಿಸಿಕೊಂಡಿದೆ. ಈ ರೀತಿಯಲ್ಲಿ ವ್ಯಕ್ತಿಗತವಾದದ್ದರಿಂದ ನಿರ್ದಿಷ್ಟ ಕಾರ್ಯಾಚರಣೆಯ ಆದಾಯ ಹಂಚಿಕೆ (ಇದು ಪರಿಣಮಿಸಿದ ಅಸಮಾನತೆಗಳು) ವರೆಗಿನ ದೃಷ್ಟಿಕೋನ ದಲ್ಲಾದ ಬದಲಾವಣೆಯು ಭಾರತದಲ್ಲಿ ಬೆಳವಣಿಗೆ ಹಾಗೂ ಅಭಿವೃದ್ಧಿಯ ಸಂವಾದದ ಮೇಲೆ ಯಾವ ರೀತಿ ಪರಿಣಮಿಸುತ್ತದೆ? ಭಾರತದಲ್ಲಿ ಅಸಮಾನತೆಯನ್ನು ಯಾವ ರೀತಿಯಲ್ಲಿ ಅಳೆಯಲಾಗುತ್ತದೆ ಮತ್ತು ಕಾರ್ಯಾಚರಣೆಯ ಅಸಮಾನತೆಗೆ ಸಂಬಂಧಿಸಿದ ಚಾಲನೆಗಳೇನು? ಅಂತಿಮವಾಗಿ ಅಂತಹ ಬದಲಾದ ದೃಷ್ಟಿಕೋನಕ್ಕಿರಬಹುದಾದ ಕಾಯಿದೆಯ ತೊಡಕುಗಳಾವುವು? ಆ ಸಮಸ್ಯೆಗಳ ಬಗ್ಗೆ ಈ ಲೇಖನ ಗಮನಹರಿಸಿದೆ.

### ಕಾರ್ಯಾಚರಣೆಯ ಆದಾಯ ಹಂಚಿಕೆ ಹಾಗೂ ಅಸಮಾನತೆಯ ಸಂವಾದಕ್ಕೆ ಅದು ನೀಡುವ ಪ್ರಸ್ತುತತೆ

ಆದಾಯ ಅಸಮಾನತೆಯನ್ನು ಎರಡು ಆಯಾಮಗಳೊಂದಿಗೆ ವಿಶ್ಲೇಷಿಸಬಹುದಾಗಿದೆ. ಗೃಹಕೃತ್ಯದ ಆದಾಯ ಹಂಚಿಕೆ ಹಾಗೂ ಕಾರ್ಯಾಚರಣೆಯ ಆದಾಯ ಹಂಚಿಕೆ (ಬಾಕ್ಸ್ 1).

ಪ್ರಾಧ್ಯಾಪಕರು, ಎಸ್ ಪಿ ಜೈನ್ ಇನ್‌ಸ್ಟಿಟ್ಯೂಟ್, ಮುಂಬೈ. e-mail : tulsi.jayakumar@spjimr.org

ಮೊದಲನೆಯ ಅಧ್ಯಯನವು ಆರ್ಥಿಕತೆಯೊಳಗೆ ಇರುವ ಗೃಹಕೃತ್ಯಕ್ಕೆ ಸಂಬಂಧಿಸಿದ ಆದಾಯ ಹಂಚಿಕೆಗೆ ಸಂಬಂಧಿಸಿದ್ದಾಗಿದ್ದು, ಎರಡನೆಯದು ಭೂಮಿ, ಶ್ರಮ ಹಾಗೂ ಬಂಡವಾಳಗಳಂತಹ ವಿಭಿನ್ನ ಘಟಕಗಳನ್ನೊಳಗೊಂಡದ್ದರ ಮಧ್ಯ ಕಾಣಬರುವ ಆದಾಯ ಹಂಚಿಕೆಗೆ ಸಂಬಂಧಿಸಿದ್ದಾಗಿದೆ.

ಆದಾಯ ಅಸಮಾನತೆಯನ್ನು ಅಳೆಯುವಲ್ಲಿ ಸಾಮಾನ್ಯವಾಗಿ ಬಳಸಲ್ಪಡುವ ಗಿನಿ ಸಹಕತೃರ್ತ್ವವು ವ್ಯಕ್ತಿಗತ (ಗೃಹಕೃತ್ಯ) ಅಸಮಾನತೆಯನ್ನು ಗ್ರಹಿಸುವುದ್ದಾಗಿದ್ದು, ಅದು ಸಾಮಾನ್ಯವಾಗಿ ಅಧೀನ ಆದಾಯ ಹಂಚಿಕೆ (ತೆರಿಗೆಯ ನಂತರದ್ದು ಹಾಗೂ ವರ್ಗಾವಣೆಯ ವೆಚ್ಚಗಳು) ಯನ್ನು ಆಧರಿಸಿರುತ್ತದೆ. ಇಷ್ಟಾದರೂ, ಗೃಹಕೃತ್ಯದ ಆದಾಯಗಳಂತಹ ಮಿತಿಯುಳ್ಳ ದೃಷ್ಟಿಕೋನಗಳಿಂದಲೂ ಸ್ಪಷ್ಟವಾಗುವುದು. ಭಾರತದಂತಹ ಅಭಿವೃದ್ಧಿಶೀಲ ದೇಶಗಳಿಗೆ ಹೆಚ್ಚು ಪ್ರಸ್ತುತವಾಗುವುದು ಅಂತಹ ಅಧೀನ ಆದಾಯ ಹಂಚಿಕೆಗಳೇ ಆಗಿವೆ. ಅಷ್ಟೇ ಮುಖ್ಯವಾಗಿ ವ್ಯಕ್ತಿಗತ ಅಸಮಾನತೆಗಳ ಅಳತೆಗೋಲುಗಳು, ಉತ್ಪಾದನಾ ಪ್ರಕ್ರಿಯೆಯಲ್ಲಿ ಉಂಟಾಗುವ ಅಂತಹ ಆದಾಯಗಳ ರೀತಿ ನೀತಿಗಳನ್ನು ಹಿಡಿಯುವಲ್ಲಿ ಹಾಗೂ ಕಾರ್ಯಚರಣೆಯ ಅಸಮಾನತೆಯಲ್ಲಿ ಪರಿಣಾಮಗೊಳ್ಳುವಲ್ಲಿ ವಿಫಲವಾಗುತ್ತದೆ. ಡಾಡಿಯಾ ಹಾಗೂ ಗಾರ್ಸಿಯಾ ಪೆನಲೋಸಾ (2007) ಅವರು ಉದಾಹರಿಸಿ, ಸಾಧಿಸಿ ತೋರಿರುವಂತೆ ವ್ಯಕ್ತಿಗತ ಆದಾಯ ಹಂಚಿಕೆಯು ಆದಾಯ ಮೂಲದ ಹಂಚಿಕೆಯನ್ನು ಆಧರಿಸಿದ್ದು, ಅವುಗಳ ಸಂಬಂಧವು ಅಂಕಿ-ಅಂಶಗಳ ದೃಷ್ಟಿಯಿಂದ ಗಮನಾರ್ಹವಾದುದಾಗಿದೆ. ಈ ರೀತಿಯಲ್ಲಿ ಶ್ರಮದ ಹಂಚುವಿಕೆ ಹೆಚ್ಚಾದಂತೆಲ್ಲಾ ವ್ಯಕ್ತಿಗತ ಆದಾಯಗಳಿಗೆ ಸಂಬಂಧಿಸಿದ ಇಳುವರಿಯ ಗಿನಿ ಸೂಚ್ಯಂಕದಲ್ಲಿ ಅದು ಪರಿಣಮಿಸುತ್ತದೆ. ಕಾರ್ಯಚರಣೆಯ ಆದಾಯ ಹಂಚಿಕೆಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಇರುವ ಇತರೆ ಒತ್ತಾಯಪೂರ್ವಕ ಚರ್ಚೆಗಳು, ಸ್ಥೂಲ ಮಟ್ಟದ ರಾಷ್ಟ್ರೀಯ ಆದಾಯಕ್ಕೆ ಸಂಬಂಧಿಸಿದ ಲೆಕ್ಕಶಾಸ್ತ್ರದ ದತ್ತಾಂಶಗಳು, ಸಾಮಾಜಿಕ ನ್ಯಾಯಯುತ ನಮೂನೆಯಿಂದ ಕಂಡುಬಂದ ಸೂಕ್ಷ್ಮ ಮೂಲಾಧಾರಗಳನ್ನು ಅರ್ಥೈಸುವ ಕಾಲ್ಪನಿಕತೆಯನ್ನು ಆಧರಿಸಿದ್ದಾಗಿರುತ್ತದೆ ಹಾಗೆಯೇ ವ್ಯಕ್ತಿಗತ ಆದಾಯ ಹಂಚಿಕೆಯ ಅಸಮಾನತೆಯನ್ನು ಕುರಿತಂತೆ ಉತ್ತಮ ಅರಿವನ್ನು ಒದಗಿಸುವುದಾಗಿರುತ್ತದೆ. (ಆ್ಯಟ್‌ಕಿನ್‌ಸನ್, 2009, ಗ್ಲಿನ್ 2009)



**ಬಾಕ್ಸ್ 1 : ಆರ್ಥಿಕ ಅಸಮಾನತೆಯ ಪರಿಕಲ್ಪನೆಗಳು**

**ಆರ್ಥಿಕ ಅಸಮಾನತೆ : ಆರ್ಥಿಕತೆಯಲ್ಲಿನ ಗೃಹಕೃತ್ಯ ಅಥವ ವ್ಯಕ್ತಿಗತ ಆದಾಯದ ಹಂಚಿಕೆಯನ್ನು ಅಳೆಯುವುದಾಗಿರುತ್ತದೆ. ಇದನ್ನು ಸಾಮಾನ್ಯವಾಗಿ ಗಿನಿ ಅಸಮಾನತೆಯ ಸಹಕರ್ತೃತ್ವವನ್ನು ಬಳಸಿ ಅಳೆಯಲಾಗುತ್ತದೆ. ಇದು ಸೊನ್ನೆಯಿಂದ 1 ವರೆಗಿದ್ದು, ಸೊನ್ನೆಯ ಸಂಪೂರ್ಣ ಸಮಾನತೆಯನ್ನು ಸೂಚಿಸುವುದಾಗಿದ್ದು, 1 ಎಂಬುದು ಸಂಪೂರ್ಣ ಅಸಮಾನತೆಯನ್ನು ಸೂಚಿಸುವುದಾಗಿರುತ್ತದೆ.**

**ಅಸಮಾನತೆಯ ಎರಡು ಪರಿಕಲ್ಪನೆಗಳು : ಗೃಹಕೃತ್ಯದ ಆದಾಯ ಹಂಚಿಕೆ : ಇದು ಆರ್ಥಿಕತೆಯಲ್ಲಿನ ಎಲ್ಲಾ ಗೃಹಕೃತ್ಯಗಳ ಆದಾಯ ಹಂಚಿಕೆಯಾಗಿದೆ. ಇದನ್ನು ಮುಂದುವರೆಸಿ ಕೆಳಕಂಡಂತೆ ವಿಭಜಿಸಬಹುದಾಗಿದೆ :**

**ಅ) ಪ್ರಾಥಮಿಕ ಆದಾಯ ಹಂಚಿಕೆ : ಈ ಹಂಚಿಕೆಯು ಮಾರುಕಟ್ಟೆಗಳು ಹಾಗೂ ಮಾರುಕಟ್ಟೆಯಂತಹ ಸಂಸ್ಥೆಗಳಿಂದ ನಿರ್ಧರಿಸಲ್ಪಟ್ಟ ತೆರಿಗೆ ಹಾಗೂ ವಿನಾಯಿತಿಗಳಿಗೆ ಮುಂಚಿನ ಪ್ರತಿಯೊಂದು ಗೃಹಕೃತ್ಯದ ವಿಭಿನ್ನ ಮೂಲಾದಾಯಗಳನ್ನೊಳಗೊಂಡ ಗೃಹಕೃತ್ಯ ಆದಾಯಗಳ ಹಂಚಿಕೆಯನ್ನು ಒಳಗೊಂಡಿದ್ದಾಗಿದೆ.**

**ಆ) ದ್ವಿತೀಯ ಆದಾಯ ಹಂಚಿಕೆ : ತೆರಿಗೆ ಕಡಿತಗೊಳಿಸಿ ಹಾಗೂ ವರ್ಗಾವಣೆ ವೆಚ್ಚಗಳನ್ನು ಸೇರಿಸಿದ ನಂತರದ ಗೃಹಕೃತ್ಯ ಆದಾಯ ಹಂಚಿಕೆಯದಾಗಿರುತ್ತದೆ.**

**ಇ) ತೃತೀಯ ಆದಾಯ ಹಂಚಿಕೆ : ತೆರಿಗೆ ಮತ್ತು ವಿನಾಯಿತಿಯ ನಂತರ ಗೃಹಕೃತ್ಯ ಆದಾಯಕ್ಕೆ ಸಾರ್ವಜನಿಕ ವೆಚ್ಚದ ಲಾಭಗಳನ್ನು ಸೇರಿಸುವುದರಿಂದ ಬರುವುದೇ ಗೃಹಕೃತ್ಯ ಆದಾಯ ಹಂಚಿಕೆಯ ಈ ವಿಂಗಡಣೆಯಾಗಿದೆ.**

**ಕಾರ್ಯಾಚರಣೆಯ ಆದಾಯ ಹಂಚಿಕೆ : ಭೂಮಿ, ಶ್ರಮ ಮತ್ತು ಬಂಡವಾಳದಂತಹ ವಿಭಿನ್ನ ಉತ್ಪಾದನಾ ಘಟಕಗಳೊಳಗಿನ ಆದಾಯ ಹಂಚಿಕೆಯಾಗಿದೆ. ಇದೊಂದು ರಾಷ್ಟ್ರೀಯ ಆದಾಯದಲ್ಲಿನ ಲಾಭ ಅಥವಾ ಸಂಬಳದ ಲಾಭಾಂಶವೆಂಬುದಾಗಿ ಮಾದರಿಯ ಅಳತೆಗೋಲಾಗಿದೆ.**

**ಆಧಾರ : ಯು.ಎನ್.ಡಿ.ಪಿ.2013. ಪು.20**

ವರಮಾನ ಆರ್ಥಿಕತೆಯಲ್ಲಿನ ಅಸಮಾನತೆಗಳು ಸ್ಥೂಲ ಆರ್ಥಿಕತೆಯ ಮೇಲುಂಟು ಮಾಡಿದ ತೊಡಕೆರಡನ್ನೂ ಸೇರಿಸಿಕೊಂಡಂತೆ ಕಾರ್ಯಾಚರಣೆಯ ಅಸಮಾನತೆಗಳ ಸಮಸ್ಯೆ ಬಗ್ಗೆ ಹಾರ್ವರ್ಡ್ ಅರ್ಥಶಾಸ್ತ್ರಜ್ಞರಾದ ಮಾರ್ಟಿನ್ ವೀಜ್‌ಮನ್‌ರಿಂದ ಪರಿಶೀಲನೆ ನಡೆಸಿದರು. (1984). 'ನಿಗದಿತ ವೇತನ ವ್ಯವಸ್ಥೆ'ಯೆಂದು ಹೆಸರಿಸಬಹುದಾದ ವಿಶಿಷ್ಟ ವೇತನ ಪರಿಹಾರವನ್ನೊಳಗೊಂಡ ಬಂಡವಾಳಶಾಹಿ ಆರ್ಥಿಕತೆಯಲ್ಲಿನ ಚಕ್ರೀಯ ನಿರುದ್ಯೋಗ ಸಮಸ್ಯೆಯೇ ಕಾರಣವೆಂದು ವೀಜ್‌ಮನ್ ಹೇಳುತ್ತಾರೆ. ಆ ರೀತಿಯ ವೇತನ ಅನಿಶ್ಚಿತತೆಯು ತತ್ಕಾಲೀನ ಹಿಂಜರಿಕೆ ಅವಧಿಯಲ್ಲಿ ಕೆಲಸ ಸ್ಥಗಿತಗೊಳಿಸುವ ಪ್ರವೃತ್ತಿಗೆ ಕಾರಣವಾಗಿ, ಸರಾಸರಿ ಬೇಡಿಕೆಯಲ್ಲಿನ ಕೊರತೆಯ ಸಮಸ್ಯೆಯನ್ನು ಉಲ್ಬಣಗೊಳಿಸುತ್ತದೆ ಹಾಗೂ ಮತ್ತಷ್ಟು ಅಧೋಗತಿಯ ಚಲನೆಗೆ ದಾರಿಯಾಗುತ್ತದೆ. ನಿಗದಿತ ವೇತನ ವ್ಯವಸ್ಥೆಗೆ ಬದಲಾಗಿ ಲಾಭ ಹಂಚಿಕೆಯ ಆಧಾರವುಳ್ಳ ವೇತನ ವ್ಯವಸ್ಥೆಯಿರುವುದಾದಲ್ಲಿ ಅದು ಉತ್ಪಾದನಾ ವಸ್ತುಗಳ ಬೇಡಿಕೆ ಶಿಥಿಲಗೊಂಡ ಅವಧಿಯಲ್ಲಿ ಶ್ರಮದ ವೆಚ್ಚವನ್ನು ತಗ್ಗಿಸುವುದೆಂದೂ, ಅಲ್ಲದೆ ಶ್ರಮವನ್ನು ತೆರವುಗೊಳಿಸುವುದನ್ನು ತಡೆಹಿಡಿಯುತ್ತದೆಂದೂ ಅವರು ಪ್ರತಿಪಾದಿಸಿದರು. ವಾಸ್ತವವಾಗಿ, ಸರಾಸರಿ ಪರಿಹಾರವನ್ನು ಪ್ರತಿ ಕೆಲಸಗಾರನಿಗೆ

| ಪಟ್ಟಿ ೫ : ಗಿನಿ ಸಹಕರ್ತೃತ್ವದ ಮೂಲಕ ಉಪಭೋಗದ ಹಂಚಿಕೆ : 1973–74ರಿಂದ 2009 | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|
| | 1973–74 | | 1977–78 | | 1983 | | 1993–94 | | 1999–2000 | | 2004–05 | | 2004–05 | | 2009–10 | | 2009–10 | |
| ರಾಜ್ಯ | (ಗ್ರಾಮೀಣ) | (ನಗರ) | (ಗ್ರಾಮೀಣ) | (ನಗರ) | (ಗ್ರಾಮೀಣ) | (ನಗರ) | (ಗ್ರಾಮೀಣ) | (ನಗರ) | (ಗ್ರಾಮೀಣ) | (ನಗರ) | (ಗ್ರಾಮೀಣ) | (ನಗರ) | (ಗ್ರಾಮೀಣ) | (ನಗರ) | (ಗ್ರಾಮೀಣ) | (ನಗರ) | (ಗ್ರಾಮೀಣ) | (ನಗರ) |
| ಭಾರತ | 0.281 | 0.302 | 0.336 | 0.345 | 0.297 | 0.325 | 0.282 | 0.34 | 0.26 | 0.342 | 0.3 | 0.371 | 0.266 | 0.348 | 0.291 | 0.382 | 0.276 | 0.371 |
| ಆಂಧ್ರಪ್ರದೇಶ | 0.288 | 0.288 | 0.298 | 0.319 | 0.292 | 0.306 | 0.285 | 0.32 | 0.235 | 0.313 | 0.289 | 0.37 | 0.252 | 0.342 | 0.278 | 0.382 | 0.269 | 0.353 |
| ಅರುಣಾಚಲ ಪ್ರದೇಶ | | | | | | | | | | | 0.27 | 0.244 | 0.24 | 0.213 | 0.333 | 0.325 | 0.293 | 0.299 |
| ಅಸ್ಸಾಂ | 0.2 | 0.296 | 0.179 | 0.323 | 0.192 | 0.248 | 0.176 | 0.286 | 0.201 | 0.309 | 0.195 | 0.316 | 0.182 | 0.301 | 0.244 | 0.324 | 0.22 | 0.328 |
| ಬಿಹಾರ | 0.273 | 0.265 | 0.258 | 0.304 | 0.255 | 0.297 | 0.222 | 0.307 | 0.207 | 0.319 | 0.205 | 0.33 | 0.185 | 0.312 | 0.226 | 0.332 | 0.215 | 0.319 |
| ಛತ್ತೀಸ್‌ಗಢ | | | | | | | | | | | 0.295 | 0.434 | 0.251 | 0.354 | 0.276 | 0.326 | 0.234 | 0.305 |
| ದೆಹಲಿ | 0.149 | 0.353 | 0.29 | 0.33 | 0.289 | 0.331 | 0.236 | 0.207 | 0.294 | 0.343 | 0.264 | 0.329 | 0.262 | 0.324 | 0.253 | 0.345 | 0.233 | 0.352 |
| ಗೋವಾ | | | | | | | | | | | 0.294 | 0.405 | 0.267 | 0.333 | 0.214 | 0.406 | 0.219 | 0.251 |
| ಗುಜರಾತ್ | 0.234 | 0.246 | 0.285 | 0.308 | 0.252 | 0.264 | 0.236 | 0.287 | 0.234 | 0.286 | 0.269 | 0.305 | 0.251 | 0.295 | 0.253 | 0.328 | 0.252 | 0.309 |
| ಹರಿಯಾಣ | 0.291 | 0.31 | 0.288 | 0.313 | 0.271 | 0.304 | 0.301 | 0.28 | 0.239 | 0.287 | 0.322 | 0.36 | 0.295 | 0.326 | 0.301 | 0.36 | 0.278 | 0.357 |
| ಹಿಮಾಚಲ ಪ್ರದೇಶ | 0.243 | 0.273 | 0.255 | 0.297 | 0.266 | 0.313 | 0.276 | 0.435 | 0.235 | 0.295 | 0.296 | 0.318 | 0.26 | 0.261 | 0.305 | 0.399 | 0.283 | 0.351 |
| ಜಮ್ಮು ಕಾಶ್ಮೀರ | 0.224 | 0.224 | 0.222 | 0.334 | 0.221 | 0.235 | 0.234 | 0.281 | 0.173 | 0.224 | 0.237 | 0.245 | 0.197 | 0.241 | 0.235 | 0.305 | 0.221 | 0.307 |
| ಜಾರ್ಖಂಡ್ | | | | | | | | | | | 0.225 | 0.351 | 0.199 | 0.326 | 0.24 | 0.358 | 0.212 | 0.343 |
| ಕರ್ನಾಟಕ | 0.277 | 0.291 | 0.321 | 0.342 | 0.299 | 0.33 | 0.266 | 0.315 | 0.241 | 0.323 | 0.263 | 0.364 | 0.232 | 0.358 | 0.235 | 0.334 | 0.231 | 0.375 |
| ಕೇರಳ | 0.314 | 0.37 | 0.353 | 0.356 | 0.33 | 0.371 | 0.288 | 0.338 | 0.27 | 0.321 | 0.341 | 0.4 | 0.294 | 0.353 | 0.417 | 0.498 | 0.35 | 0.4 |
| ಮಧ್ಯಪ್ರದೇಶ | 0.286 | 0.27 | 0.331 | 0.377 | 0.292 | 0.29 | 0.277 | 0.327 | 0.242 | 0.315 | 0.265 | 0.393 | 0.237 | 0.351 | 0.292 | 0.364 | 0.276 | 0.365 |
| ಮಹಾರಾಷ್ಟ್ರ | 0.264 | 0.331 | 0.462 | 0.362 | 0.283 | 0.329 | 0.302 | 0.351 | 0.258 | 0.348 | 0.308 | 0.372 | 0.27 | 0.35 | 0.268 | 0.41 | 0.244 | 0.38 |
| ಮಣಿಪುರ | | | | | | | | | | | 0.156 | 0.174 | 0.136 | 0.149 | 0.173 | 0.213 | 0.159 | 0.193 |
| ಮೇಘಾಲಯ | | | | | | | | | | | 0.157 | 0.258 | 0.136 | 0.24 | 0.2 | 0.256 | 0.17 | 0.243 |
| ಮಿಜೋರಾಂ | | | | | | | | | | | 0.193 | 0.244 | 0.167 | 0.213 | 0.237 | 0.23 | 0.194 | 0.228 |
| ನಾಗಾಲ್ಯಾಂಡ್ | | | | | | | | | | | 0.207 | 0.235 | 0.173 | 0.214 | 0.186 | 0.237 | 0.181 | 0.222 |
| ಒಡಿಶಾ | 0.262 | 0.342 | 0.301 | 0.324 | 0.266 | 0.294 | 0.243 | 0.304 | 0.244 | 0.292 | 0.281 | 0.35 | 0.254 | 0.33 | 0.262 | 0.389 | 0.247 | 0.375 |
| ಪಂಜಾಬ್ | 0.27 | 0.287 | 0.303 | 0.38 | 0.279 | 0.321 | 0.265 | 0.276 | 0.239 | 0.29 | 0.279 | 0.393 | 0.263 | 0.323 | 0.288 | 0.371 | 0.285 | 0.358 |
| ರಾಜಸ್ಥಾನ | 0.276 | 0.287 | 0.464 | 0.296 | 0.34 | 0.301 | 0.26 | 0.29 | 0.209 | 0.282 | 0.246 | 0.367 | 0.204 | 0.303 | 0.225 | 0.378 | 0.214 | 0.316 |
| ಸಿಕ್ಕಿಂ | | | | | | | | | | | 0.266 | 0.254 | 0.236 | 0.232 | 0.275 | 0.194 | 0.259 | 0.186 |
| ತಮಿಳುನಾಡು | 0.269 | 0.305 | 0.319 | 0.333 | 0.324 | 0.347 | 0.307 | 0.344 | 0.279 | 0.381 | 0.316 | 0.356 | 0.258 | 0.345 | 0.264 | 0.332 | 0.257 | 0.327 |
| ತ್ರಿಪುರ | | | | | | | | | | | 0.216 | 0.338 | 0.203 | 0.3 | 0.205 | 0.294 | 0.197 | 0.288 |
| ಉತ್ತರ ಪ್ರದೇಶ | 0.236 | 0.293 | 0.299 | 0.327 | 0.29 | 0.312 | 0.278 | 0.323 | 0.246 | 0.328 | 0.286 | 0.366 | 0.234 | 0.339 | 0.356 | 0.329 | 0.438 | 0.321 |
| ಉತ್ತರಾಖಂಡ | | | | | | | | | | | 0.279 | 0.323 | 0.223 | 0.302 | 0.263 | 0.361 | 0.231 | 0.395 |
| ಪಶ್ಚಿಮ ಬಂಗಾಳ | 0.296 | 0.315 | 0.292 | 0.317 | 0.284 | 0.328 | 0.251 | 0.334 | 0.224 | 0.341 | 0.27 | 0.378 | 0.241 | 0.356 | 0.239 | 0.384 | 0.22 | 0.384 |
| ಅಂಡಮಾನ್ ನಿಕೋಬಾರ್ ದ್ವೀಪಗಳು | | | | | | | | | | | 0.29 | 0.351 | 0.253 | 0.305 | 0.246 | 0.271 | 0.256 | 0.316 |
| ಚಂಡೀಗಢ | | | | | | | | | | | 0.24 | 0.344 | 0.244 | 0.341 | 0.193 | 0.449 | 0.308 | 0.373 |
| ದಾದ್ರ ಮತ್ತು ನಗರ ಹವೇಲಿ | | | | | | | | | | | 0.351 | 0.296 | 0.324 | 0.295 | 0.206 | 0.208 | 0.22 | 0.224 |
| ದಾಮನ್ ಮತ್ತು ದಿಯು | | | | | | | | | | | 0.223 | 0.258 | 0.209 | 0.242 | 0.305 | 0.283 | 0.287 | 0.264 |
| ಲಕ್ಷದ್ವೀಪ | | | | | | | | | | | 0.24 | 0.383 | 0.167 | 0.236 | 0.32 | 0.336 | 0.314 | 0.279 |
| ಪಾಂಡಿಚೆರಿ | | | | | | | | | | | 0.337 | 0.312 | 0.281 | 0.302 | 0.307 | 0.307 | 0.254 | 0.378 |

URP – ಏಕರೂಪದ ಪರಾಮರ್ಶಿತ ಅವಧಿ; **MRP** – ಮಿಶ್ರಿತ ಪರಾಮರ್ಶಿತ ಅವಧಿ; ಆಧಾರ – ಯೋಜನಾ ಆಯೋಗದ ಅನಧಿಕೃತ ಅಂದಾಜು 61ನೇ ಸುತ್ತು 2004–05 66ನೇ ಸುತ್ತು 2009–10

ಟಿಪ್ಪಣಿ : ಗಿನಿ ಸಹಕರ್ತೃತ್ವವು ಜಿಎಸ್‌ಡಿಪಿ ತಲಾ ಆದಾಯಕ್ಕೆ ಸಮಾನವಾಗಿ ಎಲ್ಲಾ ವ್ಯಕ್ತಿಗಳ ಆಯಾರಾಜ್ಯದ ಒಟ್ಟಾರೆ ಆದಾಯಕ್ಕೆ ಸರಿಸಮವಾಗಿದೆಯೆಂದು ಭಾವಿಸಿ ಲೆಕ್ಕಮಾಡಲಾಗಿ ಅಸಮಾನ ಹಂಚಿಕೆಯಿಂದ ಉದ್ಭವವಾಗುವ ಆಯಾ ರಾಜ್ಯದೊಳಗಿನ ಅಸಮಾನತೆಯನ್ನು ಈ ಪದ್ಧತಿಯು ಕಡೆಗಣಿಸುತ್ತದೆ, ಅಸಮಾನತೆ ಬಗ್ಗೆ ಮಾತ್ರ ಗಮನವೀಯುತ್ತದೆ.

ಮೂಲ : ಯೋಜನಾ ಆಯೋಗ, ಭಾರತ, ದೊರೆಯುವ ಸ್ಥಳ : http://planningcommission.nic.in/data/datatable/0814/table_105.pdf. ಡಿಸೆಂಬರ್ 9, 2014 ರಂದು ಪಡೆದುಕೊಂಡಿದ್ದಾಗಿದೆ.


ವ್ಯವಸ್ಥೆಗೊಳಿಸುವುದರಿಂದ ಉದ್ಯೋಗದಲ್ಲಿನ ತಿರುವು–ಮುರುವನ್ನು ವ್ಯತ್ಯಸ್ತಗೊಳಿಸುವಲ್ಲಿ ಅದು ಶ್ರಮಕ್ಕೆ ಸಂಬಂಧಿಸಿದ ಹೆಚ್ಚಿನ ಬೇಡಿಕೆಯನ್ನು ಉತ್ತೇಜಿಸುವುದು. ಲಾಭ ಹಂಚುವಿಕೆಯ ವೇತನ ವ್ಯವಸ್ಥೆಯು ಹಣದುಬ್ಬರದ ಆರ್ಥಿಕ ದುಸ್ಥಿತಿಗೆ ಒಂದು ಶಾಶ್ವತ ಪರಿಹಾರವೆಂದು ವೀಜ್‌ಮನ್ ಸಲಹೆ ನೀಡಿದರು. ವೇತನ ಆರ್ಥಿಕತೆಯ ಎಲ್ಲಾ (ಬಹುಮಟ್ಟಿಗೆ ಎಲ್ಲಾ) ಸಂಸ್ಥೆಗಳು ತೀರಾ ನಿರಾಶಾದಾಯವಾಗಿದ್ದನ್ನೂ ಲಾಭ ಹಂಚುವಿಕೆಯ ಯೋಜನೆಗೆ ಪರಿವರ್ತಿತವಾದಲ್ಲಿ ಅವುಗಳು ಸಫಲವಾಗುತ್ತವೆ (ವೀಜ್‌ಮನ್, 1985 : 1945) ಆ ರೀತಿ ಮಾಡಬೇಕಾದರೆ, ಸರ್ಕಾರವು ಲಾಭಾಂಶದ ಆದಾಯಗಳಿಸುವ ಕೆಲಸಗಾರರಿಗೆ ಆದ್ಯತೆಯ ತೆರಿಗೆ ಸೇವೆಯನ್ನು ನೀಡಬೇಕೆಂಬ ಸಲಹೆಯನ್ನು ವೀಜ್‌ಮನ್ ನೀಡಿದರು. ವಿಶೇಷವಾಗಿ ಭಾರತದ ಸಂದರ್ಭದಲ್ಲಂತೂ ಇದು ಸಾಧ್ಯವೇ ಇಲ್ಲವೆಂಬುದನ್ನು ಧ್ವನಿಸುತ್ತದೆ. ಆದಾಗ್ಯೂ, ಆತ ನೀಡುವ ಶ್ರಮ ಪರಿಹಾರಕ್ಕೆ ಸಂಬಂಧಿಸಿದ ಜಪಾನೀಯರ ಬೋನಸ್ ವ್ಯವಸ್ಥೆಯ ಉದಾಹರಣೆಯು ಪಾಲು–ಆರ್ಥಿಕತೆಯ ಹಾದಿಯಲ್ಲೇ ಸಾಗಿದ್ದು, 1990 ರ ಮುಂಚಿನ ವರ್ಷಗಳಲ್ಲಿ ತುಲನಾತ್ಮಕವಾಗಿ ಕೆಳಮಟ್ಟದಲ್ಲಿದ್ದ ಜಪಾನೀಯರ ನಿರುದ್ಯೋಗವನ್ನು ದೃಢಗೊಳಿಸುವಲ್ಲಿರುವ ಪಾತ್ರವನ್ನು ಆಳವಾದ ದೃಷ್ಟಿಯಿಂದ ಗಮನಿಸಬಹುದಾಗಿದೆ.

**ಪಟ್ಟಿ : 2 ವಿಭಿನ್ನ ಮೂಲಗಳಿಂದ ಕುಟುಂಬಗಳು ಗಳಿಸುವ ಆದಾಯದ ಸರಾಸರಿ**

| ವ್ಯವಸಾಯ | ಕೂಲಿಕೆಲಸ | ವ್ಯಾಪಾರ | ಇತರೆ | ಗ್ರಾಮೀಣ | ನಗರ | ಒಟ್ಟು | ಸಾಧಾರಣ ಆದಾಯ |
|---|---|---|---|---|---|---|---|
| ✓ | ✓ | ✓ | ✓ | 1.14 | 0.26 | 0.89 | 35,755 |
| ✓ | ✓ | ✓ | | 2.78 | 0.61 | 2.16 | 32,938 |
| ✓ | ✓ | | ✓ | 8.69 | 1.12 | 6.52 | 25,507 |
| ✓ | ✓ | | | 23.55 | 3.83 | 17.89 | 23,536 |
| ✓ | | ✓ | ✓ | 1.4 | 0.51 | 1.15 | 54,850 |
| ✓ | | ✓ | | 3.9 | 1.28 | 3.15 | 36,000 |
| ✓ | | | ✓ | 5.48 | 0.56 | 4.07 | 31,265 |
| ✓ | | | | 11.27 | 1.03 | 8.33 | 20,964 |
| | ✓ | ✓ | ✓ | 0.81 | 1.61 | 1.04 | 47,400 |
| | ✓ | ✓ | | 2.43 | 5.98 | 3.45 | 40,900 |
| | ✓ | | ✓ | 6.33 | 12.1 | 7.98 | 33,600 |
| | ✓ | | | 24.23 | 48.46 | 31.18 | 27,000 |
| ✓ | | ✓ | ✓ | 0.99 | 3.71 | 1.77 | 52,000 |
| | | ✓ | | 3.39 | 14.1 | 6.47 | 40,000 |
| | | | ✓ | 1.98 | 4.15 | 2.6 | 18,000 |
| ನೇತ್ಯಾತ್ಮಕ ಅಥವಾ ಆದಾಯ ಇಲ್ಲದಿರುವಿಕೆ | | | | 1.61 | 0.69 | 1.35 | –985 |
| ಒಟ್ಟು | | | | 100 | 100 | 100 | |

ಟಿಪ್ಪಣಿ : ಕೂಲಿ ಕೆಲಸವೆನ್ನುವುದು ವ್ಯವಸಾಯ, ವ್ಯವಸಾಯೇತರ ಗಳಿಕೆ ಹಾಗೂ ಸಂಬಳದ ಕೆಲಸವನ್ನೊಳಗೊಂಡಿದೆ. ಇತರೆ ಮೂಲಗಳು ಪಿಂಚಣಿಗಳನ್ನು, ಕುಟುಂಬ ವಲಸೆಗಳನ್ನು, ಹಾಗೂ ಸರ್ಕಾರೀ ಕಾರ್ಯಕ್ರಮಗಳಿಂದ ಬರುವ ಆದಾಯವನ್ನೊಳಗೊಂಡಿದೆ.

ತೀರಾ ಇತ್ತೀಚೆಗೆ, ಪಿಕೆಟ್ಟಿ (2014) ಬಂಡವಾಳ ವಾಪಸಾತಿದರ (ಶ) ಮತ್ತು ಆರ್ಥಿಕ ಬೆಳವಣಿಗೆಯ ದರ (9) ಇವುಗಳ ಮಧ್ಯೆ ವ್ಯತ್ಯಸ್ತ ಚಲನೆಯನ್ನು ಆಧರಿಸಿ ಕಾರ್ಯಾಚರಣೆಯ ಅಸಮಾನತೆಗಳನ್ನು ತಡೆಹಿಡಿಯುವ ಬಗ್ಗೆ ಚರ್ಚಿಸುತ್ತಾ ಪ್ರಜಾಪ್ರಭುತ್ವವನ್ನು ರಕ್ಷಿಸುವ ಹಾದಿಯೊಂದರ ಬಗ್ಗೆ ಮಾತನಾಡಿದ್ದಾರೆ.



ಆರ್ಥಿಕತೆ ಬೆಳವಣಿಗೆಯ ದರವನ್ನು ಬಂಡವಾಳ ವಾಪಾಸಾತಿ ದರವು ಯಾವಾಗ ಗಣನೀಯವಾಗಿ ಮೀರುತ್ತದೋ ಆಗ ಹತ್ತೊಂಭತ್ತನೇ ಶತಮಾನದ ಚರಿತ್ರೆಯುದ್ದಕ್ಕೂ ಆಗಿ ಹೋಗಿರುವಂತೆ ಹಾಗೆಯೇ ಇಪ್ಪತ್ತೊಂದನೇ ಶತಮಾನದಲ್ಲಿಯೂ ಮತ್ತೆ ಆಗಬಹುದಾದಂತೆ, ಅದು ತಾರ್ಕಿಕವಾಗಿಯೇ ಅನುವಂಶಿಕವಾದ ಸಂಪತ್ತು, ಉತ್ಪನ್ನ ಮತ್ತು ಆದಾಯಕ್ಕಿಂತ ತ್ವರಿತವಾಗಿ ಬೆಳೆಯುತ್ತದೆ. ಆನುವಂಶಿಕ ಸಂಪತ್ತು ಹೊಂದಿರುವ ಜನರು ಬಂಡವಾಳದಿಂದ ಬರುವ ಅವರ ಆದಾಯದ ಸ್ವಲ್ಪ ಭಾಗವನ್ನಷ್ಟೆ ಉಳಿಸಲು ಸಾಧ್ಯವಾಗಿ, ಒಟ್ಟಾರೆ ಆರ್ಥಿಕತೆಗಿಂತ ಬಂಡವಾಳ ತ್ವರಿತವಾಗಿ ಬೆಳೆಯುವುದಷ್ಟನ್ನು ಮಾತ್ರ ನೋಡಿಕೊಳ್ಳುತ್ತಾರೆ. ಇಂಥ ಪರಿಸ್ಥಿತಿಯಲ್ಲಿ, ಇಡೀ ಜೀವಿತದ ಅವಧಿಯಲ್ಲಿ ಶ್ರಮಿಸಿ ಒಟ್ಟುಗೂಡಿಸಿದ ಸಂಪತ್ತಿಗಿಂತ ಆನುವಂಶಿಕ ಸಂಪತ್ತು ಮೇಲುಗೈ ಸಾಧಿಸುತ್ತದೆ ಹಾಗೂ ಬಂಡವಾಳದ ಒಗ್ಗೂಡುವಿಕೆಯು ಅತಿ ವಿಪರೀತದ ಮಟ್ಟವನ್ನು ತಲುಪುತ್ತದೆ. ಆ ವಿಪರೀತದ ಮಟ್ಟವು ಆಧುನಿಕ ಪ್ರಜಾಪ್ರಭುತ್ವದ ಸಮಾಜಗಳಿಗೆ ಇರುವ ಉತ್ಕೃಷ್ಟ ಮೌಲ್ಯ ಹಾಗೂ ಸಾಮಾಜಿಕ ನ್ಯಾಯಗಳಿಗೆ ವಿರುದ್ಧವೆನ್ನುವ ಅಂತಃ ಸತ್ವಗಳನ್ನೊಳಗೊಂಡಿರುತ್ತವೆ.. (emphas mine) ಪಿಕೆಟ್ಟೆ, 2014;26

### ಭಾರತದಲ್ಲಿನ ಅಸಮಾನತೆಗಳು

ಭಾರತದಲ್ಲಿರುವ ಅಸಮಾನತೆಗಳನ್ನು ಜಿನಿ ಸಹಕರ್ತೃತ್ವವನ್ನು ಬಳಸಿಕೊಂಡು ಪ್ರತಿಯೊಬ್ಬರ ಬಳಕೆ ವೆಚ್ಚಕ್ಕೆ ಸಂಬಂಧಿಸಿದಂತೆ ಇಡೀ ಭಾರತ ಮಟ್ಟದಲ್ಲಿ ಹಾಗೆಯೇ ರಾಜ್ಯ

**ಪಟ್ಟಿ 3 : ಬಂಡವಾಳ – ಶ್ರಮದ ಅನುಪಾತ ಹಾಗೂ ಭಾರತದಲ್ಲಿ ಶ್ರಮ ಆದಾಯ ಪಾಲು 1991–2011**

| ವರ್ಷ | labsh | emp | hc | L input | rkna | K/L |
|---|---|---|---|---|---|---|
| 1991 | 0.650768518 | 332.6175537 | 1.601656795 | 532.7391649 | 2419680.25 | 4541.960512 |
| 1992 | 0.643848956 | 341.3132935 | 1.616979837 | 551.8967138 | 2537396.5 | 4597.593058 |
| 1993 | 0.630940259 | 350.0163879 | 1.632449389 | 571.3840385 | 2656039.75 | 4648.431827 |
| 1994 | 0.617426753 | 356.3805847 | 1.648066998 | 587.3390802 | 2798128.75 | 4764.07725 |
| 1995 | 0.600267887 | 361.8991699 | 1.663833976 | 602.1401347 | 2989167.5 | 4964.238933 |
| 1996 | 0.598698258 | 367.3492737 | 1.682567358 | 618.0898969 | 3171277.25 | 5130.770242 |
| 1997 | 0.59725076 | 372.7568359 | 1.701511621 | 634.2500883 | 3346763 | 5276.724531 |
| 1998 | 0.585653543 | 378.1624756 | 1.717826843 | 649.6176517 | 3547055 | 5460.219547 |
| 1999 | 0.577172458 | 383.5910645 | 1.732384801 | 664.5273298 | 3776547.75 | 5683.05859 |
| 2000 | 0.570156574 | 391.8108521 | 1.747066259 | 684.5195197 | 3989632.5 | 5828.369221 |
| 2001 | 0.558769822 | 401.0491333 | 1.76388669 | 707.4052283 | 4225362.5 | 5973.043923 |
| 2002 | 0.534032524 | 410.5091553 | 1.780869007 | 731.0630318 | 4481763.5 | 6130.474809 |
| 2003 | 0.526317477 | 420.1240234 | 1.798014879 | 755.3892453 | 4802591 | 6357.769892 |
| 2004 | 0.491828084 | 434.0855408 | 1.815325737 | 788.0066542 | 5217105.5 | 6620.636351 |
| 2005 | 0.480967939 | 439.8279419 | 1.832803369 | 806.1181335 | 5725997.5 | 7103.174165 |
| 2006 | 0.464551449 | 449.974823 | 1.851765513 | 833.2478591 | 6327201.5 | 7593.42065 |
| 2007 | 0.465148509 | 460.3553772 | 1.870923877 | 861.289867 | 7044530 | 8179.046648 |
| 2008 | 0.483262241 | 467.7654724 | 1.890280485 | 884.2079441 | 7770282.5 | 8787.845157 |
| 2009 | 0.488592803 | 475.3091431 | 1.909837365 | 907.7631614 | 8561358 | 9431.268379 |
| 2010 | 0.485937476 | 485.173584 | 1.929596543 | 936.1892706 | 9407726 | 10048.9573 |
| 2011 | 0.485937476 | 495.7492371 | 1.929596543 | 956.5960142 | 10298478 | 10765.75466 |

ಆಧಾರ : ಕೃತಿಕಾರನ ಲೆಕ್ಕಾಚಾರಗಳು (ಪೆನ್ ವರ್ಲ್ಡ್ ಟೇಬಲ್ಸ್‌ನಿಂದ ಆಧಾರಗೊಂಡಿದ್ದು ವರ್ಷನ್ 8.0 ಫೆನಸ್ಟ್ರಾ, ರಾಬಟ್.ಸಿ, ರಾಬರ್ಟ್ ಇನ್‌ಲಿಯರ್ ಹಾಗೂ ಮಾರ್ಸೆಲ್ ಪಿ ಟಿಮ್ಮರ್. (2013) "The next generation of the Penn world Table"

ಮಟ್ಟದಲ್ಲಿ ಅಳೆಯಲಾಗಿದೆ. 1973/74ರಿಂದ 2009/10ರ ದತ್ತಾಂಶವು ಸೂಚಿಸುವಂತೆ ಬಳಕೆ ವೆಚ್ಚಕ್ಕೆ ಸಂಬಂಧಿಸಿದಂತೆ ಅಸಮಾನತೆಯಲ್ಲಿ ಯಾವುದೇ ರೀತಿಯ ಇಳಿಕೆಯಾಗಿಲ್ಲ. ಆದಾಗ್ಯೂ ಇದನ್ನು ಬಹಳ ಎಚ್ಚರಿಕೆಯಿಂದಲೇ ವಿಶ್ಲೇಷಿಸಬೇಕಾಗಿದೆ, ಕಾರಣವೇನೆಂದರೆ ಬಳಕೆ ಅಸಮಾನತೆಗಳು ಸಾಮಾನ್ಯವಾಗಿ ಅಸಮಾನತೆಗಳ ವ್ಯಾಪ್ತಿಯನ್ನು ಕೀಳಂದಾಜು ಮಾಡುತ್ತವೆ. ಗೃಹಕೃತ್ಯದ ಆದಾಯ (ಬಳಕೆಗೆ ಬದಲಾಗಿ) ಆದ ಅಸಮಾನತೆಗಳು, ಅಸಮಾನತೆಯ ವ್ಯಾಪ್ತಿಗೆ ಸಂಬಂಧಿಸಿದಂತೆ ಉತ್ತಮ ಸೂಚಕಗಳನ್ನೊದಗಿಸುತ್ತವೆ.

ಭಾರತೀಯ ಮಾನವ ಅಭಿವೃದ್ಧಿ ಸರ್ವೆ (ಐಹೆಚ್‌ಡಿಎಸ್) ಸಂಸ್ಥೆಯಲ್ಲಿ ಭಾರತದಲ್ಲಿನ ಕುಟುಂಬಗಳ ಆದಾಯ ಹಂಚಿಕೆಯನ್ನು ಅಂದಾಜು ಮಾಡಿತು. ಅದರ ಫಲಿತಾಂಶಗಳು, ಆಶ್ಚರ್ಯವಲ್ಲವೆನ್ನುವಂತೆ, ಬಳಕೆಗೆ ಸಂಬಂಧಿಸಿದಂತೆ ಜಿನಿ ಸಹಕರ್ತೃತ್ವ ಒದಗಿಸಿದ್ದಕ್ಕಿಂತ ಹೆಚ್ಚಿನ ರೀತಿಯಲ್ಲಿ ಹೆಚ್ಚಿನ ಆದಾಯದ ಅಸಮಾನತೆಯನ್ನು ಪ್ರದರ್ಶಿಸಿತು. ಈ ರೀತಿಯಲ್ಲಿ, ಜಿನಿ ಸೂಚ್ಯಂಕವು ಬಳಕೆ ಅಸಮಾನತೆಯನ್ನು ಕುರಿತಂತೆ ಭಾರತಕ್ಕೆ ಸಂಬಂಧಿಸಿ 0.38ರಷ್ಟು ಇದ್ದರೆ ಅದೇ ಜಿನಿ ಸೂಚ್ಯಂಕವು ಆದಾಯವನ್ನು ಆಧರಿಸಿ ನೀಡಿರುವುದು 0.52 ರಷ್ಟಿದೆ. ನಗರಗಳ ಆದಾಯವು ಗ್ರಾಮೀಣ ಪ್ರದೇಶಗಳ ಆದಾಯಕ್ಕಿಂತ ಹೆಚ್ಚಿನದಾಗಿದ್ದು, ಅವು ಕಡಿಮೆ ಅಸಮಾನತೆಯನ್ನು ಹೊಂದಿವೆ. ಅದು ಜಿನಿ ಸಹ ಕರ್ತೃತ್ವ ತೋರಿಸುವ 0.48 ಇದ್ದು, ಗ್ರಾಮೀಣ ಪ್ರದೇಶದ ಜಿನಿ ಆದಾಯ ಸಹಕೃರ್ತೃತ್ವ ತೋರಿಸುವ 0.49ಕ್ಕೆ ತುಲನೆ ಮಾಡಬಹುದಾಗಿದೆ. ಅದಕ್ಕಿಂತ ಹೆಚ್ಚಾಗಿ, ಅಸಮಾನತೆಯುಳ್ಳ ಗ್ರಾಮೀಣ ಆದಾಯವು ಹೆಚ್ಚಾಗಿ ಕುಶಲರಲ್ಲದ ವೇತನ ಶ್ರಮದಲ್ಲಿ ಮೇಲುಗೈ ಪಡೆದಿದೆ. ಈ ರೀತಿಯಲ್ಲಿ, ನಗರದ ಕೌಶಲ್ಯ ಹೊಂದಿರುವ, ಕೈಗಾರಿಕಾ ಕೇಂದ್ರಿತ ಶ್ರಮಕ್ಕೆ ಸಂಬಂಧಿಸಿದ ಒಳಪ್ರದೇಶದ ಮೂಲಾದಾಯದ (ಒಳಗಡೆಯ ಶ್ರಮ) ಅಸಮಾನತೆಗಳು ಹಾಗೂ ಕೌಶಲ್ಯ ಹೊಂದಿರದ, ಹೊರ ಪ್ರದೇಶದ (ಫಾರ್ಮ್ ಅಥವಾ ಕಾರ್ಖಾನೆ ಕೂಡ) ಶ್ರಮ, ಅಂತರ – ಮೂಲಾಧಾಯದ ಅಸಮಾನತೆಗಳು ಉದಾಹರಣೆಗೆ ಶ್ರಮ ಹಾಗೂ ಬಂಡವಾಳಗಳು ವಿರುದ್ಧವಾಗಿವೆಯೆಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ.

ಪಟ್ಟಿ – 2 ಕುಟುಂಬಗಳ ಸರಾಸರಿಯು ಅನೇಕ ಮೂಲಗಳಿಂದ ಆದಾಯ ಪಡೆಯುತ್ತಿರುವುದನ್ನು ಸೂಚಿಸುತ್ತದೆ. ಒಂದು ಪಟ್ಟಿ ತೋರಿಸುವಂತೆಯೇ ಆದಾಯ


ಸಂಪನ್ಮೂಲಗಳಲ್ಲಿರುವ ವೈವಿಧ್ಯತೆ ಮತ್ತು ಹಾಗಾಗಿಯೇ ಅದರಿಂದಾಗಿ ಭಾರತೀಯ ಆರ್ಥಿಕತೆಯಲ್ಲಿನ ವಿವಿಧ ಘಟಕಗಳ ಮಧ್ಯೆ ಇರುವ ಅಂತರ್–ಸಂಬಂಧಗಳು ಹಾಗೂ ಆರ್ಥಿಕತೆಯ ಒಂದು ಘಟಕಕ್ಕೆ ಸಂಬಂಧಿಸಿದ ಕಾಯಿದೆಗಳು ಬೃಹತ್ ಆರ್ಥಿಕತೆಯ ಒಂದು ಘಟಕಕ್ಕೆ ಸಂಬಂಧಿಸಿದ ಕಾಯಿದೆಗಳು ಬೃಹತ್ ಸಂಖ್ಯೆಯ ಕುಟುಂಬಗಳ ಮೇಲೆ ಮಾಡಬಹುದಾದ ವಿಸ್ತೃತ ಪರಿಣಾಮವನ್ನು ಧ್ವನಿಸುತ್ತದೆ. (ಐಹೆಚ್‌ಡಿಎಸ್ 2010:17) ಅಷ್ಟೇ ಮುಖ್ಯವೆಂಬಂತೆ, ಇಷ್ಟಾಗಿಯೂ ಅದು ಸೂಚಿಸುವಂತೆ ಬಹುಮಟ್ಟಿಗಿನ (ಸುಮಾರು 57.4 ಶೇಕಡಾ) ಕುಟುಂಬಗಳು ತಮ್ಮ ಆದಾಯವನ್ನು ವೇತನ ಕೆಲಸದಿಂದ ಇಲ್ಲವೇ ಬೇಸಾಯದಿಂದ ಪಡೆಯುತ್ತವೆ ಎಂಬುದಾಗಿದೆ. ವೇತನ ಆದಾಯವು ಬಹು ದೊಡ್ಡ ಪಾಲನ್ನು ನೀಡುವುದರಿಂದಾಗಿಯೇ, ಮೂಲ ಆದಾಯದ ಅಸಮಾನತೆಗಳು ವ್ಯಕ್ತಿಗತ ಆದಾಯದ ಅಸಮಾನತೆಗಳಿಗೆ ಪ್ರಧಾನ ಚಾಲನಾಶಕ್ತಿಗಳಾಗಿರಬಹುದಾಗಿದೆ.

### ಮೂಲ ಅಸಮಾನತೆಗೆ ಸಂಬಂಧಿಸಿದಂತೆ ಜಾಗತಿಕ ಹಾಗೂ ಕೌಟುಂಬಿಕ ಅಥವಾ ಚಾಲನಶಕ್ತಿಗಳು

ಮೂಲ ಅಸಮಾನತೆಯ ಚಾಲನಾಶಕ್ತಿಗಳನ್ನು ವಿಸ್ತಾರವಾಗಿ ಎರಡು ಗುಂಪಾಗಿ ತಿಳಿಯಬಹುದಾಗಿದೆ. ಬಹಿರ್ಜಾತ ಜಾಗತೀಕರಣಕ್ಕೆ ಸಂಬಂಧಿದಂತೆ ಹಾಗೂ ಅಂತರ್‌ವರ್ಧಕ (ಸ್ವದೇಶಿ ಕಾಯಿದೆಗಳಿಂದ ರೂಪಿತಗೊಂಡಿದ್ದು) ವ್ಯಾಪಾರ ಮುಕ್ತತೆಯಲ್ಲಿರುವ ಹಂತಗಳು. ಆರ್ಥಿಕ ಮಾರುಕಟ್ಟೆಯಲ್ಲಿನ ಉದಾರೀಕರಣ (ಬಂಡವಾಳ ಮುಕ್ತತೆ) ಹಾಗೂ ತಾಂತ್ರಿಕ ಬದಲಾವಣೆಗಳನ್ನು ಮೂಲ ಅಸಮಾನತೆಯ ವಿಸ್ತೃತ ಬಹಿರ್ದೆಸೆಯ ಚಾಲನಶಕ್ತಿಗಳೆಂದು ಗುರುತಿಸಲಾಗಿದೆ. ಅದರ ಜೊತೆಯಲ್ಲಿ ಹಣ ಸಂಬಂಧೀ, ವಿನಿಮಯ ದರ ಹಾಗೂ



**ಚಿತ್ರ 1 : ವ್ಯಾಪಾರ ಮುಕ್ತತೆ ಹಾಗೂ ಭಾರತದಲ್ಲಿ ಆದಾಯ ಮೂಲದಲ್ಲಿರುವ ಅಸಮಾನತೆಗಳು**




ಆಧಾರ : ಪೆನ್ ವರ್ಲ್ಡ್ ಟೇಬಲ್ ವರ್ಷನ್ 7.1, 8.0 ದಿಂದ ಪಡೆದ ದತ್ತಾಂಶಗಳು

ಆದಾಯ ಸಂಬಂಧೀ ಕಾಯಿದೆಗಳಿಗೆ ಸಂಬಂಧಿಸಿದವುಗಳು ಆ ರೀತಿಯ ಅಸಮಾನತೆಗಳಿಗೆ ಅಂತರ್ ದೆಸೆಯ ಚಾಲನಶಕ್ತಿಗಳಾಗಿ ಅವುಗಳ ಮೂಲಕ ಬೆಳವಣಿಗೆ, ಹಣತೊಡಗಿಸುವಿಕೆ ಹಾಗೂ ಉದ್ಯೋಗಕ್ಕೆ ಪ್ರತಿಕೂಲವಾಗಿ ಕೆಲಸ ಮಾಡುತ್ತವೆ (ಯುಎನ್‌ಡಿಪಿ, 2013)

ವ್ಯಾಪಾರೀ ಮುಕ್ತತೆಯ ಅಳತೆಗೋಲಾಗಿ ನಾವು ಆಯಾತ–ನಿರ್ಯಾತ (ವ್ಯಾಪಾರಕ್ಕೆ ಸಂಬಂಧಿಸಿ) ಅಂಕಿ–ಅಂಶಗಳ ಬಳಕೆ ಮಾಡಿಕೊಂಡು ವಾಸ್ತವದ ಜಿಡಿಪಿ ಸರಾಸರಿಗೆ ಬರುತ್ತೇವೆ. ಭಾರತಕ್ಕೆ ಹರಿದು ಬರುವ ನಿವ್ವಳ ಬಂಡವಾಳ ಪಟ್ಟಿಯ ಗಾತ್ರದ ಮೂಲಕ ಆರ್ಥಿಕ ಉದಾರೀಕರಣವು ಅಳೆಯಲ್ಪಡುತ್ತದೆ. ಹಾಗೇ ತಾಂತ್ರಿಕ ಬದಲಾವಣೆಯು ಬಂಡವಾಳ ಹಾಗೂ ಶ್ರಮದ (K/L) ಅನುಪಾತದ ಮೂಲಕ ಅಳೆಯಲ್ಪಡುತ್ತದೆ.


ಚಿತ್ರ–1 ವ್ಯಾಪಾರೀ ಮುಕ್ತತೆ ಹಾಗೂ ಶ್ರಮ ಪಾಲುಗಳ ಮಧ್ಯೆ ಇರುವ ಸಂಬಂಧವನ್ನು ತಿಳಿಸುತ್ತದೆ. ಹಾಗೆಯೇ ಚಿತ್ರ 2 ಆರ್ಥಿಕ ಮುಕ್ತ ಹಾಗೂ ಶ್ರಮ ಪಾಲನೆ ಸಂಬಂಧವನ್ನು ಹೇಳುವುದಾಗಿದೆ. ನಾವು ಕಂಡಂತೆ ಭಾರತವು ವ್ಯಾಪಾರ ಹಾಗೂ ಬಂಡವಾಳ ಹರಿವುಗಳ ಬಗ್ಗೆ ಮುಕ್ತವಾದಂತೆಲ್ಲ ಶ್ರಮ ಪಾಲುಗಳು ಇಳಿಮುಖಗೊಂಡಿವೆ.

ನಂತರದಲ್ಲಿ ನಾವು ತಾಂತ್ರಿಕ ಬದಲಾವಣೆಯ ಅಂದಾಜಿಗೆ ಬರಬೇಕಾಗಿದೆ. ಫೀನ್‌ಸ್ಟ್ರಾ ಎಟ್ ಅಲ್ (2013) (2013ರ ಇಂಕ್ಲಾರ ಮತ್ತು ಟಿಮ್ಮರ್ ಉದ್ಧರಿಸುವಂತೆ) ಬಳಕೆ ಮಾಡಿದ ದೃಷ್ಟಿಕೋನದಿಂದ, ಶ್ರಮದ ವಿನಿಯೋಗ, ಉತ್ಪಾದಿತ ವಸ್ತುವಿಗೆ ಆರ್ಥಿಕತೆಯಲ್ಲಿದ್ದ ಕೆಲಸಗಾರರ ಸಂಖ್ಯೆ ('E' ಟೈಮ್ಸ್ ಎಂದು ಕರೆಯೋಣ) ಹಾಗೂ ಅವರ ಸರಾಸರಿ ಮಾನವ ಬಂಡವಾಳ (ಇದನ್ನು 'hc' ಎನ್ನೋಣ) ಅಂದಾಜು ಬಳಕೆ ಮಾಡಿಕೊಂಡಿದ್ದೇವೆ. ಕಾಬ್–ಡೌಗ್ಲಾಸ್‌ರ ಉತ್ಪಾದನಾ ಕಾರ್ಯಾಚರಣೆಗೆ ಸಂಬಂಧಿಸಿದ ಮಾಪನವನ್ನು ಬಳಸಿಕೊಂಡು ಶ್ರಮ ಬಳಕೆಯ ಒಲವುಗಳನ್ನು ಫಲಿತಾಂಶ 'L' ಮೂಲಕ ಗ್ರಹಿಸಲಾಗಿದೆ. ಈ 'L'

ಜತೆ 'K' ಯನ್ನು – ಭಾರತೀಯ ಆರ್ಥಿಕತೆಯಲ್ಲಿನ ಬಂಡವಾಳ / ಶ್ರಮದ ಅನುಪಾತವನ್ನು ಲೆಕ್ಕಹಾಕುವುದರಿಂದ ಕಾಣಬರುವ ಬಂಡವಾಳ ಬಳಕೆಗೋಸ್ಕರ – ಜೊತೆಗೂಡಿಸುತ್ತೇವೆ. ಪಟ್ಟಿ–3ರಲ್ಲಿರುವ ಫಲಿತಾಂಶಗಳು ಬಂಡವಾಳ ಶ್ರಮದ ಅನುಪಾತ ಭಾರತದಲ್ಲಿ 1991 ರಿಂದ ಸುಮಾರು 2.37 ರಷ್ಟು ಏರಿಕೆಯನ್ನು ಕಂಡಿವೆ. ಅದೇ ಸಂದರ್ಭದಲ್ಲಿ. ಜಿಡಿಪಿ ಯಲ್ಲಿನ ಶ್ರಮ ಪರಿಹಾರದ ಪಾಲು ವಾಸ್ತವವಾಗಿ (ಪ್ರಸ್ತುತದಲ್ಲಿನ ರಾಷ್ಟ್ರೀಯ ಬೆಲೆಗಳಿಗೆ ಸಂಬಂಧಿಸಿ) 0.65 ರಿಂದ 0.485ಗೆ ಇಳಿದಿದೆ. ಪಟ್ಟಿ 3ರಲ್ಲಿ ಒಟ್ಟಾರೆ ಮೂಲ ಉತ್ಪಾದನೆಯಲ್ಲಿ ಏರಿಕೆಯಾಗಿರುವುದನ್ನು ಕೂಡ ನಮೂದಿಸಿದ್ದು ಅದು ಸತತವಾಗಿ ರಾಷ್ಟ್ರೀಯ ಬೆಲೆಗಳಾಗಿದ್ದ 0.77 ರಿಂದ 1.07 ಏರಿದೆ. (ಬೇಸ್ 2005=1) ಒಟ್ಟಾರೆ ಮೂಲ ಉತ್ಪಾದನೆಯಲ್ಲಿನ ಹೆಚ್ಚಿನ ಲಾಭಾಂಶವು ಬಡ ಶ್ರಮಿಕರಿಗಿಂತ ಹೆಚ್ಚಾಗಿ ಬಂಡವಾಳದ ಮಾಲೀಕರಿಗೆ ಸೇರಿಹೋಗಿದೆ ಎಂದು ಊಹಿಸಬಹುದಾಗಿದೆ.

ಈ ರೀತಿಯಲ್ಲಿ ಭಾರತವು ಸರಕುಗಳ ಒಳಹರಿವು ಸೇವೆಗಳ ಹಾಗೂ ಬಂಡವಾಳಗಳಿಗೆ ಸಂಬಂಧಿಸಿದಂತೆ ಹೆಚ್ಚು ಹೆಚ್ಚಾಗಿ ಸಮಾವೇಶಗೊಳ್ಳುತ್ತಾ ಬಂದಿದ್ದು, ತಾಂತ್ರಿಕ ನಾವೀನ್ಯಗಳ ಮೂಲಕ ಪ್ರಯೋಜನಗಳನ್ನು ಕೂಡ ಪಡೆದುಕೊಂಡಿದೆ. ಇದರ ಪರಿಣಾಮವಾಗಿ 1991–2011ರ ಅವಧಿಯಲ್ಲಿ ಇದಕ್ಕೆ ಸಂಬಂಧಿಸಿದ ಶ್ರಮ ಪಾಲಿನ ಮೇಲೆ ಇಳಿಕೆಯ ಪರಿಣಾಮವುಂಟು ಮಾಡಿದೆ. ಇಷ್ಟಾದರೂ, ನಮಗೆ ಲಭ್ಯವಿರುವ ದತ್ತಾಂಶವು ಕುಶಲ ಹಾಗೂ ಕುಶಲರಲ್ಲದ ವೇತನ ಶ್ರಮದವರಿಗೆ ಸಂಬಂಧಿಸಿದ ಅಸಮಾನತೆಗಳನ್ನು ಭಾರತಕ್ಕೆ ಸಂಬಂಧಿಸಿದಂತೆ – ಆಂತರಿಕ – ಮೂಲ ಅಸಮಾನತೆಗಳನ್ನು – ಗುರುತಿಸುವಲ್ಲಿ ವಿಫಲವಾಗಿದೆ.

**ಚಿತ್ರ 2 : ಆರ್ಥಿಕ ಉದಾರೀಕರಣ ಹಾಗೂ ಅಸಮಾನತೆ**




ಆಧಾರ : ಆರ್ ಬಿ ಐ ವಾರ್ಷಿಕ ವರದಿ ಪೆನ್ ವರ್ಲ್ಡ್ ಟೇಬಲ್ಸ್, ವರ್ಷನ್ 8.0

ಶ್ರಮ ಪಾಲುಗಳ ಮೇಲೆ ಮುಕ್ತತೆ ಮತ್ತು ತಾಂತ್ರಿಕ ಬದಲಾವಣೆಗಳು ಮಾಡಿದ ಪರಿಣಾಮಕ್ಕೆ ಸಂಬಂಧಿಸಿದಂತೆ ವಿಸ್ತೃತ ಒಲವುಗಳು ಜಾಗತಿಕ ಅನುಭವಕ್ಕೆ ಸರಿದೂಗುವಂತೆ ಕಾಣುತ್ತದೆ. ವಾಸ್ತವವಾಗಿ, ವ್ಯಾಪಾರ ಹಾಗೂ ಅಭಿವೃದ್ಧಿ ವರದಿ (UNCTAD) 2013 ಹೇಳುವ ಹಾಗೆ ಜಿಡಿಪಿಯ ಸರಾಸರಿಯಾಗಿ ಶ್ರಮದ ಆದಾಯ ಪಾಲುಗಳು 1995–2014 ಅವಧಿಯಲ್ಲಿ ಬಹುಮಟ್ಟಿಗೆ ಜಾಗತಿಕವಾಗಿ ನೆಲಕಚ್ಚಿದ್ದು, ಭಾರತವು ಈ ವಿಷಯದಲ್ಲಿ ತನ್ನ ಪ್ರಾದೇಶಿಕ ಸರಿಸಮಾನರಲ್ಲಿ ಕನಿಷ್ಠತೆಯನ್ನು ತೋರಿತು. ಅಂತಹ ಕೆಳಮಟ್ಟದ ಹಾಗೂ ಇಳಿಕೆಯುಳ್ಳ ಶ್ರಮ ಆದಾಯದ ಪಾಲುಗಳು ಖಾಸಗಿ ಉಪಭೋಗದ ವೆಚ್ಚದ ಮೇಲೆ ಪರಿಣಾಮ ಬೀರಿದೆ ಹಾಗೇ ಭಾರತದ ಬೆಳವಣಿಗೆ ಕಥೆಯುದ್ದಕ್ಕೂ ಸಾಗಿಹೋಗಿದೆ.

ಸ್ವದೇಶಿ ವಾಸ್ತವಾಂಶಗಳು ಮೂಲ ಆದಾಯದ ಅಸಮಾನತೆಗಳನ್ನು ಹೇಗೆ ಪರಿಣಮಿಸುತ್ತವೆ? 1980ರ ನಂತರದಲ್ಲಿ ಕಾಣಿಸಿಕೊಂಡ ಸಾಲ ಸಮಸ್ಯೆಯಿಂದಾಗಿ ಕೀನ್‌ನ ಸ್ಥೂಲ–ದೃಢೀಕರಣಕ್ಕೆ ಸಂಬಂಧಿಸಿದ ಒತ್ತು ಬೃಹತ್ ಹಣಕಾಸಿಗೆ ಸಂಬಂಧಿಸಿದ ಸಮತೋಲನ ಹಾಗೂ ಬೆಲೆಗಳ ಸ್ಥಿರೀಕರಣದ ಕಡೆ ಸ್ಥಳಾಂತರಗೊಂಡಿತು. ಈ ರೀತಿ ನಿರ್ಬಂಧಿತ ಹಣಕಾಸು ಸಂಬಂಧೀ ಕಾಯಿದೆಗಳು, ಬಡ್ಡಿದರಗಳು ಬಂಡವಾಳ ಹಾಗೂ ಬೆಳವಣಿಗೆಯ ಮೇಲೆ ಪ್ರತಿಕೂಲವಾಗಿ ಪರಿಣಮಿಸಿ. ನಿರುದ್ಯೋಗದ ಉಲ್ಬಣ ಸ್ಥಿತಿಗೆ ಕಾರಣವಾದವು. ಆರ್ಥಿಕ ಉದಾರೀಕರಣವು



ವಾಸ್ತವ ಪರಿಣಾಮಕಾರೀ ವಿನಿಮಯ ದರ (REER) ದ ಮೇಲೆ ಪರಿಣಾಮ ಬೀರಿ, ಅದು ಉಲ್ಬಣಿಸಿ ಹೆಚ್ಚಿನ ರೀತಿಯ ಆಮದಿಗೆ ಕಾರಣವಾಗಿ, ಸ್ವದೇಶಿ ಉತ್ಪಾದನೆ ಹಾಗೂ ಉದ್ಯೋಗದ ಮೇಲೆ ಪ್ರತಿಕೂಲ ಪರಿಣಾಮವುಂಟು ಮಾಡಿತು. ಅದಕ್ಕೆ ಸರಿಸಮಾನವಾಗಿ ಒಳಸೌಲಭ್ಯಗಳಂತಹ ಬಾಬ್ತುಗಳಿಗೆ, ಆರೋಗ್ಯ ಹಾಗೂ ಶಿಕ್ಷಣಗಳಲ್ಲೂ ಕೂಡ ವೆಚ್ಚ ಕಡಿತಗೊಳಿಸುವ ಮೂಲಕ ಹಣಕಾಸಿನ ಸಮತೋಲನ ಕಾಪಾಡಿಕೊಳ್ಳಬೇಕೆಂದಾಯಿತು. ಇವೆಲ್ಲವೂ ಬಡವರ ಹಣಗಳಿಕೆಯ ಸಾಧ್ಯತೆಗಳನ್ನು ಹಾಗೂ ಸಾಮಾಜಿಕ ಚಲನಶೀಲತೆಯ ಅವಕಾಶಗಳನ್ನು ಕಡಿಮೆ ಮಾಡಿತು (UNDP 2013)

ಈ ರೀತಿಯಲ್ಲಿ, ಬೆಲೆಗಳನ್ನು ದೃಢಗೊಳಿಸುವ ಹಾಗೂ ಹಣಕಾಸು ಸಮತೋಲನ ಸಾಧಿಸುವ ದೃಷ್ಟಿಯುಳ್ಳ ರಾಷ್ಟ್ರೀಯ ಕಾಯಿದೆಗಳು ಜೆಡಿಪಿಯಲ್ಲಿನ ಶ್ರಮ ಪಾಲನ್ನು ಕಡಿಮೆಗೊಳಿಸುವ ಅನುದ್ದೇಶಿತ ಪರಿಣಾಮಕ್ಕೆ ಕಾರಣವಾದವು. ಭಾರತವು ವಿಶೇಷವಾಗಿ 2010ರ ನಂತರದ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ನಂತರದಲ್ಲಿ ಬಿಗಿಯಾದ ಹಣಕಾಸು ಹಾಗೂ ಹಣಕಾಸು ಸಂಬಂಧೀ ಕಾಯಿದೆಗಳನ್ನು ಅನುಸರಿಸುವ ಮೂಲಕ ಬೆಲೆ ದೃಢೀಕರಣಗೊಳಿಸುವುದನ್ನು ಗುರಿಯಾಗಿಸಿಕೊಂಡಿತು. ಅಂತಹ ಕಾಯಿದೆಗಳು ಅವರು ಸಾಧಿಸಬೇಕೆಂದಿದ್ದ ಸೂಚಿತ ಗುರಿಗಳನ್ನು ಉದಾ: ಬೆಲೆಗಳ ದೃಢೀಕರಣ ನಿರ್ವಹಣೆ ಹಾಗೂ ಹಣಕಾಸು ಸಂಬಂಧೀ ಕೊರತೆಯನ್ನು ಇಳಿಸಬೇಕೆನ್ನುವುದರ ಮೇಲೆ ಮಿತಿಯುಳ್ಳ ಪರಿಣಾಮ (ಅದು ಇದ್ದ ಪಕ್ಷದಲ್ಲಿ) ವುಂಟುಮಾಡಿತು. ಇವು ಕೂಡ ಬೆಳವಣಿಗೆ ಹಾಗೂ ನಿರುದ್ಯೋಗಗಳ ಬೆಲೆ ತೆರುವ ಕಾರಣವಾಗಿ, ಇಳಿಮುಖಗೊಂಡ ಶ್ರಮ ಪಾಲಿನ ಸ್ವರೂಪದಲ್ಲಿ ಆದಾಯ ಮೂಲದ ಅಸಮಾನತೆಗಳು ಬೆಳೆಯುವಲ್ಲಿ ಪರಿಣಮಿಸಿದವು. ಆದಾಗ್ಯೂ, ಅಂತಹ ರಾಷ್ಟ್ರೀಯ ಕಾಯಿದೆಗಳು ಹೊರಗಣ ಆಘಾತಗಳ ಪರಿಣಾಮಗಳನ್ನು ಅವು ಆದಾಯ ಮೂಲದ ಅಸಮಾನತೆಗಳಿಗೆ ಸಂಬಂಧಿಸಿದಂತೆ ಜಾಗತಿಕ ಚಾಲನ ಶಕ್ತಿಗಳಾಗಿ ಕೆಲಸ ಮಾಡುವಂಥವಾಗಿರುತ್ತವೆ; ನಿಶ್ಚಿತವಾಗಿ ಎದುರಿಸಬೇಕೆನ್ನುವ ಗುರಿ ಹೊಂದಿರುತ್ತವೆ.




**ನೀತಿ ತೊಡಕುಗಳು**

ಅಸಮಾನತೆಗಳಿಗೆ ಸಂಬಂಧಿಸಿದ ಈ ಕ್ಲೇಶಕಾರೀ ಸಮಸ್ಯೆಯನ್ನು ವಿಭಿನ್ನ ದೃಷ್ಟಿಕೋನದಿಂದ ಪರಿಶೀಲಿಸುವ ಕಾಲ ಬಂದಿದೆ. ಆ ಸಮಸ್ಯೆಯು ರಾಷ್ಟ್ರೀಯ ಆದಾಯದಲ್ಲಿನ ಶ್ರಮ ಪರಿಹಾರ ಹಾಗೂ ಶ್ರಮ ಪಾಲಿಗೆ ಸಂಬಂಧಿಸಿದುದಾಗಿದೆ. ಕಾಯಿದೆ ಪರಿಗಣಿಸುವಿಕೆಯು ಅಂತಹ ಅಸಮಾನತೆಗಳನ್ನು ಹೇಗೆ ನಿಭಾಯಿಸಬೇಕೆನ್ನುವ ಚಮತ್ಕಾರದ ಪ್ರಶ್ನೆಗೆ ಹಾಗೂ ಇದೇ ಉದ್ದೇಶಕ್ಕೆ ಸರ್ಕಾರದ ಪಾತ್ರವೇನಿರಬೇಕು ಎನ್ನುವುದಕ್ಕೆ ಗಮನವೀಯಬೇಕಾಗಿದೆ. ಭಾರತದಲ್ಲಿರುವ ಪುರಾತನವೆನ್ನುವಂಥ ಕಾರ್ಮಿಕ ಕಾಯಿದೆಗಳಲ್ಲಿರುವಂತೆಯೇ, ಶ್ರಮದ ಪಾಲನ್ನು ರಕ್ಷಿಸುವ ಸರ್ಕಾರದ ನಿರ್ಬಂಧಗಳು ಏನನ್ನೂ ಮಾಡಲಾಗಿಲ್ಲ ಇಲ್ಲವೇ ಹೆಚ್ಚಿನ ನಿರುದ್ಯೋಗಕ್ಕೆ (ಹೆಚ್ಚಾಗಿ ಸಂಕುಚಿತಗೊಂಡ ಶ್ರಮದ ರೂಪದಲ್ಲಿ) ಅಥವಾ ಯಾಂತ್ರೀಕರಣವು ಹೆಚ್ಚಾಗುವುದಕ್ಕೆ ಕಾರಣವಾಗುತ್ತವೆ. ಬಂಡವಾಳಕ್ಕೆ ಸಂಬಂಧಿಸಿದ ಪ್ರಗತಿದಾಯಕ ತೆರಿಗೆ ವ್ಯವಸ್ಥೆಯೂ ಏನೊಂದನ್ನೂ ಮಾಡಲಾಗದೆ, ಹೆಚ್ಚಿನ ತೆರಿಗೆ ತಪ್ಪಿಸಿಕೊಳ್ಳುವುದರಲ್ಲಿ ಮುಕ್ತಾಯಗೊಳ್ಳುತ್ತದೆ.

ಒಂದು ಕಡೆ, ಹಲವಾರು ರೀತಿಯ ಲಾಭ–ಹಂಚಿಕೆಯ ವೇತನ ಒಡಂಬಡಿಕೆಗಳನ್ನು ಬಳಸಿಕೊಳ್ಳುವ ಸಂಸ್ಥೆಗಳಿಗೆ ತೆರಿಗೆ ವಿರಾಮ / ರಿಯಾಯಿತಿಗಳ ರೂಪದಲ್ಲಿ ಸರ್ಕಾರವು ಸಾಮಾಜಿಕ ಉತ್ತೇಜನ ನೀಡಬೇಕೆಂದು ಗೊತ್ತುಪಡಿಸುತ್ತೇವೆ. ಇವು ಅಸಮಾನತೆಗಳನ್ನು ತಗ್ಗಿಸಲು ಸಹಾಯ ಮಾಡುವುದು ಅಷ್ಟೇ ಅಲ್ಲ, ಕ್ರಮಬದ್ಧವಾದ ಖಾಸಗಿ ಉಪಭೋಗದ ಮೂಲಕ ಉತ್ತಮರೀತಿಯ ಸ್ಥೂಲ ಆರ್ಥಿಕ ಉತ್ಪನ್ನಗಳಿಗೆ ಕಾರಣವಾಗುವ ಭರವಸೆಯನ್ನೂ ನೀಡಿ, ಸರಾಸರಿ ಬೇಡಿಕೆಯನ್ನೂ ನಿರ್ವಹಿಸುತ್ತೇವೆ. (ಜಯಕುಮಾರ್, 2014 ಏಪ್ರಿಲ್ 30) ಮತ್ತೊಂದು ಕಡೆ, ಸರ್ಕಾರದ ಸ್ಥೂಲ ಕಾಯಿದೆಗಳು ಬೆಳವಣಿಗೆ ಹಾಗೂ ಹಣದುಬ್ಬರದ ಸ್ಥಿತಿಯಿಂದ ಉದ್ಯೋಗ ಮತ್ತು ಕೌಶಲ್ಯ ವಿಕಸನಗೊಳ್ಳುವುದರ ಕಡೆಗೆ ದೃಷ್ಟಿಪಲ್ಲಟಗೊಳ್ಳಬೇಕಾಗಿದೆ. ಇದರಿಂದಾಗಿ ಜಾಗತೀಕರಣದ ಹಾನಿಕಾರಕ ಪರಿಣಾಮ ವಿಶೇಷವಾಗಿ ಆರ್ಥಿಕ ಜಾಗತೀಕರಣವನ್ನು ಮತ್ತು ಸಂಬಂಧಪಟ್ಟ ಆದಾಯ ಮೂಲ ಪಾಲುಗಳ ಮೇಲೆ ಕಾಣಿಸಿಕೊಳ್ಳುವ ತಾಂತ್ರಿಕ ಪರಿಣಾಮಗಳಿಂದಲೂ ಶಮನಗೊಳಿಸಬಹುದಾಗಿದೆ. ನಗದು ವರ್ಗಾವಣೆಯನ್ನು, ವಿಶೇಷವಾಗಿ ಗ್ರಾಮೀಣ ಕೂಲಿಕಾರರನ್ನು ಗುರಿ ಮಾಡಿಕೊಂಡು ಮಾಡಿದಲ್ಲಿ ಭಾರತದಲ್ಲಿನ ಆದಾಯ ಮೂಲದಲ್ಲಿನ ಅಸಮಾನತೆಗಳನ್ನು ತಗ್ಗಿಸಲು ಸಹಾಯವಾಗಬಹುದೇನೋ. ಒಟ್ಟಾರೆಯಾಗಿ, ವೈಯಕ್ತಿಕ ಅಸಮಾನತೆಗಳಿಗೆ ಬದಲಾಗಿ ಕಾರ್ಯಾಚರಣೆಯ ಅಸಮಾನತೆ ತಗ್ಗಿಸುವುದನ್ನು ಗುರಿಯಾಗಿಸಿಕೊಂಡ ಒಗ್ಗೂಡುವಿಕೆಯ ಅಳತೆಗೋಲುಗಳಿಂದಾಗಿ ದೀರ್ಘಾವಧಿಯ ಪರಿಣಾಮವಿರಬಹುದು ಅನ್ನಿಸುತ್ತದೆ. ❑

ಕೇಂದ್ರ ಪ್ರಜ್ಞೆ

ನಿರ್ವಹಣೆ

# ಹಸಿರು ಕ್ರಾಂತಿ: ತಂತ್ರಜ್ಞಾನ

* ಪ್ರೊ. ಟಿ. ಎನ್. ಶ್ರೀನಿವಾಸನ್
** ಪವನ್ ಕಾಟ್ಕರ್
ಕನ್ನಡಕ್ಕೆ : ಎಸ್.ಎಸ್. ಜೋಶಿ




1960ರ ದಶಕದಲ್ಲಿ ಉಂಟಾಗಬಹುದಾಗಿದ್ದ ಆಹಾರ ಧಾನ್ಯದ ಬಿಕ್ಕಟ್ಟು ನಿವಾರಿಸಲು ಅನೇಕ ಕಾರಣಗಳು ಸಹಕಾರಿಯಾದವು. ಹೆಚ್ಚು ಇಳುವರಿ ನೀಡುವ ತಳಿಗಳಿಂದಾಗಿ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸತತ ಏರಿಕೆ ಕಂಡುಬಂದುದು ಮತ್ತು ಭೂಮಿಯ ಫಲವತ್ತತೆ ಹೆಚ್ಚಳವಾದುದು ಮುಂದೆ ಹಸಿರು ಕ್ರಾಂತಿ ಎಂಬ ಹೆಸರಿನಿಂದ ಖ್ಯಾತಿ ಪಡೆಯಿತು.

ಭಾರತದಲ್ಲಿ 1960ರ ದಶಕದಲ್ಲಿ ಲಕ್ಷಾಂತರ ರೈತರು ಅತ್ಯುತ್ಸಾಹದಿಂದ ಹಸಿರು ಕ್ರಾಂತಿಯನ್ನು ತಮ್ಮ ಜಮೀನುಗಳಲ್ಲಿ ಅಳವಡಿಸಿಕೊಂಡರು. ಕೃಷಿ ಕ್ಷೇತ್ರದಲ್ಲಿ ತಂತ್ರಜ್ಞಾನ ಅಳವಡಿಕೆಗೆ ಇದೊಂದು ಉತ್ತಮ ಉದಾಹರಣೆಯಾಗಿದ್ದು 1968ರಲ್ಲಿ ಆಗಿನ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರು ಇದರ ಯಶಸ್ಸನ್ನು ಪ್ರಚುರಪಡಿಸಲು 'ಗೋಧಿ ಕ್ರಾಂತಿ' ಎಂಬ ಹೆಸರಿನ ಅಂಚೆ ಸ್ಟ್ಯಾಂಪ್ ಒಂದನ್ನು ಬಿಡುಗಡೆ ಮಾಡಿದರು.

ಹಸಿರುಕ್ರಾಂತಿಯ ಹರಿಕಾರ ಎಂದೇ ಬಣ್ಣಿಸಲ್ಪಟ್ಟಿರುವ ಡಾ. ಎಂ.ಎಸ್. ಸ್ವಾಮಿನಾಥನ್ ಹೇಳುವಂತೆ 'ವೈಜ್ಞಾನಿಕ ಮತ್ತು ಸಾರ್ವಜನಿಕ ನೀತಿ ನಿರೂಪಣೆಗಳು.. ಅಂತರ್ ಶಿಸ್ತೀಯ ಅಧ್ಯಯನ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ದೊರೆತ ಸಹಕಾರವು 1960ರ ದಶಕದಲ್ಲಿ ಹಸಿರು ಕ್ರಾಂತಿಗೆ ಕಾರಣವಾಯಿತು. ಖಚಿತ ಮತ್ತು ಉತ್ತೇಜನಕಾರಿ ಮಾರುಕಟ್ಟೆ ಅವಕಾಶಗಳು ರೈತರಲ್ಲಿ ಸುಸ್ಥಿರ, ಹೆಚ್ಚು ಇಳುವರಿ ಆಧಾರಿತ ಕೃಷಿಯತ್ತ ಒಲಿಯುವ ದಿಸೆಯಲ್ಲಿ ಯಶಸ್ವಿಯಾದವು. ತಂತ್ರಜ್ಞಾನ ಅಳವಡಿಕೆಗೆ ವಿಶೇಷ ಪ್ಯಾಕೇಜ್‌ಗಳು, ವಿವಿಧ ಸೇವೆಗಳು ಹಾಗೂ ನೀತಿ ನಿಯಮಗಳು– ಹೀಗೆ ಎಲ್ಲವೂ ಸಮ್ಮಿಳನಗೊಂಡು ಈ ಯೋಜನೆ ಯಶಸ್ವಿಗೆ ಸಹಕಾರಿಯಾದವು.'

(ಐದು ದಶಕಗಳ ಹಿಂದೆ, 1960ರ ದಶಕದಲ್ಲಿ ಅಧಿಕ ಇಳುವರಿ ತಳಿಗಳನ್ನು ಬಳಸಿ ಕೃಷಿ ಉತ್ಪಾದನೆ ಹೆಚ್ಚಿಸುವ ಹೊಸ ಕೃಷಿ ನೀತಿಯನ್ನು ಅನುಷ್ಠಾನಕ್ಕೆ ತಂದ ಹೊಸದರಲ್ಲೇ 1966ರ ಜನವರಿ ಯೋಜನಾ ಸಂಚಿಕೆಯಲ್ಲಿ ಬಿ.ಎಸ್. ಮಿನ್ಹಾಸ್ ಮತ್ತು ಟಿ.ಎನ್. ಶ್ರೀನಿವಾಸನ್ ಅವರು ಇದರ ಬಗ್ಗೆ ವಿಸ್ತೃತ ಲೇಖನ ಬರೆದಿದ್ದರು).

### ಹಸಿರು ಕ್ರಾಂತಿಗೆ ಕಾರಣವಾದ ಅಂಶಗಳು

ಹಸಿರು ಕ್ರಾಂತಿ ಎಂದರೆ ಭಾರತ ಮತ್ತು ಇತರ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಕೃಷಿ ಜಮೀನಿನಲ್ಲಿ ಇಳುವರಿಯನ್ನು ಹೆಚ್ಚಿಸಲು ಕೈಗೊಳ್ಳಲಾದ ಕ್ರಮ ಎಂದು ಸಮಗ್ರವಾಗಿ ಬಣ್ಣಿಸಬಹುದು. ಒಂದು ನಿರ್ದಿಷ್ಟ ಜಾಗದಲ್ಲಿ ಸಾಂಪ್ರದಾಯಿಕ ವಿಧಾನವನ್ನು ಬಳಸಿ ಕೃಷಿ ಮಾಡಿ ಹೆಚ್ಚು ಇಳುವರಿ ಪಡೆಯುವುದಕ್ಕೆ ಬದಲಾಗಿ ಹೆಚ್ಚು ಇಳುವರಿ ನೀಡುವ ಹೊಸ ತಳಿಗಳನ್ನು ಬಳಸಿ ಕೀಟ ನಿಯಂತ್ರಣ ಔಷಧಿಗಳು (ಕೀಟನಾಶಕ), ರಸಗೊಬ್ಬರ ಮತ್ತು ನೀರಾವರಿ ತಂತ್ರಜ್ಞಾನದ ಬಳಕೆಯ ಮೂಲಕ ಹೆಚ್ಚು ಇಳುವರಿ ಪಡೆಯುವುದು ಇದರ ಮುಖ್ಯ ಉದ್ದೇಶವಾಗಿದೆ. ಹಸಿರು ಕ್ರಾಂತಿಯ ಪರಿಣಾಮವಾಗಿ ಭಾರತದಲ್ಲಿ ಆಹಾರದ ಬಿಕ್ಕಟ್ಟು ಉಂಟಾಗದಂತೆ ತಡೆಗಟ್ಟುವುದು ಸಾಧ್ಯವಾಯಿತು.

ಭಾರತದಲ್ಲಿ ಹಸಿರು ಕ್ರಾಂತಿ ಯೋಜನೆ ಅನುಷ್ಠಾನಕ್ಕೆ ಅನೇಕ ಕಾರಣಗಳಿವೆ. ಮೊಟ್ಟಮೊದಲನೆಯದಾಗಿ ಭಾರತದಲ್ಲಿ ರೈತರ ತಲಾ ಕೃಷಿ ಆದಾಯದ ಪ್ರಮಾಣ ಅತ್ಯಂತ ಕಡಿಮೆಯಾಗಿತ್ತು. ಒಬ್ಬರಿಗೆ ಒಂದು ದಿನಕ್ಕೆ ಕೇವಲ 395 ಗ್ರಾಮ್ ಆಹಾರ ಲಭ್ಯವಾಗುತ್ತಿತ್ತು. ಅಲ್ಲದೇ ಅನೇಕ ರೈತರು ತಮ್ಮ ಕುಟುಂಬಕ್ಕೆ ಅವಶ್ಯವಾದ ಪ್ರಮಾಣದಷ್ಟು ಮಾತ್ರ ಆಹಾರವನ್ನು ಉತ್ಪಾದಿಸುವುದರಲ್ಲಿ ತೊಡಗಿಸಿಕೊಂಡಿದ್ದರಿಂದ ಹಾಗೂ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ಜೀವನ


* ಪ್ರೊಫೆಸರ್ ಎಮಿರೈಟ್ಸ್, ಎಲೆ ಯೂನಿವರ್ಸಿಟಿ e-mail : t.srinivasan@yale.edu
** ಸಹಾಯಕ ನೀತಿ ವಿಶ್ಲೇಷಕರು, ರಾಂಡ್ ಕಾರ್ಪೊರೇಷನ್. e-mail : p.katkar@gmail.com

ನಿರ್ವಹಣೆಗೆ ಅನುಕೂಲ ಮಾಡಿಕೊಳ್ಳುವ ದೃಷ್ಟಿಯಿಂದ ಕೃಷಿಯನ್ನು ಬಳಸಿಕೊಳ್ಳದೇ ಇದ್ದುದರಿಂದ ಭಾರತದಲ್ಲಿ ಆಹಾರದ ಬಿಕ್ಕಟ್ಟು ಎದುರಾಗುವ ಭೀತಿ ಉಂಟಾಗಿತ್ತು. ಭಾರತದಲ್ಲಿ ಬೆಳೆಗಳು ಬಹುತೇಕವಾಗಿ ಮಳೆ ಆಧರಿಸಿದ್ದು ಕೆಲವು ಪ್ರಮಾಣವಷ್ಟೇ ನೀರಾವರಿ ಆಧಾರಿತ ಕೃಷಿ ಇತ್ತು.

ಸ್ವಾತಂತ್ರ್ಯ ಬಂದ ಹೊಸತರಲ್ಲಿ ಭಾರತ ಸರ್ಕಾರವು ಭಾರಿ ಉದ್ಯಮಗಳಿಗೆ ಹೆಚ್ಚು ಮಹತ್ವ ನೀಡಿತ್ತು. ಕೃಷಿ ಚಟುವಟಿಕೆಗೆ ಅಷ್ಟಾಗಿ ಗಮನ ಕೊಡದ ಕಾರಣ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ವೈದ್ಯಕೀಯ ತಂತ್ರಜ್ಞಾನದಲ್ಲಿ ಆದ ಬೆಳವಣಿಗೆಗಳಿಂದಾಗಿ ಮರಣ ಪ್ರಮಾಣವೂ ಕಡಿಮೆಯಾಗಿತ್ತು. ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಮರಣ ಪ್ರಮಾಣದ ಕುಂಠಿತದಿಂದಾಗಿ ಸಹಜವಾಗಿಯೇ ದೇಶದಲ್ಲಿ ಜನಸಂಖ್ಯೆಯ ಪ್ರಮಾಣ ಹೆಚ್ಚುತ್ತಿದ್ದು ಅದಕ್ಕೆ ಅನುಗುಣವಾಗಿ ಆಹಾರ ಉತ್ಪಾದನೆಯ ಪ್ರಮಾಣ ಹೆಚ್ಚದೇ ಕೃಷಿ ಕ್ಷೇತ್ರದ ಚಟುವಟಿಕೆ ಮಂದ ಗತಿಯಲ್ಲಿ ಸಾಗಿತ್ತು.

ಹೀಗಾಗಿ ಗೋಧಿ ಹೊರತುಪಡಿಸಿದರೆ ಇನ್ನುಳಿದ ಆಹಾರ ಧಾನ್ಯಗಳ ಪ್ರಮಾಣ ಪ್ರತಿ ಮನುಷ್ಯನಿಗೆ ಹೋಲಿಸಿದ್ದು ಕುಂಠಿತವಾಗಿತ್ತು. 1950–51 ರ ಸಾಲಿಗೆ ಹೋಲಿಸಿದರೆ ಈ ಪ್ರಮಾಣ 1961–66 ರ ಅವಧಿಯಲ್ಲಿ ತೀರಾ ಕಡಿಮೆಯಾಗಿತ್ತು. 1959ರಲ್ಲಿ ಫೋರ್ಡ್ ಫೌಂಡೇಷನ್ ಸಂಸ್ಥೆಯು ಭಾರತ ಸೇರಿದಂತೆ ವಿಶ್ವದಾದ್ಯಂತ ಆಹಾರದ ಕೊರತೆ ಎದುರಾಗುವ ಮತ್ತು ಅದನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಶಿಫಾರಸು ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಭಾರತದಲ್ಲಿ ಆಹಾರ ಉತ್ಪಾದನೆ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗುವುದು ಅಸಾಧ್ಯ. 'ಹೆಚ್ಚು ಆಹಾರ ಧಾನ್ಯ ಬೆಳೆಯಿರಿ' ಯೋಜನೆ



**THE WORLD BANK**
**Working for a World Free of Poverty**

ಸೇರಿದಂತೆ ಹಲವು ಕ್ರಮಗಳು ನಿಗದಿತ ಗುರಿ ಸಾಧಿಸುವಲ್ಲಿ ವಿಫಲವಾಗಿದ್ದ ಹಿನ್ನೆಲೆಯಲ್ಲಿ ಮತ್ತು ಬಹುತೇಕ ಕೃಷಿಕರು ಸಾಂಪ್ರದಾಯಿಕ ಕೃಷಿಯನ್ನೇ ಅವಲಂಬಿಸಿದ್ದರಿಂದ, ತೀರಾ ಕಡಿಮೆ ರಸಗೊಬ್ಬರ, ಕೀಟನಾಶಕಗಳು ಮತ್ತು ಕೊಳವೆ ಬಾವಿ ಆಧಾರಿತ ಕೃಷಿಯ ವ್ಯಾಪ್ತಿ ಹೆಚ್ಚಾಗಿಲ್ಲದ ಕಾರಣ ಆಹಾರ ಉತ್ಪಾದನೆ ಕೆಲವೇ ವರ್ಷಗಳ ಅವಧಿಯಲ್ಲಿ ಗಣನೀಯ ಪ್ರಮಾಣದಲ್ಲಿ ಹೆಚ್ಚುವುದು ಅಸಾಧ್ಯ ಎಂದು ಅನಿಸುತ್ತಿತ್ತು. ಈ ಎಲ್ಲ ಕಾರಣಗಳಿಂದಾಗಿ 1960–61 ರ ಅವಧಿಯಲ್ಲಿ ಗೋಧಿ ಮತ್ತು ಭತ್ತದ ಪ್ರಮಾಣ ಪ್ರತಿ ಹೆಕ್ಟೇರ್‌ಗೆ ಅನುಕ್ರಮವಾಗಿ 851 ಕೆ.ಜಿ ಮತ್ತು 1013 ಕೆ.ಜಿಯಷ್ಟಿತ್ತು. ಆದರೆ ಹಸಿರು ಕ್ರಾಂತಿಯ ಪರಿಣಾಮವಾಗಿ 2011–12ರ ಸಾಲಿನಲ್ಲಿ ಪ್ರತಿ ಹೆಕ್ಟೇರ್‌ಗೆ 3177 ಕೆ.ಜಿ ಗೋಧಿ ಮತ್ತು 2393 ಕೆ.ಜಿ ಭತ್ತ ಬೆಳೆಯಲಾಗುತ್ತಿದೆ.

ಸ್ಥಳೀಯವಾಗಿ ಆಹಾರ ಉತ್ಪಾದನೆಯ ಪ್ರಮಾಣ ಕಡಿಮೆಯಾಗಿದ್ದ ಹಿನ್ನೆಲೆಯಲ್ಲಿ ಆಹಾರದ ಕೊರತೆ ನೀಗಿಸಲು ಇತರ ದೇಶಗಳಿಂದ ಆಹಾರ ಧಾನ್ಯವನ್ನು ಆಮದು ಮಾಡಿಕೊಳ್ಳುವುದು ಅನಿವಾರ್ಯ ಪರ್ಯಾಯ ಕ್ರಮವಾಗಿತ್ತು. ಭಾರತೀಯ ರಿಸರ್ವ್ ಬ್ಯಾಂಕ್ ನ 2014ರ ಪುಸ್ತಿಕೆಯಲ್ಲಿ ಪ್ರಕಟವಾದ ಅಂಕಿ–ಅಂಶಗಳ ಪ್ರಕಾರ 1950–51ರಲ್ಲಿ ರೂ 9.11 ಶತಕೋಟಿ ಇದ್ದ ಭಾರತದ ವಿದೇಶಿ ವಿನಿಮಯ ಗಳಿಕೆ ಪ್ರಮಾಣ 1964–65ರ ವೇಳೆಗೆ 1.16 ಶತಕೋಟಿ ರೂಪಾಯಿಗಳಿಗೆ ಇಳಿಕೆಯಾಗಿತ್ತು. ರೂಪಾಯಿ ದರ ಡಾಲರ್ ಗೆ ಹೋಲಿಸಿದರೆ ಕುಸಿತಗೊಂಡ ಹಿನ್ನೆಲೆಯಲ್ಲಿ ಮತ್ತು ರಫ್ತಿನ ಪ್ರಮಾಣ ಕುಂಠಿತವಾದ ಕಾರಣದಿಂದಾಗಿ ಭಾರತದ ಅಂತಾರಾಷ್ಟ್ರೀಯ ವ್ಯಾಪಾರ ವಹಿವಾಟಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿ ಇತರ ದೇಶಗಳಿಂದ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುವ ಶಕ್ತಿ ಕುಂಠಿತಗೊಂಡಿತು.

ಆಹಾರ ಧಾನ್ಯದ ಆಮದಿಗೆ ಸಂಬಂಧಿಸಿದಂತೆ ಅಮೆರಿಕದ ಜತೆ ಒಪ್ಪಂದ ಏರ್ಪಟ್ಟು ಆಮದಿನ ಕೆಲ ಭಾಗವನ್ನು ಅನುದಾನದ ರೂಪದಲ್ಲಿ ಮತ್ತೆ ಕೆಲವು ಭಾಗವನ್ನು ಹಣ ಪಾವತಿಯ ರೂಪದಲ್ಲಿ ಪಡೆಯಲಾಗುತ್ತಿತ್ತು. ಇದಕ್ಕಾಗಿ ಪಿ.ಎಲ್. 480 ಎಂಬ ಶಾಂತಿಗಾಗಿ ಆಹಾರ ಎಂಬ (Food for peace) ನೀತಿ ಜಾರಿಗೆ ಬಂದಿತು. ಆದರೆ ಅಮೆರಿಕವು ವಿಯೆಟ್ನಾಮ್ ವಿರುದ್ಧ ಯುದ್ಧ ಸಾರಿದ್ದನ್ನು ರಾಜಕೀಯವಾಗಿ ಭಾರತವು ವಿರೋಧಿಸಿದ ಪ್ರತಿಫಲವಾಗಿ ಅಮೆರಿಕದ ಅಧ್ಯಕ್ಷ ಲಿಂಗ್ಡೋ ಜಾನ್ಸನ್ ಅವರು ಭಾರತಕ್ಕೆ ಆಹಾರ ಸಾಮಗ್ರಿಗಳನ್ನು ಹೊತ್ತು ತರುತ್ತಿದ್ದ ಹಡಗುಗಳ ಓಡಾಟದಲ್ಲಿ ಅನಗತ್ಯ ವಿಳಂಬ ಮಾಡಿದ ಹಿನ್ನೆಲೆಯಲ್ಲಿ ಭಾರತದಲ್ಲಿ ಆಹಾರ ಧಾನ್ಯಗಳ ಒದಗಣೆಯ ಪರಿಸ್ಥಿತಿಯ ಮೇಲೆ ಅನಿಶ್ಚಿತತೆ ತಲೆದೋರಿತು.

1965–66 ಮತ್ತು 1966–67ರಲ್ಲಿ ಉಂಟಾದ ಎರಡು ವರ್ಷದ ಸತತ ಬರ ಪರಿಸ್ಥಿತಿ ದೇಶದ ಒಳಗಿನ ಆಹಾರ ಉತ್ಪಾದನೆ ಮತ್ತು ಕೃಷಿ ಆಧಾರಿತ ವಸ್ತುಗಳ ರಫ್ತಿನ ಮೇಲೆ ತೀವ್ರ ಪರಿಣಾಮ ಬೀರಿತು. ಹೀಗಾಗಿ ಭಾರತದ ಬಾಕಿ ಪಾವತಿಯ ಶಕ್ತಿ ತೀರಾ ಕುಂಠಿತಗೊಂಡ ಹಿನ್ನೆಲೆಯಲ್ಲಿ ಸರ್ಕಾರವು ಈ ಬಿಕ್ಕಟ್ಟನ್ನು ಎದುರಿಸಲು ಅನಿವಾರ್ಯವಾಗಿ ಅಂತಾರಾಷ್ಟ್ರೀಯ ಹಣಕಾಸು ನಿಧಿ (IMF) ಸಂಸ್ಥೆ ಮತ್ತು ವಿಶ್ವ ಬ್ಯಾಂಕ್ (World Bank) ಯನ್ನು ಸಂಪರ್ಕಿಸಬೇಕಾಯಿತು. ಇವೆರಡೂ ಸಂಸ್ಥೆಗಳು ನಿರೀಕ್ಷೆಯಂತೆ ರೂಪಾಯಿಯ ಅಪಮೌಲ್ಯ ಮತ್ತು ವಿದೇಶಿ ವ್ಯಾಪಾರದ ವಹಿವಾಟಿನ ಮೇಲೆ ಇದ್ದ ನಿರ್ಬಂಧಗಳನ್ನು ಸಡಿಲಗೊಳಿಸುವಂತೆ ಭಾರತ ಸರ್ಕಾರದ ಮೇಲೆ ಒತ್ತಡ ಹೇರಿದವು. ಅಮೆರಿಕದ ಪಿ.ಎಲ್ 480 ನೀತಿಯಿಂದಾಗಿ ದೇಶದೊಳಗಿನ ಆಹಾರದ ಬಿಕ್ಕಟ್ಟು ಮತ್ತಷ್ಟು ಬಿಗಡಾಯಿಸಿದ ಹಿನ್ನೆಲೆಯಲ್ಲಿ, ಭಾರತವು ಆಹಾರದಲ್ಲಿ ಸ್ವಾವಲಂಬನೆ ಸಾಧಿಸಬೇಕೆಂಬ ತುಡಿತದಿಂದಾಗಿ ಆಹಾರ ಉತ್ಪಾದನೆಯನ್ನು ಹೆಚ್ಚಿಸುವ ಕ್ರಮಗಳತ್ತ ಶ್ರೀಮತಿ ಇಂದಿರಾ ಗಾಂಧಿ ಅವರು ಮನಸ್ಸು ಮಾಡಿದರು. ಅದರ ಪರಿಣಾಮವಾಗಿಯೇ ಆಗಿನ ಆಹಾರ ಮತ್ತು ಕೃಷಿ ಸಚಿವ ಸಿ. ಸುಬ್ರಹ್ಮಣ್ಯಂ ಅವರ

ನೇತೃತ್ವದಲ್ಲಿ 'ಕೃಷಿ ಅಭಿವೃದ್ಧಿಗಾಗಿ ಹೊಸ ಕಾರ್ಯತಂತ್ರ'ವನ್ನು ರೂಪಿಸಲಾಯಿತು.

ಸಿ. ಸುಬ್ರಹ್ಮಣ್ಯಂ ಅವರು ಡಾ. ಎಂ.ಎಸ್. ಸ್ವಾಮಿನಾಥನ್ ಮತ್ತು ನಾರ್ಮನ್ ಬೋರ್ಲಾಗ್ ಹಾಗೂ ಫೋರ್ಡ್ ಪ್ರತಿಷ್ಠಾನ, ರಾಕ್ ಫೆಲ್ಲರ್ ಪ್ರತಿಷ್ಠಾನ ಮತ್ತು ಅಮೆರಿಕದ ಕೃಷಿ ಇಲಾಖೆಯ ಕೃಷಿ ವಿಜ್ಞಾನಿಗಳನ್ನು ಭೇಟಿ ಮಾಡಿ ವಿಸ್ತೃತವಾಗಿ ಅವರೊಂದಿಗೆ ಚರ್ಚಿಸಿದ ಬಳಿಕ ತಮ್ಮ ಇಲಾಖೆಯು ಭಾರತದಲ್ಲಿ ಆಹಾರ ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ನಿರ್ದಿಷ್ಟ ಮತ್ತು ದೂರಗಾಮಿ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಲೋಕಸಭೆಯಲ್ಲಿ ಭರವಸೆ ನೀಡಿದರು. ಸುಬ್ರಹ್ಮಣ್ಯಂ ಅವರು ಈ ಹೇಳಿಕೆಯನ್ನು ನೀಡಲು ವಿಜ್ಞಾನಿಗಳು ಅಭಿವೃದ್ಧಿಪಡಿಸಿದ ಹೆಚ್ಚು ಇಳುವರಿ ನೀಡುವ ತಳಿಗಳೇ ಕಾರಣ. ಮೆಕ್ಸಿಕೋದ ಅಂತಾರಾಷ್ಟ್ರೀಯ ಮೆಕ್ಕೆಜೋಳ ಮತ್ತು ಗೋಧಿ ಅಭಿವೃದ್ಧಿ ಸಂಸ್ಥೆ, ಫಿಲಿಪ್ಪೀನ್ಸ್‌ನ ಅಂತಾರಾಷ್ಟ್ರೀಯ ಅಕ್ಕಿ ಸಂಶೋಧನಾ ಸಂಸ್ಥೆ, ಭಾರತದ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಗಳು ಈ ಹೆಚ್ಚು ಇಳುವರಿ ನೀಡುವ ತಳಿಗಳನ್ನು ಅಭಿವೃದ್ಧಿ ಪಡಿಸಿದ್ದು ಭಾರತದ ಹವಾಗುಣಕ್ಕೆ ಒಗ್ಗಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದಂಥವು.

ಹಸಿರು ಕ್ರಾಂತಿಗೆ ಕಾರಣವೇನು ಎಂಬ ಅಂಶದಿಂದ ಅದು ಹೇಗೆ ಜಾರಿಗೊಂಡಿತು ಎಂಬ ಬಗ್ಗೆ ಇನ್ನು ಗಮನಹರಿಸೋಣ. ಎಲ್ಲ ಬಗೆಯ ರೈತಾಪಿ ವರ್ಗದವರು ಈ 'ಹೆಚ್ಚು ಇಳುವರಿ ನೀಡುವ ತಳಿಗಳನ್ನು' ಬಳಸಿದ್ದರಿಂದ ಪ್ರತಿ ಹೆಕ್ಟೇರ್ ಜಮೀನಿನಲ್ಲಿ ಉತ್ಪಾದನೆ ಗಣನೀಯ ಹೆಚ್ಚಳವಾದುದು ರೈತರಿಗೆ ಖುಷಿ ತಂದಿತ್ತು. ಹೀಗಾಗಿಯೇ ಇವುಗಳಿಗೆ 'ಪವಾಡ ಬಿತ್ತನೆ ಬೀಜಗಳು' ಎಂದೇ ಖ್ಯಾತಿ ಬಂತು. ಹೆಚ್ಚು ಇಳುವರಿ ನೀಡುವ ತಳಿಗಳನ್ನು ಅಳವಡಿಸುವ ಯೋಜನೆಯ ಪ್ರಮುಖ ಕಾರ್ಯಕ್ರಮ ರೈತಾಪಿ ವರ್ಗಕ್ಕೆ ಪ್ರಾತ್ಯಕ್ಷಿಕೆ ನೀಡುವುದಾಗಿದ್ದರಿಂದ ಕೃಷಿ ವಿಜ್ಞಾನಿಗಳು ಮತ್ತು ಕೃಷಿಕರ ನಡುವೆ ಸಂವಾದ ಏರ್ಪಟ್ಟು ರೈತರಲ್ಲಿ ಆತ್ಮವಿಶ್ವಾಸ ಬೆಳೆಯಲು ಸಹಕಾರಿಯಾಯಿತು.

### ತಳಿಗಳ ವೈಶಿಷ್ಟ್ಯ

ಈ ತಳಿಗಳ ವೈಶಿಷ್ಟ್ಯ ಎಂದರೆ ಇವು ಸಾಂಪ್ರದಾಯಿಕ ತಳಿಗಳಿಗೆ ಹೋಲಿಸಿದರೆ ಗಿಡ್ಡ ತಳಿಗಳು. ಹೀಗಾಗಿ ಇವುಗಳು ಸಾಂಪ್ರದಾಯಿಕ ತಳಿಗಳಂತೆ ಸ್ವಲ್ಪ ಗಾಳಿ ಬೀಸಿದರೂ ನೆಲಕಚ್ಚಿ ಹಾಳಾಗದೇ ಸ್ಥಿರವಾಗಿ ಭೂಮಿಗೆ ಕಚ್ಚಿಕೊಂಡು ನಿಲ್ಲುವ ಕಾರಣ ಇಳುವರಿಗೆ ಯಾವುದೇ ಧಕ್ಕೆ ಆಗುವುದಿಲ್ಲ. ಈ ತಳಿಗಳಿಗಿಂತ ಹೆಚ್ಚು ಎತ್ತರವಾಗಿ ಬೆಳೆಯುವ ಸಾಂಪ್ರದಾಯಿಕ ಬೆಳೆಗಳಲ್ಲಿ ಬೆಳೆಯ ಕಾಂಡವು ಹುಳುಗಳ ಕಾಟದಿಂದ ದುರ್ಬಲಗೊಂಡು ನೆಲಕಚ್ಚುವ ಸಾಧ್ಯತೆ ಹೆಚ್ಚು. ಜತೆಗೆ ಭಾರಿ ಮಳೆ, ಆಲಿಕಲ್ಲುಗಳು ಬೀಳುವುದರಿಂದ ಬೆಳೆ ನೆಲ ಕಚ್ಚುತ್ತದೆ. ಗಿಡ್ಡ ಮಾದರಿಯ ಗೋಧಿ ಮತ್ತು ಭತ್ತದ ಹೆಚ್ಚು ಇಳುವರಿ ನೀಡುವ ತಳಿಗಳು ಈ ಅಪಾಯಕ್ಕೆ ಸಿಲುಕದೇ ನೆಲ ಕಚ್ಚಿ ನಿಲ್ಲುತ್ತವೆ.

ಜಪಾನಿನಲ್ಲಿ ಅಭಿವೃದ್ಧಿ ಪಡಿಸಲಾಗಿದ್ದ ಬ್ರೆವರ್ ಎಂಬ ಗೋಧಿ ತಳಿಯನ್ನು ಎರಡನೇ ಮಹಾಯುದ್ಧದ ಬಳಿಕ ಅಮೆರಿಕದ ವಿಜ್ಞಾನಿಯೊಬ್ಬರು ತಮ್ಮಲ್ಲಿಗೆ ಕೊಂಡೊಯ್ದರು. ಇದನ್ನು ಡಾ. ನಾರ್ಮನ್ ಬೋರ್ಲಾಗ್ ಮೆಕ್ಸಿಕೋದ ತಮ್ಮ ಸಂಸ್ಥೆಯಲ್ಲಿನ ಇತರ ಜಾತಿಯ ಗೋಧಿಯ ತಳಿಗಳ ಮತ್ತೆ ಕಸಿ ಮಾಡಿ ಅಭಿವೃದ್ಧಿ ಪಡಿಸಲಾಯಿತು. ಜಪಾನಿನಲ್ಲಿ ಅಭಿವೃದ್ಧಿ ಪಡಿಸಿದ ಜಪಾನಿಕಾ ಎಂಬ ಗಿಡ್ಡ ಮಾದರಿಯ ಭತ್ತದ ತಳಿಯನ್ನು 1950ರ ದಶಕದಲ್ಲಿಯೇ ಫಿಲಿಪ್ಪೀನ್ಸ್‌ನಲ್ಲಿ ಸ್ಥಳೀಯ ಹವಾಗುಣಕ್ಕೆ ಅನುಗುಣವಾಗುವಂತೆ ಕಸಿ ಮಾಡುವ ಸಂಶೋಧನೆ ಆರಂಭವಾಯಿತು. 1966ರ ನವೆಂಬರ್ ತಿಂಗಳಲ್ಲಿ ಐಆರ್– 8 ಎಂಬ ಹೊಸ ತಳಿಯನ್ನು ಬಿಡುಗಡೆ ಮಾಡಲಾಯಿತು. ಭಾರತದಲ್ಲಿ ಹಸಿರು ಕ್ರಾಂತಿಯ ವೇಳೆಗೆ ಈ ತಳಿಗಳು ಅಭಿವೃದ್ಧಿಯಾದುದು ವರದಾನವಾಯಿತು.

### ಭಾರತದಲ್ಲಿ ಹೊಸ ತಳಿಗಳು

ಹೆಚ್ಚು ಇಳುವರಿ ನೀಡುವ ತಳಿಗಳ ಕುರಿತಂತೆ ರೈತರಿಗೆ ಪ್ರಾತ್ಯಕ್ಷಿಕೆ ನೀಡಲು, ಸರ್ಕಾರದ ಅಧಿಕಾರಿಗಳು, ಕೃಷಿ ವಿಜ್ಞಾನಿಗಳ ಜತೆ ಸಮಾಲೋಚಿಸಲು 1961ರಲ್ಲಿ ಡಾ. ಎಂ.ಎಸ್. ಸ್ವಾಮಿನಾಥನ್ ಅವರು ಮೆಕ್ಸಿಕೊದ ಖ್ಯಾತ ಕೃಷಿ ವಿಜ್ಞಾನಿ ಡಾ. ನಾರ್ಮನ್ ಬೋರ್ಲಾಗ್‌ರನ್ನು ಭಾರತಕ್ಕೆ ಆಹ್ವಾನಿಸಿದರು. 1963ರ ಮಾರ್ಚ್‌ನಲ್ಲಿ ಡಾ. ಬೋರ್ಲಾಗ್ ಮತ್ತು ಇತರ ಹಿರಿಯ ಕೃಷಿ ವಿಜ್ಞಾನಿಗಳು ಭಾರತದ ಗೋಧಿ ಬೆಳೆಯುವ ಕ್ಷೇತ್ರಗಳಲ್ಲಿ ಸಂಚರಿಸಿ ಇಲ್ಲಿನ ಹವಾಗುಣ ಮತ್ತು ಬೆಳೆ ಪದ್ಧತಿಯನ್ನು



ಅಭ್ಯಸಿಸಿದರು. ನಂತರ ಬೋರ್ಲಾಗ್ ಅವರು ಪಾಕಿಸ್ತಾನದಲ್ಲಿ ಉತ್ತಮ ಫಲಿತಾಂಶ ನೀಡಿದ್ದ ಮೆಕ್ಸಿಕೋ ಮಾದರಿಯ ಸೋನಾರಾ 63, ಸೋನಾರಾ 64, ಮೆಯೋ – 64 ಮತ್ತು ಲರ್ಮಾ ರೋಜೊ– 64 ಎ ತಳಿಗಳನ್ನು ಭಾರತಕ್ಕೆ ಕಳಿಸಿಕೊಡಲು ಒಪ್ಪಿದರು. ರಾಕ್ ಫೆಲ್ಲರ್ ಫೌಂಡೇಷನ್ ಮತ್ತು ಮೆಕ್ಸಿಕೋದ ಸಂಸ್ಥೆಯ ನೆರವಿನೊಂದಿಗೆ ಈ ತಳಿಗಳನ್ನು ಭಾರತದ ಹವಾಗುಣದೊಂದಿಗೆ ಪರೀಕ್ಷಿಸಲು ಆರಂಭಿಸಲಾಯಿತು. 1964ರ ವೇಳೆಗೆ ಭಾರತ ಹವಾಗುಣಕ್ಕೆ ಲರ್ಮಾ ರೋಜೊ 64– ಎ, ಸೋನಾರಾ 64 ಮತ್ತು ಪಿವಿ 18 ತಳಿಗಳು ಹೊಂದಿಕೊಂಡು ಉತ್ತಮ ಇಳುವರಿ ನೀಡುತ್ತವೆ ಎಂಬುದು ಸಾಬೀತಾಯಿತು.

ಯೋಜನಾ ಆಯೋಗದ ಸದಸ್ಯರ ತೀವ್ರ ಆಕ್ಷೇಪದ ಮಧ್ಯೆಯೂ ಸಚಿವ ಸುಬ್ರಹ್ಮಣ್ಯಂ ಅವರು ಪ್ರಧಾನಿಯವರ ಬೆಂಬಲದೊಂದಿಗೆ ದೇಶದ ನಾಲ್ಕು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲು ಲರ್ಮಾ ರೋಜೊ 64– ಎ, ಸೋನಾರಾ 64 ತಳಿಗಳ 18000 ಟನ್ ಬಿತ್ತನೆ ಬೀಜಗಳನ್ನು ತರಿಸಿಕೊಳ್ಳಲು ನಿರ್ಧರಿಸಿದರು. ಇದರಿಂದಾಗಿ ಗೋಧಿಯ ಉತ್ಪಾದನೆ ಕೇವಲ ಒಂದು ವರ್ಷದಲ್ಲಿ 1967–68ರಲ್ಲಿ 11.3 ದಶಲಕ್ಷ ಟನ್‌ಗಳಿಂದ 16.5 ದಶಲಕ್ಷ ಟನ್‌ಗೆ ಹೆಚ್ಚಳವಾಯಿತು. ಆದರೆ ಗ್ರಾಹಕರು ಮತ್ತು ರೈತರು ಚಪಾತಿ ರುಚಿಯಾಗುವುದಿಲ್ಲ ಎಂಬ ಕಾರಣಕ್ಕೆ ಈ ಕೆಂಪು ತಳಿಗಳನ್ನು ಇಷ್ಟಪಡದೇ ಸಾಂಪ್ರದಾಯಿಕ ತಳಿಗಳಿಗೇ ಮಾರುಹೋಗಿದ್ದರು. ಅದೇ ರೀತಿ ಹೊಸ ಮಾದರಿಯ ಭತ್ತದ ತಳಿಗೂ ಭಾರತದಲ್ಲಿ ಅಷ್ಟಾಗಿ ಬೆಂಬಲ ಸಿಕ್ಕಲಿಲ್ಲ.

1960ರ ದಶಕದಲ್ಲಿ ಭಾರತವು ಹಸಿರು ಕ್ರಾಂತಿಯ ಲಾಭ ಪಡೆಯುವುದು ಸಾಧ್ಯವಾಗಲಿಲ್ಲ. ಏಕೆಂದರೆ ಭಾರತದ ಕೃಷಿ ಬಹುಮಟ್ಟಿಗೆ ಮಳೆಯಾಧಾರಿತವಾದುದು.

ಅಲ್ಲದೇ ದೇಶೀಯವಾಗಿ ಬೃಹತ್ ಪ್ರಮಾಣದಲ್ಲಿ ರಸಗೊಬ್ಬರ ತಯಾರಿಸುವುದು ಮತ್ತು ವಿದೇಶದಿಂದ ಆಮದು ಮಾಡಿಕೊಂಡು ಬೃಹತ್ ಪ್ರಮಾಣದಲ್ಲಿ ರೈತರಿಗೆ ನೀಡಲು ಸಾಧ್ಯವಾಗದೇ ಇರುವುದು ಇದಕ್ಕೆ ಕಾರಣ. ಆದರೂ ದೇಶದಲ್ಲಿ ಆಹಾರ ಧಾನ್ಯದ ಉತ್ಪಾದನೆ ಜಾಸ್ತಿ ಮಾಡಲು ಈ ಹೆಚ್ಚು ಇಳುವರಿ ನೀಡುವ ತಳಿಗಳು ಸಹಕಾರಿ ಆಗುತ್ತವೆ ಎಂಬ ಅಂಶ ನೀತಿ ನಿರೂಪಕರಿಗೆ ಅರಿವು ಇದ್ದ ಹಿನ್ನೆಲೆಯಲ್ಲಿ ಈ ಕುರಿತಂತೆ ಸಾರ್ವಜನಿಕ ನೀತಿ ರೂಪಿಸುವುದು ಅಗತ್ಯ ಎಂದು ಅವರಿಗೆ ಅನಿಸಿತ್ತು.

ಭಾರತದಲ್ಲಿ ಕೃಷಿ ಬಹುಮಟ್ಟಿಗೆ ಖಾಸಗಿ ವ್ಯವಸ್ಥೆ ಮತ್ತು ವ್ಯಕ್ತಿಗತವಾಗಿ ಕುಟುಂಬಗಳು ಕೈಗೊಳ್ಳುತ್ತಿದ್ದು ಇಂಥ ರೈತರ ಬಳಿಯೂ ಸಣ್ಣ ಪ್ರಮಾಣದ ಜಮೀನುಗಳನ್ನು ಹೊಂದಿದ ಕಾರಣ ರೈತರಿಗೆ ಈ ತಳಿಗಳನ್ನು ಬೆಳೆಯುವಂತೆ ಪ್ರೇರೇಪಿಸುವಲ್ಲಿ ಕೆಲವು ಪ್ರೋತ್ಸಾಹಕ ಯೋಜನೆಗಳನ್ನು ನೀಡುವುದು ಅನಿವಾರ್ಯವಾಗಿತ್ತು.

ಡಾ. ಸ್ವಾಮಿನಾಥನ್ ಹೇಳುವಂತೆ ಹಸಿರು ಕ್ರಾಂತಿಯ ಯಶಸ್ಸು ತಂತ್ರಜ್ಞಾನ, ಸರ್ಕಾರದ ನೀತಿ ನಿಯಮಗಳು ಮತ್ತು ರೈತರ ಉತ್ಸಾಹಗಳ ಸಮ್ಮಿಳನದ ಮೇಲೆ ಆಧರಿಸಿರುತ್ತದೆ. ಸರ್ಕಾರದ ನೀತಿ ನಿಯಮಗಳು ರೈತರು ಹೆಚ್ಚು ಹೆಚ್ಚಾಗಿ 'ಹೆಚ್ಚು ಇಳುವರಿ ನೀಡುವ ತಳಿಗಳನ್ನು' ಬಳಸುವುದನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಇದ್ದವು. ಉದಾಹರಣೆಗೆ ನೀರಾವರಿ ಆಧಾರಿತ ಕೃಷಿ ಕ್ಷೇತ್ರದ ವಿಸ್ತರಣೆ, ರಸಗೊಬ್ಬರ ಮತ್ತು ಕೀಟನಾಶಕಗಳ ಬಳಕೆಯ ಪ್ರೋತ್ಸಾಹ, ಗ್ರಾಮೀಣ ವಿದ್ಯುದೀಕರಣ ಮತ್ತು ಕೃಷಿಗೆ ಬಳಸುವ ವಿದ್ಯುತ್ ಮತ್ತು ಡೀಸೆಲ್ ಬಳಕೆಯ ಮೇಲೆ ಸಬ್ಸಿಡಿ ನೀಡುವ ಯೋಜನೆಗಳು ಕೃಷಿಕರಲ್ಲಿ ಈ ತಳಿಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಯಲು ಸಹಕಾರಿಯಾದವು. ಜತೆಗೆ ಕೃಷಿಗೆ ಸಾಲ, ಕೃಷಿ ಬೆಲೆ ನಿಗದಿ ಯೋಜನೆಗಳು, ಗ್ರಾಮೀಣ ಭಾಗದ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಉತ್ತೇಜನ ನೀಡುವುದು ಮೊದಲಾದ ಯೋಜನೆಗಳು ಇದಕ್ಕೆ ಪೂರಕವಾದವು.

ಈ ಎಲ್ಲ ಪ್ರೋತ್ಸಾಹಗಳು ರೈತರು ಹೆಚ್ಚು ಇಳುವರಿ ನೀಡುವ ತಳಿಗಳನ್ನು ಬೆಳೆಯಲು ಸಹಕಾರಿಯಾದವು. ಆದರೆ ಈ ಅಂಶಗಳ ಜತೆಗೆ ರೈತರು ಬೆಳೆದ ಬೆಳೆಗಳಿಗೆ ಸಮರ್ಪಕ ಬೆಲೆ ದೊರೆಯಬೇಕಾದ್ದು ಅಗತ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ಸರ್ಕಾರ ಬೆಳೆಗಳಿಗೆ ಬೆಂಬಲ ಬೆಲೆ ನೀಡಲು ಮುಂದಾಗಿದ್ದು ರೈತರ ಆತಂಕವನ್ನು ದೂರ ಮಾಡಿತು.

**ಹೆಚ್ಚು ಇಳುವರಿ ತಳಿಗಳ ಕ್ಷೇತ್ರ**

ಈ ಬೆಳೆಗಳನ್ನು ಬೆಳೆಯಲು ಮುಖ್ಯವಾಗಿ ನೀರಿನ ಲಭ್ಯತೆ ಸಾಕಷ್ಟಿರುವ ಪ್ರದೇಶಗಳು ಅಗತ್ಯವಾಗಿದ್ದ ಕಾರಣ ಮತ್ತು ರೈತರಿಗೆ ಸುಲಭವಾಗಿ ರಸಗೊಬ್ಬರ ದೊರೆಯಬಹುದಾದ ಪ್ರದೇಶಗಳನ್ನು ಗುರುತಿಸಬೇಕಾಗಿದ್ದ ಹಿನ್ನೆಲೆಯಲ್ಲಿ 1965ರ ಕೊನೆಯ ಭಾಗದಲ್ಲಿ ಭಾರತ ಸರ್ಕಾರದ ಆಶ್ರಯದಲ್ಲಿ ನವದೆಹಲಿಯಲ್ಲಿ ಒಂದು ವಿಚಾರ ಸಂಕಿರಣ ನಡೆಸಲಾಯಿತು. ಅದರಲ್ಲಿ ಈಗಾಗಲೇ ಕೃಷಿ ಕ್ಷೇತ್ರಕ್ಕೆ ಬೇಕಾಗುವ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ, ಶೇಕಡಾ 80ರಷ್ಟು ನೀರಾವರಿ





ಸೌಲಭ್ಯ ಹೊಂದಿರುವ ಗೋಧಿ ಬೆಳೆಯುವ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲು ನಿರ್ಧರಿಸಲಾಯಿತು. ಈ ತಳಿಗಳನ್ನು ಬೆಳೆಯುವ ಪ್ರದೇಶಗಳ ಆಯ್ಕೆಯ ಬಗ್ಗೆ ಚರ್ಚಿಸಲು 1966ರಲ್ಲಿ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನೂ ನಡೆಸಲಾಯಿತು.

ಈ ಮಾದರಿಯ ಬಿತ್ತನೆ ಬೀಜಗಳು ರೈತರಿಗೆ ಸುಲಭವಾಗಿ ದೊರಕುವಂತೆ ಮಾಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಭಾರತ ರಾಷ್ಟ್ರೀಯ ಬೀಜ ನಿಗಮವನ್ನು ರಚಿಸಿತು. ಅಲ್ಲದೇ ಈ ಯೋಜನೆಯ ಅನುಷ್ಠಾನಕ್ಕಾಗಿ ಗುರುತಿಸಲಾದ ಪ್ರದೇಶಗಳಲ್ಲಿ ಹೋಬಳಿ ಮಟ್ಟದಲ್ಲಿ ಮತ್ತು ಬ್ಲಾಕ್ ಮಟ್ಟದಲ್ಲಿ ಬಿತ್ತನೆ ಬೀಜ ದೊರೆಯುವ ಡಿಪೊಗಳನ್ನು ತೆರೆಯಲು ನಿರ್ಧರಿಸಿತು.

ರೈತರಿಗೆ ರಸಗೊಬ್ಬರ ಮತ್ತು ಸಾಲಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ರೈತರ ಸಹಕಾರಿ ಸಂಸ್ಥೆಗಳನ್ನು ಬಳಸಿಕೊಳ್ಳಲು ನಿರ್ಧರಿಸಲಾಯಿತು. ಸ್ಥಳೀಯ ಸಹಕಾರಿ ಸಂಸ್ಥೆಗಳು ಜಿಲ್ಲಾ ಕೇಂದ್ರ ಸಹಕಾರಿ ಸಂಸ್ಥೆಯ ಮೂಲಕ ಭಾರತೀಯ ರಿಸರ್ವ್ ಬ್ಯಾಂಕ್‌ಗೆ ರೈತರಿಗೆ ಸಾಲ ನೀಡಲು ಅಗತ್ಯವಾದ ಹಣಕಾಸಿನ ನೆರವು ಕೋರಿ ರೈತರಿಗೆ ಒದಗಿಸುವ ವ್ಯವಸ್ಥೆಯನ್ನು ರೂಪಿಸಲಾಯಿತು. ಅದೇ ರೀತಿ ಬಿತ್ತನೆ ಬೀಜ ಲಭ್ಯತೆ ಬಗ್ಗೆ ರಾಜ್ಯ ಮಟ್ಟದಲ್ಲಿ ಕೃಷಿ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿಕೊಂಡು ರೈತರಿಗೆ ಅಗತ್ಯಕ್ಕೆ ಅನುಗುಣವಾಗಿ ಬಿತ್ತನೆ ಬೀಜ ಒದಗಿಸುವ ಕುರಿತಂತೆ ಕೂಡ ಸಹಕಾರಿ ಸಂಸ್ಥೆಗಳು ಕೆಲಸ ಮಾಡಲು ಸೂಚಿಸಲಾಯಿತು.

ಭಾರತ ಆಹಾರ ನಿಗಮವು ರಾಷ್ಟ್ರ ಮಟ್ಟದಲ್ಲಿ ಆಹಾರ ಧಾನ್ಯಗಳಿಗೆ ಮಾರುಕಟ್ಟೆ ಒದಗಿಸಲು ಮುಂಚೂಣಿ ವಹಿಸಿತು. ಇದು ಆಹಾರ ಧಾನ್ಯಗಳನ್ನು ರೈತರಿಂದ ಕೊಂಡು ರಾಜ್ಯ ಸರ್ಕಾರಗಳು, ಜಿಲ್ಲಾಡಳಿತಗಳ

ಮೂಲಕ ಮತ್ತು ಪಡಿತರ ವಿತರಣಾ ವ್ಯವಸ್ಥೆ ಮೂಲಕ ಅದನ್ನು ಜನರಿಗೆ ಕೈಗೆಟುಕುವ ಸುಲಭ ದರದಲ್ಲಿ ವಿತರಿಸಲು ವ್ಯವಸ್ಥೆ ಮಾಡಿತು. ದೇಶದ ವಿವಿಧೆಡೆಗಳಲ್ಲಿನ ಕೃಷಿ ಸಂಶೋಧನಾ ಸಂಸ್ಥೆಗಳಲ್ಲಿ ಸಂಶೋಧನೆ ಕಾರ್ಯವನ್ನು ತ್ವರಿತಗೊಳಿಸಲು ಭಾರತೀಯ ಕೃಷಿ ಸಂಶೋಧನಾ ಮಂಡಳಿಗೆ ಹೆಚ್ಚಿನ ಅಧಿಕಾರ ಮತ್ತು ಹಣಕಾಸಿನ ನೆರವು ಒದಗಿಸಲಾಯಿತು. ಟ್ರ್ಯಾಕ್ಟರ್ ಆಧಾರಿತ, ಕೊಳವೆ ಬಾವಿ ಬಳಕೆಗೆ ಮತ್ತು ರಸಗೊಬ್ಬರ ಬಳಕೆಗೆ ಮಾನಸಿಕವಾಗಿ ಒಗ್ಗಿಕೊಂಡ ರೈತರು ಕೃಷಿ ವಿಶ್ವವಿದ್ಯಾಲಯಗಳಲ್ಲಿ ಅಭಿವೃದ್ಧಿಪಡಿಸಿದ ಹೊಸ ತಳಿಗಳನ್ನು ಮುಕ್ತವಾಗಿ ಒಪ್ಪಿಕೊಂಡಿದ್ದು ಮತ್ತು ಅವುಗಳನ್ನು ಬೆಳೆಯಲು ಮುಂದಾಗಿದ್ದು ಹಸಿರು ಕ್ರಾಂತಿಗೆ ಪೂರಕವಾಯಿತು. ಇದು ಆಹಾರ ಧಾನ್ಯಗಳ ಉತ್ಪಾದನೆ ಗಣನೀಯವಾಗಿ ಹೆಚ್ಚಲು ಕಾರಣವಾಯಿತು. 1965–66ಕ್ಕೆ ಹೋಲಿಸಿದರೆ ಕೇವಲ 12 ವರ್ಷಗಳ ಅವಧಿಯಲ್ಲಿ ಆಹಾರ ಧಾನ್ಯದ ಉತ್ಪಾದನೆ ಮೂರು ಪಟ್ಟು ಹೆಚ್ಚಾಯಿತು.

ಹೆಚ್ಚು ಇಳುವರಿ ನೀಡುವ ತಳಿಗಳ ಯಶಸ್ಸು ಬಹುಮಟ್ಟಿಗೆ ಕಡಿಮೆ ದರದಲ್ಲಿ ರಸಗೊಬ್ಬರ ದೊರೆಯುವುದನ್ನು ಅವಲಂಬಿಸಿತ್ತು. ಇದನ್ನು ಸಾಧಿಸಲು ದೇಶದಲ್ಲೇ ರಸಗೊಬ್ಬರ ಉತ್ಪಾದನೆ ಅತ್ಯಗತ್ಯವಾಗಿತ್ತು. 1960ರ ದಶಕದಲ್ಲಿ ಭಾರತದಲ್ಲಿ ವಿದೇಶೀ ಬಂಡವಾಳ ಹೂಡಿಕೆಗೆ ಅಷ್ಟಾಗಿ ಪ್ರೋತ್ಸಾಹ ಇರಲಿಲ್ಲವಾದರೂ ಕೇಂದ್ರ ಕೃಷಿ ಸಚಿವ ಸುಬ್ರಹ್ಮಣ್ಯಂ ಅವರು ರಸಗೊಬ್ಬರ ಉತ್ಪಾದನೆಯ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ವಿದೇಶಿ ಬಂಡವಾಳ ಹೂಡಿಕೆಗೆ ಹೊಸ ನೀತಿಯನ್ನು ಪ್ರಕಟಿಸಿದರು. ಈ ವೇಳೆ ವಿದೇಶಿ ಕಂಪೆನಿಗಳು ಭಾರತದಲ್ಲಿ ಬಂಡವಾಳ ಹೂಡುವುದಕ್ಕಿಂತ ಭಾರತಕ್ಕೆ ತಮ್ಮ ದೇಶದಲ್ಲೇ ಉತ್ಪಾದಿಸಿದ ವಸ್ತುಗಳನ್ನು ರಫ್ತು ಮಾಡುವ ಬಗ್ಗೆ ಉತ್ಸುಕವಾಗಿದ್ದವು. ಆದರೆ ಭಾರತವು ಇಲ್ಲೇ ಉತ್ಪಾದಿಸುವ ಕಂಪೆನಿಗಳಿಗೆ ಉತ್ತೇಜನ ನೀಡಲು ಮುಂದಾಯಿತು. ಜತೆಗೆ ಭಾರತೀಯ ಕಂಪೆನಿಗಳು ಉಕ್ಕು ಕ್ಷೇತ್ರದಂತೆ ರಸಗೊಬ್ಬರ ತಯಾರಿಕಾ ಕ್ಷೇತ್ರದಲ್ಲೂ ವಿದೇಶಿ ಕಂಪೆನಿಗಳ ಜತೆ ಕೂಡಿಕೊಂಡು ಉತ್ಪಾದನೆ ಮಾಡಲು ಮುಂದಾಗುವಂತೆ ಭಾರತ ಸರ್ಕಾರ ಬಯಸಿತು. ಆದರೆ ಭಾರತದೊಳಕ್ಕೆ ವಿದೇಶಿ ಬಂಡವಾಳ ಹೂಡಿಕೆ ಪ್ರೋತ್ಸಾಹಿಸುವ ಈ ಯೋಜನೆ ಫಲಕಾರಿಯಾಗಲಿಲ್ಲ. ಹೀಗಾಗಿ ಸರ್ಕಾರವು ಸಾರ್ವಜನಿಕ ಉದ್ದಿಮೆಗಳು ಮತ್ತು ಸ್ಥಳೀಯ ಖಾಸಗಿ ಸಂಸ್ಥೆಗಳಿಗೆ ರಸಗೊಬ್ಬರ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಲೈಸೆನ್ಸ್ ಗಳನ್ನು ನೀಡಲು ಮುಂದಾಯಿತು. ಆದರೂ ಬೇಡಿಕೆಗೆ ಅನುಗುಣವಾಗಿ ಉತ್ಪಾದನೆ ಸಾಕಾಗದ ಕಾರಣ ಸರ್ಕಾರ ರಸಗೊಬ್ಬರ ಆಮದಿಗೆ ಮುಂದಾಗಬೇಕಾದ್ದು ಅನಿವಾರ್ಯವಾಯಿತು. ಸ್ಥಳೀಯವಾಗಿ ರಸಗೊಬ್ಬರ ತಯಾರಿಕೆಯನ್ನು ಉತ್ತೇಜಿಸಲು ಸರ್ಕಾರ ಹಲವು ಆರ್ಥಿಕ ಸವಲತ್ತುಗಳನ್ನು ನೀಡಲು ಮುಂದಾಯಿತು. ಸಾರಜನಕ ಆಧಾರಿತ ರಸಗೊಬ್ಬರ ತಯಾರಿಕೆ ಸುಲಭ. ವಾತಾವರಣದಲ್ಲಿ ಸಾರಜನಕ ಮತ್ತು ಜಲಜನಕಗಳನ್ನು ಸೇರಿಸಿ ಅಮೋನಿಯಾ ಉತ್ಪಾದನೆ ಮಾಡಿ ಅದನ್ನು ಗಂಧಕ, ಸಾರಜನಕ ಮತ್ತು ರಂಜಕಾಮ್ಲಗಳ ಜತೆ ರಾಸಾಯನಿಕ ಕ್ರಿಯೆಗೆ ಒಳಪಡಿಸಿ ಅಮೋನಿಯಂ ಸಲ್ಫೇಟ್, ಅಮೋನಿಯಂ ನೈಟ್ರೇಟ್ ಮತ್ತು ಅಮೋನಿಯಂ ಫಾಸ್ಫೇಟ್ ತಯಾರಿಸಲಾಗುತ್ತಿತ್ತು. ಆದರೆ ಕಲ್ಲಿದ್ದಲು ಮತ್ತು ವಿದ್ಯುತ್ ಹೊರತುಪಡಿಸಿದರೆ ಉಳಿದೆಲ್ಲವನ್ನೂ ವಿದೇಶದಿಂದ ಆಮದು ಮಾಡಿಕೊಳ್ಳಬೇಕಾಗುತ್ತಿತ್ತು. ಅವುಗಳ ಲಭ್ಯತೆ ಮತ್ತು ಬೆಲೆ ಕಾಲ ಕಾಲಕ್ಕೆ ಬದಲಾಗುತ್ತಿದ್ದುದರಿಂದ ರಸಗೊಬ್ಬರ ತಯಾರಿಕೆ ನಿಗದಿತ ಮತ್ತು ನಿರೀಕ್ಷಿತ ಮಟ್ಟದಲ್ಲಿ ಸಾಧ್ಯವಾಗುತ್ತಿರಲಿಲ್ಲ. ರಸಗೊಬ್ಬರ ಬೇಡಿಕೆ ವ್ಯಾಪಕವಾಗಿದ್ದ ಹಿನ್ನೆಲೆಯಲ್ಲಿ ಮತ್ತು ಆ ಮಟ್ಟದಲ್ಲಿ ಉತ್ಪಾದನೆ ಆಗದೇ ಮಾರುಕಟ್ಟೆಯಲ್ಲಿ ಹಾಹಾಕಾರ ಉಂಟಾಗುತ್ತಿದ್ದ ಹಿನ್ನೆಲೆಯಲ್ಲಿ ರಸಗೊಬ್ಬರ ಬೆಲೆ ನಿಗದಿ ಸಮಿತಿ ಶಿಫಾರಸಿನ ಅನ್ವಯ ಸರ್ಕಾರವು 1977ರಲ್ಲಿ ಹೊಸ ನೀತಿಯನ್ನು ಪ್ರಕಟಿಸಿತು. ಇದರನ್ವಯ ಕಾರ್ಖಾನೆ ದರ ನಿಗದಿ ಪಡಿಸಲಾಯಿತು. ರೈತರಿಗೆ ತೀರಾ ಕಡಿಮೆ ದರದಲ್ಲಿ ರಸಗೊಬ್ಬರ ಒದಗಿಸಲು ಸಬ್ಸಿಡಿ ನೀಡಲಾಯಿತು. ಇವೆರಡರ ವ್ಯತ್ಯಾಸವನ್ನು ಸರಿದೂಗಿಸಲು ಸರ್ಕಾರ ಮುಂದಾಯಿತು. ರೈತರಿಗೆ ಸುಲಭ ದರದಲ್ಲಿ ರಸಗೊಬ್ಬರ ದೊರೆಯಲು ಆರಂಭಿಸಿದ ಕಾರಣದಿಂದಾಗಿ ರೈತರು ಹೆಚ್ಚು ಇಳುವರಿ ನೀಡುವ ತಳಿಗಳನ್ನು ಬೆಳೆಯಲು ಮುಕ್ತ ಮನಸ್ಸಿನಿಂದ ಮುಂದಾದ ಕಾರಣದಿಂದಾಗಿ ರಸಗೊಬ್ಬರ ಬಳಕೆ ಜಾಸ್ತಿಯಾಯಿತಲ್ಲದೇ ಆಹಾರ ಉತ್ಪಾದನೆಯ ಪ್ರಮಾಣವೂ ಹೆಚ್ಚಿ ಹಸಿರು ಕ್ರಾಂತಿ ಯಶಸ್ಸಿಗೆ ಕಾರಣವಾಯಿತು. ಆದರೆ ರಸಗೊಬ್ಬರ ಕಾರ್ಖಾನೆಗಳಿಗೆ ನೀಡುತ್ತಿದ್ದ ಕಾರ್ಖಾನೆ ದರ ಕೇವಲ ಸಾರಜನಿಕ ಆಧಾರಿತ ರಸಗೊಬ್ಬರ ಕಾರ್ಖಾನೆಗಳಿಗೆ ಮಾತ್ರ (ವಿಶೇಷವಾಗಿ ಯೂರಿಯಾ ರಸಗೊಬ್ಬರ) ಇದ್ದುದರಿಂದ ಶೇಕಡಾ 90ರಷ್ಟು ಪ್ರಮಾಣದಲ್ಲಿ ರಂಜಕ ಆಧಾರಿತ ರಸಗೊಬ್ಬರವನ್ನು ವಿದೇಶದಿಂದ ಆಮದು ಮಾಡಿಕೊಳ್ಳಬೇಕಾಯಿತು.



ಬಿತ್ತನೆ ಬೀಜ ಮತ್ತು ರಸಗೊಬ್ಬರಗಳಲ್ಲದೇ ಹೆಚ್ಚು ಇಳುವರಿ ನೀಡುವ ತಳಿಗಳಿಗೆ ನೀರು ಅತ್ಯವಶ್ಯ. ಈ ತಳಿಗಳಿಗೆ ಹೆಚ್ಚಿನ ನೀರಿನ ಅವಶ್ಯಕತೆ ಇದೆ ಎಂದಲ್ಲ. ಆದರೆ ಸಾಂಪ್ರದಾಯಿಕ ಬೆಳೆಗಳಿಗೆ ಹೋಲಿಸಿದರೆ ಈ ತಳಿಗಳಿಗೆ ನಿಯಮಿತವಾಗಿ ಮತ್ತು ನಿರಂತರವಾಗಿ ನೀರಿನ ಅವಶ್ಯಕತೆ ಇರುತ್ತದೆ. ಈ ತಳಿಗಳ ವೈಶಿಷ್ಟ್ಯ ಎಂದರೆ ಬೆಳೆಗಳ ಬೆಳವಣಿಗೆಯ ಕಾಲಕ್ಕೆ ನಿಗದಿತ ವೇಳೆಗೆ ನೀರಿನ ಅವಶ್ಯಕತೆ ಇರುತ್ತದೆ. ಆಯಾ ಕಾಲಕ್ಕೆ ಅಗತ್ಯ ಪ್ರಮಾಣದ ನೀರು ಸಿಗದಿದ್ದಲ್ಲಿ ಅದು ಇಳುವರಿಯ ಮೇಲೆ ಪರಿಣಾಮ ಬೀರುತ್ತದೆ.

1960ರ ದಶಕದವರೆಗೆ ಭಾರತದಲ್ಲಿ ನೀರಾವರಿ ವ್ಯವಸ್ಥೆ ಎಂದರೆ ನದಿ ಅಥವಾ ಸಾರ್ವಜನಿಕ ಜಲಾಶಯಗಳಿಂದ ಒಂದು ನಿರ್ದಿಷ್ಟ ವ್ಯಾಪ್ತಿಯಲ್ಲಿ ಬರುವ ಅತಿ ಹೆಚ್ಚು ರೈತರ ಜಮೀನುಗಳಿಗೆ ಸಮಪ್ರಮಾಣದಲ್ಲಿ ನೀರಾವರಿ ಸೌಲಭ್ಯ ಒದಗಿಸುವುದು ಎಂಬ ನಿಯಮವನ್ನು ಆಧರಿಸಿತ್ತು. ಈ ನಿಯಮವು ಮುಖ್ಯವಾಗಿ ರೈತರ ಜಮೀನಿನಲ್ಲಿ ಬೆಳೆದು ನಿಂತ ಪೈರು ಒಣಗದಂತೆ ತಡೆಗಟ್ಟುವ ಉದ್ದೇಶವನ್ನು ಹೊಂದಿತ್ತು. ಆದರೆ 1960ರ ದಶಕದಲ್ಲಿ ಖಾಸಗಿ ವ್ಯಕ್ತಿಗಳೂ ಸಹ ಕೊಳವೆ ಬಾವಿಯಂಥ ಸೌಲಭ್ಯಗಳಿಂದ ವ್ಯಕ್ತಿಗತವಾಗಿ ನೀರಾವರಿ ಸೌಲಭ್ಯ ಪಡೆಯಲು ಸಾಧ್ಯವಾದ ಬಳಿಕ ಕೃಷಿ ಕೇವಲ ಆಹಾರ ಧಾನ್ಯಗಳ ಬೆಳವಣಿಗೆಗೆ ಮಾತ್ರವಲ್ಲ, ಕಬ್ಬಿನಂಥ ವಾಣಿಜ್ಯ ಬೆಳೆ ಬೆಳೆಯಲೂ ಅವಕಾಶ ಮಾಡಿಕೊಟ್ಟಿತು.

ರೈತರು ಕೇವಲ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಮಾತ್ರ ಮುಂದಾಗಬಾರದು. ಇತರ ದೈನಂದಿನ ಆಹಾರಧಾನ್ಯಗಳನ್ನು ಬೆಳೆಯುವತ್ತಲೂ ಗಮನಹರಿಸಬೇಕೆಂಬ ಉದ್ದೇಶದಿಂದ ಸರ್ಕಾರವು ವಾಣಿಜ್ಯ ಬೆಳೆಗಳಿಗೆ ತೆರಿಗೆಗಳನ್ನು ವಿಧಿಸಲು ಆರಂಭಿಸಿತು. ಆದರೆ ಬಹುತೇಕ ರೈತರು ಈ ತೆರಿಗೆಗಳನ್ನು ಪಾವತಿಸದೇ ಖಜಾನೆಗೆ ನಷ್ಟ ಉಂಟುಮಾಡುತ್ತಿದ್ದರೆಂಬುದು ಬೇರೆ ಮಾತು. ಹೆಚ್ಚು ಇಳುವರಿ ತಳಿಗಳನ್ನು ಬೆಳೆಯಲು ರೈತಾಪಿ ವರ್ಗವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರ್ಕಾರವು ಎರಡು ಹಂತಗಳಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸಲು ಮುಂದಾಯಿತು. ಸರ್ಕಾರದ ಮಟ್ಟದಲ್ಲಿ ಕೆರೆಗಳು ಮತ್ತು ನದಿಗಳನ್ನು ಬಳಸಿಕೊಂಡು ಭೂಮಿಯ ಮೇಲ್ ಸ್ತರದಲ್ಲಿ ಕಾಲುವೆಗಳನ್ನು ನಿರ್ಮಿಸಿ ಮತ್ತು ಸಣ್ಣ ನೀರಾವರಿ ಯೋಜನೆಗಳನ್ನು ನಿರ್ಮಿಸಿ ರೈತಾಪಿ ವರ್ಗಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಪ್ರಯತ್ನಿಸಿತು. ಇನ್ನು ವ್ಯಕ್ತಿಗತ ನೆಲೆಯಲ್ಲಿ ರೈತರು ತಾವೇ ಸ್ವತಃ ಕೊಳವೆ ಬಾವಿಗಳ ಮೂಲಕ ನೀರಾವರಿ ಸೌಲಭ್ಯ ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಸಹಕಾರಿ ಸಂಸ್ಥೆಗಳು, ಬ್ಯಾಂಕ್ ಗಳಂಥ ಹಣಕಾಸು ಸಂಸ್ಥೆಗಳಿಂದ ಸಾಲ ಸೌಲಭ್ಯ ಒದಗಿಸಲು ಮತ್ತು ಕಡಿಮೆ ದರದಲ್ಲಿ (ಸಬ್ಸಿಡಿ) ಡೀಸೆಲ್ ಮತ್ತು ವಿದ್ಯುತ್ ಸೌಲಭ್ಯ ಒದಗಿಸಲು ಮುಂದಾಯಿತು. ಹೀಗಾಗಿ ನೀರಾವರಿ ಸೌಲಭ್ಯ ಒದಗಿಸುವ ನೀತಿಯಲ್ಲಿನ ಈ ಪ್ರಮುಖ ಬದಲಾವಣೆಯಿಂದಾಗಿ ದೇಶದಲ್ಲಿ ಒಟ್ಟಾರೆ ನೀರಾವರಿ ಕ್ಷೇತ್ರದ ಪ್ರಮಾಣ ಮತ್ತು ಹೆಚ್ಚು ಇಳುವರಿ ತಳಿಗಳನ್ನು ಬೆಳೆಯುವ ಪ್ರಮಾಣ ಗಣನೀಯವಾಗಿ ಹೆಚ್ಚಿತು. 1970–71ರಲ್ಲಿ ದೇಶದಲ್ಲಿ 38.2 ದಶಲಕ್ಷ ಹೆಕ್ಟೇರ್‌ನಷ್ಟಿದ್ದ ಒಟ್ಟಾರೆ ನೀರಾವರಿ ಕ್ಷೇತ್ರ 2010–11ರ ವೇಳೆಗೆ 89.4 ದಶಲಕ್ಷ ಹೆಕ್ಟೇರ್‌ಗೆ ಹೆಚ್ಚಿತು. ಈ ವೃದ್ಧಿಯು ಆಹಾರ ಉತ್ಪಾದನೆಯ ಪ್ರಮಾಣ ಹೆಚ್ಚಾಗಲು ಕಾರಣವಾಯಿತು. ನೀರಾವರಿ ಸೌಲಭ್ಯ ಹೆಚ್ಚಳಗೊಂಡಿದ್ದು ವರ್ಷದ ಉದ್ದಕ್ಕೂ ಬಹು ಬೆಳೆ ರೂಪಿಸಿಕೊಳ್ಳಲು ಮತ್ತು ಬೇಸಿಗೆಯಲ್ಲಿ ಕಡಿಮೆ ನೀರು ಸೌಲಭ್ಯದಲ್ಲೂ ಬೆಳೆಯಬಹುದಾದ ತಳಿಗಳು ಮತ್ತು ಬೆಳೆಗಳನ್ನು ಬೆಳೆಯಲು ರೈತರು ಮುಂದಾಗುವಲ್ಲಿ ನೆರವಾಯಿತು. ಈ ಎಲ್ಲ ಬೆಳವಣಿಗೆಗಳು ಒಟ್ಟಾರೆಯಾಗಿ ದೇಶದಲ್ಲಿ ಆಹಾರ ಉತ್ಪಾದನೆಯ ಪ್ರಮಾಣವನ್ನೂ ಹೆಚ್ಚಿಸಿತು. 1970–71ರಲ್ಲಿ ದೇಶದಲ್ಲಿ 108.4 ದಶಲಕ್ಷ ಟನ್‌ಗಳಿದ್ದ ಆಹಾರ ಧಾನ್ಯಗಳ ಉತ್ಪಾದನೆಯ ಪ್ರಮಾಣ 2012–13ರ ವೇಳೆಗೆ 255.36 ದಶಲಕ್ಷ ಟನ್‌ಗಳಿಗೆ ಏರಿತು.

ದೇಶದಲ್ಲಿ ನೀರಾವರಿ ಆಧಾರಿತ ಕ್ಷೇತ್ರದ ಪ್ರಮಾಣ ಹೆಚ್ಚಾಗಲು ಇನ್ನೂ ಒಂದು ಅಂಶ ಕಾರಣವಾಯಿತು. ಅದೆಂದರೆ, ಸರ್ಕಾರವು ನೀರಾವರಿಗೆ ಬಳಸುವ ಕಾಲುವೆ ನೀರಿನ ಸೌಲಭ್ಯ, ಡೀಸೆಲ್ ಮತ್ತು ವಿದ್ಯುತ್‌ಗೆ ಕಡಿಮೆ ದರವನ್ನು ವಿಧಿಸಿದ್ದು. 1960ರ ದಶಕದಲ್ಲೇ ಸರ್ಕಾರವು ತಾನು ಸರ್ಕಾರದ ಮಟ್ಟದಲ್ಲಿ ಒದಗಿಸಿದ್ದ ನದಿ ಆಧಾರಿತ ಅಥವಾ ಜಲಾಶಯ ಆಧಾರಿತ ಕಾಲುವೆ ವ್ಯವಸ್ಥೆ ನಿರ್ವಹಣೆಗೆ ಅಗತ್ಯವಾದ ಪ್ರಮಾಣದಷ್ಟು ಮಾತ್ರ ಬೆಲೆ ವಸೂಲಿ ಮಾಡುತ್ತಿದ್ದ ಕಾರಣ ಇದು ರೈತಾಪಿ ವರ್ಗಕ್ಕೆ ಹೆಚ್ಚು ಲಾಭದಾಯಕವಾಯಿತು. 1992ರಲ್ಲಿ ಯೋಜನಾ ಆಯೋಗ ನೀಡಿದ ವರದಿಯನ್ವಯ ಲಾಭ ಮತ್ತು ವೆಚ್ಚದ ಅನುಪಾತ 1.5:1ರಷ್ಟು ಇದ್ದಾಗ ಮಾತ್ರ ಸರ್ಕಾರವು ಅಂಥ ಯೋಜನೆಗಳಿಗೆ ಅನುಮತಿ ನೀಡುತ್ತಿತ್ತು. ಅಂದರೆ ಒಂದು ನೀರಾವರಿ ಯೋಜನೆಗೆ ಒಂದು ರೂಪಾಯಿ ಬಂಡವಾಳ ಹೂಡಿದರೆ ಕನಿಷ್ಠ 1.5 ರೂಪಾಯಿಯಷ್ಟು ಲಾಭವಾದರೂ ಬರಬೇಕು ಎಂಬುದು ಈ ನಿಯಮ. ಈ ನಿಯಮವನ್ನು ಸರ್ಕಾರವು ಕಟ್ಟುನಿಟ್ಟಾಗಿ ಅನುಸರಿಸಿತೇ ಎಂಬುದು ಸಂಶಯಾಸ್ಪದ ಸಂಗತಿ. ಸಾರ್ವಜನಿಕ ವ್ಯವಸ್ಥೆಯಲ್ಲಿ ರೂಪಿಸಲಾದ ನೀರಾವರಿ ಯೋಜನೆಗಳಿಗೆ ಆಯಾ ರಾಜ್ಯ ಸರ್ಕಾರಗಳೇ ಬೆಲೆ ನಿಗದಿಪಡಿಸುವ ಸ್ವಾತಂತ್ರ್ಯ ಹೊಂದಿದ್ದ ಕಾರಣ ರಾಜಕಾರಣಿಗಳ ಪ್ರಭಾವಕ್ಕೆ ಒಳಗಾಗಿ ಸಾಮಾಜಿಕ ನ್ಯಾಯಕ್ಕಿಂತಲೂ ಹೆಚ್ಚಾಗಿ ಲಾಭದ ದೃಷ್ಟಿಯನ್ನೇ ಇಟ್ಟುಕೊಂಡು ಈ ಅನುಪಾತಕ್ಕಿಂತ ಕಡಿಮೆ ದರ ಒದಗಿಸಿರುವ ಸಾಧ್ಯತೆಯೂ ಇದೆ. 1960ರ ದಶಕದ ಮಧ್ಯ ಭಾಗದಲ್ಲಿ ಹಸಿರು ಕ್ರಾಂತಿಗಾಗಿ ಹೆಚ್ಚು ಇಳುವರಿ ತಳಿಗಳನ್ನು ಪ್ರೋತ್ಸಾಹಿಸಿದ ಹಿನ್ನೆಲೆಯಲ್ಲಿ ಮತ್ತು ಹೊಸ ಕೃಷಿ ನೀತಿಯನ್ನು ಜಾರಿಗೆ ತಂದ ಹಿನ್ನೆಲೆಯಲ್ಲಿ ದೇಶದ ಉದ್ದಗಲಕ್ಕೂ ಖಾಸಗಿ ಒಡೆತನದಲ್ಲಿ ಕೊಳವೆ ಬಾವಿಗಳು ವ್ಯಾಪಕವಾಗಿ ಹಬ್ಬಿದವು. 1965ರಲ್ಲಿ ಒಂದು ಲಕ್ಷದಷ್ಟು ಇದ್ದ ಕೊಳವೆ ಬಾವಿಗಳ ಸಂಖ್ಯೆ 1969ರ ವೇಳೆಗೆ 3,69,000 ಗಳಿಗೆ ಮತ್ತು 1974ರ ವೇಳೆಗೆ 11,84,800ರಷ್ಟು ಹೆಚ್ಚಾದವು ಎಂದು 1979ರಲ್ಲಿ ಧವನ್ ಅವರು ಬಿಡುಗಡೆ ಮಾಡಿದ ಅಂಕಿ ಅಂಶಗಳು ತಿಳಿಸುತ್ತವೆ. ಕೊಳವೆ ಬಾವಿಗಳನ್ನು ಕೊರೆಯಲು



ಮತ್ತು ನೀರಾವರಿ ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಳ್ಳಲು ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಒದಗಿಸಿದ್ದು ಹಾಗೂ ಭೂಮಿಯಿಂದ ನೀರನ್ನು ಮೇಲೆತ್ತಲು ಬಳಸುವ ಪಂಪ್‌ಸೆಟ್‌ಗಳಿಗೆ ಬಳಸುವ ಡೀಸೆಲ್ ಮತ್ತು ವಿದ್ಯುತ್‌ಗೆ ಕಡಿಮೆ ದರ ವಿಧಿಸಿದ್ದು ಕೊಳವೆ ಬಾವಿಗಳ ಸಂಖ್ಯೆ ಇಷ್ಟೊಂದು ವ್ಯಾಪಕವಾಗಿ ಹೆಚ್ಚಲು ಸಹಕಾರಿಯಾಯಿತು.

### ಕೃಷಿ ಬೆಲೆ ನೀತಿ

1965ರಲ್ಲಿ ಜಾರಿಗೆ ತರಲಾದ ಹೊಸ ಕೃಷಿ ನೀತಿಯು ದೇಶದಲ್ಲಿ ಹೆಚ್ಚು ಇಳುವರಿ ನೀಡುವ ತಳಿಗಳನ್ನು ಬೆಳೆಯಲು ಪ್ರೋತ್ಸಾಹಿಸಿದ್ದು ಮತ್ತು ಇವುಗಳನ್ನು ತಮ್ಮ ಜಮೀನಿನಲ್ಲಿ ಅಳವಡಿಸಲು ರೈತರಿಗೆ ವಿವಿಧ ಸೌಲಭ್ಯಗಳನ್ನು ಒದಗಿಸುವತ್ತ ಹೆಚ್ಚು ಆದ್ಯತೆ ನೀಡಿತು. ಈ ನೀತಿಯು ಬೆಳೆಗಳ ಕಟಾವಿನ ಬಳಿಕ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ದೊರೆಯಬಹುದಾದ ಬೆಲೆ ಕುರಿತಾಗಿಯೂ ಉತ್ತಮ ಯೋಜನೆಯನ್ನು ರೂಪಿಸಿತು. ಕಟಾವಿನ ಬಳಿಕ ಮಾರುಕಟ್ಟೆಯಲ್ಲಿ ಬೆಲೆ ಕುಸಿದಲ್ಲಿ ಆಯಾ ಬೆಳೆಗೆ ಕನಿಷ್ಠ ಬೆಂಬಲ ಬೆಲೆ ನೀಡುವತ್ತ ಸರ್ಕಾರ ಗಮನ ಹರಿಸಿತು. 1965ರಲ್ಲಿ ಕೃಷಿ (ಉತ್ಪನ್ನ) ಬೆಲೆ ಆಯೋಗ ರಚನೆಯಾಗಿದ್ದು ಇದು 1980ರಲ್ಲಿ ಕೃಷಿ ಉತ್ಪನ್ನ ನಿರ್ವಹಣಾ ವೆಚ್ಚ ಮತ್ತು ಬೆಲೆ ಆಯೋಗ ಎಂದು ಪುನರ್ ನಾಮಕರಣಗೊಂಡಿತು. ಈ ಆಯೋಗವು ಒಂದು ನಿರ್ದಿಷ್ಟ ಬೆಳೆಗೆ ಅದರ ಉತ್ಪಾದನಾ ವೆಚ್ಚವನ್ನು ಗಮನದಲ್ಲಿ ಇಟ್ಟುಕೊಂಡು ಎಷ್ಟು ಬೆಲೆ ನಿಗದಿ ಮಾಡಬೇಕೆಂಬ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುತ್ತಿತ್ತು. ಈ ರೀತಿ ಬೆಲೆ ನಿಗದಿ ಮಾಡುವ ಕಾಲಕ್ಕೆ ರೈತರ, ಗ್ರಾಹಕರ, ಸಮಾಜದ ಮತ್ತು ಒಟ್ಟಾರೆ ಆರ್ಥಿಕ ಹಿತಾಸಕ್ತಿಯನ್ನು ಗಮನದಲ್ಲಿ ಇಟ್ಟುಕೊಳ್ಳಲಾಗುತ್ತಿತ್ತು. ಈ ಆಯೋಗವು ಮೂರು ಪ್ರಕಾರದ ಬೆಲೆ ನಿಗದಿ

ವ್ಯವಸ್ಥೆಯನ್ನು ರೂಪಿಸಿತು. ಅವೆಂದರೆ ಕನಿಷ್ಠ ಬೆಂಬಲ ಬೆಲೆ, ಕನಿಷ್ಠ ಎತ್ತುವರಿ ಬೆಲೆ ಮತ್ತು ಕನಿಷ್ಠ ಮಾರಾಟ ಬೆಲೆ.

ಮೊದಲನೆಯದು ಅಂದರೆ ಕನಿಷ್ಠ ಬೆಂಬಲ ಬೆಲೆ ಮುಖ್ಯವಾಗಿ ರೈತರ ಹಿತಾಸಕ್ತಿ ಕಾಪಾಡುವ ಉದ್ದೇಶದ್ದು. ಇದು ಸಾಮಾನ್ಯವಾಗಿ ಬೆಲೆ ಕುಸಿತ ಇಲ್ಲದ ವೇಳೆಯಲ್ಲಿ ಮಾರುಕಟ್ಟೆಯಲ್ಲಿ ಇರಬಹುದಾದ ಬೆಲೆಗಿಂತ ಸ್ವಲ್ಪ ಕಡಿಮೆ ಇರುತ್ತದೆ. ಎರಡನೆಯದು ಅಂದರೆ ಧಾನ್ಯ ಎತ್ತುವರಿ ಬೆಲೆ ಪಡಿತರ ವ್ಯವಸ್ಥೆ ಮೂಲಕ ವಿತರಿಸಬಹುದಾದ ಆಹಾರ ಧಾನ್ಯಗಳನ್ನು ರೈತರಿಗೆ ನಷ್ಟವಾಗದ ರೀತಿಯಲ್ಲಿ ದರ ನಿಗದಿ ಪಡಿಸಿ ಅವರಿಂದ ಖರೀದಿಸುವುದು. ಇದು ಕನಿಷ್ಠ ಬೆಂಬಲ ಬೆಲೆಗಿಂತ ಹೆಚ್ಚಾಗಿರುತ್ತದೆಯಾದರೂ ಮಾರುಕಟ್ಟೆಯಲ್ಲಿ ಇರಬಹುದಾದ ಬೆಲೆಗಿಂತ ಕಡಿಮೆ ಬೆಲೆಯನ್ನು ಒಳಗೊಂಡಿರುತ್ತದೆ. ಇನ್ನು ಮಾರಾಟ ಬೆಲೆ ಎಂದರೆ ಸರ್ಕಾರವು ರೈತರಿಂದ ಆಹಾರ ಧಾನ್ಯ ಎತ್ತುವರಿ ಮಾಡಿ ಗೋದಾಮುಗಳಲ್ಲಿ ಸಂಗ್ರಹಿಸಿದ ಬಳಿಕ ಪಡಿತರ ವ್ಯವಸ್ಥೆ ಮೂಲಕ ವಿತರಣೆ ಮಾಡಲು ನಿಗದಿಪಡಿಸುವ ದರ. ಇದು ಧಾನ್ಯ ಎತ್ತುವರಿ ದರ, ಸಾಗಣೆ ವೆಚ್ಚ, ಗೋದಾಮು ನಿರ್ವಹಣೆ ಮತ್ತಿತರ ಅಂಶಗಳಿಗೆ ತಗುಲಬಹುದಾದ ವೆಚ್ಚವನ್ನು ಆಧರಿಸಿ ನಿಗದಿಪಡಿಸುವ ಬೆಲೆಯಾಗಿರುತ್ತದೆ. ಕೃಷಿ ಉತ್ಪನ್ನ ಬೆಲೆ ಆಯೋಗವು ಮೂರು ಸ್ತರದ ಬೆಲೆ ನಿಗದಿ ವ್ಯವಸ್ಥೆಯನ್ನು ಶಿಫಾರಸು ಮಾಡಿದರೂ ರೈತರ ಲಾಬಿಗೆ ಮಣಿದು ಕನಿಷ್ಠ ಬೆಂಬಲ ಬೆಲೆ ಮತ್ತು ಧಾನ್ಯ ಎತ್ತುವರಿ ಬೆಲೆಗಳಲ್ಲಿ ಹೆಚ್ಚು ವ್ಯತ್ಯಾಸ ಉಳಿಯದೇ ಸರ್ಕಾರವು ಕನಿಷ್ಠ ಬೆಂಬಲ ಬೆಲೆ ವ್ಯವಸ್ಥೆಗೇ ಅಂಟಿಕೊಂಡಿತು. ಆಹಾರ ಧಾನ್ಯಗಳಿಗೆ ಬೆಂಬಲ ಬೆಲೆ, ಹೆಚ್ಚು ಇಳುವರಿ ನೀಡುವ ತಳಿಗಳನ್ನು ಬೆಳೆಯಲು ಸಬ್ಸಿಡಿ ರೂಪದಲ್ಲಿ ಸಾಕಷ್ಟು ಪ್ರೋತ್ಸಾಹ ದೊರೆತದ್ದು ಹಾಗೂ ರೈತರು ಬೆಳೆದ ಆಹಾರ ಧಾನ್ಯವನ್ನು ಕೊಂಡುಕೊಳ್ಳಲು ಸರ್ಕಾರವೇ ಮುಂದಾಗುವ ಮೂಲಕ ಇಳುವರಿಗೆ ಮಾರುಕಟ್ಟೆ ಕಲ್ಪಿಸಿಕೊಟ್ಟದ್ದು ಆಹಾರ ಧಾನ್ಯ ಉತ್ಪಾದನೆ ಗಣನೀಯವಾಗಿ ಹೆಚ್ಚಲು ಕಾರಣವಾಯಿತು.

### ರಸಗೊಬ್ಬರ ಬಳಕೆ

ದೇಶಾದ್ಯಂತ ಲಕ್ಷಾಂತರ ರೈತರು ಹೆಚ್ಚು ಇಳುವರಿ ನೀಡುವ ತಳಿಗಳನ್ನು ಬೆಳೆಯಲು ಆರಂಭಿಸಿದರು. ಈ ತಳಿಗಳಿಗೆ



ಬೇಕಾಗುವ ರಸಗೊಬ್ಬರದ ಬಳಕೆಯನ್ನೂ ರೈತರು ಯಥೇಚ್ಛವಾಗಿಯೇ ಮಾಡಿದರು. ತಮ್ಮ ಜಮೀನಿನಲ್ಲಿ ಹೆಚ್ಚು ಹೆಚ್ಚು ಇಳುವರಿ ತೆಗೆಯಬೇಕೆಂಬ ಭರದಲ್ಲಿ ಕೆಲವು ಬಾರಿ ರೈತರು ವಿಜ್ಞಾನಿಗಳು ಮಾಡಿದ ಶಿಫಾರಸಿಗಿಂತ ಸ್ವಲ್ಪ ಹೆಚ್ಚಾಗಿಯೇ ರಸಗೊಬ್ಬರ ಬಳಕೆ ಮಾಡಲು ಮುಂದಾದರು. ಇದು ಬೆಳೆಗಳ ಇಳುವರಿಯನ್ನು ಹೆಚ್ಚಿಸಿದರೂ ಇದರ ದುಷ್ಪರಿಣಾಮ ಮಣ್ಣಿನ ಮೇಲೆ ಆಗಲಾರಂಭಿಸಿತು. ಉದಾಹರಣೆಗೆ ಒಂದು ಕೆಜಿ ರಸಗೊಬ್ಬರ (ಸಾರಜನಕ, ರಂಜಕ ಮತ್ತು ಪೊಟ್ಯಾಶಿಯಂ) ಬಳಸಿ 1992–97ರಲ್ಲಿ ಏಳೂವರೆ ಕೆಜಿ ಆಹಾರಧಾನ್ಯ ಬೆಳೆಯುತ್ತಿದ್ದರೆ, 1997–99ರಲ್ಲಿ ಈ ಅನುಪಾತವು ಒಂದು ಕೆಜಿ ರಸಗೊಬ್ಬರಕ್ಕೆ ಏಳು ಕೆಜಿ ಆಹಾರ ಧಾನ್ಯ ಇಳುವರಿಗೆ ಇಳಿಯಿತು. ಅದೇ ರೀತಿ 1999– 2000ರಲ್ಲಿ ಈ ಅನುಪಾತವು ಒಂದು ಕೆಜಿ ರಸಗೊಬ್ಬರಕ್ಕೆ (ಸಾರಜನಕ, ರಂಜಕ, ಪೊಟ್ಯಾಶಿಯಂ) 6.5 ಕೆ.ಜಿ ಇಳುವರಿಗೆ ತಲುಪಿತು.

ರಸಗೊಬ್ಬರ ಉತ್ಪಾದನೆಗೆ ಇದುವರೆಗೆ ಬಳಸುತ್ತಿದ್ದ ನಾಫ್ತಾ ಆಧಾರಿತ ಇಂಧನಕ್ಕೆ ಬದಲಾಗಿ ನೈಸರ್ಗಿಕ ಅನಿಲವನ್ನು ಬಳಸುವುದನ್ನು ಸರ್ಕಾರ 2014ರ ಮಾರ್ಚ್‌ನಲ್ಲಿ ಕಡ್ಡಾಯಗೊಳಿಸಿದೆ. ನೈಸರ್ಗಿಕ ಅನಿಲವನ್ನೇ ಇಂಧನವಾಗಿ ಬಳಸದಿದ್ದರೆ ಕಾರ್ಖಾನೆಗಳಿಗೆ ನೀಡುವ ಸಹಾಯಧನವನ್ನು ಕಳೆದುಕೊಳ್ಳ ಬೇಕಾಗುತ್ತದೆ ಎಂದು ಸರ್ಕಾರವು ಕಾರ್ಖಾನೆಗಳಿಗೆ ಎಚ್ಚರಿಕೆಯನ್ನೂ ನೀಡಿದೆ. ರಸಗೊಬ್ಬರಗಳ ಮೇಲೆ ನೀಡುವ ಸಬ್ಸಿಡಿಯಿಂದಾಗಿ ದೇಶದ ಒಟ್ಟಾರೆ ಆರ್ಥಿಕ ಸ್ಥಿತಿಗತಿಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಲು ಆರಂಭಿಸಿತು. ಹೀಗಾಗಿ ರಸಗೊಬ್ಬರ ಬೆಲೆ ನೀತಿಯನ್ನು ಸುಧಾರಿಸಲು ಸರ್ಕಾರ ಯತ್ನಿಸುತ್ತಿದ್ದರೂ ರೈತರು ಮತ್ತು ರಾಜಕಾರಣಿಗಳ ಪ್ರಬಲ ಲಾಬಿಯಿಂದಾಗಿ ಇದು ಸಾಧ್ಯವಾಗುತ್ತಿಲ್ಲ.

ಹೆಚ್ಚು ಇಳುವರಿ ನೀಡುವ ತಳಿಗಳನ್ನು ಬೆಳೆದು ಆಹಾರ ಧಾನ್ಯದ ಉತ್ಪಾದನೆಯನ್ನು ಹೆಚ್ಚಿಸಬೇಕೆಂಬ ನಿಟ್ಟಿನಲ್ಲಿ ಸುಮಾರು ಎರಡು ದಶಕಗಳ ಕಾಲ ಅಂದರೆ 1965ರಿಂದ 1985ರವರೆಗೆ ಕಾಲುವೆ ಆಧಾರಿತ ನೀರಾವರಿ ವ್ಯವಸ್ಥೆಗಳ ಮೂಲಕ ಬಳಸುವ ನೀರಿಗೆ ಸರ್ಕಾರ ಕಡಿಮೆ ದರ ವಿಧಿಸುತ್ತಿತ್ತು. ಅಲ್ಲದೇ ಕಾಲುವೆ ಮೂಲಕ ಬಳಸುವ ನೀರಿಗೆ ದರ ನಿಗದಿ ಮಾಡುವ ವಿಷಯ ಈ ಮೊದಲೇ ಹೇಳಿದಂತೆ ಆಯಾ ರಾಜ್ಯ ಸರ್ಕಾರಗಳಿಗೆ ಬಿಟ್ಟ ವಿಚಾರವಾಗಿದ್ದರಿಂದ ನೀರು ಬಳಕೆ ದರವನ್ನು ಸರಿಯಾಗಿ ವಸೂಲು ಮಾಡದೇ ಈ ಮೂಲಕ ಬರುವ ಆದಾಯ ಕುಂಠಿತಗೊಂಡಿತು. ನೀರಿನ ಬೆಲೆ ಹೆಚ್ಚಳಕ್ಕೆ ಮುಂದಾದರೆ ರೈತಾಪಿ ವರ್ಗದಿಂದ ತೀವ್ರ ವಿರೋಧ ವ್ಯಕ್ತವಾಗುತ್ತಿದ್ದುದರಿಂದ ಸರ್ಕಾರ ಹಿಂದೇಟು ಹಾಕುವಂತಾಯಿತು. ಹೀಗಾಗಿ ದರ ಹೆಚ್ಚದೇ ಆದಾಯ ಇಳಿಮುಖವಾಯಿತು. ನೀರಾವರಿಗೆ ಸಂಬಂಧಿಸಿದಂತೆ ನೀರಿನ ದರ ಮಾತ್ರವಲ್ಲ; ನೀರನ್ನು ಭೂಮಿಯಿಂದ ಮೇಲೆತ್ತುವ ಪಂಪ್‌ಸೆಟ್‌ಗಳಿಗೆ ಬಳಸುತ್ತಿದ್ದ ಡೀಸೆಲ್ ಮತ್ತು ವಿದ್ಯುತ್‌ಗೂ ಸರ್ಕಾರ ಸಬ್ಸಿಡಿ ನೀಡುತ್ತಿತ್ತು. ಇವುಗಳ ಬೆಲೆ ಕೂಡ ಹೆಚ್ಚಾಗದ ಕಾರಣ ಆದಾಯ ಕುಂಠಿತಗೊಂಡಿತು. ನೀರಾವರಿಗೆ ಒದಗಿಸುತ್ತಿದ್ದ ವಿದ್ಯುತ್ ಸಾಗಣೆ ಮತ್ತು ವಿತರಣೆ ಕಾಲಕ್ಕೆ ಆಗುತ್ತಿದ್ದ ಸೋರಿಕೆ ಮತ್ತು ಅನಧಿಕೃತವಾಗಿ ವಿದ್ಯುತ್ ಕಳವು ಮಾಡಿ ಪಂಪ್‌ಸೆಟ್‌ಗಳಿಗೆ ಬಳಸುವ ಪ್ರಕರಣಗಳು ಹೆಚ್ಚಾಗಿದ್ದ ಕಾರಣ ಆಯಾ

ರಾಜ್ಯಗಳ ವಿದ್ಯುತ್ ಮಂಡಳಿಗಳ ಆದಾಯದ ಮೇಲೂ ದುಷ್ಪರಿಣಾಮ ಉಂಟಾಗಿ ಅವುಗಳ ಆದಾಯ ಕುಂಠಿತಗೊಂಡಿತು. ಈ ಎಲ್ಲ ಅಂಶಗಳು ದೇಶದ ಒಟ್ಟಾರೆ ಆರ್ಥಿಕ ಸ್ಥಿತಿಗತಿಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟುಮಾಡಿತು.

ಕೃಷಿಗೆ ಬಳಸಲು ನೀರಾವರಿ ಪಂಪ್‌ಸೆಟ್‌ಗಳಿಗೆ ನಿರಂತರವಾಗಿ ಗುಣಮಟ್ಟದ ವಿದ್ಯುತ್ ದೊರೆಯದ ವಿಷಯವೂ ಕೂಡ ಸರ್ಕಾರದ ಕಳವಳಕ್ಕೆ ಕಾರಣವಾಗಿತ್ತು. ಉದಾಹರಣೆಗೆ ಕರ್ನಾಟಕದಂಥ ರಾಜ್ಯಗಳಲ್ಲಿ ಸತತ ಲೋಡ್ ಶೆಡ್ಡಿಂಗ್ ನಿಂದಾಗಿ ದಿನಕ್ಕೆ ಮೂರ್ನಾಲ್ಕು ತಾಸುಗಳಷ್ಟು ಮಾತ್ರ ಗುಣಮಟ್ಟದ ವಿದ್ಯುತ್ ಸರಬರಾಜಾಗುತ್ತಿತ್ತು. ಈ ಅಂಶವು ವಿಶ್ವ ಬ್ಯಾಂಕ್ ಗಮನವನ್ನೂ ಸೆಳೆಯಿತಲ್ಲದೇ 'ಭಾರತ ಆರ್ಥಿಕವಾಗಿ ಹಿಂದುಳಿಯಲು ಪ್ರಮುಖ ಮತ್ತು ಮುಖ್ಯ ಏಕೈಕ ಕಾರಣವೆಂದರೆ ಕಳಪೆ ಗುಣಮಟ್ಟದ ವಿದ್ಯುತ್ ಸರಬರಾಜು' ಎಂದು ಅದು ಬಣ್ಣಿಸಿತು. ಇದೆಲ್ಲದರ ಪರಿಣಾಮವಾಗಿ ಅದುವರೆಗೆ ವಿದ್ಯುತ್ ಉತ್ಪಾದನೆ, ಸಾಗಣೆ ಮತ್ತು ವಿತರಣೆ ವ್ಯವಸ್ಥೆಯನ್ನು ರಾಜ್ಯ ವಿದ್ಯುತ್ ನಿಗಮ ಎಂಬ ಏಕೈಕ ಸಂಸ್ಥೆ ನಿರ್ವಹಿಸುತ್ತಿದ್ದ ವ್ಯವಸ್ಥೆಯನ್ನು 2003ರಲ್ಲಿ ಬದಲಿಸಿ ಉತ್ಪಾದನೆ, ಸಾಗಣೆ ಮತ್ತು ವಿತರಣೆಗೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲು ಸರ್ಕಾರ ಮುಂದಾಗುವಂತೆ ಮಾಡಿತು.

### ಆಹಾರ ಧಾನ್ಯಗಳ ಬೆಲೆ ನಿಗದಿ ಪರಿಣಾಮಗಳು

ಆಹಾರ ಧಾನ್ಯಗಳ ಬೆಲೆ ನಿಗದಿಗೆ ಸಂಬಂಧಿಸಿದಂತೆ ಭಾರತ ಆಹಾರ ನಿಗಮ ಪ್ರಕಟಿಸಿದ ಹೊಸ ಬೆಲೆ ನೀತಿ ಹಸಿರು ಕ್ರಾಂತಿಗೆ ಕಾರಣವಾಯಿತಾದರೂ ಇದರ ಕೆಲ ಋಣಾತ್ಮಕ ಪರಿಣಾಮಗಳೂ ಕಂಡುಬಂದವು. ಮೊದಲನೆಯದಾಗಿ, ಹೆಚ್ಚು ಇಳುವರಿ ನೀಡುವ ತಳಿಗಳ ಅಭಿವೃದ್ಧಿಗಾಗಿ ಸರ್ಕಾರ ನೀಡುತ್ತಿದ್ದ ಸಬ್ಸಿಡಿಗೆ ಯಾವುದೇ ಸಾಮಾಜಿಕ ಅಥವಾ ಆರ್ಥಿಕ ಉದ್ದೇಶದ ತಳಹದಿ ಇರಲಿಲ್ಲ. ಎರಡನೆಯದಾಗಿ ಈ ಬೆಲೆ ನಿಗದಿ ನೀತಿಯಿಂದಾಗಿ ಸರ್ಕಾರ ನಿಯಂತ್ರಿಸುವ ಪಡಿತರ ಮಾರುಕಟ್ಟೆ ಮತ್ತು ಖಾಸಗಿ ವ್ಯಕ್ತಿಗಳು ನಿರ್ವಹಿಸುವ ಮುಕ್ತ ಮಾರುಕಟ್ಟೆ ಎಂಬ ಎರಡು ಬಗೆಯ ಮಾರುಕಟ್ಟೆಗಳು ಸೃಷ್ಟಿಯಾಯಿತು. ಸರ್ಕಾರಿ ನಿಯಂತ್ರಿತ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ದೊರೆಯುತ್ತಿದ್ದ ಆಹಾರ ಧಾನ್ಯಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಬೇಕೆಂದರೆ ಹೆಚ್ಚಿನ ಬೆಲೆ ತೆರಬೇಕಾಗುತ್ತಿತ್ತು. ಹೀಗಾಗಿ ಪಡಿತರ ವ್ಯವಸ್ಥೆಯಲ್ಲಿ ಖರೀದಿಸಿದ ಆಹಾರ ಧಾನ್ಯಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ಲಾಭ ಗಳಿಸಲು ಕೆಲ ದುಷ್ಟ ಶಕ್ತಿಗಳು ಮುಂದಾಗಿದ್ದು ಮಾರುಕಟ್ಟೆಯಲ್ಲಿ ನ್ಯಾಯಯುತವಲ್ಲದ ಬೆಳವಣಿಗೆಗೆ ಕಾರಣವಾಯಿತು. ಇದಲ್ಲದೇ ದೇಶದ ವಿವಿಧ ರಾಜ್ಯಗಳಲ್ಲಿ ಪಡಿತರ ವ್ಯವಸ್ಥೆಯ ಮೂಲಕ ವಿತರಣೆಯಾಗುತ್ತಿದ್ದ ಆಹಾರಧಾನ್ಯಗಳ ಬೆಲೆಯಲ್ಲಿ ವ್ಯತ್ಯಾಸ ಆಗುತ್ತಿದ್ದುದರಿಂದ ಕಡಿಮೆ ಬೆಲೆಯಲ್ಲಿ ಸಿಕ್ಕುತ್ತಿದ್ದ ರಾಜ್ಯದಲ್ಲಿ ಆಹಾರ ಧಾನ್ಯಗಳನ್ನು ಕೊಂಡು ಹೆಚ್ಚು ಬೆಲೆ ದೊರೆಯುವ ರಾಜ್ಯಗಳಲ್ಲಿ ವಿಶೇಷವಾಗಿ ಗಡಿ ಜಿಲ್ಲೆಗಳಲ್ಲಿ ಮಾರಾಟ ಮಾಡುವ ಕುಕೃತ್ಯಕ್ಕೂ ಕಾರಣವಾಯಿತು. ಇದನ್ನು ತಪ್ಪಿಸಲು ಸರ್ಕಾರವು ಖಾಸಗಿ ವ್ಯಕ್ತಿಗಳು




**ಪ್ರಸ್ತುತ ಲೇಖನದ ಬಗ್ಗೆ ಹಸಿರು ಕ್ರಾಂತಿಯ ಹರಿಕಾರ ಡಾ. ಎಂ.ಎಸ್. ಸ್ವಾಮಿನಾಥನ್ ಅನಿಸಿಕೆ**

**1960ರ ದಶಕದಲ್ಲಿ ಹಸಿರು ಕ್ರಾಂತಿ ಎಂಬ ಉತ್ಕ್ರಾಂತಿಗೆ ಕಾರಣವಾದ ಕೃಷಿಯಲ್ಲಿನ ತಂತ್ರಜ್ಞಾನಗಳು ಮತ್ತು ಸರ್ಕಾರದ ನೀತಿ ನಿರೂಪಣೆಗಳ ಫಲಾಫಲದ ಬಗ್ಗೆ ಪ್ರೊ. ಟಿ.ಎನ್. ಶ್ರೀನಿವಾಸನ್ ಮತ್ತು ಪವನ್ ಕಾಟ್ಕರ ಅವರು ಲೇಖನ ಬರೆದಿರುವುದು ನನಗೆ ಹರ್ಷ ತಂದಿದೆ. ಈ ತಂತ್ರಜ್ಞಾನ ಅಳವಡಿಕೆಯ ಸಂದರ್ಭದಲ್ಲಿ ಸರ್ಕಾರದ ವಿವಿಧ ಇಲಾಖೆಗಳು, ಸಹಕಾರಿ ಸಂಸ್ಥೆಗಳು ಮತ್ತಿತರ ಸಂಘಟನೆಗಳ ಮಧ್ಯೆ ಏರ್ಪಟ್ಟ ಸಮನ್ವಯದಿಂದಾಗಿ ಹಸಿರು ಕ್ರಾಂತಿ ಯಶಸ್ಸು ಗಳಿಸಿದ ವಿಚಾರದ ಬಗ್ಗೆ ನಾನು ಆಗಾಗ್ಗೆ ಹೆಮ್ಮೆಯಿಂದ ಅಧ್ಯಯನ ಮಾಡುತ್ತಿರುತ್ತೇನೆ. ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ, ಸರ್ಕಾರದ ನೀತಿ– ನಿಯಮಗಳು ಮತ್ತು ಹೊಸ ಕೃಷಿಯಲ್ಲಿ ಅಳವಡಿಸಲಾದ ಹೆಚ್ಚು ಇಳುವರಿ ನೀಡುವ ತಳಿಗಳನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ರೈತರು ತೋರಿದ ಉತ್ಸಾಹಗಳು ಮತ್ತು ಇವೆಲ್ಲವುಗಳ ಮಧ್ಯೆ ಮೂಡಿಬಂದ ಸಹಮತ ಮತ್ತು ಸಮನ್ವಯಗಳು 1960 ದಶಕದಲ್ಲಿ ಗೋಧಿ ಮತ್ತು ಅಕ್ಕಿ ಉತ್ಪಾದನೆಯಲ್ಲಿ ತ್ವರಿತ ಗತಿಯಲ್ಲಿ ಹೆಚ್ಚಳ ಉಂಟಾಗಲು ಕಾರಣವಾಯಿತು. ಹಸಿರು ಕ್ರಾಂತಿಗೆ ಕಾರಣವಾದ ತಂತ್ರಜ್ಞಾನಗಳು, ಸರ್ಕಾರದ ನೆರವಿನಿಂದಾಗಿ ಸಣ್ಣ ಮತ್ತು ಅತಿ ಸಣ್ಣ ಪ್ರಮಾಣದ ರೈತಾಪಿ ವರ್ಗವು ಹೊಸ ತಳಿಯನ್ನು ತಮ್ಮ ಜಮೀನಿನಲ್ಲಿ ಬಿತ್ತಿ ಲಾಭ ಪಡೆಯುವ ಮೂಲಕ ಈ ಯೋಜನೆ ಯಶಸ್ಸು ಸಾಧಿಸಿದ್ದನ್ನು ದಾಖಲಿಸುವ ಜತೆಗೆ ತಂತ್ರಜ್ಞಾನದ ದುರ್ಬಳಕೆಯಿಂದಾಗಿ ಉಂಟಾದ ದುಷ್ಪರಿಣಾಮಗಳ ಬಗ್ಗೆಯೂ ಈ ಲೇಖನದಲ್ಲಿ ಲೇಖಕರು ವಿಸ್ತೃತವಾಗಿ ವಿವರಿಸಿರುವುದು ಸಂತಸದ ಸಂಗತಿ. ಹೀಗಾಗಿಯೇ ನಾನು, ಆಹಾರ ಧಾನ್ಯಗಳ ಉತ್ಪಾದನೆಯ ಹೆಚ್ಚಳದ ಜತೆಗೆ ಪರಿಸರದ ಮೇಲೆ ಅದು ವ್ಯತಿರಿಕ್ತ ಪರಿಣಾಮ ಬೀರದಂತೆ ವಹಿಸಬೇಕಾದ ಎಚ್ಚರಿಕೆ ಕುರಿತಾದ 'ನಿತ್ಯ ಹಸಿರು ಕ್ರಾಂತಿ'ಯ (Ever- green revolution) ಅಗತ್ಯವನ್ನು ಪ್ರತಿಪಾದಿಸಿದ್ದೆ. ಆದರೂ ಸಹ ಅಂತರ್ಜಲ ಬಳಕೆ, ರಸಗೊಬ್ಬರದ ಬಳಕೆ ಮತ್ತು ವಿದ್ಯುತ್ ಬಳಕೆಯ ಸಂದರ್ಭದಲ್ಲಿ ವ್ಯತಿರಿಕ್ತ ಪರಿಣಾಮಗಳು ಉಂಟಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿವೆ. ಹೀಗಾಗಿಯೇ ನಾನು, ಸರ್ಕಾರ ನೀಡಿದ ಸಬ್ಸಿಡಿ ಬಹುಮಟ್ಟಿಗೆ ಪರಿಸರ ಹಾನಿಗೆ ಕಾರಣವಾಗುತ್ತಿದೆ ಎಂದು ಎಚ್ಚರಿಸಿದ್ದೆ.**

**ಹೆಚ್ಚು ಇಳುವರಿ ನೀಡುವ ತಳಿಗಳನ್ನು ಅಳವಡಿಸುವ ಮೂಲಕ ಆಹಾರ ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಜಾರಿಗೆ ತರಲಾದ ಹೊಸ ಕೃಷಿ ನೀತಿಯ ಅನುಷ್ಠಾನದ ವೇಳೆ ಭಾರತದ ಆಹಾರ ನಿಗಮ, ರಾಷ್ಟ್ರೀಯ ಬೀಜ ನಿಗಮ ಮತ್ತು ಕೃಷಿ (ಉತ್ಪನ್ನ) ಬೆಲೆ ಆಯೋಗಗಳು ವಹಿಸಿದ ಪಾತ್ರದ ಬಗ್ಗೆ ಲೇಖಕರು ಈ ಲೇಖನದಲ್ಲಿ ವಿವರವಾಗಿ ನೀಡಿರುವುದು ಸಂತಸದ ವಿಚಾರ. ಕಳೆದ ಕೆಲವು ದಶಕಗಳ ಅವಧಿಯಲ್ಲಿ ಭಾರತದ ಕೃಷಿ ಕ್ಷೇತ್ರದಲ್ಲಿ ಉಂಟಾದ ಬದಲಾವಣೆಯ ಬಗ್ಗೆ ಅಧ್ಯಯನ ಮಾಡಲು ಬಯಸುವ ಆಸಕ್ತರಿಗೆ ಈ ಲೇಖನವು ಆಸಕ್ತಿ ಹುಟ್ಟಿಸುವಲ್ಲಿ ಯಶಸ್ವಿ ಆಗುತ್ತದೆ ಎಂಬುದು ನನ್ನ ಭಾವನೆ. ಹಸಿರು ಕ್ರಾಂತಿಯ ಒಟ್ಟಾರೆ ಪರಿಣಾಮವಾಗಿ ಭಾರತವು ಹಡಗಿನಿಂದ ಬಾಯಿಗೆ (ಅಂದರೆ ವಿದೇಶದಿಂದ ಹಡಗಿನಲ್ಲಿ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಂಡು ತಿನ್ನುವುದು) ವ್ಯವಸ್ಥೆಯಿಂದ ಸ್ಥಳೀಯವಾಗಿ ಬೆಳೆಯಲಾದ ಆಹಾರ ಧಾನ್ಯದ ಕಾರಣದಿಂದಾಗಿ ಆಹಾರದ ಹಕ್ಕು ಪಡೆಯುವ ಮಟ್ಟಕ್ಕೆ ಏರಿರುವುದು ನಮಗೆ ಹೆಮ್ಮೆ ತರುವ ವಿಚಾರ.**

ಪಡಿತರ ವ್ಯವಸ್ಥೆಯಲ್ಲಿ ಆಹಾರ ಧಾನ್ಯಗಳನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸಾಗಣೆ ಮಾಡುವುದಕ್ಕೆ ನಿರ್ಬಂಧ ಹೇರಿತು. ಇಂಥ ನಿಷೇಧದಿಂದಾಗಿ ಕಾಳ ಸಂತೆ ವ್ಯವಸ್ಥೆ ಸೃಷ್ಟಿಯಾಗಲು ಕಾರಣವಾಯಿತು.

ಮೂರನೆಯದಾಗಿ, ಆಹಾರ ಧಾನ್ಯದ ಬೆಲೆ ನಿಗದಿ ಸಂದರ್ಭದಲ್ಲಿ ಸರ್ಕಾರದ ಮೇಲೆ ಒತ್ತಡ ತರುವ ರೈತರ ಲಾಬಿ ಪ್ರಬಲವಾಯಿತು. ವಿಶೇಷವಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ನಿರ್ದಿಷ್ಟ ಆಹಾರ ಧಾನ್ಯದ ಬೆಲೆ ಹೆಚ್ಚಾದಾಗ ಅದಕ್ಕೆ ಸ್ಥಳೀಯ ಪಡಿತರ ಮಾರುಕಟ್ಟೆಯಲ್ಲೂ ಹೆಚ್ಚಿನ ಬೆಲೆ ನಿಗದಿ ಮಾಡುವಂತೆ ಸರ್ಕಾರದ ಮೇಲೆ ಒತ್ತಡ ಹೇರುವ ಪ್ರಯತ್ನಗಳು ನಡೆದವು. ಇದಕ್ಕಾಗಿ ರೈತರ ಪ್ರತಿಭಟನೆಗಳು ನಡೆಯುತ್ತಿದ್ದವಲ್ಲದೇ ಅನೇಕ ಬಾರಿ ಆಹಾರ ಧಾನ್ಯಗಳ ಬೆಲೆ ಹೆಚ್ಚಿಸುವಲ್ಲಿ ಈ ಚಳವಳಿಗಳು ಯಶಸ್ವಿ ಕೂಡ ಆಗುತ್ತಿದ್ದವು. ನಾಲ್ಕನೆಯದಾಗಿ, ಎಲ್ಲ ಮಾರುಕಟ್ಟೆಗಳು ಸ್ಪರ್ಧಾತ್ಮಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲವಾದ್ದರಿಂದ ಖರೀದಿಯ ಬೆಲೆಯಲ್ಲಿ ವ್ಯತ್ಯಾಸ ಕಾಣುತ್ತಿತ್ತು. ಭಾರತ ಆಹಾರ ನಿಗಮದ ಗೋದಾಮುಗಳಲ್ಲಿ ಆಹಾರ ದಾಸ್ತಾನು ಹೆಚ್ಚಾದಾಗ ಅದನ್ನು ವಿದೇಶಕ್ಕೆ ರಫ್ತು ಮಾಡುವುದು ಅನಿವಾರ್ಯವಾಗುತ್ತಿತ್ತು. 2002ರ ಜೂನ್ ತಿಂಗಳಲ್ಲಿ ದೇಶದ ವಿವಿಧ ಗೋದಾಮುಗಳಲ್ಲಿ ಅತ್ಯಧಿಕ ಅಂದರೆ 82 ದಶಲಕ್ಷ ಟನ್ ಆಹಾರ ಧಾನ್ಯ ಸಂಗ್ರಹವಾಗಿದ್ದು ಇದೊಂದು ಸಾರ್ವಕಾಲಿಕ ದಾಖಲೆಯಾಗಿತ್ತು. ಐದನೆಯದಾಗಿ, ಆಹಾರ ಧಾನ್ಯಗಳ ರಫ್ತಿಗೆ ಸಂಬಂಧಿಸಿದಂತೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಗುತ್ತಿದ್ದ ಬದಲಾವಣೆಗಳು ಮಾರುಕಟ್ಟೆ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತಿತ್ತು. 2013ರ ಡಿಸೆಂಬರ್‌ನಲ್ಲಿ ಬಾಲಿ ನಗರದಲ್ಲಿ ನಡೆದ ವಿವಿಧ ದೇಶಗಳ ಸಚಿವರ ಮಟ್ಟದ ಮಾತುಕತೆಯು 2001ರಲ್ಲಿ ಆರಂಭವಾದ ದೋಹಾ ಮಾತುಕತೆಗೆ ಸ್ಪಷ್ಟ ರೂಪ ನೀಡಿ ವ್ಯಾಪಾರಕ್ಕೆ ಪೂರಕವಾಗುವ ಒಪ್ಪಂದಕ್ಕೆ ಬರಲು ಕಾರಣವಾಯಿತು. ಭಾರತ ಕೂಡ ಈ ಒಪ್ಪಂದಕ್ಕೆ ಸಹಿ ಹಾಕಿತು. ಆದರೆ ಆಹಾರ ಧಾನ್ಯಗಳ ದಾಸ್ತಾನಿಗೆ ಸಂಬಂಧಪಟ್ಟಂತೆ ಭಾರತದ ನಿಲುವು ಈ ಒಪ್ಪಂದಕ್ಕೆ ಸಹಿ ಹಾಕಿದ ಇತರ ದೇಶಗಳ ನಿಲುವಿಗೆ ಹೊಂದಿಕೊಳ್ಳದ ಕಾರಣ ಭಾರತ ಸರ್ಕಾರವು, ಈ ಕುರಿತಂತೆ ಕೈಗೊಂಡ ಶಿಷ್ಟಾಚಾರ ತಿದ್ದುಪಡಿಗೆ ಸಹಿ ಹಾಕಲಿಲ್ಲ. ವೆನೆಜುಲಾ ಹೊರತುಪಡಿಸಿ



ಇತರ ಎಲ್ಲ ದೇಶಗಳು ಸಹ ಭಾರತದ ನಿಲುವಿಗೆ ಸಹಮತ ವ್ಯಕ್ತಪಡಿಸಲಿಲ್ಲ. 2014ರ ನವೆಂಬರ್ ತಿಂಗಳಲ್ಲಿ ಭಾರತ ಮತ್ತು ಅಮೆರಿಕ ಸರ್ಕಾರದ ಮಧ್ಯೆ ಒಪ್ಪಂದ ಏರ್ಪಟ್ಟಿದ್ದು ನವೆಂಬರ್ 15ರಂದು ಕೇಂದ್ರ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ಪ್ರಕಟಿಸಿದ ಪ್ರಕಾರ ಭಾರತವು ತನಗೆ ಬೇಕಾದ ಹಂತದಲ್ಲಿ ಸ್ಥಳೀಯ ಕೃಷಿ ಮಾರುಕಟ್ಟೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಅನಿರ್ದಿಷ್ಟವಾಗಿ ಸಬ್ಸಿಡಿ ನೀಡಲು ಅಮೆರಿಕ ಒಪ್ಪಿಕೊಂಡಿದೆ ಎಂದು ಹೇಳಲಾಗುತ್ತಿದೆ. ಭಾರತ ಮತ್ತು ಅಮೆರಿಕದ ನಡುವಿನ ಈ ಒಪ್ಪಂದದ ಬಗ್ಗೆ ವಿಶ್ವ ವ್ಯಾಪಾರ ಸಂಘಟನೆಯ ಸಾಮಾನ್ಯ ಮಂಡಳಿಯು ನಿರ್ಧಾರ ಕೈಗೊಳ್ಳಬೇಕಾಗಿದೆ. ಸಭೆಯಲ್ಲಿ ಸಾಮಾನ್ಯ ಮಂಡಳಿಯು ಭಾರತ– ಅಮೆರಿಕದ ನಡುವಿನ ಒಪ್ಪಂದ ಕುರಿತಂತೆ ವಿವಿಧ ದೇಶಗಳ ಅಭಿಪ್ರಾಯವನ್ನು ಮತಕ್ಕೆ ಹಾಕುವ ಸಂಭವವಿದ್ದು ಭಾರತದ ನಿಲುವು ಬಹುಮಟ್ಟಿಗೆ ಸೋಲು ಅನುಭವಿಸಬೇಕಾಗುತ್ತದೆ. ಆದರೆ ಆ ರೀತಿ ಮತ ವಿಭಜನೆ ಆಗದೇ ಕೇವಲ ಬಾಯಿ ಮಾತಿನಲ್ಲಿ ಎಚ್ಚರಿಕೆ ನೀಡುವ ಲಕ್ಷಣಗಳಿದ್ದು 2019ರ ವರೆಗೆ ಯಥಾಸ್ಥಿತಿ ಮುಂದುವರಿಯುವ ಸಾಧ್ಯತೆ ಇದೆ.

### ಸಾರಾಂಶ ಮತ್ತು ನಿರ್ಣಯಗಳು

1960ರ ದಶಕದಲ್ಲಿ ಉಂಟಾಗಬಹುದಾಗಿದ್ದ ಆಹಾರ ಧಾನ್ಯದ ಬಿಕ್ಕಟ್ಟು ತಡೆಗಟ್ಟಲು ಭಾರತ ಮುಂದಾಗಲು ಅನೇಕ ಕಾರಣಗಳು ಸಹಕಾರಿಯಾದವು. ಹೆಚ್ಚು ಇಳುವರಿ ನೀಡುವ ತಳಿಗಳಿಂದಾಗಿ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸತತ ಏರಿಕೆ ಕಂಡುಬಂದುದು ಮತ್ತು ಭೂಮಿಯ ಫಲವತ್ತತೆ ಹೆಚ್ಚಳವಾದುದನ್ನೇ ಮುಂದೆ ಹಸಿರು ಕ್ರಾಂತಿ ಎಂಬ ಹೆಸರಿನಿಂದ ಖ್ಯಾತಿ ಪಡೆಯಿತು. ಹೆಚ್ಚು ಇಳುವರಿ ನೀಡುವ ತಳಿಗಳು ಮುಖ್ಯವಾಗಿ ಸಮರ್ಪಕ ರಸಗೊಬ್ಬರ ಮತ್ತು ನಿಯಂತ್ರಿತ ನೀರಿನ ಸರಬರಾಜಿನ ನೆರವಿನಿಂದಾಗಿ ಹೆಚ್ಚು ಇಳುವರಿ ನೀಡುವ ಶಕ್ತಿ ಹೊಂದಿದ್ದ ಕಾರಣ ಭಾರತ ಸರ್ಕಾರವು ಖ್ಯಾತ ಕೃಷಿ ವಿಜ್ಞಾನಿಗಳ ಬೆಂಬಲದೊಂದಿಗೆ 1965ರಲ್ಲಿ ಹೊಸ ಕೃಷಿ ನೀತಿ ಎಂಬ ಹೆಸರಿನಲ್ಲಿ ಇದನ್ನು ಅನುಷ್ಠಾನಕ್ಕೆ ತರಲು ಮುಂದಾಯಿತು. ರೈತರು ಈ ಹೆಚ್ಚು ಇಳುವರಿ ನೀಡುವ ತಳಿಗಳ ಬೆಳೆಯಲು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರ್ಕಾರ ವಿವಿಧ ಹಂತದಲ್ಲಿ ಸಬ್ಸಿಡಿ ನೀಡುವ ಮೂಲಕ ಇದನ್ನು ಜನಪ್ರಿಯಗೊಳಿಸಲು ಮುಂದಾಯಿತು.

ಸರ್ಕಾರ ಕೈಗೊಂಡ ಎಲ್ಲ ಕ್ರಮಗಳ ಫಲವಾಗಿ ದೇಶಾದ್ಯಂತ ರೈತರು ಇದರ ಲಾಭ ಪಡೆದು ಕೃಷಿ ಚಟುವಟಿಕೆಯಲ್ಲಿ ತೊಡಗಿದ ಪರಿಣಾಮ ದೇಶವು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲು ಕಾರಣವಾಯಿತು. ಆದರೆ ಇದೇ ವೇಳೆಗೆ ಹಸಿರು ಕ್ರಾಂತಿಯಿಂದಾಗಿ ಪರಿಸರದ ಮೇಲೆ ಉಂಟಾದ ಪರಿಣಾಮ ಮತ್ತು ಇದು ತಂದೊಡ್ಡಿದ ಆರ್ಥಿಕ ಅಸಮತೋಲನಗಳು ದೇಶದ ನೀತಿ ನಿರೂಪಕರಿಗೆ ತಲೆನೋವಾಗಿ ಪರಿಣಮಿಸಿತು ಎಂಬುದು ಕೂಡ ಸತ್ಯ. ಹೀಗಾಗಿ ಸರ್ಕಾರವು ಈ ವ್ಯವಸ್ಥೆಯನ್ನು ಹಂತ ಹಂತವಾಗಿ ತೆಗೆದುಹಾಕಲು ಮುಂದಾಗಬೇಕಾದ್ದು ಅಥವಾ ಕನಿಷ್ಠ ಪಕ್ಷ ಸುಧಾರಣೆ ತರಲು ಮುಂದಾಗಬೇಕಾದ್ದು ಇಂದಿನ ಅಗತ್ಯ. ಸರ್ಕಾರವು ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಮುಂದಾದಾಗ ಅದು ದೇಶದಲ್ಲಿ ತಲೆದೋರಬಹುದಾಗಿದ್ದ ಆಹಾರ ಧಾನ್ಯದ ಬಿಕ್ಕಟ್ಟಿಗೆ ತಕ್ಷಣದ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕೈಗೊಂಡ ಕ್ರಮವಾಗಿತ್ತೇ ವಿನಾ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ದೂರಗಾಮಿ ಪರಿಣಾಮ ಬೀರುವ ಯೋಜನಾಬದ್ಧ ಕಾರ್ಯಕ್ರಮವಾಗಿರಲಿಲ್ಲ ಎಂಬುದು ಮೇಲ್ನೋಟಕ್ಕೆ ವ್ಯಕ್ತವಾಗುತ್ತದೆ. ❑

# ಸ್ವಚ್ಛ ಭಾರತ ಅಭಿಯಾನ

ಕೆ.ಎನ್. ಪಾಠಕ್

ಕನ್ನಡಕ್ಕೆ : ಹೆಚ್. ಎಂ. ವಿಜಯಕುಮಾರ್



> ಎಲ್ಲ ಕುಟುಂಬಗಳಿಗೂ ಮೂಲಭೂತ ಸೌಲಭ್ಯಗಳಾದ ನೀರು ಪೂರೈಕೆ, ಸೋಪು/ಪುಡಿ/ದ್ರವ್ಯ, ಸಮರ್ಪಕ ಒಳಚರಂಡಿ, ಮಾನವ ಮಲ ವಿಲೇವಾರಿ ಹಾಗೂ ಘನತ್ಯಾಜ್ಯ ವಿಲೇವಾರಿ ವ್ಯವಸ್ಥೆ ಇದ್ದಾಗ ಮಾತ್ರ ಅಭಿಯಾನ ಯಶಸ್ವಿಯಾಗಲು ಸಾಧ್ಯ.

ಗಾಂಧೀಜಿಯ ತತ್ವಶಾಸ್ತ್ರ (ಶುಚಿತ್ವವೇ ದೇವರು) ದಿಂದ ಸ್ಫೂರ್ತಿ ಪಡೆದು, ಸ್ವಚ್ಛ ಭಾರತ ಅಭಿಯಾನಕ್ಕೆ ಒತ್ತು ನೀಡಿರುವುದು ಮಹಾನ್ ಕಾರ್ಯವಾಗಿದೆ. ಶೇಕಡಾ 74ರಷ್ಟು ಅನಕ್ಷರಸ್ಥ ಜನಸಂಖ್ಯೆಯನ್ನು ಹೊಂದಿರುವ ದೇಶದಲ್ಲಿ ನೈರ್ಮಲ್ಯ ಎಂಬುದು ಕಗ್ಗಂಟಿನ ಸಮಸ್ಯೆಯಾಗಿದೆ. ಸ್ವಾತಂತ್ರ ಬಂದು 67 ವರ್ಷ ಗತಿಸಿದರೂ ಸ್ವಚ್ಛತೆಯ ಕೊರತೆ ಎದ್ದು ಕಾಣುತ್ತಿದೆ. ಸ್ವಚ್ಛತೆ ಇಲ್ಲದಿರುವುದು ಅನಾರೋಗ್ಯಕ್ಕೆ ಕಾರಣವಾಗುತ್ತದೆ ಎಂಬುದು ವಿಶ್ವದಾದ್ಯಂತ ಕಂಡುಕೊಂಡಿರುವ ಸತ್ಯವಾಗಿದೆ. ಸ್ವಚ್ಛತೆಯು ಧನಾತ್ಮಕ ಆರೋಗ್ಯ ಮತ್ತು ಉತ್ತಮ ಬದುಕನ್ನು ನೀಡುತ್ತದೆ.

ಸಹಸ್ರಮಾನದ ಅಭಿವೃದ್ಧಿ ಗುರಿಗಳ (ಮಿಲೇನಿಯಂ ಡೆವಲಪ್‌ಮೆಂಟ್ ಗೋಲ್ಸ್– ಎಂಡಿಜಿ) ಒಪ್ಪಂದಕ್ಕೆ ಹಸ್ತಾಕ್ಷರ ಮಾಡಿರುವ ರಾಷ್ಟ್ರಗಳು 2015ರ ವೇಳೆಗೆ ತಮ್ಮ ನಗರ ಜನಸಂಖ್ಯೆಯ ಕನಿಷ್ಠ ಅರ್ಧಭಾಗಕ್ಕೆ ಹಾಗೂ 2025ರ ವೇಳೆಗೆ ಶೇಕಡಾ 100ರಷ್ಟು ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸಬೇಕಿದೆ, ನಗರಗಳನ್ನು ಬಯಲು ಶೌಚಮುಕ್ತವನ್ನಾಗಿಸುವಲ್ಲಿ ಪ್ರತಿಯೊಂದು ಮನೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಸುಧಾರಿತ ಶೌಚ ವ್ಯವಸ್ಥೆ ಕಲ್ಪಿಸಬೇಕಿದೆ. ಆದರೆ, ಕೆಲವೊಮ್ಮೆ ನಮ್ಮ ದೇಶದಲ್ಲಿನ ನೈರ್ಮಲ್ಯ ವ್ಯವಸ್ಥೆಯ ವಾಸ್ತವಿಕ ಚಿತ್ರಣದ ಮೌಲ್ಯಮಾಪನ ಚಿಂತೆಗೀಡು ಮಾಡುವಂತಿದೆ. ನೀರು ಪೂರೈಕೆ ಮತ್ತು ನೈರ್ಮಲ್ಯ ಕಾರ್ಯಪ್ರಗತಿ ಮೇಲೆ ಜಂಟಿಯಾಗಿ ನಿಗಾವಹಿಸಿರುವ ಡಬ್ಲ್ಯೂಹೆಚ್ಓ ಮತ್ತು ಯುನಿಸೆಫ್ ಪ್ರಕಾರ, ಭಾರತದಲ್ಲಿನ ನೈರ್ಮಲ್ಯ ವ್ಯವಸ್ಥೆಯ ಈಗಿನ ವೇಗವನ್ನು ಗಮನಿಸಿದರೆ, 2015ರ ವೇಳೆಗೆ ಸಾಧಿಸಬೇಕಿರುವ ಸಹಸ್ರಮಾನದ ಅಭಿವೃದ್ಧಿ ಗುರಿ ಸಾಧನೆಗೆ 2054ರ ವರೆಗೆ ಸಮಯ ಬೇಕಾಗುತ್ತದೆ, 27ನೇ ಮಾರ್ಚ್ 2012ರಲ್ಲಿ ಬಿಡುಗಡೆಯಾದ ಜಾಗತಿಕ ಅಧ್ಯಯನ ವರದಿ ಪ್ರಕಾರ, ಒಡಿಶಾದಲ್ಲಿ 2015ರ ಗುರಿ ತಲುಪಲು 2160ನೇ ಇಸವಿವರೆಗೆ ಸಮಯ ತೆಗೆದುಕೊಳ್ಳಲಿದೆ.

ಸ್ವಚ್ಛ ಭಾರತ ಅಭಿಯಾನ ಯಶಸ್ಸು ಕಾಣಲು ಕೆಲವೊಂದು ಪ್ರಮುಖ ಸಮಸ್ಯೆಗಳ ಬಗ್ಗೆ ಗಮನ ನೀಡುವ ಅಗತ್ಯವಿದೆ. ಅದರಲ್ಲಿ ಪ್ರಮುಖವಾದವುಗಳೆಂದರೆ,

(1) ಎಲ್ಲಾ ಜನವಸತಿಗಳಲ್ಲಿ ಲಭ್ಯವಿರುವ ನೀರಿನ ಪ್ರಮಾಣ.

(2) ಎಲ್ಲಾ ಜನವಸತಿಗಳಲ್ಲಿ ಲಭ್ಯವಿರುವ ಖಾಸಗಿ ಮತ್ತು ಸಾರ್ವಜನಿಕ ಶೌಚಾಲಯಗಳು.

(3) ಸಮರ್ಪಕ ಒಳಚರಂಡಿ ಮತ್ತು ತ್ಯಾಜ್ಯ ವಿಲೇವಾರಿ ವ್ಯವಸ್ಥೆ.

(4) ಶುಚಿತ್ವ ಕಾಯ್ದುಕೊಳ್ಳಲು ಅಗತ್ಯವಿರುವ ಮೂಲಸೌಕರ್ಯಗಳು.

(5) ಅಭಿಯಾನ ಯಶಸ್ಸಿಗೆ ಜನಜಾಗೃತಿ.

### ನೀರಿನ ಲಭ್ಯತೆ

ಏಪ್ರಿಲ್ 1, 2014ರ ವೇಳೆಗೆ ದೇಶದಲ್ಲಿನ 16,96,664 ಜನವಸತಿಗಳ ಪೈಕಿ, 12,49,695 ಜನವಸತಿಗಳು ಮಾತ್ರ ಸಾಕಷ್ಟು ಪ್ರಮಾಣದ (ಒಂದು ದಿನಕ್ಕೆ ಒಬ್ಬ ವ್ಯಕ್ತಿಗೆ 40 ಲೀಟರ್‌ನಂತೆ) ಕುಡಿಯುವ ನೀರಿನ

ಜಂಟಿ ಸಲಹೆಗಾರರು, ಯೋಜನಾ ಅಂದಾಜು ಮತ್ತು ನಿರ್ವಹಣಾ ವಿಭಾಗ, ಯೋಜನಾ ಆಯೋಗ. e-mail : knp.pathak@g,ail.com

ಸೌಲಭ್ಯ ಹೊಂದಿವೆ. ಭಾರಿ ಸಂಖ್ಯೆಯ ಗ್ರಾಮಗಳು ಇಂದಿಗೂ ಕೊಳ್ಳ ಅಥವಾ ಬಾವಿ ಅಥವಾ ಇತರ ನೈಸರ್ಗಿಕ ಜಲಮೂಲಗಳ ಮೇಲೆ ಅವಲಂಬಿತವಾಗಿದ್ದು, ಇವುಗಳಲ್ಲಿ ಒಂದಷ್ಟು ಬೇಸಿಗೆ ದಿನಗಳ ಉತ್ತುಂಗ ಸಮಯದಲ್ಲಿ ಬತ್ತಿಹೋಗುತ್ತವೆ. ನಿಜಸಂಗತಿಯೆಂದರೆ, ನಮ್ಮ ನಗರಗಳ ಒಳಚರಂಡಿಗಳಲ್ಲಿ ಹರಿಯುವ ನೀರಿನ ಪ್ರಮಾಣ ಎಷ್ಟೆಂಬುದನ್ನು ಇದುವರೆಗೂ ಅಂದಾಜು ಮಾಡಿಲ್ಲ, ಏಕೆಂದರೆ, ಜನರು ವಿಭಿನ್ನ ಮೂಲಗಳಿಂದ ನೀರು ಪಡೆಯುತ್ತಾರೆ ಮತ್ತು ವಿಭಿನ್ನ ರೀತಿಯಲ್ಲಿ ತ್ಯಾಜ್ಯ ನೀರನ್ನು ಚರಂಡಿ ಮೂಲಕ ಹರಿಸುತ್ತಾರೆ. ಊರಿನರೊಚ್ಚನ್ನು ಅಳೆಯುವ ಈಗಿನ ವಿಧಾನ ತೀರಾ ಆರಂಭಿಕ ಹಂತದ್ದಾಗಿದೆ. ಒಂದು ಅಂದಾಜಿನ ಪ್ರಕಾರ ಪುರಸಭೆಗಳು ಅಧಿಕೃತವಾಗಿ ಪೂರೈಕೆ ಮಾಡುವ ನೀರಿನಲ್ಲಿ ಶೇಕಡಾ 80ರಷ್ಟು ಗ್ರಾಮಸಾರವಾಗಿ ಹೊರಹೋಗುತ್ತದೆ. 2005–06ನೇ ಸಾಲಿನ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್) ಪ್ರಕಾರ, ಶೇಕಡಾ 18.8ರಷ್ಟು ಶೌಚಾಲಯಗಳಿಗೆ ಮಾತ್ರ ಕೊಳವೆ ನೀರು ವ್ಯವಸ್ಥೆ ಅಳವಡಿಸಲಾಗಿದೆ. ಎಲ್ಲಾ ಸಮಯದಲ್ಲಿ ಸ್ವಚ್ಛತೆಯನ್ನು ಕಾಯ್ದುಕೊಳ್ಳಲು ನಮಗೆ ಸೂಕ್ತ ಪ್ರಮಾಣದ ನೀರಿನ ಅವಶ್ಯಕತೆ ಇದೆ. ಅಂದರೆ, ಈಗ ಪೂರೈಕೆ ಮಾಡುತ್ತಿರುವ ಪ್ರಮಾಣಕ್ಕಿಂತ ಹೆಚ್ಚು ನೀರಿನ ಅಗತ್ಯವಿದೆ; ಸಮಸ್ಯೆಯೆಂದರೆ, ಇದರ ನಿರ್ವಹಣೆ ಮತ್ತು ಎಲ್ಲರಿಗೂ ಸರಿಸಮಾನ ಪ್ರಮಾಣದಲ್ಲಿ ನೀರು ಪೂರೈಕೆ ಮಾಡುವುದಾಗಿದೆ. ಪ್ರಸ್ತುತ ನೀರಿನ ವ್ಯವಸ್ಥೆಯಲ್ಲಿ ಬಹಳಷ್ಟು ನ್ಯೂನತೆಗಳಿವೆ – ಸೋರಿಕೆ ಮತ್ತು ಕೆಟ್ಟ ನಿರ್ವಹಣೆಯಿಂದಾಗಿ ವಿತರಣಾ ವ್ಯವಸ್ಥೆಯಲ್ಲಿ ನಷ್ಟಕ್ಕೆ ಕಾರಣವಾಗುತ್ತಿದೆ. ಇದಕ್ಕೆ ಪರಿಣಾಮಕಾರಿ ಕ್ರಮಗಳೆಂದರೆ ಹಾಗೂ ಸ್ವಚ್ಛ ಭಾರತ ಅಭಿಯಾನ ಯಶಸ್ವಿ ಆಗಬೇಕೆಂದರೆ, ನಗರದ ಎಲ್ಲಾ ಜನರಿಗೆ ನೀರು ತಲುಪುವುದನ್ನು ಖಾತ್ರಿ ಪಡಿಸಿಕೊಳ್ಳಬೇಕಿದೆ.

### ಶೌಚಾಲಯಗಳ ಲಭ್ಯತೆ

ಭಾರತದಲ್ಲಿ ಮೂವರಲ್ಲಿ ಒಬ್ಬ ವ್ಯಕ್ತಿ ಪಾಯಖಾನೆ ವ್ಯವಸ್ಥೆ ಹೊಂದಿಲ್ಲ, ವಿಶ್ವದಲ್ಲಿ 2.5 ಶತಕೋಟಿ ಜನರು ಮೂಲಭೂತ ನಿರ್ಮಲೀಕರಣ ಸೌಲಭ್ಯದಿಂದ ವಂಚಿತರಾಗಿದ್ದಾರೆ. ವಿಶ್ವಸಂಸ್ಥೆಯ ಎಂಡಿಜಿ ವರದಿಯನ್ವಯ, ನಮ್ಮ ದೇಶದಲ್ಲಿ 626 ದಶಲಕ್ಷ ಮಂದಿ ಖಾಸಗಿ ಶೌಚಾಲಯ ಹೊಂದಿಲ್ಲ, ಇದರ ಪರಿಣಾಮ ಬಯಲು ಶೌಚಕ್ಕೆ ಹೋಗುವುದಾಗಿದೆ. ಎನ್‌ಎಸ್‌ಎಸ್‌ಓನ 69ನೇ ಸುತ್ತಿನ (2012) ವರದಿ ಪ್ರಕಾರ, ಗ್ರಾಮೀಣ ಭಾಗದ ಶೇಕಡಾ 59.4ರಷ್ಟು ಹಾಗೂ ನಗರ ಪ್ರದೇಶದ ಕುಟುಂಬಗಳಲ್ಲಿ ಶೇಕಡಾ 8.8ರಷ್ಟು ಮಂದಿ ಪಾಯಖಾನೆ ವ್ಯವಸ್ಥೆ ಹೊಂದಿಲ್ಲ.

### ಗ್ರಾಮಸಾರ ಹಾಗೂ ತ್ಯಾಜ್ಯ ವಿಲೇವಾರಿ

ಮಾನವ ಮಲದ ಅಸುರಕ್ಷಿತ ವಿಲೇವಾರಿ ಸಾರ್ವಜನಿಕ ಆರೋಗ್ಯದ ಮೇಲೆ ಪ್ರಭಾವ ಬೀರುತ್ತದೆ ಮತ್ತು ಅದರಲ್ಲೂ ವಿಶೇಷವಾಗಿ ನಗರ ಪ್ರದೇಶದ ಪರಿಸರಕ್ಕೆ ಹಾನಿಯುಂಟಾಗುತ್ತದೆ. ಒಂದು ಅಧ್ಯಯನದ ಪ್ರಕಾರ ದೇಶದ ಜಿಡಿಪಿ ಮೇಲೆ ಸುಮಾರು ಶೇಕಡಾ 60ರಷ್ಟು ವೆಚ್ಚ ಬೀಳುತ್ತದೆ. ರಾಷ್ಟ್ರೀಯ ನಗರ ನೈರ್ಮಲ್ಯ ನೀತಿಯಲ್ಲಿ ಹೇಳಿರುವಂತೆ, ದುರ್ಬಲ ನೈರ್ಮಲ್ಯ, ನಗರದ ಬಡವರ ಮೇಲೆ (ನಗರದ ಒಟ್ಟು ಜನಸಂಖ್ಯೆಯ ಶೇಕಡಾ 22ರಷ್ಟು), ಅಂದರೆ, ಮಹಿಳೆಯರು, ಮಕ್ಕಳು ಮತ್ತು ಹಿರಿಯರ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಶುದ್ಧೀಕರಿಸದ ಮನೆ ಹಾಗೂ ಪುರಸಭೆಗಳ ನೀರನ್ನು ಹರಿಯಬಿಡುವುದರಿಂದ ಭಾರತಾದ್ಯಂತ ಶೇಕಡಾ 75ರಷ್ಟು ಭೂ ಮೇಲ್ಮೈ ಜಲವನ್ನು ಕಲುಷಿತಗೊಳಿಸುತ್ತದೆ.

### ಸ್ವಚ್ಛತಾ ನಿರ್ವಹಣೆ

ಅಭಿಯಾನ ಯಶಸ್ವಿಯಾಗಬೇಕಾದರೆ, ಎಲ್ಲ ಕುಟುಂಬಗಳಿಗೂ ಮೂಲಭೂತ ಸೌಲಭ್ಯಗಳಾದ ನೀರು ಪೂರೈಕೆ, ಸೋಪು/ಪುಡಿ/ದ್ರವ್ಯ, ಸಮರ್ಪಕ ಒಳಚರಂಡಿ, ಮಾನವ ಮಲ ವಿಲೇವಾರಿ ಹಾಗೂ ಘನತ್ಯಾಜ್ಯ ವಿಲೇವಾರಿ ವ್ಯವಸ್ಥೆ ಇದ್ದಾಗ ಮಾತ್ರ ಸಾಧ್ಯ. ಈ ಸೌಲಭ್ಯಗಳನ್ನು ಕೆಲವರು ಮಾತ್ರ ಹೊಂದಿರುತ್ತಾರೆ ಹಾಗೂ ಪಡೆದುಕೊಳ್ಳಲು ಶಕ್ಯರಾಗಿರುತ್ತಾರೆ. ಆದರೆ, ಇನ್ನು ಕೆಲವರು ಇದಕ್ಕೆ ಪ್ರಾಶಸ್ತ್ಯ ನೀಡುವುದಿಲ್ಲ ಮತ್ತು ಗಣನೀಯ ಸಂಖ್ಯೆಯ ಜನತೆ ಇಂತಹ ಸೌಲಭ್ಯದಿಂದ ವಂಚಿತರಾಗಿರುತ್ತಾರೆ ಅಥವಾ ಶಕ್ಯರಾಗಿರುವುದಿಲ್ಲ. ಇಂಥ ಜನರಿಗಾಗಿ ವಿಶೇಷ ಪ್ರಯತ್ನಗಳನ್ನು ಮಾಡಬೇಕಿದೆ.

### ಸಮೂಹ ಜಾಗೃತಿ

ನೈರ್ಮಲ್ಯ ಮತ್ತು ಸಾರ್ವಜನಿಕ ಆರೋಗ್ಯದ ನಡುವೆ ಪರಂಪಾರಗತವಾಗಿ



ನಡೆದುಕೊಂಡು ಬಂದಿರುವ ಸಂಪರ್ಕ ಕುರಿತು ಪ್ರಾಥಮಿಕ ಶಾಲಾ ಮಕ್ಕಳಿಂದ ಹಿರಿಯ ವ್ಯಕ್ತಿಗಳವರೆಗೆ ಜನಸಂಖ್ಯೆಯ ಎಲ್ಲಾ ಹಂತದಲ್ಲೂ ಸೂಕ್ತ ಜಾಗೃತಿ ಮೂಡಿಸುವ ಅಗತ್ಯವಿದೆ. ಸ್ವಚ್ಛತಾ ಸಂದೇಶವನ್ನು ಸಮಾಜದ ಕೆಳಸ್ತರದವರೆಗೆ ತಲುಪಿಸುವ ಶಿಕ್ಷಣ ಸಂಸ್ಥೆಗಳು, ನಿರ್ದಿಷ್ಟವಾಗಿ ಶಾಲೆಗಳು, ಜಾಗೃತಿ ಶಿಬಿರಗಳು, ಸಾಮಾಜಿಕ ಮಾಧ್ಯಮ, ಅದರಲ್ಲೂ ವಿಶೇಷವಾಗಿ ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮವನ್ನು ಗರಿಷ್ಠ ಬಳಕೆ ಮಾಡಿಕೊಳ್ಳುವ ಅಗತ್ಯವಿದೆ.

ಪರಿಣಾಮಕಾರಿ ನೈರ್ಮಲ್ಯ ನೀತಿ ಖಾತ್ರಿ ಪಡಿಸಿಕೊಳ್ಳಲು, ಈ ಕೆಳಗಿನವುಗಳ ಪರಿಗಣನೆ ಅವಶ್ಯಕವಿದೆ.

(1) ಸಮೂಹ ಜಾಗೃತಿ ಅಗತ್ಯ.

(2) ನೈರ್ಮಲ್ಯದ ಸಾಮಾಜಿಕ ಮತ್ತು ವೃತ್ತಿ ಸಂಬಂಧಿ ವಿಷಯಗಳು.

(3) ಆಡಳಿತಾತ್ಮಕ ಸಂಸ್ಥೆಗಳು/ಮಂಡಳಿಗಳ ನಡುವೆ ಪರಸ್ಪರ ಸಹಕಾರ.

(4) ಸಮಗ್ರ ದೃಷ್ಟಿಕೋನ.

(5) ತಂತ್ರಜ್ಞಾನದ ಗರಿಷ್ಠ ಬಳಕೆ.

(6) ತಲುಪದವರನ್ನು ತಲುಪುವುದು.

(7) ಬೇಡಿಕೆ ಮತ್ತು ಪೂರೈಕೆ ನಡುವಿನ ಅಂತರವನ್ನು ಕಡಿಮೆ ಮಾಡುವುದು.

### ನೈರ್ಮಲ್ಯದ ಸಾಮಾಜಿಕ ಮತ್ತು ವೃತ್ತಿ ಸಂಬಂಧಿ ವಿಷಯಗಳು

ದೈಹಿಕವಾಗಿ ಅಂದರೆ ನೇರವಾಗಿ, ಕೈಗಳಿಂದ ನೈರ್ಮಲ್ಯ ಕೆಲಸ ಮಾಡುವುದನ್ನು ಸಂಪೂರ್ಣ ನಿರ್ಮೂಲನೆ ಮಾಡುವಲ್ಲಿ ಇನ್ನೂ ಹೆಚ್ಚಿನ ಕಾರ್ಯ ಆಗಬೇಕಿದೆ. ನಮ್ಮ ದೇಶದಲ್ಲಿ ನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಕರ್ಮಚಾರಿಗಳು ವೃತ್ತಿ

ಸಂಬಂಧಿ ಅಪಾಯಗಳಿಗೆ ಒಳಗಾಗದಂತೆ ಅಗತ್ಯ ಹಾಗೂ ಪರಿಣಾಮಕಾರಿ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕಿದೆ. ಈ ಕಾರ್ಯ ಶೌಚಾಲಯ ಇಲ್ಲದ ಕುಟುಂಬಗಳಿಗೆ ಶೌಚಾಲಯ ನಿರ್ಮಿಸಿಕೊಳ್ಳುವ ಸಾಧ್ಯತೆಯನ್ನು ಖಚಿತಪಡಿಸಿಕೊಳ್ಳುವ ಮೂಲಕ ಆಗಬೇಕಿದೆ.

### ಆಡಳಿತಾತ್ಮಕ ಸಂಸ್ಥೆಗಳು/ಮಂಡಳಿಗಳ ನಡುವೆ ಪರಸ್ಪರ ಸಹಕಾರ

ನೈರ್ಮಲ್ಯ ಕಾರ್ಯದಲ್ಲಿ ತೊಡಗಿಕೊಂಡಿರುವ ಆಡಳಿತ ಮಂಡಳಿಗಳು ಮತ್ತು ಮಾರ್ಗಸೂಚಿತ ಇಲಾಖೆಗಳನ್ನು ಸ್ಪಷ್ಟವಾಗಿ ಪುನರ್ ರೂಪಿಸಬೇಕು, ಪೂರ್ಣ ಫಲಿತಾಂಶ ಖಾತ್ರಿ ಪಡಿಸಿಕೊಳ್ಳಲು, ಪ್ರತಿಯೊಂದು ಸಂಸ್ಥೆಯೂ ತನಗೆ ಸೂಚಿತ ಕಾರ್ಯವನ್ನು ಮಾಡಬೇಕು ಮತ್ತು ನಕಲು ಆಗುವುದನ್ನು ತಡೆಗಟ್ಟಬೇಕು.

### ವಿಸ್ತರಣೆ

ದೇಶಾದ್ಯಂತ ಅಭಿಯಾನ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ, ಅದನ್ನು ವಿಸ್ತರಿಸುವ ಅಗತ್ಯವಿದೆ. ಎಂಎನ್‌ಆರ್‌ಇಜಿಎಸ್, ಎಂಪಿಎಲ್‌ಎಡಿ ಮತ್ತು ಇತರೆ ಯೋಜನೆಗಳಿಗೆ ವಿಸ್ತರಿಸಲು, ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು;

(1) ಮನೆಗಳಲ್ಲಿ, ಶಾಲೆಗಳಲ್ಲಿ, ಅಂಗನವಾಡಿ, ಎಸ್‌ಎಲ್‌ಡಬ್ಲ್ಯೂಎಂ ಮತ್ತು ಸಮುದಾಯ ಶೌಚ ಕಟ್ಟಡಗಳ ನಿರ್ಮಾಣ.

(2) ಎಂಪಿಎಲ್‌ಎಡಿ ಯೋಜನೆ, ಒಂದು ಬಾರಿಗೆ ನಿರ್ವಹಣಾ ಅನುದಾನ ಮತ್ತು ಸಮುದಾಯ ಶೌಚಾಲಯಗಳ ನಿರ್ವಹಣೆಯಡಿ ಸಮುದಾಯ ದೃಷ್ಟಿಕೋನ ಆಧಾರದಲ್ಲಿ ಮನೆಗಳಿಗೆ ಖಾಸಗಿ ಶೌಚ ಗೃಹಗಳನ್ನು ನಿರ್ಮಿಸಬೇಕು.

(3) ಕೇಂದ್ರ ಪ್ರಾಯೋಜಿತ ಇತರೆ ಯೋಜನೆಗಳಾದ ಪಿಯುಆರ್‌ಎ, ಐಎವೈ, ಎನ್‌ಆರ್‌ಎಚ್‌ಎಂ, ಆದರ್ಶ ಗ್ರಾಮ ಯೋಜನಾ ಮತ್ತು ಇತರ ಯೋಜನೆಗಳು ಹಾಗೂ ಇಲಾಖೆ ಮತ್ತು ಮಂತ್ರಾಲಯಗಳಿಗೆ ಟಿಎಸ್‌ಸಿ ವಿಸ್ತರಣೆಯಾಗಬೇಕು.

### ನೈರ್ಮಲ್ಯ ಘಟಕಗಳ ಕಾರ್ಯಾಚರಣೆ ಮತ್ತು ನಿರ್ವಹಣೆ

ನೈರ್ಮಲ್ಯ ಘಟಕಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಮಹತ್ವ ನೀಡುವ ಅಗತ್ಯವಿದೆ. ಇದು ಮನೆಗಳು, ಸಮುದಾಯ ಮತ್ತು ಸಾರ್ವಜನಿಕ ನೈರ್ಮಲ್ಯ ಘಟಕಗಳ ಸೂಕ್ತ ಬಳಕೆ, ನಿರಂತರ ನಿರ್ವಹಣೆ ಮತ್ತು ಸದಾ ಸ್ವಚ್ಛತಾ ಕಾರ್ಯದಿಂದ ಸಾಧ್ಯವಿದೆ. ದೀರ್ಘಕಾಲಿಕ ನೈರ್ಮಲ್ಯ ಸೇವೆಯನ್ನು ಒದಗಿಸುವಲ್ಲಿ ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸುವ ಅಗತ್ಯವಿದೆ.

### ಸಮಗ್ರ ದೃಷ್ಟಿಕೋನ

ನಮ್ಮ ದೇಶದ ನಿರ್ಮಲೀಕರಣ ಕಾರ್ಯವನ್ನು ತುಂಡುತುಂಡಾಗಿ ಸುಧಾರಿಸಬಾರದು, ಬದಲಿಗೆ, ರಾಷ್ಟ್ರೀಯ ನಗರ ನೈರ್ಮಲ್ಯ ನೀತಿಯಲ್ಲಿ ಹೇಳಿರುವಂತೆ ನಿರ್ಮಲೀಕರಣದಲ್ಲಿನ ಹೂಡಿಕೆ ಸುರಕ್ಷಿತ ನಿರ್ಬಂಧ, ನಿರ್ವಹಣೆ ಮತ್ತು ಸುರಕ್ಷಿತ ವಿಲೇವಾರಿ ಕಾರ್ಯಗಳು ಪರಿಪೂರ್ಣ ವಿನ್ಯಾಸದಲ್ಲಿ ನಡೆಯಬೇಕು.

ನಿರ್ಮಲೀಕರಣ ಕಾರ್ಯಕ್ರಮಗಳು ಮನೆಗಳ ಮಟ್ಟದಲ್ಲಿ ಮತ್ತು ನೈರ್ಮಲ್ಯ ಸೌಲಭ್ಯ ಹೊಂದಬಲ್ಲ ಸಾಮರ್ಥ್ಯ ಇರುವ ಗ್ರಾಹಕರಿಗೆ ಹಣಕಾಸು ನೆರವು ನೀಡುವುದರ ಜೊತೆಗೆ ವಿಭಿನ್ನ ದೃಷ್ಟಿಕೋನಗಳ ಬಳಕೆ ಮಾಡಬೇಕು. ಈ ದಿಸೆಯಲ್ಲಿ ಸಾರ್ವಜನಿಕ ಆರೋಗ್ಯಾಧಿಕಾರಿಗಳು, ಕೆಳಸ್ತರದ ಸಂಘಟನೆಗಳು ಮತ್ತು ಖಾಸಗಿ ವಲಯ ಸೇರಿದಂತೆ ಹೊಸ ಭಾಗೀದಾರರ ಪಟ್ಟಿಯನ್ನು ಹೊಂದಬೇಕಾಗುತ್ತದೆ ಹಾಗೂ ಯಾವುದೇ ಹಿಂಜರಿಕೆ ಇಲ್ಲದೆ ಕಾರ್ಯನಿರ್ವಹಿಸಬೇಕಾಗುತ್ತದೆ.

### ತಂತ್ರಜ್ಞಾನದ ಗರಿಷ್ಠ ಬಳಕೆ

ಅಂತಾರಾಷ್ಟ್ರೀಯ ಮಟ್ಟದಲ್ಲಿ ಅನೇಕ ಸಂಸ್ಥೆಗಳು ನೀರು ಪೂರೈಕೆ ಮತ್ತು ನಿರ್ಮಲೀಕರಣದಲ್ಲಿನ ತಂತ್ರಜ್ಞಾನ ಮತ್ತು ಸಲಕರಣೆಗಳ ಬಳಕೆಯನ್ನು ಪರಿಣಾಮಕಾರಿಯಾಗಿ ಅಭಿವೃದ್ಧಿಪಡಿಸಿವೆ. ಈ ಪೈಕಿ ಸುಲಭ್ ಇಂಟರ್‌ನ್ಯಾಷನಲ್ ನಂತಹ ಸಂಸ್ಥೆಗಳು, ಪರಿಣಾಮಕಾರಿ ಕ್ರಮಗಳನ್ನು ಮತ್ತು ತಾಂತ್ರಿಕತೆಯನ್ನು ಪ್ರದರ್ಶಿಸಿವೆ, ಇವುಗಳನ್ನು ವಿಸ್ತೃತವಾಗಿ ಅನುಷ್ಠಾನಕ್ಕೆ ತರಬೇಕು.



ತಲುಪದವರನ್ನು ತಲುಪುವುದು

ನಗರ ಪ್ರದೇಶದ ಬಡ ಸಮುದಾಯ, ಅನೌಪಚಾರಿಕ ವಸಾಹತುಗಳಲ್ಲಿ ವಾಸಿಸುವವರು ಸುರಕ್ಷಿತ ನೈರ್ಮಲ್ಯ ಸೌಲಭ್ಯ ಪಡೆದುಕೊಳ್ಳುವಲ್ಲಿ ಅವಧಿ, ಜಾಗ ಮತ್ತು ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿರುತ್ತಾರೆ. ಈ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಅಗತ್ಯವಿದ್ದು, ನಮ್ಮ ಸಮಾಜದಲ್ಲಿನ ಸೇವೆ ವಂಚಿತರು ಮತ್ತು ಬಡ ಜನತೆಗೆ ಸೇವೆ ತಲುಪಿದರೆ, ಸ್ವಚ್ಛ ಭಾರತ ಅಭಿಯಾನ ಯಶಸ್ಸು ಕಾಣಲು ಸಾಧ್ಯ. ನಿರ್ಮಲೀಕರಣ ವಲಯದಲ್ಲಿ ಕನಿಷ್ಠ ಶೇಕಡಾ 20ರಷ್ಟು ಹಣವನ್ನು ನಗರದ ಬಡವರಿಗಾಗಿ ಮೀಸಲಿಡಬೇಕು ಎಂಬುದಾಗಿ ರಾಷ್ಟ್ರೀಯ ನಗರ ನೈರ್ಮಲ್ಯ ನೀತಿ ಹೇಳುತ್ತದೆ. ಅದೇ ರೀತಿ ಗ್ರಾಮೀಣ ಪ್ರದೇಶದಲ್ಲಿನ ಬಡ ಜನತೆ ಖಾಸಗಿ ಶೌಚಾಲಯಗಳನ್ನು ನಿರ್ಮಿಸಿಕೊಳ್ಳಲು ಸ್ವಲ್ಪ ಪ್ರಮಾಣದ ಹಣಕಾಸು ನೆರವು (ಸಬ್ಸಿಡಿ) ಪರಿಗಣಿತವಾಗಬೇಕು.

ಸಣ್ಣ ನಗರಗಳು ಒಳಚರಂಡಿ ವ್ಯವಸ್ಥೆ ಹೊಂದುವುದು ಅಸಾಧ್ಯ ಎಂಬುದು ನಿಜ, ಇಂತಹ ನಗರಗಳು, ಮಲಿನ ಶುದ್ಧೀಕರಣ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಅವಕಾಶ ಮಾಡಿಕೊಡಬೇಕು. ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯ ಮೂಲಸೌಕರ್ಯಕ್ಕೆ ಬಂಡವಾಳ ಹೂಡಿಕೆಯ ಅಗತ್ಯವಿದೆ. ಇದಕ್ಕಿಂತ ಹೆಚ್ಚಿನ ಅಗತ್ಯವೆಂದರೆ, ಕಾರ್ಯಾಚರಣೆ, ಅದರಲ್ಲೂ ವಿಶೇಷವಾಗಿ, ಮಲಿನ ನೀರನ್ನು ಮೇಲೆತ್ತುವ ಹಾಗೂ ಶುದ್ಧೀಕರಿಸುವ ಕಾರ್ಯಕ್ಕೆ ತಗಲುವ ಇಂಧನ ವೆಚ್ಚ ಹೊಂದಿಸುವುದಾಗಿದೆ. ನೀರು ಬಳಕೆ ಮಾಡಿ ತ್ಯಾಜ್ಯವನ್ನು ಉತ್ಪಾದಿಸುವ ಶ್ರೀಮಂತ ವರ್ಗವೂ ಬಂಡವಾಳ ಹೂಡಿಕೆ ವೆಚ್ಚ ಅಥವಾ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚವನ್ನು ಪಾವತಿಸುವುದಿಲ್ಲ. ಆಧುನಿಕ ನಗರಗಳ ಬಹುಪಾಲು ಪ್ರದೇಶದಲ್ಲಿ ವಾಸಿಸುವವರು ಅಕ್ರಮ ಅಥವಾ

ಕಾನೂನುಬಾಹಿರ ಪ್ರದೇಶಗಳಲ್ಲಿ ಅಥವಾ ಕೊಳಚೆ ಪ್ರದೇಶಗಳಲ್ಲಿ ಇರುವುದರಿಂದ, ಇಲ್ಲಿಗೆ ಸರ್ಕಾರದ ಸೇವೆಗಳು ತಲುಪುವುದಿಲ್ಲ.

**ಬೇಡಿಕೆ ಮತ್ತು ಪೂರೈಕೆ ನಡುವಿನ ವ್ಯತ್ಯಾಸ ಕಡಿಮೆ ಮಾಡುವುದು**

ನಿರ್ಮಲೀಕರಣ ಸಮಸ್ಯೆ ಪರಿಹರಿಸಲು ಬೇಡಿಕೆಗೆ ತಕ್ಕಂತೆ ಪೂರೈಕೆ ಇರಬೇಕು, ಇದರರ್ಥ, ಕೆಲವು ನಿರ್ದಿಷ್ಟ ಜಾಗಗಳಲ್ಲಿ ವಾಸಿಸುವ, ಸೇವೆ ತಲುಪದ ಹಾಗೂ ಸೌಲಭ್ಯ ವಂಚಿತ ಸಮುದಾಯಕ್ಕೆ ಮೂಲಭೂತ ಸೌಕರ್ಯಗಳು ಹಾಗೂ ಬೆಂಬಲವನ್ನು ನೀಡಬೇಕು. ಈ ಜನರು ಮೂಲಸೌಕರ್ಯ ಇರುವ ಪ್ರದೇಶಗಳಿಗೆ ಸ್ಥಳಾಂತರಗೊಳ್ಳಬೇಕು ಎಂಬುದನ್ನು ನಗರ ಸ್ಥಳೀಯ ಮಂಡಳಿಗಳು (ಯುಎಲ್‌ಬಿ) ಅಥವಾ ಪಿಆರ್‌ಐಗಳು ಬಯಸುತ್ತವೆ.

**ಸಾಮರ್ಥ್ಯ ನಿರ್ಮಾಣ ಮತ್ತು ತರಬೇತಿ**

ಸ್ವಚ್ಛ ಭಾರತ ಅಭಿಯಾನ ಯಶಸ್ವಿಯಾಗಬೇಕೆಂದರೆ ಜನಸಮೂಹದ ಬೆಂಬಲವನ್ನು ಕ್ರೋಢೀಕರಿಸುವ ಅಗತ್ಯವಿದೆ. ಆದ್ದರಿಂದ ರಾಜ್ಯ ಮಟ್ಟದಲ್ಲಿ ಚುನಾಯಿತ ಪ್ರತಿನಿಧಿಗಳು ಮತ್ತು ಪಿಆರ್‌ಐ ಮತ್ತು ಯುಎಲ್‌ಬಿಗಳ ಅಧಿಕಾರಿಗಳು/ಕಾರ್ಯನಿರ್ವಾಹಕರಿಗೆ ತರಬೇತಿ ನೀಡಲು ಸೂಕ್ತ ಸಂಸ್ಥೆಯನ್ನು ಗುರುತಿಸುವ ಅಗತ್ಯವಿದೆ.

**ನಿಗಾವಹಿಸುವಿಕೆ ಮತ್ತು ಮೌಲ್ಯನಿರ್ಧಾರಣೆ**

ರಾಜ್ಯ, ಜಿಲ್ಲಾ ಹಾಗೂ ನಗರ ಮಟ್ಟದ ನೈರ್ಮಲ್ಯ ಕಾರ್ಯಕ್ರಮಗಳ ಪ್ರಗತಿ ಮತ್ತು ಸಾಧನೆ ಮೇಲೆ ನಿಗಾವಹಿಸಲು ಕಾರ್ಯತಂತ್ರವೊಂದನ್ನು ಪರಿಚಯಿಸುವ ಅಗತ್ಯವಿದೆ. ನಾಗರಿಕರ ನಿಗಾ ಸಮಿತಿಯಿಂದ ಪ್ರಗತಿ ಪರಿಶೀಲನೆ ಮತ್ತು ಪ್ರಗತಿ ಸಾಧನಾ ಪಟ್ಟಿಯ ಬಳಕೆ ಪದ್ಧತಿಯನ್ನು ಪರಿಗಣಿಸಬಹುದಾಗಿದೆ.

**ಯಶಸ್ವಿ ಜಿಲ್ಲೆ ಮತ್ತು ನಗರಗಳಿಗೆ ಬಹುಮಾನ**

ನೈರ್ಮಲ್ಯ ಸಾರ್ವಜನಿಕ ಹಿತಾಸಕ್ತಿಯ ವಿಷಯವಾದರೂ, ನಿಗದಿತ ಗುರಿ ಮೀರಿ ನಿರ್ಮಲೀಕರಣ ಕಾರ್ಯದಲ್ಲಿ ಸಾಧನೆ ಮಾಡುವ ಜಿಲ್ಲೆ ಹಾಗೂ ನಗರಗಳನ್ನು ಗುರುತಿಸಿ ಬಹುಮಾನ ನೀಡಬೇಕು. ಇದರಿಂದ ಜಿಲ್ಲೆ ಹಾಗೂ ನಗರಗಳ ಮಧ್ಯೆ ಗುರಿ ಸಾಧನೆಯ ಸ್ಪರ್ಧೆಯನ್ನು



ಉತ್ತೇಜಿಸುವುದಲ್ಲದೆ, ಸಂಪೂರ್ಣ ನೈರ್ಮಲ್ಯ ಸಾಧನೆಗೆ ಸಹಕಾರಿಯಾಗಲಿದೆ.

ಸಚಿವಾಲಯವು ದೀರ್ಘ ಸಮಾಲೋಚನೆ ನಂತರ 'ರಾಷ್ಟ್ರೀಯ ಗ್ರಾಮೀಣ ನೈರ್ಮಲ್ಯ ಮತ್ತು ಆರೋಗ್ಯ ಸಂರಕ್ಷಣಾ ಕಾರ್ಯತಂತ್ರ–2012–22' ರಚಿಸಿದ್ದು, ಇದಕ್ಕೆ ಸ್ವಚ್ಛ ಭಾರತ ಅಭಿಯಾನವನ್ನು ಕಾಲಮಿತಿಯೊಳಗೆ ಸಾಧಿಸುವ ಕಾರ್ಯವನ್ನು ವಹಿಸಬೇಕು. ಇದರೊಂದಿಗೆ ಕೈಗೊಳ್ಳಬೇಕಿರುವ ಇತರೆ ಅಗತ್ಯ ಕಾರ್ಯಗಳಲ್ಲಿ ರಾಜ್ಯ ಮತ್ತು ಜಿಲ್ಲೆಗಳನ್ನು ಆಯ್ಕೆ ಮಾಡುವುದು, ನಡವಳಿಕೆ ಸುಧಾರಣೆಗೆ ಸಂವಹನ ಕಾರ್ಯತಂತ್ರ, ಯೋಜನೆ ಸಿದ್ಧಪಡಿಸಲು ಸಾಂಸ್ಥಿಕ ರಚನೆಯನ್ನು ಬಲಪಡಿಸುವ ಹಾಗೂ ನಿರ್ದಿಷ್ಟ ದಿಕ್ಕಿನೆಡೆಗೆ ಸಾಗುವಂತೆ ಮಾಡಬೇಕು. ನೈರ್ಮಲ್ಯ ಯೋಜನೆಗಳ ಅನುಷ್ಠಾನ ಮತ್ತು ನಿಗಾವಹಿಸುವಿಕೆ ಎಲ್ಲ ಹಂತಗಳಲ್ಲೂ ಇರಬೇಕು, ಉತ್ತೇಜನ ಹಾಗೂ ಸಾಮರ್ಥ್ಯ ನಿರ್ಮಾಣ ವಿಷಯಗಳಿಗೆ ಗಮನಹರಿಸುವುದು ವಿಶೇಷ ವಲಯಗಳಿಗೆ ವಿಶೇಷ ಗಮನ ನೀಡುವುದು ಮತ್ತು ಕ್ಲಿಷ್ಟಕರ ಸಂಗತಿಗಳಿಗೂ ಗಮನ ನೀಡಬೇಕಿದೆ.

**ಸಾಲ ಸೌಲಭ್ಯ**

ಬಡತನ ರೇಖೆಗಿಂತ ಕೆಳಗಿರುವ ಬಿಪಿಎಲ್ ಕುಟುಂಬಗಳ ಪೈಕಿ ಹೆಚ್ಚಿನ ಸಂಖ್ಯೆಯ ಕುಟುಂಬಗಳು ಹಾಗೂ ದುರ್ಬಲ ವರ್ಗದ ಜನರು ತಮ್ಮ ಮನೆಗಳಲ್ಲಿ ಶೌಚ ಗೃಹ ನಿರ್ಮಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ, ಇಂತಹ ಜನರ ಮನೆಗಳಲ್ಲಿ ಖಾಸಗಿ ಶೌಚ ಗೃಹ ನಿರ್ಮಾಣಕ್ಕೆ ಬ್ಯಾಂಕ್‌ಗಳು ಹಣಕಾಸು ನೆರವು ನೀಡುವಂತಾಗಲು, ಕುಡಿಯುವ ನೀರು ಮತ್ತು ನೈರ್ಮಲ್ಯ ಮಂತ್ರಾಲಯವು ನಿಗದಿತ ಬಂಡವಾಳ ಮೊತ್ತವನ್ನು ಭದ್ರತೆ ರೂಪದಲ್ಲಿ ಬ್ಯಾಂಕ್‌ಗಳಿಗೆ ನೀಡಬೇಕು.

**ಸಂವಹನ ಕಾರ್ಯತಂತ್ರ**

ಸ್ವಚ್ಛತಾ ಅಭಿಯಾನ ಕಾರ್ಯಕ್ರಮ ಯಶಸ್ಸಿಗೆ ರಾಷ್ಟ್ರೀಯ ಸಂವಹನ ಕಾರ್ಯತಂತ್ರ ರೂಪಿಸಿ, ಪ್ರಾದೇಶಿಕ ಮತ್ತು ಉಪಪ್ರಾದೇಶಿಕ ಮಟ್ಟದಲ್ಲಿ ಸುಲಲಿತ ಕಾರ್ಯ ಚಟುವಟಿಕೆಗಳಿಗೆ ಒತ್ತು ನೀಡಬೇಕು. ನೈರ್ಮಲ್ಯ ಮತ್ತು ಆರೋಗ್ಯ ಸಂರಕ್ಷಣೆ ಕುರಿತು ಕುಟುಂಬದ ಸದಸ್ಯರಲ್ಲಿ ಜಾಗೃತಿ ಮೂಡಿಸಲು, ಪರಿಣಾಮಕಾರಿಯಾಗಿ ಸಂಪರ್ಕ ಸಾಧಿಸಲು ಮುನ್ನಡೆಯ ಕಾರ್ಯಕರ್ತರು ಹಾಗೂ ಸಮುದಾಯ ನಾಯಕರು ಪಿಆರ್‌ಐಗಳಾಗಿ ನೇಮಕವಾಗಬೇಕು, ಧಾರ್ಮಿಕ ಮುಖಂಡರು ಸೇರಿದಂತೆ ಕೆಲವರಿಗೆ ತರಬೇತಿ ನೀಡಬೇಕು. ಕುಟುಂಬ ವರ್ಗ, ಸ್ನೇಹಿತರು, ನೆರೆಹೊರೆಯವರು, ಸಹೋದ್ಯೋಗಿಗಳು ಸೇರಿದಂತೆ ಸಂಪರ್ಕ ಕಾರ್ಯಕ್ಕೆ ಅಗತ್ಯವಿರುವ ಎಲ್ಲಾ ಜನರನ್ನು ಒಗ್ಗೂಡಿಸಿಕೊಂಡು, ಪ್ರಸ್ತುತ ಸಾಮಾಜಿಕ ಕಾರ್ಯಜಾಲ ಮತ್ತು ಆಂತರಿಕ ಸಂಬಂಧ ಬೆಳೆಸಿ, ವಾಸ್ತವಿಕವಾಗಿ ಶೌಚ ಗೃಹ ನಿರ್ಮಿಸುವ ಮತ್ತು ಬಳಸುವ ಕಾರ್ಯ ಆಗಬೇಕು.

ಎಲ್ಲಾ ಬ್ಲಾಕ್ ಪಂಚಾಯತ್‌ಗಳಲ್ಲಿ ಯೋಜನೆಯನ್ವಯ, ಪಂಚಾಯತ್ ವ್ಯಾಪ್ತಿಯ ಗ್ರಾಮಗಳಲ್ಲಿ ನೈರ್ಮಲ್ಯ ಕುರಿತು ಜಾಗೃತಿ ಮೂಡಿಸುವ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ಪೂರಕವಾದ ಸಾಧನ–ಸಲಕರಣೆಗಳನ್ನು ಹೊಂದಿರಬೇಕು. ಕನಿಷ್ಠ ಪ್ರತಿಯೊಂದು ಬ್ಲಾಕ್‌ನಲ್ಲಿ ಒಂದು ಸಾಂಸ್ಕೃತಿಕ ತಂಡ ಇರಬೇಕು, ಈ ತಂಡ ಪ್ರತಿಯೊಂದು ಗ್ರಾಮದಲ್ಲಿ ಬೀದಿ ನಾಟಕ ಪ್ರದರ್ಶನ,

ಜಾನಪದ ಸಂಗೀತ, ಗೊಂಬೆಯಾಟ ಇತ್ಯಾದಿ, ಹಾಗೂ ಮಾಧ್ಯಮ ಚಟುವಟಿಕೆ, ಸಾಮಾಜಿಕ ಮಾರುಕಟ್ಟೆ ಮತ್ತು ಸಾಮಾಜಿಕ ಕ್ರೋಢೀಕರಣಗಳಿಂದ ನೈರ್ಮಲ್ಯ ಕುರಿತ ಜಾಗೃತಿ ಮೂಡಿಸಬೇಕು. ನಡವಳಿಕೆಯಲ್ಲಿ ಆವಿಷ್ಕೃತ ಸಂವಹನ ಕಾರ್ಯತಂತ್ರಗಳ ಅಗತ್ಯವಿದೆ ಮತ್ತು ಈ ಕ್ರಮಗಳು ಗುರಿ ಸಾಧನೆಯ ಉದ್ದೇಶದಿಂದ ಕೂಡಿರಬೇಕು.

### ವಿಕೇಂದ್ರೀಕೃತ ಉತ್ತೇಜನ ಆಧಾರಿತ ದೃಷ್ಟಿಕೋನ

ಗ್ರಾಮಗಳಲ್ಲಿನ ಕಿರಿ ವಯಸ್ಸಿನವರಲ್ಲಿ ನೈರ್ಮಲ್ಯ ಜಾಗೃತಿ ಮೂಡಿಸುವಲ್ಲಿ ಗ್ರಾಮ ಪಂಚಾಯತ್‌ಗಳ ಪಾತ್ರ ಮಹತ್ವದ್ದಾಗಿದೆ. ಸಂಪೂರ್ಣ ನೈರ್ಮಲ್ಯ ಸಾಧನೆ ಮತ್ತು ಸಮುದಾಯಗಳ ಈ ಕಾರ್ಯವನ್ನು ನಿರಂತರವಾಗಿ ಮುಂದುವರಿಸಿಕೊಂಡು ಹೋಗುವಂತಾಗಲು ಕಾರ್ಯತಂತ್ರ ಆಧಾರಿತ ಉತ್ತೇಜನ ನೀಡಬೇಕು, ಕಾಲಮಿತಿಯೊಳಗೆ ಓಡಿಎಸ್ ಸ್ಥಾನ ಹೊಂದುವಲ್ಲಿ ಸಾಧನೆ ತೋರಿದ ಗ್ರಾಮ ಪಂಚಾಯತ್‌ಗಳಿಗೆ ಹಣವನ್ನು ನೀಡಬೇಕು.

### ನಿರಂತರ ಬಹುಮಾನ

ನೈರ್ಮಲ್ಯ, ನೀರಿನ ವ್ಯವಸ್ಥೆ ಮತ್ತು ತೆರಿಗೆ ವಸೂಲಿ ಸಾಮರ್ಥ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಪಿಆರ್‌ಐಗಳಿಗೆ ಪ್ರೋತ್ಸಾಹಧನ ನೀಡಲು ಅವಕಾಶವಾಗುವಂತೆ ಗ್ರಾಮ ಪಂಚಾಯತ್‌ಗಳನ್ನು ಉತ್ತೇಜಿಸಬೇಕು. ಶೌಚ ಗೃಹಗಳಿಗೆ ನಿಗದಿತ ಪ್ರಮಾಣದಲ್ಲಿ ನೀರು ಪೂರೈಕೆಯಾಗುವುದನ್ನು ಖಾತ್ರಿ ಪಡಿಸಿಕೊಳ್ಳುವ ಅಗತ್ಯವಿದೆ. ನೈರ್ಮಲ್ಯವನ್ನು ಒಂದು ವರ್ಷಕ್ಕಿಂತ ಹೆಚ್ಚು ಸಮಯದವರೆಗೆ ಕಾಯ್ದುಕೊಳ್ಳಲು ಪಂಚಾಯತ್‌ಗಳಿಗೆ ಹೆಚ್ಚುವರಿ ನೀರು ಪೂರೈಕೆ ಮಾಡಲು ಕೊಳವೆ ನೀರು ಸರಬರಾಜು ವ್ಯವಸ್ಥೆ ಕಲ್ಪಿಸಬೇಕು.

ಗ್ರಾಮ ಮಟ್ಟದಲ್ಲಿ ನಿರ್ದಿಷ್ಟ ಕೆಲಸಕ್ಕೆ ಕೆಳಸ್ತರದ ಕರ್ಮಚಾರಿ (ಸ್ವಚ್ಛದೂತ) ನೇಮಕಾತಿಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಇವರುಗಳು ನೈರ್ಮಲ್ಯ ವಿಸ್ತಾರವನ್ನು ಸುಧಾರಿಸಲು ಹಾಗೂ ಬೇಡಿಕೆ ಹೆಚ್ಚಿಸುವ ಕಾರ್ಯಕ್ಕೆ ಸೂಕ್ತ ಪ್ರೋತ್ಸಾಹಧನ ನೀಡಬೇಕು. ಗ್ರಾಮ ಪಂಚಾಯತ್‌ಯಲ್ಲಿನ ಸ್ಥಾಯಿ ಸಮಿತಿಯು ಗ್ರಾಮೀಣ ನೀರು, ಆರೋಗ್ಯ, ನೈರ್ಮಲ್ಯ ಸಮಿತಿ(ವಿಡಬ್ಲ್ಯೂಎಚ್‌ಎಸ್‌ಸಿ) ಗಳನ್ನು ಕಡ್ಡಾಯವಾಗಿ ರಚಿಸುವಂತೆ ರಾಜ್ಯ ಸರ್ಕಾರಗಳು ನಿರ್ದೇಶನ ನೀಡಬೇಕು. ಗ್ರಾಮ ಪಂಚಾಯತ್ ಮಟ್ಟದ ಕಾರ್ಯಕ್ರಮಗಳು ಅನುಷ್ಠಾನಗೊಳ್ಳಬೇಕು.

### ಸಮುದಾಯ ಶೌಚಾಲಯಗಳು

ಸ್ಥಳಾಭಾವದಿಂದಾಗಿ ಸಮುದಾಯ ಶೌಚಾಲಯಗಳ ಸಂಖ್ಯೆ ಕಡಿಮೆ ಇದ್ದು, ಇದರೊಂದಿಗೆ ಒಂದೆಡೆಯಿಂದ ಇನ್ನೊಂದೆಡೆಗೆ ಸಂಚರಿಸುವ ಜನಸಂಖ್ಯೆಗಾಗಿ ಬಸ್ ನಿಲ್ದಾಣ, ಗ್ರಾಮೀಣ ಮಾರುಕಟ್ಟೆಗಳಲ್ಲೂ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಬೇಕು. ಹೆದ್ದಾರಿಗಳಲ್ಲಿ ಸಾರ್ವಜನಿಕ ಶೌಚಾಲಯಗಳ ನಿರ್ಮಾಣಕ್ಕೆ ಎನ್‌ಎಚ್‌ಎಐ ಜೊತೆಗೆ ಒಪ್ಪಂದ ಮಾಡಿಕೊಳ್ಳಬೇಕು. ಶೌಚ ಗೃಹ ನಿರ್ಮಾಣ ಸಾಮರ್ಥ್ಯ ಹೊಂದಿರುವ ಪೆಟ್ರೋಲ್ ಪಂಪ್ ಘಟಕಗಳು, ರೆಸ್ಟೋರೆಂಟ್‌ಗಳು ಮತ್ತು ಡಾಬಾಗಳಲ್ಲಿ ಸೂಕ್ತ ನೈರ್ಮಲ್ಯ ಸೌಲಭ್ಯಗಳನ್ನು ಕಡ್ಡಾಯವಾಗಿ ನಿರ್ಮಿಸುವಂತೆ ಸರ್ಕಾರಿ ಆದೇಶಗಳನ್ನು ಹೊರಡಿಸಬೇಕು.

### ಅರಿವು ಮೂಡಿಸುವಿಕೆ

ಸಂಪೂರ್ಣ ನೈರ್ಮಲ್ಯ ಸಾಧನೆಗೆ ಅನುಸರಿಸಬೇಕಿರುವ ಅಗತ್ಯ ತತ್ವಾಧಾರಿತ ಬೇಡಿಕೆಗಳ ಈಡೇರಿಕೆಗೆ ರಾಷ್ಟ್ರ, ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ರಾಜಕೀಯ ನಾಯಕತ್ವಕ್ಕೆ ಅರಿವು ಮೂಡಿಸುವ ಅವಶ್ಯಕತೆಯಿದೆ ಮತ್ತು ಉನ್ನತ ರಾಜಕೀಯ ಮಟ್ಟದ ಬೆಂಬಲ ಪಡೆದುಕೊಳ್ಳಬೇಕು. ಈ ವಲಯಕ್ಕೆ ಅಗತ್ಯ ನಿಧಿ ಒದಗಿಸಲು ರಾಜಕೀಯ ಬೆಂಬಲದ ಅವಶ್ಯಕತೆ ಇದೆ.

ಗ್ರಾಮ ಪಂಚಾಯತ್ ವ್ಯಾಪ್ತಿಯ ಎಲ್ಲಾ ಕುಟುಂಬಗಳು ಶೌಚ ಗೃಹ ಸೌಲಭ್ಯ ಹೊಂದಿರುವುದನ್ನು ಖಾತ್ರಿ ಪಡಿಸಿಕೊಳ್ಳುವ ಹೊಣೆಗಾರಿಕೆಯನ್ನು ಪಿಆರ್‌ಐಗಳಿಗೆ ಕಡ್ಡಾಯಗೊಳಿಸುವ ಕಾನೂನು ತರುವಲ್ಲಿ ರಾಜ್ಯ ಸರ್ಕಾರಗಳು ಮುಂದಾಗುವಂತೆ ಉತ್ತೇಜಿಸಬೇಕು.

ಈ ಕಾರ್ಯಕ್ರಮ ಸಾಕಾರಗೊಳ್ಳುವಲ್ಲಿ, ಶಾಲಾ ಮಕ್ಕಳು ಬದಲಾವಣೆಯ ಮಹತ್ವದ ನಿರ್ಣಾಯಕ ಪ್ರವರ್ತಕರಾಗಿ ಕಾರ್ಯನಿರ್ವಹಿಸಬೇಕು. ಮಕ್ಕಳು ತಮ್ಮ ಬದುಕಿನಲ್ಲಿ ಸ್ವಚ್ಛತೆಯ ಮೂಲಭೂತ ಅನುಸಂಧಾನ ಮಾರ್ಗಗಳನ್ನು ಅಳವಡಿಸಿಕೊಳ್ಳುವ ಮೂಲಕ ಸಮಾಜದ ತುಂಬೆಲ್ಲಾ ಈ ಸಂದೇಶವನ್ನು ಸಾರುವಲ್ಲಿ ಸಹಕಾರಿಯಾಗುತ್ತದೆ. ಇಂತಹ ಪ್ರಗತಿಪರ ಕೇಂದ್ರಿತ ಕಾರ್ಯಕ್ರಮ ಅನುಷ್ಠಾನದಿಂದ ದೇಶಾದ್ಯಂತ ಶಾಲೆಗಳಲ್ಲಿ ಶೌಚಾಲಯ ಸೌಲಭ್ಯ ಹೊಂದುವುದನ್ನು ಖಾತ್ರಿ ಪಡಿಸಿಕೊಳ್ಳಲು ಸಾಧ್ಯವಾಗುತ್ತದೆ. ನವದೆಹಲಿಯಲ್ಲಿ ಇತ್ತೀಚೆಗೆ ಆಯೋಜಿಸಲಾಗಿದ್ದ 'ನನ್ನ ಶಾಲೆ–ನನ್ನಧ್ವನಿ–ಮಕ್ಕಳಿಗೆ ಮುಕ್ತ ಸಂಸತ್' ಕಾರ್ಯಕ್ರಮದಿಂದ ಕಂಡುಕೊಂಡಿದ್ದೇನೆಂದರೆ, ಅಸಮರ್ಪಕ ನೈರ್ಮಲ್ಯ ವ್ಯವಸ್ಥೆ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮ ಉಂಟು ಮಾಡುವುದಲ್ಲದೆ, ಶಾಲೆಗಳಲ್ಲಿ ಶೌಚಾಲಯದ ಕೊರತೆಯಿಂದ ಮಕ್ಕಳು ಅರ್ಧಕ್ಕೇ ಶಾಲೆ ಬಿಡಲು ಪ್ರಮುಖ ಕಾರಣಗಳಲ್ಲಿ ಒಂದಾಗಿದೆ ಎಂಬುದು. ನಿರ್ಮಲೀಕರಣ ಕೊರತೆ ಕೆಲವು ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರಿದ ಕಾರಣ, ಪೋಷಕರು ತಮ್ಮ ಮಕ್ಕಳು ಕಾಯಿಲೆ ಬೀಳುವರೆಂಬ ಹೆದರಿಕೆಯಿಂದ ಶಾಲೆಗೆ ಹೋಗುವುದನ್ನೇ ಬಿಡಿಸಿದರು.



ಸಿಕ್ಕಿಂನಲ್ಲಿ ಆರಂಭಿಸಲಾದ 'ಬಾಲ ಪಂಚಾಯತ್' ಪರಿಕಲ್ಪನೆ ದೇಶದ ಇತರ ಭಾಗಗಳಲ್ಲೂ ಪ್ರತಿಬಿಂಬಿಸುವ ಅಗತ್ಯವಿದೆ. ಈ ಬಾಲ ಪಂಚಾಯತ್‌ಗಳು ತಮ್ಮ ಸ್ನೇಹಿತರು ಶಾಲೆಗೆ ಹಾಜರಾಗುವಂತೆ ಮನವೊಲಿಸಿತು. ಈ ಮೊದಲು ಶಿಕ್ಷಕರಷ್ಟೇ ಕೈಗೊಳ್ಳುತ್ತಿದ್ದ, ಸ್ವಚ್ಛತಾ ಕಾರ್ಯವನ್ನು, ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಸ್ವಚ್ಛತೆಯಲ್ಲಿ ಮಕ್ಕಳು ಪಾಲ್ಗೊಳ್ಳುವಂತೆ ಉತ್ತೇಜಿಸಲಾಯಿತು. ಶಿಕ್ಷಕರು, ಸಮುದಾಯ, ಪಂಚಾಯತ್ ಮತ್ತು ಬ್ಲಾಕ್ ಅಧಿಕಾರಿಗಳೊಂದಿಗೆ ಸಿಕ್ಕಿಂನಲ್ಲಿ ವಿದ್ಯಾರ್ಥಿಗಳು ಸಹಾ ಶೌಚಾಲಯ ನಿರ್ಮಾಣ ಕಾರ್ಯದಲ್ಲಿ ಶ್ರಮದಾನ ಮಾಡಿದರು. ಈ ಮಾದರಿಯನ್ನು ದೇಶದ

ಇತರ ಭಾಗಗಳಲ್ಲಿಯೂ ಅನುಸರಿಸುವ ಅಗತ್ಯವಿದೆ. ಸ್ವಚ್ಛ ಭಾರತ ಅಭಿಯಾನ ಕಾರ್ಯಕ್ರಮ ಯಶಸ್ಸು ಕಾಣಬೇಕಿದ್ದರೆ, ಎಲ್ಲ ವರ್ಗದವರೂ ತೊಡಗಿಸಿಕೊಳ್ಳುವಂತೆ ಮಾಡುವ ಅಗತ್ಯವಿದೆ.

ಇನ್ನೊಂದು ಪ್ರಮುಖ ಪಾತ್ರ, ನಗರ ಮತ್ತು ಗ್ರಾಮೀಣ ಭಾಗದಲ್ಲಿ ಮಹಿಳೆಯರದ್ದಾಗಿದೆ. ಕುಟುಂಬದ ನಿರ್ವಹಣೆ ಮತ್ತು ನಿರ್ಮಲೀಕರಣ ಕಾರ್ಯಗಳು ಸಾಮಾನ್ಯವಾಗಿ ಮಹಿಳೆಯರೇ ನಿರ್ವಹಿಸುತ್ತಾರೆ, ಆದ್ದರಿಂದ, ಸ್ವಚ್ಛ ಭಾರತ ಅಭಿಯಾನದಲ್ಲಿ ಮಹಿಳೆಯರ ಪಾತ್ರದ ಮಹತ್ವದ ಬಗ್ಗೆ ಅರಿವು ಮೂಡಿಸುವುದು ಅತ್ಯವಶ್ಯಕವಾಗಿದೆ. ಈ ಮೂಲಕ ಮಹಿಳೆಯು ತನ್ನ ಪರಿಸರ, ಮಕ್ಕಳು ಹಾಗೂ ಕುಟುಂಬದ ಹಿರಿಯ ಸದಸ್ಯರೂ ನೈರ್ಮಲ್ಯಕ್ಕೆ ಗಮನ ನೀಡುವಂತೆ ನೋಡಿಕೊಳ್ಳುತ್ತಾಳೆ. ದೇಶದಲ್ಲಿ ಶೇಕಡಾ 70ರಷ್ಟು(2011ರ ಜನಗಣತಿ) ಗ್ರಾಮೀಣ ಕುಟುಂಬಗಳು ಶೌಚಾಲಯ ಸೌಲಭ್ಯವನ್ನೇ ಹೊಂದಿಲ್ಲ. ಮಂದಿರಗಳಿಗಿಂತ ಶೌಚಾಲಯಗಳು ಹೆಚ್ಚು ಪ್ರಾಮುಖ್ಯ ಎಂಬುದಕ್ಕೆ ಒತ್ತು ನೀಡುವ ಅಗತ್ಯವಿದೆ. ಆಶ್ಚರ್ಯಕರ ಸಂಗತಿಯೆಂದರೆ, ಶೌಚಾಲಯವಿದ್ದರೂ ಗಣನೀಯ ಸಂಖ್ಯೆಯ ಕುಟುಂಬಗಳು ಅವನ್ನು ಬಳಕೆ ಮಾಡದೇ ಇರುವುದಾಗಿದೆ. ಆರ್ಥಿಕ ಅನುಭೂತಿ ಸಂಶೋಧನಾ ಸಂಸ್ಥೆ(ಆರ್ಐಸಿಇ) ನಡೆಸಿದ ಸಮೀಕ್ಷೆಯಿಂದ ಹರಿಯಾಣ, ರಾಜಾಸ್ತಾನ, ಮಧ್ಯಪ್ರದೇಶ, ಉತ್ತರಪ್ರದೇಶ ಮತ್ತು ಬಿಹಾರದಲ್ಲಿ ಶೇಕಡಾ 40ರಷ್ಟು ಕುಟುಂಬಗಳು ಶೌಚಾಲಯ ಹೊಂದಿದ್ದರೂ, ಕುಟುಂಬದಲ್ಲಿನ ಕನಿಷ್ಠ ಒಬ್ಬ ಸದಸ್ಯ ಬಯಲು ಶೌಚಕ್ಕೆ ಹೋಗುತ್ತಿರುವುದು ವ್ಯಕ್ತವಾಗಿದೆ. ಇದರಿಂದ ತಿಳಿಯುವುದೇನೆಂದರೆ, ಕೇವಲ ಶೌಚಾಲಯ ನಿರ್ಮಾಣದಿಂದ ಮಾತ್ರ ಸಮಸ್ಯೆ ಪರಿಹಾರ ಆಗದು, ಶೌಚಾಲಯಗಳ ಬಳಕೆ ಬಗ್ಗೆಯೂ ಜನರ ನಡವಳಿಕೆಯಲ್ಲಿ ಬದಲಾವಣೆ ಆಗುವ ಅಗತ್ಯವಿದೆ. ಉತ್ತಮ ಆರೋಗ್ಯ ಮತ್ತು ಶೌಚಾಲಯಗಳ ಬಳಕೆ ನಡುವಿನ ಸಂಬಂಧವನ್ನು ಜನತೆ ಅರಿತುಕೊಳ್ಳುವ ಅಗತ್ಯವಿದೆ.

### ನಿಗಾವಹಿಸುವಿಕೆ

ನಿಗಾವಹಿಸುವಿಕೆಯು ಶೌಚಾಲಯ ದಂತಹ ಬೃಹತ್ ಯೋಜನೆಯ ಬೆನ್ನೆಲುಬಾಗಿದೆ. ಪರಿಣಾಮಕಾರಿ ನಿಗಾವಹಿಸುವಿಕೆಯಿಂದ ಕೆಟ್ಟ ಹಾಗೂ ಬಳಕೆಯಾಗದ ನೈರ್ಮಲ್ಯ ಸೌಲಭ್ಯಗಳನ್ನು ಪತ್ತೆ ಹಚ್ಚಲು ಸಹಕಾರಿಯಾಗುತ್ತದೆ. ಬಿಪಿಎಲ್ ಪಡಿತರಚೀಟಿ ಸಂಖ್ಯೆ/ ಆಧಾರ್ ಜೊತೆಗೆ ದೃಶ್ಯಸಾಕ್ಷ್ಯಗಳೊಂದಿಗೆ ಸಚಿವಾಲಯದ ನಿರ್ವಹಣೆಯಲ್ಲಿ ವಾಸ್ತವಿಕ ನಿಗಾವಹಿಸುವ ವ್ಯವಸ್ಥೆಯನ್ನು ಜಾರಿಗೆ ತರುವುದು ಸೂಕ್ತವಾಗಿದೆ.

### ನಾಗರಿಕ ಸಮಾಜದ ಪಾತ್ರ

ಯೋಜನೆಯ ಅನುಷ್ಠಾನ ಹಾಗೂ ಇದಕ್ಕಾಗಿ ಮೀಸಲಿಟ್ಟ ಹಣದ ಬಳಕೆಯ ತಪಾಸಣೆಯಲ್ಲಿ ನಾಗರಿಕ ಸಮಾಜ ತೊಡಗಿಕೊಳ್ಳುವ ಮೂಲಕ ನೈರ್ಮಲ್ಯ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಬಹುದಾಗಿದೆ.

### ಸಾಮರ್ಥ್ಯ ನಿರ್ಮಾಣ

ಸ್ವಚ್ಛತಾ ಅಭಿಯಾನದ ಪರಿಣಾಮಕಾರಿ ಅನುಷ್ಠಾನಕ್ಕೆ ಸಾಮರ್ಥ್ಯ ನಿರ್ಮಾಣದ ಅಗತ್ಯವಿದೆ. ನಿರ್ಮಲೀಕರಣ ವಲಯದಲ್ಲಿ ಕಾರ್ಯಪ್ರವೃತ್ತರಾಗಿರುವ ಕೇಂದ್ರ/ರಾಜ್ಯದ ಅಧಿಕಾರಿಗಳಿಗೆ ಕಡ್ಡಾಯ ತರಬೇತಿ ನೀಡಲು ಅಂತಾರಾಷ್ಟ್ರೀಯ ಮಟ್ಟದ ಹೆಸರಾಂತ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬೇಕು. ವಿವಿಧ ಸ್ಥರಗಳಲ್ಲಿ ಸಾಮರ್ಥ್ಯ ನಿರ್ಮಾಣ ಮಂತ್ರಾಲಯವು, ರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ ಮಾದರಿಯಲ್ಲಿ, ನೀರು ಮತ್ತು ನೈರ್ಮಲ್ಯಕ್ಕೆ ರಾಷ್ಟ್ರಮಟ್ಟದ ಸಂಸ್ಥೆ ಸ್ಥಾಪಿಸುವುದು ಉತ್ತಮ. ಈ ಸಲಹೆಯನ್ನು ಗ್ರಾಮೀಣ ನೀರು ಮತ್ತು ನೈರ್ಮಲ್ಯ ಕಾರ್ಯ ತಂಡವು 2012–17ರ ಅವಧಿಯ 12ನೇ ಪಂಚವಾರ್ಷಿಕ ಯೋಜನೆಗೆ ನೀಡಿದೆ. ನಿರ್ಮಲೀಕರಣ ಸವಲತ್ತುಗಳ ಸುಧಾರಣೆ, ನಿರ್ವಹಣೆ ಮತ್ತು ವ್ಯವಸ್ಥಾಪನೆಗೆ ಸರ್ಕಾರಿ, ಖಾಸಗಿ ಮತ್ತು ಸರ್ಕಾರೇತರ ಸಂಸ್ಥೆಗಳೊಂದಿಗಿನ ಪಾಲುದಾರಿಕೆಯನ್ನು ಉತ್ತೇಜಿಸಬೇಕು ಹಾಗೂ ಈ ದಿಸೆಯಲ್ಲಿ ಭಾರತ ಸರ್ಕಾರವು ರಾಜ್ಯಗಳೊಂದಿಗೆ ನೈರ್ಮಲ್ಯ ಗುರಿ ಸಾಧನೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದೆ.

2019ರ ವೇಳೆಗೆ ಸಂಪೂರ್ಣ ನೈರ್ಮಲ್ಯ ಗುರಿ ಸಾಧನೆಗೆ ಸರ್ಕಾರಕ್ಕೆ ಸಮಾಜದ ಎಲ್ಲ ವರ್ಗಗಳ ಹೆಚ್ಚಿನ ಸಹಕಾರದ ಅಗತ್ಯವಿದೆ. ಈ ಸವಾಲನ್ನು ಸಾಮಾಜಿಕ ಸಹಕಾರ ಹೊಣೆಗಾರಿಕೆ(ಸಿಎಸ್ಆರ್) ಅಡಿ ಭಾರತದ ಕಾರ್ಪೊರೇಟ್ ವಲಯ ಆಜ್ಞಾರ್ಥಕವಾಗಿ ತೆಗೆದುಕೊಳ್ಳಬೇಕು. ಸರ್ಕಾರದ ಪ್ರಯತ್ನಗಳೊಂದಿಗೆ ಸಿಎಸ್ಆರ್ ನಿಧಿಯಡಿ ಅಗತ್ಯ ಮಾನವ ಶಕ್ತಿ/ಸಾಮಗ್ರಿಗಳ ಬೆಂಬಲ ದೊರೆತರೆ, 2019ರ ವೇಳೆಗೆ ಸ್ವಚ್ಛ ಭಾರತ ಗುರಿ ಸಾಕಾರಗೊಳಿಸಲು ಸಹಕಾರಿಯಾಗಲಿದೆ. ❑


ಯೋಜನಾ ಓದುಗರಿಗೆ

**ಗಣರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು**




# ಬುಡಕಟ್ಟು ಜನಾಂಗದ ಬವಣೆ ಮತ್ತು ಅಭಿವೃದ್ಧಿಯ ತೊಡಕು

ಡಾ. ಎನ್. ಜಗದೀಶ್ ಕೊಪ್ಪ



> ನಕ್ಸಲ್ ಚಳವಳಿಯನ್ನು ಕುಗ್ಗಿಸಬೇಕಾದರೆ, ಮೂಲನಿವಾಸಿಗಳು ನಕ್ಸಲ್ ಹೋರಾಟದ ತೆಕ್ಕೆಗೆ ಬೀಳದಂತೆ ತಡೆಯಬೇಕು. ಇದಕ್ಕಿರುವ ಏಕೈಕ ಪರಿಹಾರವೆಂದರೆ, ಭಾರತದ ಮೂಲನಿವಾಸಿಗಳ ಹಲವಾರು ದಶಕಗಳ ಕನಸಾದ "ಜಲ್, ಜಂಗಲ್, ಜಮೀನ್" ಎಂಬ ಬೇಡಿಕೆಗಳನ್ನು ಈಡೇರಿಸುವುದು.

ನಾವು ಬದುಕುತ್ತಿರುವ ವರ್ತಮಾನದ ಜಗತ್ತು ಇಪ್ಪತ್ತನೆಯ ಶತಮಾನದ ಹೊಸ್ತಿಲನ್ನು ದಾಟಿ, ಇಪ್ಪತ್ತೊಂದನೆಯ ಶತಮಾನದ ಅಂಗಳಕ್ಕೆ ಕಾಲಿಡುತ್ತಿದ್ದಂತೆ, ನಾವು ಈವರೆಗೆ ನಿರ್ವಚಿಸಿಕೊಂಡು ಬಂದಿದ್ದ ಅಭಿವೃದ್ಧಿಯ ವ್ಯಾಖ್ಯಾನಗಳು ಬದಲಾಗಿ ಹೋದವು. ತೀವ್ರ ಪೈಪೋಟಿಯಿಂದ ಕೂಡಿದ ಮಾರುಕಟ್ಟೆ ಆಧಾರಿತ ಜಗತ್ತಿನಲ್ಲಿ ಕಲ್ಯಾಣ ರಾಷ್ಟ್ರ ಎಂಬ ಪರಿಕಲ್ಪನೆ ಪಲ್ಲಟಗೊಳ್ಳುವುದರ ಜೊತೆಗೆ, ಮಾನವೀಯತೆಗಿಂತ ಮುಖ್ಯವಾಗಿ ಲಾಭಕೋರತನ ಮುಖ್ಯವಾಯಿತು. ಜಾಗತೀಕರಣ ವ್ಯವಸ್ಥೆಯು ಎಲ್ಲಾ ದೇಶಗಳ ಭಾಷೆ ಮತ್ತು ಗಡಿಗಳನ್ನು ಮೀರಿ ಎಲ್ಲರ ಬದುಕಿನಲ್ಲಿ ಆವರಿಸಿಕೊಳ್ಳುತ್ತಿದ್ದಂತೆ ನಮ್ಮ ಅರಿವಿಗೆ ಬಾರದಂತೆ ನಮ್ಮನ್ನಾಳುವ ಸರ್ಕಾರಗಳನ್ನು ಮತ್ತು ನಮ್ಮ ಬದುಕನ್ನು ಅದು ತನ್ನ ಹಿಡಿತಕ್ಕೆ ತೆಗೆದುಕೊಂಡಿತು.

ಇವೆಲ್ಲವುಗಳ ಒಟ್ಟು ಪರಿಣಾಮ ಎಂಬಂತೆ ನಗರ ಮತ್ತು ಹಳ್ಳಿಗಳ ಚಹರೆ ಬದಲಾಗುತ್ತಾ ಹೋದಂತೆ ಹಳ್ಳಿಗಳು ಬವಣೆಗಳ ಗೂಡಾದವು. ನಗರಗಳ ಅಭಿವೃದ್ಧಿಗೆ ಆದ್ಯತೆ ಹೆಚ್ಚಾದಂತೆ ಜೊತೆ ಜೊತೆಯಲ್ಲಿ ಸಮಸ್ಯೆಗಳು ಸೃಷ್ಟಿಯಾದವು. ಪಂಚತಂತ್ರ ಕಥೆಗಳಲ್ಲಿ ಬರುವ ವಿಕ್ರಮನ ಹೆಗಲಿಗೆ ಜೋತು ಬಿದ್ದ ಬೇತಾಳದಂತೆ ಭಾರತದ ಹೆಗಲಿಗೆ ಜೋತು ಬಿದ್ದಿರುವ ಸವಾಲುಗಳಲ್ಲಿ ಭಾರತದ ಬುಡಕಟ್ಟು ಜನಾಂಗದ ಅಭಿವೃದ್ಧಿಯೂ ಸಹ ಒಂದು. ಭಾರತದ ಬುಡಕಟ್ಟು ಜನಾಂಗದ ಸಮಸ್ಯೆ ಇಂದಿಗೂ ಸಹ ಜೀವಂತ ಜ್ವಲಂತ ಸಮಸ್ಯೆಯಾಗಿ ಉಳಿದಿದೆ. ಜೊತೆಗೆ ನಕ್ಸಲ್ ಹೋರಾಟಕ್ಕೆ ಮೂಲ ಕಾರಣವಾಗಿದೆ. ಈಗಾಗಲೆ ಅರ್ಧಶತಮಾನದಷ್ಟು ಕಾಲ ಹೋರಾಟದ ಮೂಲಕ ಹಾದು ಬಂದಿರುವ ಭಾರತದ ನಕ್ಸಲ್ ಹೋರಾಟವನ್ನು 2015 ರ ಹೊಸ್ತಿಲಲ್ಲಿ ನಿಂತು ಪರಾಮರ್ಶಿಸಿದಾಗ ಸಂಭ್ರಮ ಪಡುವ ವಿಷಯಕ್ಕಿಂತ ಸಂಕಟ ಪಡುವ ಸಂಗತಿಗಳೇ ಹೆಚ್ಚಾಗಿವೆ.

1930 ರ ದಶಕದಲ್ಲಿ ಆಂಧ್ರ ಪ್ರದೇಶದ ಉತ್ತರ ಭಾಗದ ಗೋದಾವರಿ ನದಿಯಾಚೆ ಕೃಷಿ ಕಾರ್ಮಿಕರು ಮತ್ತು ಗೇಣಿದಾರ ರೈತರ ಹೋರಾಟವಾಗಿ ಮತ್ತು ಇದೇ ವೇಳೆಯಲ್ಲಿ ಪಶ್ಚಿಮ ಬಂಗಾಳದ ಸಿಲಿಗುರಿ ಪ್ರಾಂತ್ಯದ ಡಾರ್ಜಿಲಿಂಗ್ ಗಿರಿಧಾಮದ ಸುತ್ತ ಮುತ್ತ ಇದ್ದ ಬ್ರಿಟಿಷರ ಒಡೆತನಲ್ಲಿ ಇದ್ದ ಚಹಾ ತೋಟಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದ ಬುಡುಕಟ್ಟು ಜನಾಂಗದ ಕೂಲಿ ಹೆಚ್ಚಳಕ್ಕಾಗಿ ಎಡಪಂಥೀಯ ಸಂಘಟನೆಗಳಿಂದ ಆರಂಭವಾದ ಹೋರಾಟ, ನಂತರದ ದಿನಗಳಲ್ಲಿ ಹಲವು ಮಜಲುಗಳನ್ನು ತಲುಪಿ ನಂತರ ನಕ್ಸಲ್ ಚಳವಳಿಯಾಗಿ ರೂಪುಗೊಂಡಿತು. ಸೈದ್ಧಾಂತಿಕ ಹಿನ್ನಲೆಯಲ್ಲಿ ಆರಂಭಗೊಂಡ ಹೋರಾಟಕ್ಕೆ ಚಾರು ಮುಜುಂದಾರ್, ಕನುಸನ್ಯಾಲ್, ಕನಾಯ್ ಚಟರ್ಜಿ, ಜಗಲ್ ಸಂತಾಲ್, ಸುಬತ್ರಾದತ್, ನಾಗಭೂಷಣ್ ಪಟ್ನಾಯಕ್, ಎನ್.ಪ್ರಸಾದ್ ವಿನೋದ್ ಮಿಶ್ರಾ ಮತ್ತು ಆಂಧ್ರದ ನಾಗಿರೆಡ್ಡಿ, ವೆಂಪಟಾಪು ಸತ್ಯನಾರಾಯಣ, ಕೃಷ್ಣಮೂರ್ತಿ, ಕೊಂಡಪಲ್ಲಿ ಸೀತಾರಾಮಯ್ಯ ಹೀಗೆ ಅನೇಕ ನಾಯಕರು ತಮ್ಮ ತಾತ್ವಿಕ ಭಿನ್ನಾಭಿಪ್ರಾಯಗಳ ನಡುವೆಯೂ ನಕ್ಸಲ್ ಹೋರಾಟಕ್ಕೆ ಬುನಾದಿ ಹಾಕಿದರು. 1980 ರ ದಶಕದಲ್ಲಿ ಈ ಹೋರಾಟ

ಮಾಧ್ಯಮ ತಜ್ಞರು.

ಸರ್ಕಾರ ಮತ್ತು ನಕ್ಸಲ್ ಸಂಘಟನೆಗಳ ನಡುವಿನ ಸಂಘರ್ಷವಾಗಿ ಮಾರ್ಪಟ್ಟು ಹಿಂಸೆಯ ಹಾದಿಯನ್ನು ತುಳಿಯಿತು. ಈ ಹೋರಾಟದ ನಡುವೆ ಸಿಲುಕಿದ ಭಾರತದ ಅಮಾಯಕ ಸಮುದಾಯವಾದ ಬುಡಕಟ್ಟು ಜನಾಂಗ ಎಲ್ಲಾ ಅಭಿವೃದ್ಧಿಯಿಂದ ವಂಚಿತವಾಗಬೇಕಾಯಿತು. ಸದ್ಯದ ಸ್ಥಿತಿಯಲ್ಲಿ ಸೈದ್ಧಾಂತಿಕ ಹಿನ್ನಲೆಯುಳ್ಳ ಹಿರಿಯನಾಯಕರನ್ನು ನಕ್ಸಲ್ ಹೋರಾಟದಲ್ಲಿ ನಾವು ಹುಡುಕುವುದು ಕಷ್ಟವಾಗಿದೆ.

ಕಳೆದ ಒಂದು ದಶಕದಿಂದ ನಗರಗಳಿಂದ ಹೋರಾಟದತ್ತ ಆಕರ್ಷಿತರಾಗಿ ಬರುತ್ತಿದ್ದ ವಿದ್ಯಾವಂತರ ಸಂಖ್ಯೆ ಸಂಪೂರ್ಣ ಸ್ಥಗಿತಗೊಂಡಿದೆ. ವ್ಯವಸ್ಥೆಯ ವಿರುದ್ಧದ ಹೋರಾಟಕ್ಕಾಗಿ ಅರಣ್ಯಕ್ಕೆ ಹೋಗಿ ಬಂದೂಕು ಹಿಡಿಯಬೇಕೆಂಬ ಚಿಂತನೆ ಈಗಿನ ಯುವಜನತೆಯ ಪಾಲಿಗೆ ಸವಕಲು ಚಿಂತನೆಯ ಮಾದರಿಯಾಗಿದೆ. ಜೊತೆಗೆ 2010 ರ ಮಾರ್ಚ್ 23 ರಂದು ನಕ್ಸಲ್ ಚಳವಳಿಯ ಸಂಸ್ಥಾಪಕರಲ್ಲಿ ಒಬ್ಬರಾದ ಹಾಗೂ ಚಾರು ಮುಜುಂದಾರ್ ಸಂಗಾತಿಯಾಗಿದ್ದ ಕನುಸನ್ಯಾಲ್ ತಮ್ಮ ವೃದ್ಧಾಪ್ಯದಲ್ಲಿ ತೀವ್ರ ಬಡತನ ಮತ್ತು ಹದಗೆಟ್ಟ ಆರೋಗ್ಯಕ್ಕೆ ಔಷಧಕೊಳ್ಳಲು ಹಣವಿಲ್ಲದ ಸ್ಥಿತಿಯಲ್ಲಿ ಸಿಲುಗುರಿ ಸಮೀಪದ ಹಳ್ಳಿಯೊಂದರ ತಮ್ಮ ಮಗಳ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಈಗಿನ ತಲೆಮಾರಿಗೆ ನಕ್ಸಲ್ ಹೋರಾಟ ಕುರಿತಂತೆ ಮರುಚಿಂತನೆಗೆ ಪ್ರೇರೇಪಿಸಿದೆ..

1980 ಮತ್ತು 1990 ದಶಕದಲ್ಲಿ ನಕ್ಸಲ್ ಹೋರಾಟಕ್ಕೆ ಸೇರ್ಪಡೆಯಾದ ಅನಕ್ಷರಸ್ಥ ಮೂಲನಿವಾಸಿ ಯುವಕರು ಇತ್ತೀಚೆಗೆ ಚಳವಳಿಯ ನಾಯಕರಾಗಿ ಹೊರಹೊಮ್ಮಿದ್ದಾರೆ. ಇವರಿಗೆ ಮಾವೋ ಆಗಲಿ, ಲೆನಿನ್ ಆಗಲಿ ಅಥವಾ ಕಾರ್ಲ್ಸ್ ಮಾರ್ಕ್ಸ್‌ರವರ ಸಿದ್ಧಾಂತಗಳ ಗಂಧ ಗಾಳಿ ತಿಳಿದಿಲ್ಲ. ಇಂತಹ ಕಾರಣಗಳಿಂದಾಗಿ ಪೈಶಾಚಿಕ ಕೃತ್ಯಗಳಿಗೆ ಅವರು



ಮುಂದಾಗುತ್ತಿದ್ದಾರೆ.

ಒಂದು ನೆಮ್ಮದಿಯ ಸಂಗತಿಯೆಂದರೆ, ಇಡೀ ರಾಷ್ಟ್ರಾದ್ಯಂತ ನಕ್ಸಲರು ಮತ್ತು ಸರ್ಕಾರಗಳ ನಡುವೆ ನಡೆಯುತ್ತಿದ್ದ ಸಂಘರ್ಷದಲ್ಲಿ ಹಿಂಸೆಯ ಪ್ರಮಾಣ ಕ್ರಮೇಣ ಇಳಿಮುಖವಾಗುತ್ತಿದೆ. (2012 ರ ಸಮೀಕ್ಷೆಯ ವರದಿ) ಜಾರ್ಖಂಡ್ ಮತ್ತು ಛತ್ತೀಸ್‌ಗಢ್ ರಾಜ್ಯಗಳನ್ನು ಹೊರತುಪಡಿಸಿದರೆ, ಉಳಿದ ರಾಜ್ಯಗಳಲ್ಲಿ ಆಶಾಭಾವನೆ ಮೂಡುವಂತಿದೆ. ನಕ್ಸಲ್ ಚಳವಳಿಯನ್ನು ಹುಟ್ಟುಹಾಕಿದ ಆಂಧ್ರಪ್ರದೇಶದಲ್ಲಿ 13 ಸಾವುಗಳು ಸಂಭವಿಸಿವೆ. ಜಾರ್ಖಂಡ್‌ನಲ್ಲಿ 160 ಸಾವು (2011 ರಲ್ಲಿ 182) ಛತ್ತೀಸ್‌ಗಡದಲ್ಲಿ 107 (2011 ರಲ್ಲಿ 204) ಬಿಹಾರದಲ್ಲಿ 43ಸಾವು (2011 ರಲ್ಲಿ 63) ಪಶ್ಚಿಮ ಬಂಗಾಳದಲ್ಲಿ 6 ಸಾವು (2011 ರಲ್ಲಿ 45) ಹೀಗೆ ಭಾರತದಲ್ಲಿ 2011ರಲ್ಲಿ 1760 ಪ್ರಕರಣಗಳು ನಡೆದು, 611 ನಾಗರೀಕರು ಮತ್ತು 99 ನಕ್ಸಲರು ಮೃತಪಟ್ಟಿದ್ದರೆ, 2012 ರ ಅವಧಿಯಲ್ಲಿ 1365 ಪ್ರಕರಣಗಳು ದಾಖಲಾಗಿ 409 ನಾಗರೀಕರು ಮತ್ತು 74 ನಕ್ಸಲರು ಮೃತಪಟ್ಟಿದ್ದಾರೆ. ಒಟ್ಟಾರೆ ಸಂಘರ್ಷ ಮತ್ತು ಹಿಂಸೆಯಿಂದ ಯಾವುದೇ ಪ್ರಯೋಜನವಿಲ್ಲ ಎಂಬ ಅರಿವು ಮೂಡತೊಡಗಿದೆ.

ಭಾರತದ ನಕ್ಸಲ್ ಇತಿಹಾಸದಲ್ಲಿ ಪೊಲೀಸರತ್ತ, ಅಥವಾ ಸರ್ಕಾರಗಳತ್ತ ಇಲ್ಲವೆ, ನಕ್ಸಲ್ ಸಂಘಟನೆಗಳತ್ತ ಬೆರಳು ತೋರಿಸಿ ಆರೋಪ ಹೊರಿಸುವ ಮುನ್ನ ಉಭಯ ಬಣಗಳು ಎಲ್ಲಿ ಎಡವಿದವು ಎಂಬುದರತ್ತ ಗಮನಹರಿಸಿ ಹಿಂಸೆ ಮತ್ತು ಹೋರಾಟವನ್ನು ಕೊನೆಗಾಣಿಸುವ ನಿಟ್ಟಿನಲ್ಲಿ ಸಾಂಘಿಕ ಪ್ರಯತ್ನ ನಡೆಯಬೇಕಿದೆ. ಇದಕ್ಕಾಗಿ ದೇಶದ ಎಲ್ಲಾ ಪ್ರಗತಿಪರರು, ಬುದ್ಧಿಜೀವಿಗಳು, ಪತ್ರಕರ್ತರು, ಲೇಖಕರು ಮುಕ್ತ ಮನಸ್ಸಿನಿಂದ ಕೈ ಜೋಡಿಸಬೇಕಿದೆ. ಇತಿಹಾಸದ ಘಟನೆಗಳನ್ನು ಕೆದಕುತ್ತಾ ಪರಸ್ಪರ ಆರೋಪ ಮಾಡಿ ಕಾಲ ಕಳೆಯುವ ಬದಲು, ಹಿಂಸೆಯಿಂದ ಮುಕ್ತವಾದ ಜಗತ್ತಿನತ್ತ ನಾವು ಹೆಜ್ಜೆ ಹಾಕಬೇಕಿದೆ. ನಾವು ಸೃಷ್ಟಿಸಬೇಕಾದ ಸಮಾಜದಲ್ಲಿ ಹಿಂಸೆ, ಬಡತನ, ಅಪಮಾನ, ಶೋಷಣೆಗಳಿಲ್ಲದೆ ಪರಿಶಿಷ್ಟರು, ಬುಡಕಟ್ಟು ಜನಾಂಗದ ಮೂಲನಿವಾಸಿಗಳು, ಮತ್ತು ಅಲ್ಪಸಂಖ್ಯಾತರು ಇವರೆಲ್ಲಾ ಭಯಮುಕ್ತರಾಗಿ ಸಮಾನ ಗೌರವದಿಂದ ಬದುಕುವಂತಹ ವಾತಾವರಣವನ್ನು ನಿರ್ಮಾಣ ಮಾಡುವ ನೈತಿಕ ಹೊಣೆ ಅಕ್ಷರ



ಬಲ್ಲ ನಮ್ಮೆಲ್ಲರ ಮೇಲಿದೆ. ವೈದ್ಯನೊಬ್ಬ ಖಾಯಿಲೆಯ ಮೂಲಕ್ಕೆ ಕೈ ಹಾಕುವಂತೆ ನಾವುಗಳು ಕೂಡ ಸಮಸ್ಯೆಗಳ ಬುಡಕ್ಕೆ ಕೈ ಹಾಕಬೇಕಿದೆ. ಸಮಾಜದಲ್ಲಿ ಅನೇಕ ರೂಪದಲ್ಲಿ ತಾಂಡವಾಡುತ್ತಿರುವ ಹಿಂಸೆಗೆ ಪರಿಹಾರವನ್ನು ಕಂಡುಕೊಳ್ಳಬೇಕಿದೆ.

ಭಾರತದ ನಕ್ಸಲ್ ಹೋರಾಟದ ಇತಿಹಾಸ ಅಥವಾ ಅದು ಹಿಡಿದ ಹಿಂಸೆಯ ಮಾರ್ಗ ಕುರಿತಂತೆ ನಮ್ಮಗಳ ಅಸಮಾಧಾನ ಏನೇ ಇರಲಿ, ಅವರುಗಳ ಹೋರಾಟದಲ್ಲಿ ಎಲ್ಲಿಯೂ ಸ್ವಾರ್ಥವೆಂಬುದು ಇರಲಿಲ್ಲ ಎಂಬುದನ್ನು ನಾವು ನೆನಪಿಡಬೇಕು. ಸ್ವಾತಂತ್ರ್ಯಾನಂತರದ ಭಾರತದಲ್ಲಿ ಇಂದಿಗೂ ಮೂಕ ಪ್ರಾಣಿಗಳಂತೆ ಬದುಕುತ್ತಿರುವ ಮೂಲನಿವಾಸಿಗಳು ಮತ್ತು ಹಿಂದುಳಿದ ಬುಡಕಟ್ಟು ಜನಾಂಗಗಳ ನೆಮ್ಮದಿಯ ಬದುಕಿಗಾಗಿ ನಕ್ಸಲಿಸಂ ಹೆಸರಿನಲ್ಲಿ ಸಾವಿರಾರು ವಿದ್ಯಾವಂತ ಯುವಕರು ಪ್ರಾಣತೆತ್ತಿದ್ದಾರೆ. ಇವರ ಹೋರಾಟದ ಹಿಂದಿನ ಕಾಳಜಿಯನ್ನು ನಮ್ಮನ್ನಾಳುವ ಸರ್ಕಾರಗಳು ಅರಿಯುವ ಮನಸ್ಸು ಮಾಡಿದ್ದರೆ, ನಕ್ಸಲ್ ಸಂಘಟನೆಗಳು ಮತ್ತು ಸರ್ಕಾರಗಳ ನಡುವಿನ ಸಂಘರ್ಷಕ್ಕೆ ರಕ್ತದ ಕಲೆಗಳು ಅಂಟಿಕೊಳ್ಳುತ್ತಿರಲಿಲ್ಲ. ಸಂಘರ್ಷಕ್ಕೆ ಮೂಲ ಕಾರಣರಾದ ಭಾರತದ ಅರಣ್ಯವಾಸಿಗಳ ಬದುಕು ಭಾರತ ಸ್ವಾತಂತ್ರ್ಯಾನಂತರದ 67 ವರ್ಷಗಳಲ್ಲಿ ಹಸನಾಗಿದೆಯಾ? ಅದೂ ಇಲ್ಲ.

ನಮ್ಮ ನಡುವಿನ ಇತಿಹಾಸಕಾರ ಮತ್ತು ಅಂಕಣಕಾರ ರಾಮಚಂದ್ರಗುಹಾ 2011 ರಲ್ಲಿ ಆಗಸ್ಟ್ ಹದಿನೈದರೆಂದು ದೆಹಲಿಯ ಹಿಂದೂಸ್ತಾನ್ ಟೈಮ್ಸ್ ದಿನ ಪತ್ರಿಕೆಗೆ "ಟ್ರೈಬಲ್ ಟ್ರ್ಯಾಜಿಡಿಸ್" (ಬುಡಕಟ್ಟು ಜನಾಂಗಗಳ ದುರಂತ) ಎಂಬ ವಿಶೇಷ ಲೇಖನವನ್ನು ಬರೆದಿದ್ದರು. ಭಾರತದ ಮೂಲನಿವಾಸಿಗಳ ಸಮಸ್ಯೆಯನ್ನು ನಿಖರವಾಗಿ ಗುರುತಿಸಿರುವ ಗುಹಾ ಅವರು, ನಮ್ಮ ಜನಪ್ರತಿನಿಧಿಗಳ ಸಹ ಲೇಖನದಲ್ಲಿ ನಿಷ್ಠುರವಾಗಿ ಅನಾವರಣಗೊಳಿಸಿದ್ದಾರೆ.

ಮೂಲನಿವಾಸಿಗಳ ಸಮಸ್ಯೆಯನ್ನು ಏಳು ಬಗೆಯಲ್ಲಿ ರಾಮಚಂದ್ರ ಗುಹಾ ಗುರುತಿಸಿದ್ದಾರೆ. ಅವುಗಳು ಈ ಮುಂದಿನಂತಿವೆ.

ಒಂದು : ದಟ್ಟವಾದ ಅರಣ್ಯದಲ್ಲಿ ತಮ್ಮದೇ ಆದ ಸಂಸ್ಕೃತಿಯ ನೆರಳಿನಲ್ಲಿ ಮತ್ತು ಸಮೃದ್ಧ ಖನಿಜ ಸಂಪತ್ತಿರುವ ಗುಡ್ಡಗಾಡು ಪ್ರದೇಶದಲ್ಲಿ ಬದುಕಿರುವ ಮೂಲನಿವಾಸಿಗಳು ಇಂದು ಅಭಿವೃದ್ಧಿಯ ನೆಪದಲ್ಲಿ ನೆಲೆ ಕಳೆದುಕೊಳ್ಳುತ್ತಿದ್ದಾರೆ. ಗಣಿಗಾರಿಕೆ, ಅಣೆಕಟ್ಟುಗಳ ನಿರ್ಮಾಣ, ಅರಣ್ಯದಲ್ಲಿ ನಿರಂತವಾಗಿ ನಡೆದಿರುವ ಮರಗಳ ಮಾರಣಹೋಮ ಇವೆಲ್ಲವೂ ಅವರನ್ನು ಆದುನಿಕ ಅಭಿವೃದ್ಧಿ ಯೋಜನೆಗಳ ಹೆಸರಿನಲ್ಲಿ ಅತಂತ್ರರನ್ನಾಗಿ ಮಾಡಿವೆ.

ಎರಡು : ಭಾರತದಲ್ಲಿ ದಲಿತರಿಗೆ ದಿಕ್ಕುದೆಸೆಯಾಗಿ ಡಾ. ಬಿ.ಆರ್. ಅಂಬೇಡ್ಕರ್ ಜನ್ಮತಾಳಿದ ಹಾಗೆ ಬುಡಕಟ್ಟು ಜನಾಂಗದ ಸಮುದಾಯಕ್ಕೆ ಒಬ್ಬ ಅಂಬೇಡ್ಕರ್ ದೊರೆಯದಿರುವುದು ಅವರ ಅವರ ಶೋಚನೀಯ ಬದುಕಿಗೆ ಕಾರಣವಾಗಿದೆ.

ಮೂರು : ಭಾರತಾದ್ಯಂತ ಗುಡ್ಡಗಾಡು ಪ್ರದೇಶದಲ್ಲಿ ಹರಿದು ಹಂಚಿಹೋಗಿರುವ ಬುಡಕಟ್ಟು ಜನಾಂಗ ಇಲ್ಲಿಯವರೆಗೆ ಯಾವುದೇ ರಾಜಕೀಯ ಪಕ್ಷಗಳಿಗೆ ಪರಿಶಿಷ್ಟ ಅಥವಾ ಅಲ್ಪಸಂಖ್ಯಾತರ ಹಾಗೆ ಮತಬ್ಯಾಂಕ್‌ಗಳಾಗಿ ಗೋಚರಿಸಲಿಲ್ಲ.

ನಾಲ್ಕು : ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬುಡಕಟ್ಟು ಜನಾಂಗಕ್ಕಾಗಿ ಮೀಸಲಿಟ್ಟ ಉದ್ಯೋಗಗಳು ಈಶಾನ್ಯ ರಾಜ್ಯಗಳ ಬುಡಕಟ್ಟು ಜನಾಂಗದ ವಿದ್ಯಾವಂತರ ಪಾಲಾದವು.

ಐದು : ಇವರುಗಳ ಆಶೋತ್ತರಗಳನ್ನು ಈಡೇರಿಸಲು ಉನ್ನತ ಹುದ್ದೆಯಲ್ಲಿ ಬುಡಕಟ್ಟು ಜನಾಂಗದಿಂದ ಬಂದ ಮೇಲ್ಮಟ್ಟದ ಅಧಿಕಾರಿಯಾಗಲಿ, ಅಥವಾ ಒಬ್ಬ ಜನಪ್ರತಿನಿಧಿಯಾಗಲಿ ಇಲ್ಲದಿರುವುದರಿಂದ ಮೂಲನಿವಾಸಿಗಳ ಸಮಸ್ಯೆಗಳು ಈವರೆಗೆ ಸರ್ಕಾರಗಳ ಕಣ್ಣಿಗೆ ಗೋಚರವಾಗಿಲ್ಲ.

ಆರು : ಅರಣ್ಯದಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನಾಂಗಗಳ ಬದುಕು ಪರಿಸರಕ್ಕೆ ಮಾರಕವಾಗದಂತೆ, ದೇಶಿ ಜ್ಞಾನಪರಂಪರೆಯಿಂದ ಕೂಡಿದ್ದು



ಅವರುಗಳು ಕಾಪಾಡಿಕೊಂಡು ಬಂದಿರುವ ಜ್ಞಾನ ಶಿಸ್ತುಗಳನ್ನು ಸುಲಭವಾಗಿ ಆಧುನಿಕ ಬದುಕಿಗಾಗಲಿ ಅಥವಾ ತಂತ್ರಜ್ಞಾನಕ್ಕಾಗಲಿ ಅಳವಡಿಸಲು ಸಾಧ್ಯವಾಗಿಲ್ಲ.

ಏಳು : ಪಶ್ಚಿಮ ಬಂಗಾಳದ ಸಂತಾಲ್ ಭಾಷೆಯೊಂದನ್ನು ಹೊರತು ಪಡಿಸಿದರೆ ಈ ಸಮುದಾಯಗಳ ಉಳಿದ ಮಾತೃಭಾಷೆಗಳಿಗೆ ಅಧಿಕೃತ ಮಾನ್ಯತೆ ದೊರೆತಿಲ್ಲ. ಈ ಕಾರಣದಿಂದಾಗಿ ಬುಡಕಟ್ಟು ಜನಾಂಗದ ಮಕ್ಕಳು ಮಾತೃ ಭಾಷೆಯ ಶಿಕ್ಷಣದಿಂದ ವಂಚಿತರಾಗಿದ್ದಾರೆ.

ಸಮಾಧಾನದ ಸಂಗತಿಯೆಂದರೆ, ಇತ್ತೀಚೆಗಿನ ದಿನಗಳಲ್ಲಿ ನಕ್ಸಲ್ ಸಮಸ್ಯೆ ತೀವ್ರವಾಗುತ್ತಿದ್ದಂತೆ ಕೇಂದ್ರ ಸರ್ಕಾರ ನಕ್ಸಲ್ ಪೀಡಿತ ಪ್ರದೇಶಗಳನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ನಿರ್ಧರಿಸಿದೆ. 2003 ರಲ್ಲಿ ಪ್ರಥಮ ಬಾರಿಗೆ ನಕ್ಸಲ್ ಪೀಡಿತ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದಿದ್ದ ಕೇಂದ್ರ ಸರ್ಕಾರ, ನಕ್ಸಲರ ಹಾವಳಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ, ಹಿಂದುಳಿದ ಮತ್ತು ನಕ್ಸಲ್ ಹಾವಳಿಗೆ ಸಿಲುಕಿರುವ ಪ್ರದೇಶಗಳ ಅಭಿವೃದ್ಧಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಆರ್ಥಿಕ ನೆರವನ್ನು ಘೋಷಿಸಿತು. ಅಭಿವೃದ್ಧಿಯಲ್ಲಿನ ತಾರತಮ್ಯ ಮತ್ತು ಮೂಲನಿವಾಸಿಗಳ ಕಲ್ಯಾಣದ ಬಗ್ಗೆ ತಾಳಿದ್ದ ನಿರ್ಲಕ್ಷ್ಯ ಧೋರಣೆಗಳಿಂದಾಗಿ ನಕ್ಸಲ್ ಹೋರಾಟಕ್ಕೆ ಹಿಂದುಳಿದ ಬುಡಕಟ್ಟು ಜನಾಂಗಗಳ ಬೆಂಬಲ ದೊರಕುತ್ತಿದೆ ಎಂಬ ವಾಸ್ತವವನ್ನು ಕೇಂದ್ರ ಸರ್ಕಾರ ಗ್ರಹಿಸಿದೆ. ಇದರಿಂದಾಗಿ ನಕ್ಸಲ್ ಪೀಡಿತ ಹತ್ತು ರಾಜ್ಯಗಳಲ್ಲಿ ರಸ್ತೆ ಅಭಿವೃದ್ಧಿ, ಕುಡಿಯುವ ನೀರು, ಆರೋಗ್ಯ, ಶಿಕ್ಷಣ ಮುಂತಾದ ವಿಷಯಗಳಿಗೆ ವಿಶೇಷ ಒತ್ತು ನೀಡಲಾಗಿದೆ. 2007 ರಲ್ಲಿ ಹತ್ತು ರಾಜ್ಯಗಳ 180 ಜಿಲ್ಲೆಗಳನ್ನು ನಕ್ಸಲ್ ಪೀಡಿತ ಜಿಲ್ಲೆಗಳೆಂದು ಗುರುತಿಸಲಾಗಿತ್ತು. 2012 ರ ವೇಳೆಗೆ ಕರ್ನಾಟಕ ರಾಜ್ಯವನ್ನು ನಕ್ಸಲ್ ಪೀಡಿತ ರಾಜ್ಯವೆಂಬ ಪಟ್ಟಿಯಿಂದ ಕೈ ಬಿಡಲಾಗಿದೆ. ಜೊತೆಗೆ 2012ರ ವೇಳೆಗೆ ದೇಶಾದ್ಯಂತ 60 ಜಿಲ್ಲೆಗಳನ್ನು ಮಾತ್ರ ನಕ್ಸಲ್ ಪೀಡಿತ ಜಿಲ್ಲೆಗಳೆಂದು ಗುರುತಿಸಲಾಗಿದೆ. ಈ ಪ್ರದೇಶಗಳಲ್ಲಿ ಅಭಿವೃದ್ಧಿಯ ಜೊತೆ ಜೊತೆಗೆ ನಕ್ಸಲ್ ಸಂಘಟನೆಗಳ ಜೊತೆ ಸಂಧಾನದ ಮಾತುಕತೆಗಳನ್ನು ಮಧ್ಯವರ್ತಿಗಳ ಮೂಲಕ ಮುಂದುವರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಇದರ ಮೊದಲ ಹಂತವಾಗಿ ನಿವೃತ್ತ ಐ.ಎ.ಎಸ್. ಅಧಿಕಾರಿ ಶರ್ಮ ಮಧ್ಯಸ್ತಿಕೆಯಲ್ಲಿ ಜಾರ್ಖಂಡ್ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಕದನ ವಿರಾಮ ಏರ್ಪಟ್ಟಿದೆ.

ಉದ್ಭವಿಸುವ ಸಮಸ್ಯೆಗಳಿಗೆ ಬಂದೂಕು ಮಾತ್ರ ಪರಿಹಾರವಲ್ಲ ಎಂಬುದು ನಮ್ಮನ್ನಾಳುವ ಸರ್ಕಾರಗಳಿಗೆ ಮನದಟ್ಟಾಗಿರುವುದು ನೆಮ್ಮದಿಯ ಸಂಗತಿ. ಜಗತ್ತಿನಲ್ಲಿ ಜನ ಸಮುದಾಯದ ಬೆಂಬಲವಿಲ್ಲದೆ ಯಾವುದೇ ಹೋರಾಟಗಳು ಯಶಸ್ವಿಯಾಗುವ ಸಂಭವ ತೀರಾ ಕಡಿಮೆ.

ನಕ್ಸಲ್ ಚಳವಳಿಯನ್ನು ಕುಗ್ಗಿಸಬೇಕಾದರೆ, ಮೂಲನಿವಾಸಿಗಳು ನಕ್ಸಲ್ ಹೋರಾಟದ ತೆಕ್ಕೆಗೆ ಬೀಳದಂತೆ ತಡೆಯಬೇಕು. ಇದಕ್ಕಿರುವ ಏಕೈಕ ಪರಿಹಾರವೆಂದರೆ, ಭಾರತದ ಮೂಲನಿವಾಸಿಗಳ ಹಲವಾರು ದಶಕಗಳ ಕನಸಾದ "ಜಲ್, ಜಂಗಲ್, ಜಮೀನ್" ಎಂಬ ಬೇಡಿಕೆಗಳನ್ನು ಈಡೇರಿಸುವುದು.

ಅರಣ್ಯದಲ್ಲಿ ಅತಂತ್ರರಾಗಿರುವ ಮೂಲನಿವಾಸಿ ಜನಾಂಗಗಳ ನಿಸರ್ಗಮಯ ಸಹಜ ಬದುಕಿಗೆ ಅಡ್ಡಿಯಾಗದಂತೆ ಸರ್ಕಾರಗಳು ಕಾಳಜಿ ವಹಿಸಬೇಕು. ಅರಣ್ಯದ ಕಿರು ಉತ್ಪನ್ನಗಳ ಮೇಲಿನ ಹಕ್ಕನ್ನು ಅವರಿಗೆ ವರ್ಗಾಹಿಸಬೇಕು. (ಈಗಾಗಲೇ ಸುಪ್ರೀಂಕೋರ್ಟ್ ರಾಜ್ಯ ಸರ್ಕಾರಗಳಿಗೆ ಈ ಕುರಿತು ಸ್ಪಷ್ಟ ನಿರ್ದೇಶನ ನೀಡಿದೆ) ದಲ್ಲಾಳಿಗಳು ಮತ್ತು ಏಜೆಂಟರಿಂದ ಮೂಲನಿವಾಸಿಗಳು ಮೋಸಹೋಗದಂತೆ ಪ್ರತ್ಯೇಕ ನಿಗಮವೊಂದನ್ನು ಸ್ಥಾಪಿಸಿ, ಆ ಮೂಲಕ ಅರಣ್ಯ ಕಿರು ಉತ್ಪನ್ನಗಳಾದ ತೆಂಡು ಎಲೆ, ಜೇನುತುಪ್ಪ, ಗಿಡಮೂಲಿಕೆ ಔಷಧಿಯ ಬೇರು ಮತ್ತು ಕಾಂಡಗಳು, ಬಿದರಿನ ಬೊಂಬು, ಸಂಗ್ರಹಿಸಿದ ಹಣ್ಣು ಹಂಪಲು, ಮಸಾಲೆ ಪದಾರ್ಥಗಳು ಇವುಗಳ ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸಿಕೊಡಬೇಕು. ಆರೋಗ್ಯ ಮತ್ತು ಶಿಕ್ಷಣದಿಂದ ವಂಚಿತವಾಗಿರುವ ಮೂಲನಿವಾಸಿಗಳ ಹಳ್ಳಿಗಳಲ್ಲಿ ಶಾಲೆ, ಆಸ್ಪತ್ರೆ ಇವುಗಳನ್ನು ತೆರೆಯುವುದರ ಮೂಲಕ ಎಲ್ಲಾ ಮಕ್ಕಳಿಗೆ ಈ ಸೌಲಭ್ಯ ದೊರೆಯುವಂತಾಗಬೇಕು. ಮೂಲನಿವಾಸಿ ಹಳ್ಳಿಗಳಲ್ಲಿ ಕುಡಿಯುವ ಶುದ್ಧ ನೀರು ದೊರಕುವಂತಾಗಬೇಕು. ಯುವಕರಿಗೆ ವೃತ್ತಿ ಕೋರ್ಸುಗಳ ತರಬೇತಿ ನೀಡುವುದರ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕು. ಆರಣ್ಯದಲ್ಲಿ ಮೂಲನಿವಾಸಿಗಳು ಬೇಸಾಯ ಮಾಡುತ್ತಿರುವ ಜಮೀನಿನ ಹಕ್ಕನ್ನು ಅವರಿಗೆ ವರ್ಗಾಯಿಸಬೇಕು. ವರ್ಗಾಯಿಸುವ ಸಂದರ್ಭದಲ್ಲಿ ಅಂತಹ ಜಮೀನುಗಳ ಮರು ಮಾರಾಟ ಅಥವಾ ಭೋಗ್ಯಕ್ಕೆ ಅವಕಾಶ





ಇಲ್ಲದಂತೆ ನಿಬಂಧನೆಗಳನ್ನು ಹೇರಬೇಕು. ಅರಣ್ಯ ಪ್ರದೇಶಗಳಲ್ಲಿ ಗಣಿಗಾರಿಕೆ ನಡೆಸಲು ಖಾಸಗಿ ಕಂಪನಿಗಳಿಗೆ ಪರವಾನಗಿ ನೀಡುವ ಮೊದಲು ಈ ಪ್ರದೇಶದಲ್ಲಿ ವಾಸಿಸುತ್ತಿರುವ ಮೂಲನಿವಾಸಿಗಳ ಸುರಕ್ಷತೆಗೆ ಪ್ರಥಮ ಆದ್ಯತೆ ನೀಡಬೇಕು.

ಇಂತಹ ಮಾನವೀಯ ಮುಖವುಳ್ಳ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ಮಾತ್ರ ಸರ್ಕಾರಗಳಿಗೆ ನಕ್ಸಲ್ ಚಟುವಟಿಕೆಯನ್ನು ಹತ್ತಿಕ್ಕಲು ಸಾಧ್ಯ. ನಕ್ಸಲ್ ಹಿಂಸಾಚಾರವನ್ನು ತಡೆಗಟ್ಟುವ ನಿಟ್ಟಿನಲ್ಲಿ ಈ ನೆಲದ ಬುದ್ಧಿಜೀವಿಗಳು ವಿಶೇಷವಾಗಿ ಎಡಪಂಥೀಯ ಪಕ್ಷಗಳ ಚಿಂತಕರ ಹೊಣೆಗಾರಿಕೆ ಪ್ರಮುಖ ಪಾತ್ರ ವಹಿಸಲಿದೆ.

ಈ ಹಿಂದೆ ಎಡಪಂಥೀಯ ಚಿಂತನೆಗಳಿಂದ ಪ್ರೇರಿತರಾಗಿದ್ದರೂ, ಭಾರತದ ಬಡವರು, ಬಡತನ, ಇಲ್ಲಿನ ವ್ಯವಸ್ಥೆಗಳ ವೈರುಧ್ಯ, ಚಳವಳಿ ಮತ್ತು ಕಾರ್ಮಿಕರ ಬವಣೆ ಇವುಗಳ ಬಗ್ಗೆ ಅಪಾರ ಕಾಳಜಿ ಮತ್ತು ಒಳನೋಟಗಳನ್ನು ಹೊಂದಿದ್ದ ನಂಬೂದರಿಪಾಡ್, ಸುರ್ಜಿತ್‌ಸಿಂಗ್, ಸುಂದರಯ್ಯ, ಜ್ಯೋತಿಬಸು, ಸೋಮನಾಥಚಟರ್ಜಿ ಇಂತಹ ನಾಯಕರು ಮತ್ತು ಅವರ ಚಿಂತನೆಯ ಮಾದರಿಗಳು ಬೇಕಾಗಿವೆ.

ರೈತರು, ಕಾರ್ಮಿಕರ ಏಳಿಗೆಯ ಮಂತ್ರ ಜಪಿಸುತ್ತಾ ಬಂಡವಾಳಶಾಹಿಗಳಿಗೆ ಭೂಮಿ ಒದಗಿಸಿಕೊಡಲು ಸಿಂಗೂರ್ ಮತ್ತು ನಂದಿಗ್ರಾಮಗಳಲ್ಲಿ ರೈತರಮೇಲೆ ನಡೆಸಿದ ದೌರ್ಜನ್ಯಗಳು ನಮ್ಮ ಕಣ್ಣೆದುರು ಜೀವಂತವಾಗಿವೆ. ಉಳ್ಳವರ ಈ ಭಾರತದಲ್ಲಿ ನರಳುವವರ ಭಾರತವೂ ಕೂಡ ಇದೆ ಎಂಬುದನ್ನು ಮನಗಾಣಬೇಕಿದೆ.

ಒಂದು ಸಮಸ್ಯೆಯ ಪರಿಹಾರಕ್ಕೆ ಉಭಯ ಬಣಗಳ ನಡುವೆ ಸೌಹಾರ್ದಯುತ ಮಾತುಕತೆಗೆ ಸಿದ್ದಗೊಳ್ಳುವ ಉದಾರ ಮನಸ್ಸುಗಳು ಬೇಕಾಗಿವೆ. ಸಮಸ್ಯೆಗಳನ್ನು ಬಗೆಹರಿಸಲು ಉಭಯಬಣಗಳ ನಡುವೆ ರಾಯಭಾರಿಯಾಗಿ ಕಾರ್ಯನಿರ್ವಹಿಸಲು ಅನೇಕ ನಿವೃತ್ತ ಸರ್ಕಾರಿ ಅಧಿಕಾರಿಗಳು, ಸ್ವಯಂ ಸೇವಾ ಸಂಘಟನೆಗಳ ಮುಖಸ್ಥರು ಮತ್ತು ಸಮಾಜದ ವಿವಿಧ ವಲಯದ ಗಣ್ಯರು ನಮ್ಮ ನಡುವೆ ಇದ್ದಾರೆ. ಇಲ್ಲಿ ತುರ್ತಾಗಿ ಆಗಬೇಕಾಗಿರುವುದು ಎರಡೂ ಕಡೆಯಿಂದ ಶಾಂತಿ ಮತ್ತು ನೆಮ್ಮದಿಗಾಗಿ ತುಡಿಯುವ ಮುಕ್ತ ಮನಸ್ಸುಗಳು ಮಾತ್ರ. ಹಿಂಸಾತ್ಮಕ ನಕ್ಸಲ್ ಹೋರಾಟದ ಜ್ವಲಂತ ಸಮಸ್ಯೆಯನ್ನು ಹೀಗೆ ಬೆಳೆಯಲು ಬಿಟ್ಟರೆ ಈಗಾಗಲೆ ಅರ್ಧ ಶತಮಾನ ಕಳೆದಿರುವ ರಕ್ತ ಇತಿಹಾಸ ಕಥನ ಎಂದೆಂದೂ ಮುಗಿಯದ ಯುದ್ಧವಾಗಿ ಮುಂದುವರಿಯುವ ಸಾಧ್ಯತೆಗಳಿವೆ.

ಇಂತಹ ನೋವಿನ ಗಳಿಗೆಯಲ್ಲಿ ನಾವುಗಳು ಮೌನ ಸಾಕ್ಷಿಯಾಗಬೇಕಾಗುತ್ತದೆ. ಮಾನವೀಯತೆಗಾಗಿ ಹಂಬಲಿಸುವ ಮನಸ್ಸುಗಳ ಪಾಲಿಗೆ ಹಿಂಸಾತ್ಮಕವಾದ ಮತ್ತು ನರಕ ಸದೃಶ್ಯವಾದ ಅಂತಹ ಜಗತ್ತು ಎಂದೂ ಬಾರದಿರಲಿ. ಈ ನೆಲದ ಮೇಲೆ ಪ್ರತಿ ಜೀವಿಗೂ ನೆಮ್ಮದಿಯಿಂದ ಬದುಕುವ ಹಕ್ಕಿದೆ ಎಂಬುದನ್ನು ಸಾಬೀತು ಪಡಿಸುವ ದೃಷ್ಟಿಯಲ್ಲಾದರೂ ಈ ಯುದ್ಧ ಕೊನೆಗಾಣಬೇಕಾಗಿದೆ. ❑

# ತ್ಯಾಜ್ಯದಿಂದ ಬದುಕು

ಎನ್.ವಿ. ವಾಸುದೇವ ಶರ್ಮಾ



**ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ನೀಡಿರುವ 'ಸ್ವಚ್ಛ ಭಾರತ ಅಭಿಯಾನ' ಇದ್ದಕ್ಕಿದ್ದ ಹಾಗೆ ಕಸ ಸುರಿಯುವುದು ಮತ್ತು ಕಸ ವಿಲೇವಾರಿ ಕುರಿತು ಇಡೀ ದೇಶದಲ್ಲಿ ಸಂಚಲನ ಮೂಡಿಸಿದೆ. ಸರ್ಕಾರದ ಅಧಿಕಾರಿಗಳು, ಜನಪ್ರತಿನಿಧಿಗಳು, ಹೆಸರಾಂತ ಆಟಗಾರರು, ಸಿನೆಮಾ ಕಲಾವಿದರು, ಶಾಲಾಕಾಲೇಜುಗಳ ವಿದ್ಯಾರ್ಥಿಗಳು ಹೀಗೆ ಕೋಟ್ಯಾಂತರ ಜನ 'ಸ್ವಚ್ಛ ಭಾರತ ಅಭಿಯಾನ'ದಲ್ಲಿ ಕೈಜೋಡಿಸುತ್ತಿದ್ದಾರೆ. ಜನ ಈ ಅಭಿಯಾನದಲ್ಲಿ ಕೈಜೋಡಿಸುವುದು ಸಾಂಕೇತಿಕವಾಗಿ ಉಳಿಯಬಾರದೆಂಬುದು ಆಶಯ. ಈ ಅಭಿಯಾನದ ಪ್ರಮುಖ ಉದ್ದೇಶಗಳಲ್ಲಿ ಒಂದು, 'ಘನತ್ಯಾಜ್ಯವನ್ನು ಪ್ರತಿಶತ ಸಂಗ್ರಹಿಸುವುದು, ವೈಜ್ಞಾನಿಕವಾಗಿ ವಿಂಗಡಿಸುವುದು ಅಥವಾ ಮರುಬಳಕೆ ಮಾಡುವುದು ಅಥವಾ ರೂಪಾಂತರಿಸಿ ಬಳಸುವುದು ಅಥವಾ ಪರಿಸರಕ್ಕೆ ಹಾನಿಯಾಗದಂತೆ ವಿಲೇವಾರಿ ಮಾಡುವುದು '.**

> 'ಕಸ ವಿಲೇವಾರಿ' ಬಿಡಿಸಲಾರದ ಕಗ್ಗಂಟೋ, ಪರಿಹಾರವಿಲ್ಲದ ಸಮಸ್ಯೆಯೋ ಎಂಬಂತೆ ಆಗಿದೆ. ಇಂತಹದೊಂದು ಪರಿಸ್ಥಿತಿಗೆ ನಾವೆಷ್ಟು ಕಾರಣ ಎಂದು ಎಲ್ಲ ಜನಸಾಮಾನ್ಯರು ಯೋಚಿಸದಿರುವುದು ಮತ್ತು ಕಸ ಸಮಸ್ಯೆಯನ್ನು ನಿವಾರಿಸಲು ಮುಂದಾಗದಿರುವುದು ಬಹುದೊಡ್ಡ ವಿಪರ್ಯಾಸ.

'ಕಸದಿಂದ ರಸ' ನಾವು ಬಹುತೇಕರು ಬಾಲ್ಯದಿಂದಲೂ ಕಲಿತಿರುವ, ಆಗಾಗ್ಗೆ ಬಳಸುವ ನಾಣ್ಣುಡಿ. ಆದರೆ, ನಾವೆಷ್ಟು ಜನ ನಿಜವಾಗಿಯೂ ಈ ನಾಣ್ಣುಡಿಯನ್ನು ನಮ್ಮ ಜೀವನಶೈಲಿಯಲ್ಲಿ ಅಳವಡಿಸಿಕೊಂಡಿದ್ದೇವೆಯೆ ಎಂದು ನೋಡಿದರೆ ಉತ್ತರಿಸಲು ಸ್ವಲ್ಪ ಹಿಂದೆಮುಂದೆ ನೋಡಬೇಕಾಗುತ್ತದೆ. ಭಾರತದ ಪ್ರತಿ ಹಳ್ಳಿ, ಪಟ್ಟಣಗಳು, ಪ್ರವಾಸಿ ಸ್ಥಳ, ಅಷ್ಟೇಕೆ ಬೆಟ್ಟ ಗುಡ್ಡಗಳು, ನದಿ ಕಣಿವೆಗಳು, ಪರ್ವತಗಳು, ಎಲ್ಲೆಂದರಲ್ಲಿ ಮನೆಗಳಿಂದ, ಅಂಗಡಿ, ಮಾರುಕಟ್ಟೆ, ಕಾರ್ಖಾನೆಗಳು ಮೊದಲಾದವುಗಳಿಂದ ಹೊರಬಿದ್ದ 'ಕಸ, ವ್ಯರ್ಥ ಪದಾರ್ಥಗಳು' ರಾಶಿರಾಶಿ ಬೀಳುತ್ತಲೇ ಇದೆ. ಕೆಲವು ವರ್ಷಗಳ ಹಿಂದೆ ಭಾರತದ ಕೆಲವು ಪ್ರತಿಷ್ಠಿತ ನಗರಗಳು 'ಕಸಭರಿತ ನಗರ'ಗಳೆಂಬ ಕುಖ್ಯಾತಿಗೂ ಈಡಾಗಿದ್ದು, ಕೆಲವು ನಗರಗಳಲ್ಲಿ ರೋಗಗಳು ಸಾಂಕ್ರಾಮಿಕವಾಗಿದ್ದು ದೇಶ ವಿದೇಶಗಳಲ್ಲಿ ಆತಂಕಕ್ಕೆ ಕಾರಣವಾಗಿತ್ತು. ಇವಿಷ್ಟೇ ಅಲ್ಲ, ಕಸ, ಕೊಳಚೆಯೊಡನೆ ಆರ್ಥಿಕ ಶೋಷಣೆ, ಆಡಳಿತದ ವೈಫಲ್ಯ, ರಾಜಕೀಯ, ಭ್ರಷ್ಟಾಚಾರ, ಇತ್ಯಾದಿ ಬೆರೆತುಹೋಗಿದೆ. 'ಕಸ ವಿಲೇವಾರಿ' ಬಿಡಿಸಲಾರದ ಕಗ್ಗಂಟೋ, ಪರಿಹಾರವಿಲ್ಲದ ಸಮಸ್ಯೆಯೋ ಎಂಬಂತೆ ಆಗಿದೆ. ಇಂತಹದೊಂದು ಪರಿಸ್ಥಿತಿಗೆ ನಾವೆಷ್ಟು ಕಾರಣ ಎಂದು ಎಲ್ಲ ಜನಸಾಮಾನ್ಯರು ಯೋಚಿಸದಿರುವುದು ಮತ್ತು ಕಸ ಸಮಸ್ಯೆಯನ್ನು ನಿವಾರಿಸಲು ಮುಂದಾಗದಿರುವುದು ಬಹುದೊಡ್ಡ ವಿಪರ್ಯಾಸ. ನಾವು ಎಲ್ಲಿ ಬೇಕಾದರೂ ಎಂತಹ ಕಸವನ್ನು ಬೇಕಾದರೂ ಎಸೆಯಬಹುದು, ಅದನ್ನು ನಮ್ಮ ಕಣ್ಣ ಮುಂದಿನಿಂದ ತೆಗೆದುಕೊಂಡು ಹೋಗಿ ಬೇರೆಲ್ಲಾದರೂ ಹಾಕಬೇಕಾಗಿರುವುದು 'ಸರ್ಕಾರ'ದ ಕೆಲಸ ಎಂಬ ಧೋರಣೆಯೇ ಇದಕ್ಕೆ ಕಾರಣ.

ಒಂದೆರೆಡು ದಶಕಗಳ ಹಿಂದೆ ಹೀಗೆ ಎಲ್ಲೆಂದರಲ್ಲಿ ಬೀಳುತ್ತಿದ್ದ ಕಸ [ಕಾಗದ, ಪ್ಲಾಸ್ಟಿಕ್, ಬಟ್ಟೆ, ಗಾಜು, ಕಬ್ಬಿಣ ಇತ್ಯಾದಿ]ವನ್ನು ಒಂದಷ್ಟು [ಮಹಿಳೆಯರು, ಪುರುಷರು, ಮಕ್ಕಳು, ಮುದುಕರು] ಜನ ಆರಿಸಿ ತಮಗೆ ಬೇಕಾಗಿದ್ದ ವಸ್ತುಗಳನ್ನು ಮಾತ್ರ ತೆಗೆದುಕೊಂಡು ಉಳಿದುದನ್ನು ಮತ್ತೆ ಚೆಲ್ಲಾಡಿ ಹೋಗುತ್ತಿದ್ದುದು ಸಾಮಾನ್ಯ ದೃಶ್ಯವಾಗಿತ್ತು. ಸಾವಯವ ವಸ್ತುಗಳು ಅಲ್ಲಲ್ಲೇ ಕೊಳೆಯುವುದು, ನಾಯಿ, ಹಂದಿ, ಹಸು ಇತ್ಯಾದಿ ಅವನ್ನು ತಿನ್ನುವುದು,

ವೃತ್ತಿಶೀಲ ಸಮಾಜಕಾರ್ಯಕರ್ತ, ಬೆಂಗಳೂರು.



ವಾಸನೆ, ಗಲೀಜು ಸುತ್ತಮುತ್ತಲಿನವರಿಗೆ ತೊಂದರೆಯಾಗುವುದು, ಜನ ಸರ್ಕಾರವನ್ನು ಬೈಯುವುದು ಸಾಮಾನ್ಯವೇ ಆಗಿತ್ತು. ಬಹಳ ಹಿಂದಿನಿಂದಲೂ ಮುನಿಸಿಪಾಲಿಟಿ, ನಗರಪಾಲಿಕೆಯವರಿಂದ ನೇಮಿಸಲ್ಪಟ್ಟ ಕೆಲಸಗಾರರಿದ್ದರೂ, ಗುತ್ತಿಗೆದಾರರಿದ್ದರೂ ಕಸ ನಿರ್ವಹಣೆ ಕೆಲವೇ ವರ್ಷಗಳಲ್ಲಿ ದೊಡ್ಡದೊಂದು ಸಾಮಾಜಿಕ ಸಮಸ್ಯೆಯ ರೂಪ ತಳೆದದ್ದು ವ್ಯವಸ್ಥೆಯ ವಿಪರ್ಯಾಸ. ನಗರಗಳಲ್ಲಿ ಬೀಳುವ ಕಸವನ್ನು ರಾಶಿರಾಶಿಯಾಗಿ ಎತ್ತುವ ಗುತ್ತಿಗೆದಾರರು ನಗರಗಳಾಚೆ ಚೆಲ್ಲುವುದು, ಈ ಮೊದಲು ನೀರಿನ ಸಂಗ್ರಹಾಗಾರಗಳಾಗಿದ್ದ ಹಳ್ಳಗಳಿಗೆ ತುಂಬುವುದು, ಇಲ್ಲವೇ ಎಲ್ಲಾದರೂ ರಾಶಿ ಹಾಕುವುದು ಪದ್ಧತಿಯೇ ಆಗಿಬಿಟ್ಟಿದೆ. ಒಂದಾನೊಂದು ಕಾಲದಲ್ಲಿ 'ನಗರದ ಗೊಬ್ಬರ' ಎಂದು ತಾವೇ ಮುಂದಾಗಿ ತೆಗೆದುಕೊಂಡು ಹೋಗಿ ತಮ್ಮ ಹೊಲಗಳಿಗೆ ಹಾಕಿಕೊಳ್ಳುತ್ತಿದ್ದ ರೈತಾಪಿ ಜನ ಈಗ ನಗರದ ಕಸ/ತ್ಯಾಜ್ಯ ಕಂಡರೆ ಸಿಡಿಮಿಡಿಗೊಳ್ಳುತ್ತಾರೆ. ನಗರಗಳ ಸುತ್ತಮುತ್ತಲಿನ ಹಳ್ಳಿಗಳ ಜನರು ಕಸದ ರಾಶಿಗೆ ಕೈಬೀಸಿ ಕರೆಯುವುದಿಲ್ಲ ಅಥವಾ ಸ್ವಾಗತಿಸುವುದಿಲ್ಲ. ಎಲ್ಲ ಗ್ರಾಮಪಂಚಾಯಿತಿಗಳ ಗ್ರಾಮಸಭೆಗಳಲ್ಲಿ ಠರಾವು ಹೊರಡಿಸಿ ನಗರದ ಕೊಳೆ ಕಸ ತಮ್ಮ ನೀರಿನ ಸಂಗ್ರಹ, ಭೂಮಿ, ಬೆಳೆಯನ್ನು ಕೆಡಿಸುತ್ತಿರುವ ಬಗ್ಗೆ ದನಿ ಎತ್ತಿದ್ದಾರೆ. ಕಸದ ಲಾರಿಗಳನ್ನು ಬಹಿಷ್ಕರಿಸುತ್ತಿದ್ದಾರೆ.

**ಕಸ ಸಂಗ್ರಹಿಸುವವರ ಬದುಕು, ಬವಣೆ**

ನಗರಗಳ ಕೊಳೆ ಕಸ ತೆಗೆಯುವ ಕೆಲಸ ಸಾಮಾನ್ಯವಾಗಿ ಆಯಾ ನಗರ ಪಾಲಿಕೆಯ ಮುಖ್ಯ ಜವಾಬ್ದಾರಿಗಳಲ್ಲಿ ಒಂದು ಎಂದೇ ಭಾವಿಸಲಾಗಿದೆ. ಕಸ ಗುಡಿಸಲು ಮತ್ತು ಅದನ್ನು ತೆಗೆದು ಸಾಗಿಸಲು ದೊಡ್ಡ ಕಾರ್ಯಪಡೆಯೇ 'ಪೌರಕಾರ್ಮಿಕ'ರೆಂಬ ಗುರುತಿನೊಂದಿಗೆ ಇರುತ್ತಾರೆ. ಈಚೀಚೆಗೆ ನಗರ ಪಾಲಿಕೆಯ/ಸರ್ಕಾರದ ನೇರ ನೇಮಕಾತಿಯ ಹೊರತಾಗಿ, ಕಸ ತೆಗೆದು ಸಾಗಿಸುವ ಗುತ್ತಿಗೆದಾರರೊಂದಿಗೆ ಸಾವಿರಾರು ಜನ ದಿನಗೂಲಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಇವರಲ್ಲದೆ, ವಿವಿಧ ನಗರಗಳಲ್ಲಿ ಇನ್ನೂ ಅನೇಕ ಸಾವಿರ ಜನ ಬೀದಿಬೀದಿಗಳಲ್ಲಿರುವ ಕಸದ ರಾಶಿಯಲ್ಲಿ ಕೈಯಾಡಿಸಿ, ತಮ್ಮ ಚೀಲ ತುಂಬಿಕೊಂಡು ಸಾಗಿಸುತ್ತಿರುತ್ತಾರೆ. ಇಂತಹವರಿಂದ ಘನ ತ್ಯಾಜ್ಯ ವಸ್ತುಗಳನ್ನು ಕೊಳ್ಳುವ ನೂರಾರು ಅಂಗಡಿಗಳೂ ನಗರಗಳಲ್ಲಿ ಸಾಮಾನ್ಯ. ಆದರೆ, ಇತ್ತೀಚಿನ ದಿನಗಳಲ್ಲಿ ನಗರಗಳಲ್ಲಿ ಕಸ ಆಯುವ ಜನ ಅಷ್ಟಾಗಿ ಕಾಣುವುದಿಲ್ಲ. ಏನಾದರು ಇವರು ಎಂದು ಆಶ್ಚರ್ಯ ಪಡುವುದರಲ್ಲಿ ತಪ್ಪೇನಿಲ್ಲ. ಕಸದ ರಾಶಿಯೊಳಗೆ ಓಡಾಡಿ ಮರುಬಳಕೆ ಮಾಡಬಹುದಾದ ವಸ್ತುಗಳನ್ನು ಆಯ್ದು ಮಾರಾಟ ಮಾಡಿ ಹೊಟ್ಟೆ ಹೊರೆಯುತ್ತಿದ್ದ ಚಿಂದಿ ಉಟ್ಟ ಕೊಳೆ ಮೈಯಿನ ಜನ ಸದಾಕಾಲಕ್ಕೂ ಸುತ್ತಮುತ್ತಲಿನ ನಾಗರೀಕರ(!), ಸರ್ಕಾರದ ಹೀಗಳಿಕೆಗೆ ಗುರಿಯಾಗುತ್ತಿದ್ದರು. ಈ ಕೆಲಸ ಮಾಡುವವರನ್ನು ಏನೋ ಅಪರಾಧ ಮಾಡುತ್ತಿರುವವರೆಂದೇ ಅನುಮಾನದಿಂದ ಎಲ್ಲರೂ ನೋಡುತ್ತಿದ್ದರು. ಇಷ್ಟೇ ಅಲ್ಲ, ಇವರಿಂದ ವಸ್ತುಗಳನ್ನು ಕೊಂಡು ಮಾರುವ ದಲ್ಲಾಳಿಗಳೂ ಕೂಡಾ ಮಾಹಿತಿ ಇಲ್ಲದ, ಸಂಘಟಿತರಾಗಿಲ್ಲದ ಈ ಬಡ ಕೆಲಸಗಾರರಿಗೆ ಮೋಸ ಮಾಡುವುದು, ದಬ್ಬಾಳಿಕೆ ಮಾಡುವುದು ಸಾಮಾನ್ಯವಾಗಿತ್ತು. ಕಳೆದ ದಶಕದಲ್ಲಿ ಕೆಲವು ನಗರಗಳಲ್ಲಿ ಕಂಪನಿಗಳು,

**ಭಾರತವನ್ನು ಕೆಲವರು ಬಳಸಿದ ವಸ್ತುಗಳನ್ನು ಮರುಬಳಕೆ ಮಾಡುವ ಜನರ ದೇಶ ಎಂದೇ ಗುರುತಿಸುತ್ತಿದ್ದರು. ಎಷ್ಟೋ ಮನೆಗಳಲ್ಲಿ ಬಹಳ ಹಿಂದಿನಿಂದಲೂ ಪ್ರತಿ ವಸ್ತುವನ್ನು ಅದು ಪೂರ್ತಿ ಜೀರ್ಣಾವಸ್ಥೆಗೆ ತಲುಪುವವರೆಗೆ ವಿವಿಧ ರೀತಿಯಲ್ಲಿ ಬಳಸಿ ನಂತರವೇ ಅದನ್ನು ಕಸವೆಂದು ಪರಿಗಣಿಸಿ ಹೊರಹಾಕುವ ಪದ್ಧತಿ ಇದೆ. ಪ್ರಾಯಶಃ ಅದೊಂದು ರೀತಿ ಬಹಳ ದೊಡ್ಡ ಅನೌಪಚಾರಿಕ ಆರ್ಥಿಕ ಚಿಂತನೆಯೆಂದೇ ಹೇಳಬಹುದು. ಸ್ವಚ್ಛ ಭಾರತ ಅಭಿಯಾನದ ಬಹುದೊಡ್ಡ ಉದ್ದೇಶದಲ್ಲಿ ಒಂದಾಗಿರುವ ಘನತ್ಯಾಜ್ಯಕ್ಕೆ ಸಂಬಂಧ ಪಟ್ಟಂತೆ, ವಸ್ತುಗಳ ಮರುಬಳಕೆ ಮತ್ತು ಸೂಕ್ತವಾದ ರೀತಿಯಲ್ಲಿ ವಿಲೇವಾರಿ ಮಾಡುವ ದಿಶೆಯಲ್ಲಿ ಪ್ರತಿ ಮನೆಮನೆಯಲ್ಲಿ ಈಗ ಮರುಚಿಂತನೆ ಆರಂಭವಾಗಬೇಕಿದೆ.**

**ಕಾಗದ್ ಕಾಚ್ ಪತ್ರಾ ಕಷ್ಟಕರಿ ಪಂಚಾಯತ್**

**ಪುಣೆಯಲ್ಲಿ 'ಕಾಗದ್ ಕಾಚ್ ಪತ್ರಾ ಕಷ್ಟಕರಿ ಪಂಚಾಯತ್' ಎಂಬ ಸಂಘಟನೆ 1993ರಲ್ಲಿ ಜನ್ಮ ತಾಳಿತು. ಆರಂಭದ ದಿನಗಳಲ್ಲಿ ಸಂಸ್ಥೆಯೊಂದಿಗೆ ಗುರುತಿಸಿಕೊಂಡ ಕಸ ಸಂಗ್ರಹಿಸುವ ಜನರ ಸಂಖ್ಯೆ ಕಡಿಮೆಯಿದ್ದರೂ, ಈಗ ಸಂಘದೊಂದಿಗೆ ಸೇರುವುದರಿಂದ ತಮಗೆ ಸಿಗುವ ಲಾಭ, ಕೆಲಸದ ಗೌರವ, ಮಾಹಿತಿ ಮತ್ತು ಆರೋಗ್ಯವೇ ಮೊದಲಾದ ಸೌಲಭ್ಯಗಳ ಹಿನ್ನೆಲೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಕಸ ಸಂಗ್ರಹಕಾರರು ಸಂಘದಲ್ಲಿ ಸದಸ್ಯತ್ವ ಪಡೆಯುತ್ತಿದ್ದಾರೆ. ಸಂಘದ ಸದಸ್ಯತ್ವದ ಬಲ ಬೆಳೆದಂತೆ 2007ರಲ್ಲಿ 'ಸ್ವಚ್ಛ'-ಘನ ತ್ಯಾಜ್ಯ ನಿರ್ವಹಣೆ** [Solid Waste Collection Handling-SWaCH] **ಎಂಬ ಸಹಕಾರ ಸಂಘವನ್ನೇ ಸ್ಥಾಪಿಸಿದ್ದಾರೆ. ನಗರ ಪಾಲಿಕೆಯೊಂದಿಗೆ ಕರಾರು ಮಾಡಿಕೊಂಡು ತನ್ನ ಸದಸ್ಯರನ್ನು ಕಸ ಎತ್ತುವವರು ಎನ್ನುವ ಪದದಿಂದ ಮುಕ್ತಿಗೊಳಿಸಿ 'ತ್ಯಾಜ್ಯ ಸಂಗ್ರಹಿಸಿ ನಿರ್ವಹಿಸುವವರು ಅಥವಾ ತ್ಯಾಜ್ಯ ಮರುಬಳಕೆಗೆ ಸಿದ್ಧಪಡಿಸುವವರು' ಎಂಬ ಸ್ಥಾನಮಾನವನ್ನು ಸಂಘ ನೀಡಿದೆ.**

**ಸ್ಥಳೀಯ ನಗರ ಪಾಲಿಕೆಯಿಂದ ಮನ್ನಣೆ ಪಡೆದಿರುವ ಸಂಘದ ಗುರುತು ಚೀಟಿ ಹೊಂದಿರುವ ಸದಸ್ಯರಿಗೆ ಮನೆಮನೆಯಿಂದ ವಿಂಗಡಿಸಲ್ಪಟ್ಟ ಕಸ ಸಂಗ್ರಹಿಸುವುದು, ಅದನ್ನು ಸಂಸ್ಕರಿಸುವುದು, ಹಸಿ ತ್ಯಾಜ್ಯದಿಂದ ಗೊಬ್ಬರ, ಅನಿಲ ತಯಾರಿಸುವುದು, ಒಣ ತ್ಯಾಜ್ಯವನ್ನು ಮರುಬಳಕೆ ಮಾಡುವವರಿಗೆ ಮಾರಲು ಸಿದ್ಧಪಡಿಸುವುದೇ ಮೊದಲಾದವುಗಳಲ್ಲಿ ತೊಡಗಲು, ಈ ಎಲ್ಲದರಿಂದ ಸಂಪಾದಿಸುವ ಹಣವನ್ನು ನಿರ್ವಹಿಸುವುದರಲ್ಲೂ ಸಂಘ ತರಬೇತಿ ನೀಡಿದೆ. ಇವಿಷ್ಟೇ ಆಗಿದ್ದರೆ ಸಂಘ ದೊಡ್ಡ ವಿಷಯವಾಗುತ್ತಿರಲಿಲ್ಲ. ಈ ಕೆಲಸದಲ್ಲಿ ತೊಡಗಿರುವ ಬಹುತೇಕ ಮಹಿಳೆಯರಿಗೆ ಸಂಘದ ಸದಸ್ಯತ್ವದಿಂದ ವೃತ್ತಿಗೌರವ, ಕೀಟಲೆ-ದೌರ್ಜನ್ಯದಿಂದ ಮುಕ್ತಿ, ಸಾಮಾಜಿಕ ಭದ್ರತೆ, ವಾರದ ರಜೆ, ಆರೋಗ್ಯ ವಿಮೆ, ಮಕ್ಕಳ ಶಿಕ್ಷಣಕ್ಕೆ ನೆರವು, ದುರಂತಗಳಾದಲ್ಲಿ ಪರಿಹಾರ, ಇಷ್ಟೇ ಅಲ್ಲ, ವಾರದ ಆದಾಯ ಪಡೆಯುವುದಲ್ಲದೆ, ಸಹಕಾರ ಸಂಘದ ಒಟ್ಟೂ ಲಾಭಾಂಶದಲ್ಲಿ ಪಾಲು ಪಡೆಯುವುದೂ ಅವರ ಹಕ್ಕಾಗಿದೆ.**



ಗುತ್ತಿಗೆದಾರರು ಕಸ ಸಂಗ್ರಹದ ಉದ್ದಿಮೆಯಲ್ಲಿ ತೊಡಗಿಕೊಂಡಾಗ ಚೂರುಪಾರು ಸಂಗ್ರಹಿಸಿ ಮಾರಾಟ ಮಾಡಿ ಬದುಕುವ, ದೇಶದುದ್ದಕ್ಕೂ ಹರಡಿಕೊಂಡಿರುವ ಲಕ್ಷಾಂತರ ಬಡವರಿಗೆ ಜೀವನ ನಿರ್ವಹಿಸುವುದೂ ಕಷ್ಟವಾಯಿತು. ಬೇರೆ ಬೇರೆ ಸಮಯದಲ್ಲಿ ಬಂದು, ತಮ್ಮ ತಮ್ಮ ಆಯ್ಕೆಗೆ ಅನುಗುಣವಾಗಿ ವಿವಿಧ ಪ್ರದೇಶಗಳಲ್ಲಿ, ನಿರ್ದಿಷ್ಟವಾದ ಕಸ/ತ್ಯಾಜ್ಯ ಸಂಗ್ರಹಿಸುವ ಗಂಡಸರು, ಹೆಂಗಸರು, ಮಕ್ಕಳು, ವೃದ್ಧರು ಯಾವುದೇ ಸ್ವರಕ್ಷಣೆಯ ಕ್ರಮ ಕೈಗೊಳ್ಳದಿರುವುದರಿಂದ ಬಹಳ ಸುಲಭವಾಗಿ ಗಾಯಗೊಳ್ಳುತ್ತಿದ್ದರು. ಸೋಂಕು ರೋಗಗಳಿಗೆ ಈಡಾಗುತ್ತಿದ್ದರು. ಕೆಲವರು ನಶೆಯೇರಿಸುವ ಮಾದಕ ವಸ್ತುಗಳಿಗೆ ಸಿಲುಕಿ ಚಿಕಿತ್ಸೆಯ ಸೌಲಭ್ಯವಿಲ್ಲದೆ ಬಲಿಯಾಗುತ್ತಿದ್ದರು. ಕಸ ಸಂಗ್ರಹದಲ್ಲಿನ ಜಾಗದ ಹಕ್ಕಿಗಾಗಿ ಒಳಜಗಳಗಳು ಅಲ್ಲದೆ ಎಷ್ಟೋ ಬಾರಿ ಪೊಲೀಸರಿಂದ ವೃಥಾ ವಿಚಾರಣೆಗೆ ಒಳಪಡುವುದು, ಇವೇ ಮೊದಲಾದವುಗಳನ್ನು ಅನುಭವಿಸುತ್ತಿದ್ದ ಕೆಲಸಗಾರರಿಗೆ ಸಂಘಟಿತರಾದರೆ ಸಿಗುವ ಶಕ್ತಿ, ಮಾಹಿತಿ, ನೆರವಿನ ಲಾಭದ ಅರಿವು ಬರಲು ಸಾಕಷ್ಟು ಸಮಯವೇ ಹಿಡಿದಿದೆ. ತಾವು ಮಾಡುತ್ತಿರುವುದೂ ಒಂದು ಅನೌಪಚಾರಿಕ 'ಕೆಲಸ', ತಮ್ಮ ಕೆಲಸದಿಂದಾಗಿ ಇಡೀ ದೇಶಕ್ಕೆ ಸಾಕಷ್ಟು 'ಆರ್ಥಿಕ ಲಾಭ ಇದೆ' ಎಂದು ತೋರಿಸಿ, ಈ ಕೆಲಸ ಮಾಡುವವರನ್ನು 'ವೃತ್ತಿಪರರು' ಎಂದು ಗುರುತಿಸಿ, ಈ ವೃತ್ತಿಯನ್ನು ಗೌರವಯುತವಾಗಿ ನಿರ್ವಹಿಸಿಕೊಡು ಹೋಗಲು ಸೂಕ್ತವಾದ ಅವಕಾಶ ನೀಡಬೇಕಿರುವುದು ಸರ್ಕಾರ ಮತ್ತು ಸಮಾಜದ ಕರ್ತವ್ಯ ಎನ್ನುವ ಚಿಂತನೆ ಆರಂಭವಾದದ್ದು ಸ್ವಲ್ಪ ತಡವಾಗಿಯೇ ಎನ್ನಬಹುದು. ಇದನ್ನೇ ಒತ್ತಾಯಪೂರ್ವಕ ಆಗ್ರಹವಾಗಿಸಲು  ಹಲವರು ನಗರಗಳಲ್ಲಿ ಈ ಕೆಲಸಗಾರರೇ ಸೇರಿ ಮಾಡಿದ ಅಥವಾ ಸ್ವಯಂಸೇವಾ ಸಂಘಟನೆಗಳ ನೆರವಿನೊಂದಿಗೆ ಆರಂಭಿಸಿದ ಸಂಘಟನೆಗಳ ಉದಾಹರಣೆಗಳು ರಾಷ್ಟ್ರದುದ್ದಕ್ಕೂ ಕಾಣಬರುತ್ತದೆ. ತ್ಯಾಜ್ಯ ಸಂಗ್ರಹಿಸುವವರು ಮತ್ತು ಅಂತಹ ತ್ಯಾಜ್ಯಕ್ಕೆ ಸೂಕ್ತ ಬೆಲೆ ಕೊಟ್ಟು ಕೊಂಡು, ಸಂಗ್ರಹಿಸಿಟ್ಟು ಮುಂದೆ ಅದನ್ನು ಮಾರಾಟ ಮಾಡುವವರು ಎಲ್ಲರನ್ನೂ ಒಗ್ಗೂಡಿಸಿ ವೃತ್ತಿಗೌರವದೊಡನೆ ಕೆಲಸ ಮಾಡಿರುವ ಕೆಲವು ಸಂಘಟನೆಗಳು ತಮ್ಮ ಸದಸ್ಯರಿಗೆ ನೀಡಿರುವ ಸಶಕ್ತತೆಯ ಸ್ಥೂಲ ಪರಿಚಯ ಈ ಲೇಖನ.

**'ಹಸಿರುದಳ'ದ ಸೃಷ್ಟಿಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಮೈತ್ರಿ ಸರ್ವ ಸೇವಾ ಸಮಿತಿ; ಗ್ರೇಸ್ ಮತ್ತು ನವಚೇತನ ಬೆಂಗಳೂರು ನಗರದಲ್ಲಿ ಹಲವು ವರ್ಷಗಳಿಂದ ಬಡಸಮುದಾಯಗಳೊಡನೆ ಕೆಲಸ ಮಾಡುತ್ತಿರುವ ಸಂಸ್ಥೆಗಳು. ಸುಮಾರು ಮೂವತ್ತು ವರ್ಷಗಳಿಂದ ನಗರದ ಬೀದಿಬೀದಿಗಳಲ್ಲಿ ಕಸ ಆಯುತ್ತಿದ್ದ ಮಕ್ಕಳು, ಮಹಿಳೆಯರು, ಗಂಡಸರು ಮತ್ತು ವೃದ್ಧರನ್ನು ಸಂಘಟಿಸುತ್ತಿದ್ದರು. ಮಕ್ಕಳಿಗೆ ಅವರ ಹಕ್ಕುಗಳನ್ನು ಕಂಡುಕೊಳ್ಳಲು, ಬಾಲ್ಯ ಅನುಭವಿಸಲು, ಶಿಕ್ಷಣ, ಆರೋಗ್ಯ ಪಡೆಯಲು ಸಹಾಯ ಮಾಡುತ್ತಿದ್ದರೆ, ವಯಸ್ಕರಿಗೆ ಅವರವರ ಉದ್ಯೋಗದಲ್ಲೇ ಮುಂದುವರೆಯಲು ಮತ್ತು ಅದಕ್ಕೆ ಸರಿಯಾದ ಬೆಲೆ ಸಿಗಲು ಈ ಸಂಘಟನೆಗಳು ಬೆಂಬಲವಾಗಿದ್ದವು. 'ಹಸಿರುದಳ' ಈ ಮೂರೂ ಸಂಘಟನೆಗಳೊಂದಿಗೆ ಜೈನ್ ವಿಶ್ವವಿದ್ಯಾಲಯದ 'ರೇಡಿಯೋ ಆಕ್ಟಿವ್' ಸಮುದಾಯ ಬಾನುಲಿ ಕೇಂದ್ರವು ಕೈಜೋಡಿಸಿ ಆರಂಭಿಸಿದ ಒಕ್ಕೂಟ.**

**ಹಸಿರುದಳದ ಸದಸ್ಯರು ಪ್ರತಿ ತಿಂಗಳು 29ರಂದು 'ರೇಡಿಯೋ ಆಕ್ಟಿವ್' ಇರುವ ಜೈನ್ ವಿಶ್ವವಿದ್ಯಾಲಯದಲ್ಲಿರುವ ಹಸಿರು ದಳದ ಕಛೇರಿಯಲ್ಲಿ ಸಭೆ ಸೇರಿ ವಿಚಾರವಿಮರ್ಶೆ, ಹೊಸ ಮಾಹಿತಿ ಪಡೆಯುವುದು, ಸಮಸ್ಯೆಗಳ ಪರಿಹಾರ ಕಂಡುಕೊಳ್ಳುವುದೇ ಮೊದಲಾದವುಗಳನ್ನು ನಡೆಸುತ್ತಾರೆ.**

**ಕಸ ಸಂಗ್ರಹಿಸಿ, ವಿಂಗಡಿಸಿ, ಮಾರಾಟ ಮಾಡಿ ಜೀವನ ನಿರ್ವಹಿಸುವವರ ಬದುಕು ಅರ್ಥ ಮಾಡಿಕೊಳ್ಳಲು  ಅವರ ಜೊತೆ ಹೆಜ್ಜೆ ಹಾಕಬೇಕು. ಕೆಲವೇ ವರ್ಷಗಳ ಹಿಂದೆ ಕಸ/ತ್ಯಾಜ್ಯ ಸಂಗ್ರಹಿಸುವವರೆಂದರೆ ನಗರವಾಸಿಗಳಿಗೆ ಅಸಹ್ಯದ ವಿಷಯವಾಗಿತ್ತು. ಬಹುತೇಕರನ್ನು ಭಿಕ್ಷುಕರು ಎಂದೇ ಜನರಷ್ಟೇ ಅಲ್ಲ, ಸರ್ಕಾರದ ಕೆಲವು ದಾಖಲೆಗಳೂ ಗುರುತಿಸುತ್ತಿದ್ದವು!**

**ಈಗ ಅಂತಹವರ ಬದುಕು ಸಂಪೂರ್ಣ ಬದಲಾಗಿದೆ. ಅವರೀಗ ಬೇಡುವವರಲ್ಲ [ಮೊದಲೂ ಅವರು ಬೇಡುವವರಾಗಿರಲಿಲ್ಲ]. ಬದಲಿಗೆ ಅವರಿಂದ ಸರ್ಕಾರಕ್ಕೆ, ಒಟ್ಟೂ ಸಮಾಜಕ್ಕೆ ಸಿಗುತ್ತಿರುವ ಕೊಡುಗೆ ಬಹುತೇಕ ಜನರಿಗೆ ಅರಿವಾಗುತ್ತಿಲ್ಲವಷ್ಟೆ. ನಾವು ಕಸ/ಕೊಳೆ/ತ್ಯಾಜ್ಯವೆಂದು ಹೊರಚೆಲ್ಲುತ್ತಿರುವ ವಸ್ತುಗಳನ್ನು ಈ ಜನ ಜೋಪಾನ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ, ಅದರಿಂದ, ಮಹಾತ್ಮಾ ಗಾಂಧೀಜಿಯವರು ಹೇಳಿದಂತೆ ಸಂಪನ್ಮೂಲವನ್ನು ಸೃಷ್ಟಿಸುತ್ತಿದ್ದಾರೆ. ಸಾಕಷ್ಟು ಜನ ತ್ಯಾಜ್ಯ ಸಂಗ್ರಹಕಾರರು ಸ್ವತಂತ್ರ್ಯವಾಗಿ ತ್ಯಾಜ್ಯ ನಿರ್ವಹಣೆ ಉದ್ದಿಮೆಯಲ್ಲಿ ತೊಡಗಿಕೊಂಡಿದ್ದಾರೆ. ಅಷ್ಟೇ ಅಲ್ಲ ಸರ್ಕಾರಕ್ಕೆ ಸೇವಾ ತೆರಿಗೆ ನೀಡುತ್ತಿದ್ದಾರೆ.**

**ಕೆಲವು ವರ್ಷಗಳ ಹಿಂದೆ ತ್ಯಾಜ್ಯ ಸಂಗ್ರಹದಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಿದ್ದು, ತ್ಯಾಜ್ಯ ನಿರ್ವಹಣೆಯಲ್ಲಿ ಗಂಡಸರ ಪಾಲು ಹೆಚ್ಚಿತ್ತು. ಹಸಿರುದಳದ ತರಬೇತಿ, ಮಾಹಿತಿ ಹಂಚಿಕೆ, ಸಶಕ್ತ ಭಾವನೆಗಳು ಬಂದ ಮೇಲೆ ತ್ಯಾಜ್ಯ ನಿರ್ವಹಣೆ ಕೇಂದ್ರಗಳನ್ನು ನಡೆಸುವವರಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗುತ್ತಿದೆ.**

**ಈಗಿನ ಹೊಸ ಬೆಳವಣಿಗೆ, ರಾಷ್ಟ್ರೀಯ ನಗರ ಪುನರುತ್ಥಾನ ಯೋಜನೆ (NURM) ತನ್ನ ಕಾರ್ಯಕ್ಷೇತ್ರದಲ್ಲಿ ತ್ಯಾಜ್ಯ ಸಂಗ್ರಹಕಾರರನ್ನೂ ಗುರುತಿಸಿದೆ. ಸುಮಾರು 6000 ಸದಸ್ಯ ಬಲ ಹೊಂದಿರುವ 'ಹಸಿರುದಳ' ತಮ್ಮದೇ ಆದ ಸಹಕಾರ ಸಂಘ/ಬ್ಯಾಂಕ್ ಆದಲ್ಲಿ ಸದಸ್ಯರಿಗೆ ಇನ್ನೂ ಹೆಚ್ಚಿನ ಸಹಾಯ ಮಾಡುವ ಚಿಂತನೆಯಲ್ಲಿದೆ.**

ಭಾರತದಲ್ಲಿ ಬಹಳ ಪ್ರಮುಖವಾಗಿ ಪುಣೆ, ದೆಹಲಿ, ಅಹಮದಾಬಾದ್ ನಗರಗಳಲ್ಲಿ ತ್ಯಾಜ್ಯ ಸಂಗ್ರಹಕಾರರ ಸಂಘಟನೆಗಳು ಆರಂಭವಾಗಿ ತಮ್ಮ ಹಕ್ಕುಗಳಿಗಾಗಿ ದನಿ ಎತ್ತಲಾರಂಭಿಸಿದರು. ಆಗ ಅವರೆತ್ತಿದ್ದ ಬೇಡಿಕೆಗಳು:

- ತ್ಯಾಜ್ಯ ಸಂಗ್ರಹಕಾರರಿಗೆ ತ್ಯಾಜ್ಯ ಸಂಗ್ರಹಿಸುವ ಹಕ್ಕನ್ನು ರಕ್ಷಿಸುವಂತಹ ನೀತಿ, ಕಾಯಿದೆ ಇರಲೇಬೇಕು;
- ಕಸ/ತ್ಯಾಜ್ಯ ನಿರ್ವಹಣೆ ಅದರಲ್ಲೂ ಘನ ತ್ಯಾಜ್ಯ ನಿರ್ವಹಣೆಯಲ್ಲಿ ಈ ಕೆಲಸದಲ್ಲಿ ತೊಡಗಿಕೊಂಡಿರುವವರಿಗೆ

ಮನ್ನಣೆ ನೀಡಿ ವ್ಯವಸ್ಥೆಯನ್ನು ನಿರ್ಮಿಸಬೇಕು;

– ಕಸ/ತ್ಯಾಜ್ಯವನ್ನು ಮೂಲದಲ್ಲೇ ವಿಂಗಡಿಸಿ ನೀಡಿದಲ್ಲಿ, ಅದನ್ನು ಸಂಗ್ರಹಿಸಿ, ಉತ್ತಮವಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ ಮತ್ತು ಈ ಕುರಿತು ಪ್ರತಿ ಮುನಿಸಿಪಾಲಿಟಿ ಮತ್ತು ನಗರಪಾಲಿಕೆಗಳು ಸೂಕ್ತವಾದ ಕಾಯಿದೆಯನ್ನು ನಿರ್ಮಿಸಬೇಕು.

**ಹಸಿರು ದಳ, ಬೆಂಗಳೂರು**

ತ್ಯಾಜ್ಯ ಸಂಗ್ರಹಕಾರರನ್ನು ಮತ್ತು ಇತರ ಅನೌಪಚಾರಿಕವಾಗಿ ಕಸ/ತ್ಯಾಜ್ಯ ಸಂಗ್ರಹಿಸುವವರನ್ನು ಒಗ್ಗೂಡಿಸಿ ಅವರನ್ನು 'ಘನತ್ಯಾಜ್ಯ ನಿರ್ವಾಹಕ'ರನ್ನಾಗಿ ಪರಿವರ್ತಿಸಿ ಬೆಂಗಳೂರಿಗೊಂದು ಹೊಸ ರೂಪ ಕೊಡುವ ಗುರಿಯೊಂದಿಗೆ ಹಸಿರು ದಳ ಕಾರ್ಯನಿರ್ವಹಿಸುತ್ತಿದೆ. ಬೆಂಗಳೂರು ನಗರದಲ್ಲಿ ಎಲ್ಲ ರೀತಿಯ ತ್ಯಾಜ್ಯವನ್ನು (ಘನ ತ್ಯಾಜ್ಯ ಮತ್ತು ಹಸಿ ತ್ಯಾಜ್ಯ) ಸಮರ್ಪಕವಾಗಿ ವೈಜ್ಞಾನಿಕವಾಗಿ ನಿರ್ವಹಿಸಿದ್ದೇ ಆದಲ್ಲಿ ಬಡಜನರ ಮೇಲಿನ ಶೋಷಣೆ ತಪ್ಪಿಸಬಹುದು ಮತ್ತು ಅದರಿಂದ ಬರುವ ಆದಾಯದಿಂದ ನೂರಾರು ಕುಟುಂಬಗಳು ಗೌರವಯುತವಾಗಿ ಬದುಕಬಹುದು ಅಷ್ಟೇ ಅಲ್ಲ, ನಗರದ ತ್ಯಾಜ್ಯವನ್ನು ಅವೈಜ್ಞಾನಿಕವಾಗಿ ನಗರಗಳಿಂದಾಚೆಗೆ ಸಾಗಿಸುವ ಗುತ್ತಿಗೆದಾರರಿಗೆ ಕೋಟಿ ಕೋಟಿ ರೂಪಾಯಿಗಳನ್ನು ನಗರ ಪಾಲಿಕೆ ನೀಡಬೇಕಿಲ್ಲ ಎಂಬುದನ್ನು 'ಹಸಿರುದಳ'ದ ರೂವಾರಿಗಳಾದ ಮೈತ್ರಿ ಸರ್ವ ಸೇವಾ ಸಮಿತಿ; ಗ್ರೇಸ್; ನವಚೇತನ ಮತ್ತು ರೇಡಿಯೊ ಆಕ್ಟಿವ್ ಸಾಕ್ಷಿ ಸಮೇತ ತೋರಿಸುತ್ತಿದ್ದಾರೆ.

"ಬೆಂಗಳೂರು ಮಹಾನಗರ ಪಾಲಿಕೆಯೊಂದಿಗೆ ಕಾರ್ಯ ನಿರ್ವಹಿಸುತ್ತಿರುವ ಸುಮಾರು 15,000 ಪೌರಕಾರ್ಮಿಕರಲ್ಲದೆ ಸುಮಾರು ಹದಿನೈದರಿಂದ ಇಪ್ಪತ್ತೈದು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ವಿವಿಧ ವಯಸ್ಸಿನ ತ್ಯಾಜ್ಯ ಸಂಗ್ರಹಕಾರರು ಬೆಂಗಳೂರು ನಗರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆಂದೂ, ಇವರೊಂದಿಗೆ ತ್ಯಾಜ್ಯವನ್ನು ಕೊಳ್ಳುವವರು, ಸಾಗಿಸುವವರು, ಅವನ್ನು ಸಂಸ್ಕರಿಸುವವರು, ಅದನ್ನು ಮರುಬಳಕೆ ಮಾಡುವವರಿಗೆ ಮಾರುವವರನ್ನೂ ಈ ಒಟ್ಟೂ ಕೆಲಸದಲ್ಲಿ ಇರುವವರೊಡನೆ ಸೇರಿಸಿದರೆ ಹತ್ತಿರಹತ್ತಿರ ಐವತ್ತು ಸಾವಿರ ಜನಕ್ಕೂ ಹೆಚ್ಚಿನವರು ಈ ವೃತ್ತಿಯಲ್ಲಿ ತೊಡಗಿರಬಹುದು" ಎಂದು ಹಸಿರುದಳದ ಮುಖ್ಯಸ್ಥೆ ನಳಿನಿ ಶೇಖರ್ ವಿವರಿಸುತ್ತಾರೆ. 'ಬೀದಿಬೀದಿ ಅಲೆದು, ಮನೆಮನೆಗಳ ಬಾಗಿಲಿಂದಷ್ಟೇ ಅಲ್ಲದೆ ಕಸದ ರಾಶಿಯಿಂದ ಮರುಬಳಕೆ ವಸ್ತುಗಳನ್ನು ಹೆಕ್ಕಿ ತೆಗೆದು ಸಂಗ್ರಹಿಸುವ ಅನೌಪಚಾರಿಕ ಕೆಲಸಗಾರರಿಂದಾಗಿ ಪ್ರತಿದಿನ ಸುಮಾರು ಸಾವಿರಕ್ಕೂ ಹೆಚ್ಚು ಟನ್ ಕಸ/ತ್ಯಾಜ್ಯ ಹಣವಾಗಿ (ಗೊಬ್ಬರ/ಅನಿಲವಾಗಿಸುವುದು, ಮರುಬಳಕೆಯಾಗುವ ಲೋಹ, ಪೇಪರ್, ಪ್ಲಾಸ್ಟಿಕ್, ಇತ್ಯಾದಿ) ಪರಿವರ್ತಿತವಾಗುತ್ತಿದೆ. ಇಲ್ಲವಾದರೆ, ಅದನ್ನು ಸಾಗಿಸುವುದು ಮತ್ತು ಗುಂಡಿಗಳಿಗೆ ತುಂಬುವ ಕೆಲಸಕ್ಕೆ ಇನ್ನೂ ಹೆಚ್ಚು ಖರ್ಚು ತಗಲುತ್ತದೆ. ಇವರ ವೃತ್ತಿಯಿಂದಾಗಿ ನಗರ ಪಾಲಿಕೆಗೆ ಪ್ರತಿವರ್ಷ ಸುಮಾರು 80ರಿಂದ 100 ಕೋಟಿಯಷ್ಟು ಉಳಿತಾಯವಾಗುತ್ತಿದೆ' ಎಂಬುದು ಹಸಿರು ದಳದ ನಿಲುವು. ಬೆಂಗಳೂರಿನಲ್ಲಿ ಇತ್ತೀಚಿನ ವರ್ಷಗಳಲ್ಲಿ ಕಸ ನಿರ್ವಹಣೆಯಲ್ಲಿ ಆದ ಅವ್ಯವಸ್ಥೆ ಇಡೀ ಜಗತ್ತಿನ ಗಮನವನ್ನು ಬೆಂಗಳೂರಿನತ್ತ ಸೆಳೆದಿತ್ತು. ಇಂತಹ ಪರಿಸ್ಥಿತಿಗೆ ನಾಗರೀಕರು ಎಷ್ಟರ ಮಟ್ಟಿಗೆ ಜವಾಬ್ದಾರರು ಎಂದು ಗುರುತಿಸುತ್ತಲೇ, ಕಸ ಸಂಗ್ರಹಿಸುವವರ ಕೆಲಸ ಎಷ್ಟು ಮುಖ್ಯವೆಂದು ನಾಗರೀಕರಿಗೆ ತಿಳಿಸುವುದರತ್ತಲೂ ಹಸಿರು ದಳ ಗಮನ ನೀಡಿದೆ.

2010ರ ಆಸುಪಾಸಿನಲ್ಲಿ ಹಸಿರುದಳ ಆರಂಭವಾದಾಗ ಕೆಲವೇ ನೂರರ ಸಂಖ್ಯೆಯಲ್ಲಿ ತ್ಯಾಜ್ಯ ಸಂಗ್ರಹಕಾರರು ಜೊತೆಗೂಡಿದ್ದರು. ಇಂದು ಬೆಂಗಳೂರು ನಗರದ ವಿವಿಧ ಬಡಾವಣೆಗಳು / ನಗರಪಾಲಿಕೆಯ ವಾರ್ಡ್‌ಗಳಲ್ಲಿ ಹರಡಿಕೊಂಡಿರುವ 6,000 ಸದಸ್ಯರ ಬಲ ಹಸಿರುದಳಕ್ಕೆ ಇದೆ.

18 ವರ್ಷ ದಾಟಿದವರಿಗೆ ಮಾತ್ರ ಹಸಿರು ದಳ ಸದಸ್ಯತ್ವ ನೀಡುವುದಲ್ಲದೆ, ನಗರ ಪ್ರದೇಶದಲ್ಲಿ ತ್ಯಾಜ್ಯವನ್ನು ಸಂಗ್ರಹಿಸಲು ಹಕ್ಕು/

**ಕಸವೆಲ್ಲವೂ ರಸವಾಗುತ್ತಿಲ್ಲ!**

**ಇಡೀ ಜಗತ್ತಿಗೆ ಪ್ಲಾಸ್ಟಿಕ್ ತ್ಯಾಜ್ಯ ಎಂತಹ ಭಯಂಕರ ಭೀತಿ ತಂದೊಡ್ಡಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಮರುಬಳಕೆಯ ಮೂಲಕ ಅದಕ್ಕೆ ಪರಿಹಾರ ಕಂಡುಹಿಡಿಯುವ ಪ್ರಯತ್ನವೂ ನಡೆದಿದೆ. ಆದರೆ, ಜಗತ್ತಿಗೆ ಎದುರಾಗಿರುವ ಇನ್ನೊಂದಷ್ಟು ಘನ/ ಒಣ ತ್ಯಾಜ್ಯದ ಸಮಸ್ಯೆ 'ಲ್ಯಾಮಿನೇಟೆಡ್ ಮಲ್ಟಿಲೇಯರ್ಡ್ ಪ್ಯಾಕ್ ಮತ್ತು ಟೆಟ್ರಾ ಪ್ಯಾಕ್‌ಗಳು'.**

**ಬಣ್ಣಬಣ್ಣದ ಮುದ್ರಣದೊಂದಿಗೆ ಬರುವ ಬಿಸ್ಕತ್, ಚಿಪ್ಸ್, ನೂಡಲ್ಸ್ ಮೊದಲಾದವುಗಳ ಪ್ಲಾಸ್ಟಿಕ್ ಚೀಲಗಳು ಈಗ ಹೊಸ ಮಾರಿ. ಇವನ್ನು ಮರುಬಳಕೆ ಮಾಡುವ ಸಾಧ್ಯತೆಗಳೇ ಇಲ್ಲವೆಂದು ಹೇಳಲಾಗುತ್ತಿದೆ. ಆದರೆ, ಇದರ ಪ್ರಮಾಣವೇ ಈಗ ಅತ್ಯಧಿಕವಾಗಿದೆ. ಎರಡನೆಯದು ಟೆಟ್ರಾಪ್ಯಾಕ್‌ಗಳು. ಹಾಲು, ತಂಪುಪಾನೀಯಗಳಲ್ಲದೆ, ಈಗೀಗ ಮದ್ಯಸಾರವು ಟೆಟ್ರಾಪ್ಯಾಕ್‌ಗಳಲ್ಲಿ ಬರುತ್ತಿವೆ. ಬಹಳಷ್ಟು ಕಾಲ ಬಳಸಿ ಬಿಸಾಡಿದ ಈ ಪ್ಯಾಕ್‌ಗಳ ಮರುಬಳಕೆ ತಿಳಿದಿರಲಿಲ್ಲ. ಟೆಟ್ರಾಪ್ಯಾಕ್‌ಗಳನ್ನು ಲೋಹದ ಅಂಶಗಳು, ಪ್ಲಾಸ್ಟಿಕ್ ಮತ್ತು ಕಾಗದ ಬಳಸಿ ತಯಾರಿಸಲಾಗುತ್ತದೆ. ಬಳಸಿ ಬಿಸಾಡಿದ ಈ ಪ್ಯಾಕ್‌ಗಳನ್ನು ಗಟ್ಟಿ ಹಾಳೆ ಮತ್ತು ಬೋರ್ಡ್‌ಗಳನ್ನಾಗಿ ಪರಿವರ್ತಿಸಲಾಗುತ್ತಿದೆ.**

**ಗಾಜಿನ ಮರುಬಳಕೆ ಪ್ರಮಾಣ ಕಡಿಮೆಯಾಗುತ್ತಿದ್ದು, ತ್ಯಾಜ್ಯ ಕೊಳ್ಳುವವರೂ ಅದನ್ನು ನಿರಾಕರಿಸುವುದು ಸಾಮಾನ್ಯವಾಗಿದೆ. ಯಾವುದೇ ರೀತಿಯ ಲೋಹಕ್ಕೆ ಈಗಲೂ ಬೇಡಿಕೆಯಿದೆ. ಕಾಗದ, ರಟ್ಟು, ಪ್ಲಾಸ್ಟಿಕ್‌ನ ಬೇಡಿಕೆ ಮತ್ತು ಬೆಲೆಯಲ್ಲಿ ಕೊಂಚ ಏರುಪೇರಿದ್ದರೂ, ಮರುಬಳಕೆಯ ಸಾಧ್ಯತೆಗಳು ಅತಿ ಹೆಚ್ಚಿರುವುದರಿಂದ ಇದರ ಬೇಡಿಕೆ ಸದಾಕಾಲಕ್ಕೂ ಇರುತ್ತದೆ.**

ಅಧಿಕಾರ ನೀಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕೃತ ಮುದ್ರೆ ಇರುವ 'ಗುರುತುಚೀಟಿ'ಯನ್ನೂ ಕೊಡಿಸುತ್ತದೆ. ಇಡೀ ದೇಶದಲ್ಲೇ ಇದೊಂದು ವಿಶಿಷ್ಟ ಮತ್ತು ಪ್ರಥಮ ಸಾಧನೆಯಾಗಿದೆ. "ಈ ಮೊದಲು 'ತ್ಯಾಜ್ಯ ನಿರ್ವಹಣೆ' ಎಂಬುದರಲ್ಲಿ 'ತ್ಯಾಜ್ಯ ಸಂಗ್ರಹಕಾರರು' ಎಂಬ ವಿಚಾರವೇ ಇರಲಿಲ್ಲ. ನಮ್ಮ ಕೆಲಸವನ್ನು ಗುರುತಿಸುವವರೇ ಇರಲಿಲ್ಲ.



ಎಲ್ಲ ಬರಿ ಗುತ್ತಿಗೆದಾರರು ಮತ್ತು ಸರ್ಕಾರದ ಮಧ್ಯೆ ನಡೆದುಹೋಗುತ್ತಿತ್ತು. ಈಗ ಪರಿಸ್ಥಿತಿ ಬದಲಾಗಿದೆ" ಎನ್ನುತ್ತಾರೆ ಹಸಿರುದಳದ ಸದಸ್ಯೆ ಮೇರಿ. ಬೆಂಗಳೂರು ಬೃಹತ್ ನಗರ ಪಾಲಿಕೆ ಮತ್ತು ತ್ಯಾಜ್ಯ ಸಂಗ್ರಹಕಾರರ ನಡುವೆ ಈಗ 35 ವಾರ್ಡ್‌ಗಳಲ್ಲಿ ತ್ಯಾಜ್ಯ ಸಂಗ್ರಹಣೆ, ನಿರ್ವಹಣೆ ಕುರಿತು ಒಪ್ಪಂದವಾಗಿದೆ. ನಗರ ಪಾಲಿಕೆ ಗುರುತಿಸಿರುವ 45 ತ್ಯಾಜ್ಯ ಸಂಗ್ರಹಕಾರರಿಗೆ ನಗರದ ವಿವಿಧ ಅಪಾರ್ಟ್‌ಮೆಂಟ್ ಸಮುಚ್ಚಯಗಳಿಂದ ನೇರವಾಗಿ ತ್ಯಾಜ್ಯ ಸಂಗ್ರಹಿಸುವ ಹಕ್ಕನ್ನು ನೀಡಿದೆ. ಅಷ್ಟೇ ಅಲ್ಲ ಇದನ್ನು ಸಂಪೂರ್ಣ ತ್ಯಾಜ್ಯ ನಿರ್ವಹಣೆ [Total Waste Management] ಎಂದು ಗುರುತಿಸಲಾಗಿದ್ದು, ಈಗೀಗ ವಸತಿ ಸಮುಚ್ಚಯಗಳಷ್ಟೇ ಅಲ್ಲ, ಕಛೇರಿಗಳು, ಕಾರ್ಖಾನೆಗಳೂ ಹಸಿರುದಳದ ಸದಸ್ಯರನ್ನು ತಮ್ಮ ತ್ಯಾಜ್ಯ ನಿರ್ವಹಣೆಗೆ ಕರೆ ಕಳುಹಿಸುತ್ತಿದಾರೆ. ನಗರದಲ್ಲಿ ಐದು ಕಡೆ ತ್ಯಾಜ್ಯ ಉರಿಸಿ ಅನಿಲ ತಯಾರಿಸಿ ವಿದ್ಯುತ್ ಉತ್ಪಾದನೆ ಮಾಡುವ ಘಟಕಗಳನ್ನು ಹಸಿರುದಳದ ಸದಸ್ಯರು ಸ್ವತಂತ್ರವಾಗಿ ನಿರ್ವಹಿಸುತ್ತಿದ್ದಾರೆ. ನಗರ ಪಾಲಿಕೆ ಮತ್ತು ತ್ಯಾಜ್ಯ ಸಂಗ್ರಹಕಾರರ ನಡುವೆ, ಯಾವುದೇ ಮಧ್ಯವರ್ತಿಗಳಿಲ್ಲದೆ ತ್ಯಾಜ್ಯ ಸಂಗ್ರಹಕ್ಕಾಗಿ ಆಗಿರುವ ಒಪ್ಪಂದ 'ದೇಶದಲ್ಲೇ ಪ್ರಥಮ' ಎನ್ನಲಾಗಿದೆ. ಪ್ರತಿ ತ್ಯಾಜ್ಯ ಸಂಗ್ರಹಕಾರರು ಈಗ ತಾವು ಪಡೆಯುವ ವಿವಿಧ ರೀತಿಯ ಘನ ತ್ಯಾಜ್ಯ (solid waste)ದ ತಖ್ತೆಯನ್ನು ಇಟ್ಟುಕೊಳ್ಳಬೇಕು – ವಿವಿಧ ರೀತಿಯ ಕಾಗದ ಮತ್ತು ಕಾಗದದ ಪದಾರ್ಥಗಳು; ಪ್ಲಾಸ್ಟಿಕ್ ಮತ್ತು ರಬ್ಬರ್, ವಿವಿಧ ರೀತಿಯ ಲೋಹಗಳು, ಗಾಜು; ಸಂಗ್ರಹಿಸಿದ ಒಟ್ಟು ಹಸಿ ತ್ಯಾಜ್ಯದ ಪ್ರಮಾಣ ಮತ್ತು ಅದನ್ನು ಗೊಬ್ಬರ ಮಾಡಲು ಅಥವಾ ಅನಿಲ ತಯಾರಿಕೆಗೆ ನೀಡಿದ ಬಗ್ಗೆ ಲೆಕ್ಕಕೊಡಬೇಕು. ಇದಕ್ಕಾಗಿ **'I got garbage'** ಎನ್ನುವ ಅಂತರ್ಜಾಲ ಆಧಾರಿತ ಸಾಫ್ಟ್‌ವೇರ್ ಅನ್ನು ತ್ಯಾಜ್ಯ ನಿರ್ವಹಣಕಾರರು ಬಳಸುತ್ತಿದ್ದಾರೆ.

### ಸದಸ್ಯರಿಗೆ ಸಿಗುತ್ತಿರುವ ವೈಯಕ್ತಿಕ ಲಾಭ/ಪ್ರಯೋಜನ

ಬೆಂಗಳೂರು ನಗರಕ್ಕೆ ಮೊದಮೊದಲು ತ್ಯಾಜ್ಯ ಸಂಗ್ರಹದಲ್ಲಿ ತೊಡಗಲು ಬಂದವರು ನೆರೆಯ ತಮಿಳುನಾಡಿನ ಬಡಜನ. ಈಗೀಗ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಿಂದ ಮತ್ತು ಉತ್ತರ ಭಾರತದ ಹಲವು ರಾಜ್ಯಗಳಿಂದ ತಂಡೋಪತಂಡವಾಗಿ ಕುಟುಂಬಗಳು ತ್ಯಾಜ್ಯ ಸಂಗ್ರಹ ಕೆಲಸಕ್ಕೆ ಬರುತ್ತಿವೆ. ಸಾಮಾನ್ಯವಾಗಿ ಸ್ವತಂತ್ರ್ಯವಾಗಿ ತ್ಯಾಜ್ಯ ಸಂಗ್ರಹಿಸುವವರು, ತಮಗೆ ಯಾರು 'ಮುಂಗಡ' ಹಣ ಕೊಡುತ್ತಾರೋ ಅಂತಹವರಿಗೇ ಸದಾಕಾಲ ತಮ್ಮ ಸಂಗ್ರಹವನ್ನು ಮಾರುವುದು/ ಕೊಡುವುದು ರೂಢಿ. ಇದೊಂದು ರೀತಿ ಬಂಧನದಲ್ಲಿ ಅಥವಾ ಜೀತದಲ್ಲಿ ಸಿಲುಕಿದಂತೆ. ಅವರಿಗೆ ಪರಸ್ಪರರಿಂದ ಬಿಡುಗಡೆಯೇ ಇರುವುದಿಲ್ಲ. ಇದರ ಲಾಭ ಸಾಮಾನ್ಯವಾಗಿ ಅಂಗಡಿ ಇಟ್ಟುಕೊಂಡು ತ್ಯಾಜ್ಯ ಕೊಂಡು, ಮತ್ತೆ ಮಾರಾಟ ಮಾಡುವವರಿಗೆ ಅಧಿಕ. ಹಸಿರುದಳ, ತ್ಯಾಜ್ಯ ಸಂಗ್ರಹಕಾರರು ಅನುಭವಿಸುವ ಈ ಶೋಷಣೆಯನ್ನು ತಪ್ಪಿಸಲೆಂದೇ, ತ್ಯಾಜ್ಯ ನಿರ್ವಹಣೆ ಉದ್ದಿಮೆ ಸ್ಥಾಪಿಸಲು ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ವ್ಯವಸ್ಥೆ ಮಾಡುತ್ತದೆ.

ರಂಗ್‌ದೇ ಎನ್ನುವ ಸಂಸ್ಥೆಯೊಡನೆ ಸೇರಿ **'ಸಾಮೂಹಿಕ ಹಣ ಹೂಡಿಕೆ'** [Cloud Funding]ಯ ಯತ್ನ ನಡೆಸಿದ್ದು, ಈಗಾಗಲೇ ರೂ. 40,000/–ದ ನೆರವು ನೀಡುವ ಐದು ಹಣಹೂಡಿಕೆದಾರರು ಮುಂದೆ ಬಂದಿದ್ದಾರೆ. ಈ ಸಾಲವನ್ನು 18 ತಿಂಗಳಲ್ಲಿ ಹಿಂದಿರುಗಿಸುವ ಒಪ್ಪಂದದೊಂದಿಗೆ ಸದಸ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆ. [ಹಸಿರು ದಳವೇ ಒಂದು ಸಹಕಾರಿ ಬ್ಯಾಂಕ್ ಆದಲ್ಲಿ ಇದಿನ್ನೂ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಇದಕ್ಕೆ ಆರಂಭದಲ್ಲಿ ಸರ್ಕಾರದ ನೆರವು ತೀರಾ ಅಗತ್ಯ]. ಒಂದು ಲೆಕ್ಕದಂತೆ, ಹಸಿರುದಳದ ಸದಸ್ಯರು ನಿರ್ವಹಿಸುವ ಎಲ್ಲ 35 ಕೇಂದ್ರಗಳಲ್ಲಿ ಸುಮಾರು 8ರಿಂದ 10 ಜನ ಕೆಲಸ ಮಾಡುತ್ತಾರೆ. ಅಂದರೆ ಒಟ್ಟು 350 ಕುಟುಂಬಗಳ 1,750 ಜನರ ನಿರ್ವಹಣೆ ನೇರವಾಗಿ ನಡೆದಿದೆ.

ತ್ಯಾಜ್ಯ ಸಂಗ್ರಹಕಾರರ ಸಂಘಟನೆಯಲ್ಲಿ ಕಂಡುಕೊಂಡಿರುವ ಸದಸ್ಯರ ಮಕ್ಕಳಿಗೆ ಈಗ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿ ವೇತನ ಸಿಗುತ್ತಿದೆ. ಇದರರ್ಥ, ತ್ಯಾಜ್ಯ ಸಂಗ್ರಹಕಾರರ ಮಕ್ಕಳು ಮತ್ತೆ ಇದೇ ವೃತ್ತಿಯಲ್ಲಿರಬೇಕೆಂದೇನೂ ಇಲ್ಲ. ಬಹುತೇಕ ತ್ಯಾಜ್ಯ ಸಂಗ್ರಹಕಾರರು ಈಗ ತಮ್ಮ ವೃತ್ತಿಗೌರವವನ್ನು ಕಂಡುಕೊಂಡಿದ್ದಾರೆ ಮತ್ತು ತ್ಯಾಜ್ಯ ನಿರ್ವಹಣೆಯಲ್ಲಿ ಸಮುದಾಯಕ್ಕೆ, ಸರ್ಕಾರಕ್ಕೆ ತಮ್ಮ ಕೊಡುಗೆ ಎಷ್ಟೆಂದು ಎದೆಯುಬ್ಬಿಸಿ ವಿವರಿಸುತ್ತಾರೆ. ❑


# ಯೋಜನಾ

## ಫೆಬ್ರವರಿ 2015 ಸಂಚಿಕೆ ವಿಷಯ

# ಭಾರತದ ಒಕ್ಕೂಟ ಮತ್ತು ರಾಜಕೀಯ ವ್ಯವಸ್ಥೆ

# ಮೌಢ್ಯದಲ್ಲಿ ನಲುಗುತ್ತಿರುವ ಮಹಿಳೆಯರು

ಶಿವರುದ್ರಯ್ಯ ಜಿ.ವಿ.



**ಋತುಸ್ರಾವದ ಕಟ್ಟುಪಾಡುಗಳ ದುಷ್ಪರಿಣಾಮಗಳಿಗೆ ಬೇಸತ್ತ ಅನೇಕ ಹೆಣ್ಣುಮಕ್ಕಳು ಇದಕ್ಕೆ ಕಾರಣವಾಗುವ ಗರ್ಭಕೋಶವನ್ನೇ ತೆಗೆಸಿಕೊಂಡು ತಮ್ಮ ಭವಿಷ್ಯವನ್ನು ಬಲಿಕೊಟ್ಟಿರುವ ಉದಾಹರಣೆಗಳಿವೆ. ಇವರಿಗೆ ತಾಯ್ತನವೇ ಒಂದು ಶಾಪವಾಗಿದೆ.**

ಯಾವುದೇ ಒಂದು ಜನಾಂಗ ತನ್ನದೇ ಆದ ವಿಭಿನ್ನ ನಂಬಿಕೆ ಮತ್ತು ಆಚರಣೆಗಳನ್ನು ಕಟ್ಟಿಕೊಂಡು ಅವುಗಳಿಂದ ತನ್ನನ್ನು ಗುರ್ತಿಸಿಕೊಳ್ಳುತ್ತದೆ. ಆಚರಣೆಗಳು ಹುಟ್ಟುವುದು ಒಂದು ರೀತಿ ಆಕಸ್ಮಿಕವೇ. ಒಂದು ನಿರ್ದಿಷ್ಟ ಪರಿಸ್ಥಿತಿಯನ್ನು ನಿಭಾಯಿಸಲು ಆಚರಣೆಯೊಂದನ್ನು ಅನುಸರಿಸಲಾಗುತ್ತದೆ. ಕ್ರಮೇಣ ಮತ್ತೆ ಮತ್ತೆ ಅದೇ ಆಚರಣೆಗಳು ಅನುಸರಿಸಲ್ಪಟ್ಟು ಜನಾಂಗದ ಒಂದು ನಡತೆಯ ಸಂಹಿತೆಯಾಗಿ ಬೇರೂರುತ್ತವೆ. ಆಚರಣೆಗಳನ್ನು ರೂಪಿಸಿಕೊಳ್ಳುವ ಉದ್ದೇಶ ಬದುಕು ಸುಗಮಗೊಳ್ಳಲಿ ಎಂದು, ಆದರೆ ಅನೇಕ ಆಚರಣೆಗಳು ಕೆಲವರ ಬದುಕನ್ನೇ ಕಷ್ಟ ಕೋಟಲೆಗೆ ಈಡುಮಾಡಿದರೆ ? ನಮ್ಮಲ್ಲಿ ವಿಶೇಷವಾಗಿ ಮಹಿಳೆಯನ್ನು ಕೇಂದ್ರವಾಗಿಟ್ಟುಕೊಂಡು ರೂಪಿಸಲಾಗಿರುವ ಅನೇಕ ಆಚರಣೆಗಳು ಆಕೆಯ ಬದುಕನ್ನು ಸಂಕಷ್ಟಕ್ಕೀಡುಮಾಡಿ ಸುಖ–ಸಂತೋಷಗಳಿಂದ ದೂರ ಉಳಿಯುವಂತೆ ಮಾಡಿರುವುದನ್ನು ಕಾಣಬಹುದು.

### ಋತುಸ್ರಾವಕ್ಕೆ ಸಂಬಂಧಿಸಿದ ಕಟ್ಟುಪಾಡುಗಳು

ಮಹಿಳೆಯನ್ನು ಅಪಾರವಾದ ನೋವು ಮತ್ತು ಅವಮಾನಗಳಿಗೆ ಗುರಿಮಾಡಿರುವ ಕಟ್ಟುಪಾಡುಗಳೆಂದರೆ ಋತುಸ್ರಾವಕ್ಕೆ ಸಂಬಂಧಿಸಿದವು. ನಮ್ಮಲ್ಲಿನ ಬಹುತೇಕ ಸಮುದಾಯಗಳಲ್ಲಿ ಋತುಸ್ರಾವವನ್ನು 'ಮೈಲಿಗೆ' ಎಂದು ನಂಬಿ ಮಹಿಳೆ ಮೇಲೆ ಇನ್ನಿಲ್ಲದಂತಹ ನಿರ್ಬಂಧಗಳನ್ನು ಹೇರಿ, ಅವಳನ್ನು ಅತ್ಯಂತ ಹೀನಾಯವಾಗಿ ನಡೆಸಿಕೊಳ್ಳಲಾಗುತ್ತದೆ. ಋತುಸ್ರಾವದ ಸಂದರ್ಭದಲ್ಲಿ ಮನೆಯ ಎಲ್ಲಾ ಕಾರ್ಯಗಳಿಂದ ಆಕೆಯನ್ನು ದೂರವಿರಿಸಿ ಅಷ್ಟೂ ದಿನಗಳು ಅಜ್ಞಾತವಾಗಿ ಕಾಲಕಳೆಯುವಂತೆ ಮಾಡಲಾಗುತ್ತದೆ. ಆದರೆ ನಮ್ಮ ನಡುವಿನ ಕೆಲವು ಸಮುದಾಯಗಳಲ್ಲಿ ಮಹಿಳೆಯನ್ನು ಮನೆಯಿಂದ ಅಷ್ಟೇ ಅಲ್ಲ ಊರಿನಿಂದಲೇ ಆಚೆಹಾಕಿ ನಾಗರೀಕ ಸೌಲಭ್ಯಗಳಿಂದ ವಂಚಿಸಲ್ಪಟ್ಟು ಏಕಾಂಗಿ ಬದುಕನ್ನು ಎಲ್ಲಾನೋವುಗಳನ್ನು ನುಂಗಿಕೊಂಡು ಕಳೆಯುವಂತೆ ಮಾಡಿರುವುದುಂಟು, ನಮ್ಮ ನಡುವಿನ ಕಾಡುಗೊಲ್ಲ ಜನಾಂಗದ ಮಹಿಳೆಯರು ಋತುಸ್ರಾವದ ಸಂದರ್ಭದಲ್ಲಿ ಪಾಲಿಸಬೇಕಾದ ಕಟ್ಟುಪಾಡುಗಳು ಇದಕ್ಕೊಂದು ಉತ್ತಮ ಉದಾಹರಣೆ.

### ಋತುಮತಿ ಸಂದರ್ಭದಲ್ಲಿನ ಆಚರಣೆ

ಇತರ ಸಮುದಾಯಗಳು ಮನೆಯ ಮುಂದೆ ಒಂದು ವಿಶೇಷ ಆಶ್ರಯ ನಿರ್ಮಿಸಿ ಆಕೆಯನ್ನು ಅಲ್ಲಿ ಪ್ರತ್ಯೇಕವಾಗಿ ಇರಿಸುವುದರ ಮೂಲಕ ಋತುಸ್ರಾವದ ಮೈಲಿಗೆಯನ್ನು ತೋರಿಸಿಕೊಳ್ಳುತ್ತಾರೆ, ಆದರೆ ಕಾಡುಗೊಲ್ಲ ಸಮುದಾಯದಲ್ಲಿ ಋತುಮತಿಯಾದರೆ ಊರಿನಿಂದ ಹೊರಗೆ ಮರದ ರೆಂಬೆ ಕೊಂಬೆಗಳಿಂದ ತಾತ್ಕಾಲಿಕವಾಗಿ ನಿರ್ಮಿಸಿದ ಗುಡಿಸಿಲಿನಲ್ಲಿ 16 ದಿನಗಳ ಕಾಲ ಇರಿಸಲಾಗುತ್ತದೆ. ಆಕೆಯನ್ನು ಯಾರೂ ಮುಟ್ಟಿಸಿಕೊಳ್ಳದೆ ದೂರದಿಂದ ಅಗತ್ಯವಾದ ಸಾಮಗ್ರಿಗಳನ್ನು ಪೂರೈಸಿ ಅಷ್ಟೂದಿನಗಳು ಏಕಾಂಗಿಯಾಗಿ ಕಾಲಕಳೆಯುವಂತೆ ನೋಡಿಕೊಳ್ಳಲಾಗುತ್ತದೆ, ಆಕೆಯ ವಾಸ್ತವ್ಯದ ತಾತ್ಕಾಲಿಕ ಗುಡಿಸಲಿನಿಂದ ದೂರದಲ್ಲಿ ಮನೆಯ ಯಾರಾದರೂ ರಾತ್ರಿಯ ವೇಳೆ

ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತ್ಯಾಮಗೊಂಡ್ಲು.

ಕಾವಲು ಕಾಯುತ್ತಾರೆ. ಆದರೂ ಯಾವುದೇ ಕಾರಣಕ್ಕೂ ಆಕೆಯನ್ನು ಮುಟ್ಟಿಸಿಕೊಳ್ಳದಂತೆ ಆಚರಣೆಯನ್ನು ಪೂರ್ತಿ ಗೊಳಿಸಲಾಗುತ್ತದೆ.

**ಮಾಸಿಕ ಋತುಸ್ರಾವದ ಸಂದರ್ಭದ ಆಚರಣೆ**


ಮುಟ್ಟಿನ ಸಂದರ್ಭದಲ್ಲಿಯೂ ಈ ಜನಾಂಗದ ಮಹಿಳೆ ನಾಲ್ಕು ದಿನಗಳ ಕಾಲ ಊರಿನಿಂದ ಹೊರಗೆ ಕಾಲ ಕಳೆಯಬೇಕಾಗುತ್ತದೆ, ಕಾಲ ಕಳೆಯುವ ಅವಧಿ ಕಡಿಮೆ ಇರುವುದರಿಂದ, ತಾತ್ಕಾಲಿಕ ಗುಡಿಸಲಿನ ವ್ಯವಸ್ಥೆ ಇರದೆ, ಗಾಳಿ-ಮಳೆ ಅಥವಾ ಬಿಸಿಲು-ಚಳಿಗಳು ಬಂದರೆ ಮರಗಳ ಆಶ್ರಯ ಇಲ್ಲಾ ಅನ್ಯ ಸಮುದಾಯದ ಮನೆಗಳಲ್ಲಿ ಆಶ್ರಯ ಪಡೆದು ಕಾಲ ಕಳೆಯಬೇಕಾಗುತ್ತದೆ, ಯಾವುದೇ ಕಾರಣಕ್ಕೂ ತನ್ನ ಸಮುದಾಯದವರು ಇರುವ ಹಟ್ಟಿಗಳ ಒಳಕ್ಕೆ ಅಥವಾ ಮನೆಗಳಿಗೆ ಅವರನ್ನು ಸೇರಿಸಿಕೊಳ್ಳುವುದಿಲ್ಲ ಮತ್ತು ಮುಟ್ಟಿಸಿಕೊಳ್ಳುವುದೂ ಇಲ್ಲ.

**ಹೆರಿಗೆ ಸಂದರ್ಭದ ಆಚರಣೆ**

ಇದು ಇಲ್ಲಿಗೆ ನಿಲ್ಲುವುದಿಲ್ಲ. ಮುಂದಿನ ಕಠೋರ ಹಾಗೂ ಸುದೀರ್ಘಕಾಲದ ಆಚರಣೆ ಎಂದರೆ ಹೆರಿಗೆ ಮತ್ತು ಬಾಣಂತನದ ಸಂದರ್ಭದ ಆಚರಣೆ. ಹೆರಿಗೆಯಾದ ತಾಯಿ ತನ್ನ ಮಗುವಿನೊಂದಿಗೆ ಮೂರು ತಿಂಗಳಕಾಲ ಊರಿನಿಂದ ಹೊರಗೆ ಗರಿಗಳುಇಲ್ಲಾ ಬಾಳೆಪಟ್ಟೆಗಳಿಂದ ತಾತ್ಕಾಲಿಕವಾಗಿ ಕಟ್ಟಿದ ಗುಡಿಸಲಿನಲ್ಲಿ ತನ್ನ ಮಗುವಿನೊಂದಿಗೆ ಏಕಾಂಗಿಯಾಗಿ ಕಾಲ ಕಳೆಯಬೇಕಾಗುತ್ತದೆ. ಇದರಿಂದ ತನಗೆ ಆಗುವ ನೋವುಗಳನ್ನು ಸಹಿಸಿಕೊಳ್ಳುವುದರ ಜೊತೆಗೆ ತನ್ನ ಮಗುವಿಗೆ ಬರಬಹುದಾದ ಕಷ್ಟಗಳನ್ನು ತಾನೇ ನಿಭಾಯಿಸಿಕೊಳ್ಳಬೇಕಾಗುತ್ತದೆ.

**ಕುಲದೈವದ ಅಪ್ಪಣೆ ಕೇಳುವ ಆಚರಣೆ**

ಈ ಸಮುದಾಯ ಪಾಲಿಸುವ ಇನ್ನೊಂದು ಆಚರಣೆಯೆಂದರೆ ತಮಗೆ ಸಂಭವಿಸುವ ಯಾವುದೇ ಕಷ್ಟ-ನಷ್ಟಗಳಿಗೆ ಕಾರಣ ಮತ್ತು ಪರಿಹಾರಗಳನ್ನು ತಮ್ಮ ಕುಲದೈವದ ಅಪ್ಪಣೆ ಕೇಳುವ ಮೂಲಕ ಹುಡುಕುತ್ತಾರೆ. ಹೂ ಪ್ರಸಾದ ಕೇಳುವ, ಪೂಜಾರಿಯ ಮೈಮೇಲೆ ದೇವರ ಆವಾಹನೆಯಾಗಿ ಅಪ್ಪಣೆ ಕೊಡಿಸುವ ಆಚರಣೆಗಳು ಇಂದಿಗೂ ಅನೇಕ ಊರುಗಳಲ್ಲಿ ಜೀವಂತವಾಗಿವೆ. ಮಹಿಳೆಗೆ



ಯಾವುದೇ ಕಷ್ಟ-ನಷ್ಟಗಳು ಮುಖ್ಯವಾಗಿ ಮಕ್ಕಳಾಗದಿದ್ದರೆ, ಹೆರಿಗೆಗೆ ಸಂಬಂಧಿಸಿದ ಸಮಸ್ಯೆಗಳು ತಲೆದೋರಿದರೆ, ದೇವರಲ್ಲಿ ಪರಿಹಾರ ಬಯಸುವುದು ರೂಢಿಯಲ್ಲಿದೆ.

**ವಿಷಜಂತುಗಳ ರೂಪದಲ್ಲಿ ಶಿಕ್ಷೆ**

ಮೇಲೆ ವಿವರಿಸಿದ ಆಚರಣೆಗಳು ನಿರಂತರವಾಗಿ ಆಚರಿಸಿಕೊಂಡು ಹೋಗಲು ಪುನರ್‌ಬಲವರ್ಧನೆಯಾಗಿ ಕೆಲಸ ಮಾಡುವ ಇನ್ನೊಂದು ನಂಬಿಕೆಯೆಂದರೆ ಕಟ್ಟುಪಾಡುಗಳನ್ನು ಮುರಿದರೆ ದೇವರು ವಿಷಜಂತುಗಳ (ಹಾವು, ಚೇಳು....) ರೂಪದಲ್ಲಿ ಕಾಣಿಸಿಕೊಂಡು ಶಿಕ್ಷಿಸುತ್ತಾನೆ ಎಂದು ನಂಬಲಾಗುತ್ತದೆ. ಸಂಪ್ರದಾಯಗಳನ್ನು ಯಾವುದೋ ಕಾರಣಕ್ಕೆ ಸಡಿಲಮಾಡಿದರೆ, ಪಾಲಿಸದಿದ್ದರೆ ಅದೇ ಸಂದರ್ಭ ಅಥವಾ ನಂತರವೂ ಮನೆ-ಹೊಲಗಳಲ್ಲಿ ಹಾವು ಕಾಣಿಸಿಕೊಂಡರೆ ಸಂಪ್ರದಾಯಗಳನ್ನು ಮುರಿದ ಕಾರಣಕ್ಕೆ ಎಂದು ನಂಬಲಾಗುತ್ತದೆ. ಹಾವು ಕಾಣಿಸಿಕೊಳ್ಳುವುದು ಕಟ್ಟುಪಾಡುಗಳು ಮುರಿಯಲ್ಪಟ್ಟು ಮೈಲಿಗೆ ಉಂಟಾಗಿರುವ ಸಂಕೇತ ಎಂದೇ ಅರ್ಥೈಸಲಾಗುತ್ತದೆ. ಒಂದು ವೇಳೆ ಹಾವು ಕಚ್ಚಿದರೆ ಪಾಪದ ಪ್ರಾಯಶ್ಚಿತ್ತ ಎಂದು ಭಾವಿಸುವ ಸಾಧ್ಯತೆಯೂ ಇರುತ್ತದೆ. ಹೆರಿಗೆ ಅಥವಾ ಮುಟ್ಟಿನ ಸಂದರ್ಭದಲ್ಲಿ ಊರಿನಿಂದ ಹೊರಗಡೆ ಇರುವಾಗ ಸ್ವಾಭಾವಿಕವಾಗಿ ಹಾವುಗಳು ಹರಿದಾಡುತ್ತಾ ಈಕೆ ಇರುವ ಗುಡಿಸಲಿಗೆ ಬಂದರೆ ಮಹಿಳೆಯ ಸ್ಥಿತಿ ಏನಾಗಬಹುದೆಂಬುದು ಅವರವರ ಊಹೆಗೆ ಬಿಟ್ಟದ್ದು !.

**ಮೌಢ್ಯದ ಕಾರಣ ಮತ್ತು ಹಿನ್ನೆಲೆ**

ಕಾಡುಗೊಲ್ಲ ಸಮುದಾಯದಲ್ಲಿ ಮಹಿಳೆಯನ್ನು ಕೇಂದ್ರವಾಗಿಟ್ಟಿಕೊಂಡು ಆಚರಿಸುವ ಇಂತಹ ಅಮಾನವೀಯ ಕಟ್ಟುಪಾಡುಗಳು ಇಂದಿಗೂ ಕೂಡ ಬಹುತೇಕ ಗೊಲ್ಲರಹಟ್ಟಿಗಳಲ್ಲಿ ಜೀವಂತವಾಗಿರಲು ಕೆಲವು ಕಾರಣ ಮತ್ತು ಹಿನ್ನೆಲೆಗಳನ್ನು ವಿಶ್ಲೇಷಿಸಬಹುದಾಗಿದೆ.

1) ಆಚರಣೆಗಳು ದೇವರೊಂದಿಗೆ ತಳುಕು ಹಾಕಿಕೊಂಡಿರುವುದು ಒಂದು ಮುಖ್ಯಕಾರಣ. ಋತುಸ್ರಾವವನ್ನು 'ಮಲಿನ' ಎಂದು ಬಗೆದು ತಮ್ಮ ಕುಲದೇವರನ್ನು ಇಂತಹ ಮೈಲಿಗೆಯಿಂದ ಕಾಪಾಡಬೇಕೆಂದು ಇದು ದೇವರಿಗೆ ವಿರುದ್ದವೆಂದು ನಂಬಲಾಗಿದೆ. ಇದನ್ನ 'ದೈವಿಕ ನಿಯಮ'ವೆಂದೇ ಭಾವಿಸಲಾಗಿದೆ, ಇದರ ಉಲ್ಲಂಘನೆಗೆ 'ದೈವಿಕ ಅಪಚಾರ'ದ ಪಟ್ಟ ಕಟ್ಟಲಾಗುತ್ತದೆ.

2) ಎಲ್ಲಾ ಜನಾಂಗದಂತೆ ಇವರಲ್ಲಿಯೂ ಪುರುಷ ಶ್ರೇಷ್ಠತೆ, ಪುರುಷ ಪ್ರಾಬಲ್ಯತೆಗಳಿಂದ ಅವುಗಳನ್ನು ಕಾಪಾಡಿಕೊಳ್ಳಲು ಮಹಿಳೆಯ ಮೇಲೆ ಅನೇಕ ಕಟ್ಟುಪಾಡುಗಳನ್ನು ವಿಧಿಸಿರಬಹುದಾಗಿದೆ. ಋತುಸ್ರಾವ ಪುರುಷನಿಗೆ ಮಹಿಳೆಯನ್ನು ನಿಯಂತ್ರಿಸಲು ಸುಲಭದ, ಪರಿಣಾಮಕಾರಿ ಸಾಧನವಾಗಿರುತ್ತದೆ. ಇವೆರೆಡೂ ಕಾರಣಗಳು ಪ್ರತ್ಯೇಕವೆನಿಸಿದರೂ ಒಂದಕ್ಕೊಂದು ಅಂತರ್ ಸಂಬಂಧ ಇರುವ ಸಾಧ್ಯತೆಯೂ ಇದೆ.

3) ಊರುಗಳಿಂದ ದೂರ, ನಾಗರಿಕತೆಯ ಸೋಂಕು ತಟ್ಟದಂತೆ ಇತರ ಸಮುದಾಯದೊಂದಿಗೆ ಬೆರೆಯದೆ ಒಂದು ಪ್ರತ್ಯೇಕ ಬುಡಕಟ್ಟಾಗಿ ಉಳಿದುಕೊಳ್ಳಲು ಪ್ರಯತ್ನಿಸುತ್ತಿರುವುದು.

4) ಋತುಸ್ರಾವದ ಮೌಢ್ಯ ಬೇರೂರಿ ಜೀವಂತವಾಗಿರಲು ಕಾಕತಾಳಿಯ ಘಟನೆಗಳನ್ನು ಇದಕ್ಕೆ ಅನ್ವಯಿಸುವುದು ಮುಖ್ಯ ಕಾರಣ. ಮಹಿಳೆ ಮೇಲಿನ ಕಟ್ಟುಪಾಡು ಯಾವುದಾದರೂ ಕಾರಣಕ್ಕೆ ಸಡಿಲಗೊಂಡು ಅದೇಸಂದರ್ಭಕ್ಕೆ ಏನಾದರೂ ತೊಂದರೆ–ತಾಪತ್ರಯಗಳು ತಲೆದೋರಿದರೆ 'ಕಟ್ಟು ಪಾಡುಗಳನ್ನು ಮುರಿದದಕ್ಕೆ ಹೀಗಾಯಿತು' ಎಂದು ಆರೋಪಿಸಿ ಅದರ ಹೊಣೆಯನ್ನು ಆಕೆಯ ಮೇಲೆ ಹೊರೆಸಲಾಗುತ್ತದೆ.

5) ಜನಾಂಗದ ಧಾರ್ಮಿಕ ಮುಖಂಡರು ಮತ್ತು ಸಮುದಾಯವನ್ನು ಎದರು ಹಾಕಿಕೊಳ್ಳುವ ಭಯ, ಕಟ್ಟುಪಾಡುಗಳು ಕಟ್ಟುನಿಟ್ಟಾಗಿ ಪಾಲಿಸುವಂತಾಗಲು ಮುಖಂಡರ ಪಾತ್ರ ಮುಖ್ಯವಾಗಿರುತ್ತದೆ.

**ಮೌಢ್ಯದ ದುಷ್ಪರಿಣಾಮಗಳು**

ಋತುಸ್ರಾವಕ್ಕೆ ಸಂಬಂಧಿಸಿದಂತೆ ವಿಧಿಸಲಾಗಿರುವ ನಿರ್ಬಂಧಗಳು ಮತ್ತು ಕಟ್ಟುಪಾಡುಗಳಿಂದ ಕಾಡುಗೊಲ್ಲ ಸಮುದಾಯದ ಮುಗ್ಧ ಮತ್ತು ಅಸಹಾಯಕ ಮಹಿಳೆಯರು ಪಡುವ ಬವಣೆಗಳು ಕಠೋರ ಮತ್ತು ಅಮಾನವೀಯ. ಅವುಗಳಲ್ಲಿ ಮುಖ್ಯವಾದವುಗಳೆಂದರೆ

1) **ಪ್ರಾಣಭಯ :** ಊರಿನಿಂದಾಚೆ ತಾತ್ಕಾಲಿಕ ಆಶ್ರಯದಲ್ಲಿ ಒಬ್ಬಂಟಿಯಾಗಿ ಋತುಸ್ರಾವದಂತಹ ಮಾನಸಿಕ ದೈಹಿಕ ಅಸ್ವಸ್ಥತೆಗಳು ಇರುವ ಸಂದರ್ಭದಲ್ಲಿ ಆರೋಗ್ಯದ ಸಮಸ್ಯೆ ಜೊತೆಗೆ ಕಳ್ಳ–ಕಾಕರ, ಪುಂಡ–ಪೋಕರಿಗಳ, ನೈಸರ್ಗಿಕ ಆಪತ್ತುಗಳಾದ ಗಾಳಿ–ಮಳೆ, ವಿಷಜಂತುಗಳ ಉಪಟಳ ಕಾಡುಪ್ರಾಣಿಗಳ ಭಯದಿಂದ ತನ್ನ ಪ್ರಾಣವನ್ನೇ ಪಣಕೊಡ್ಡಬೇಕಾಗುತ್ತದೆ. ಈಕೆಯನ್ನು ಯಾರೂ ಮುಟ್ಟಿಸಿಕೊಳ್ಳಬಾರದೆಂಬ ನಿಯಮವಿರುವುದರಿಂದ ಯಾರಾದರೂ ರಕ್ಷಣೆಗೆ ಧಾವಿಸುತ್ತಾರೆಂಬ ಭರವಸೆ ಇಲ್ಲದ ಅಭದ್ರ ಸ್ಥಿತಿಯಲ್ಲಿ ದಿನದೂಡಬೇಕಾಗುತ್ತದೆ.

| ಸಾಕ್ಷರತೆ ಪ್ರಮಾಣ ಶೇಕಡವಾರು | | | | |
|---|---|---|---|---|
| | | ಪ್ರಾಥಮಿಕ ಶಿಕ್ಷಣ | ಪದವಿ ಶಿಕ್ಷಣ | ಉನ್ನತ ಶಿಕ್ಷಣ |
| ಪುರುಷರು | 26.40 | 26.40 | 2.00 | 0.08 |
| ಮಹಿಳೆಯರು | 16.20 | 16.20 | 0.15 | 0.02 |
| ಒಟ್ಟು | 42.60 | 42.60 | 2.15 | 0.10 |

2) **ಮುಗಿಯದ ಹೋರಾಟ:** ಈ ಸಮುದಾಯದ ಮಹಿಳೆಯರು ಗೃಹಕೃತ್ಯಗಳನ್ನು ನಿರ್ವಹಿಸಿಕೊಂಡು ಹೊರಗೆ ಪುರುಷನಿಗೆ ಸರಿಸಮನಾಗಿ ಹೊಲದಲ್ಲಿಯೂ ಕೆಲಸಮಾಡುವುದರ ಜೊತೆಗೆ ಋತುಸ್ರಾವದ ಕಟ್ಟುಪಾಡುಗಳ ಪರಿತಾಪವನ್ನೂ ಎದುರಿಸಬೇಕಾಗುವುದರಿಂದ ಈಕೆಯದು ಒಂದುರೀತಿಯಲ್ಲಿ ಮುಗಿಯದ ಹೋರಾಟವಾಗಿರುತ್ತದೆ.

3) **ಘನತೆ–ಗೌರವಗಳಿಗೆ ಚ್ಯುತಿ :** ಋತುಸ್ರಾವದ ಸಂದರ್ಭದಲ್ಲಿ ಊರಿನಿಂದ ಆಚೆ ಇರಿಸಿ ಪ್ರತ್ಯೇಕಿಸುವುದರಿಂದ ಆಕೆಯಲ್ಲಿ ಅಪರಾಧಿ ಭಾವ ಉಂಟಾಗುತ್ತದೆ. ಇದರಿಂದ ನಿಕೃಷ್ಠ ನೋಟವನ್ನು ಎದುರಿಸಬೇಕಾಗುತ್ತದೆ. ಮುಖ್ಯವಾಗಿ ಹಾದಿ ಬೀದಿಯಲ್ಲಿ ತಿರುಗಾಡುವ ಇತರೆ ಸಮುದಾಯದವರು ಇವರನ್ನು ತುಂಬಾ ಹಗುರವಾಗಿ ನೋಡುತ್ತಾರೆ. ಇದರಲ್ಲಿ ತನ್ನದೇನೂ ತಪ್ಪಿಲ್ಲದಿದ್ದರೂ ಅಷ್ಟೂದಿನಗಳು ಒಂದುರೀತಿಯ ಮುಜುಗರ ಮತ್ತು ತಪ್ಪಿತಸ್ಥ ಭಾವನೆಗಳ ಸಂಕಟ ಅನುಭವಿಸಬೇಕಾಗುತ್ತದೆ.

4) **ನಾಗರಿಕ ಸೌಲಭ್ಯಗಳಿಂದ ವಂಚಿತೆ :** ಊರಿನಿಂದ ಹೊರಗೆ ಇರುವ ಸಂದರ್ಭದಲ್ಲಿ ಜೀವನಾವಶ್ಯಕ ಸೌಲಭ್ಯಗಳನ್ನು ಪಡೆದುಕೊಳ್ಳುವುದು ತುಂಬಾ ಕಷ್ಟವಾಗುತ್ತದೆ.ಈ ಸಂದರ್ಭದಲ್ಲಿ ತುಂಬಾ ಅಗತ್ಯವಾದ ದೈಹಿಕ ಶುಚಿತ್ವ ಕಾಪಾಡಿಕೊಳ್ಳುವುದು ಕಷ್ಟವಾಗುತ್ತದೆ. ಒಬ್ಬಂಟಿ ಕುಟುಂಬವಾದರೆ, ಹಟ್ಟಿಯಲ್ಲಿ ವೈಷಮ್ಯವಿದ್ದರೆ, ಒಂದುರೀತಿ ಮಹಿಳೆಯ ಪಾಡು 'ದುರ್ದಿನದಲ್ಲಿ ಅಧಿಕಮಾಸ' ದಂತಾಗಬಹುದು.

5) **ತಾಯ್ತನವೇ ಶಾಪವಾಗಿರುವುದು:** ಋತುಸ್ರಾವದ ಕಟ್ಟುಪಾಡುಗಳ ದುಷ್ಪರಿಣಾಮಗಳಿಗೆ ಬೇಸತ್ತ ಅನೇಕ ಹೆಣ್ಣುಮಕ್ಕಳು ಇದಕ್ಕೆ ಕಾರಣವಾಗುವ ಗರ್ಭಕೋಶವನ್ನೇ ತೆಗೆಸಿಕೊಂಡು ತಮ್ಮ ಭವಿಷ್ಯವನ್ನು ಬಲಿಕೊಟ್ಟಿರುವ ಉದಾಹರಣೆಗಳಿವೆ. ಇವರಿಗೆ ತಾಯ್ತನವೇ ಒಂದು ಶಾಪವಾಗಿದೆ.

ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಈ ಜನಾಂಗದ ಅನೇಕ ಹೆಣ್ಣುಮಕ್ಕಳು ಈ ಕಾರಣಕ್ಕಾಗಿ ಗರ್ಭಕೋಶ ತೇಗಿಸಿರುವ ಬಗ್ಗೆ ಮಾಧ್ಯಮಗಳು ವರದಿ ಮಾಡಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

6) **ಶೈಕ್ಷಣಿಕ ಅವಕಾಶಗಳಿಂದ ವಂಚಿತೆ :** ಶಾಲೆಗೆ ಹೆಣ್ಣುಮಕ್ಕಳನ್ನು ಕಳುಹಿಸುವುದು ಕಡಿಮೆ. ಒಂದು ವೇಳೆ ಕಳುಹಿಸಿದರೂ ಕಲಿಕೆ ಅವಿಚ್ಛಿನ್ನವಾಗಿ ಸಾಗದೇ ಕುಂಠಿತಗೊಳ್ಳುತ್ತದೆ. ಏಕೆಂದರೆ ಶಾಲೆ ಕಲಿಯುತ್ತಿರುವಾಗ ಋತುಮತಿಯಾದರೆ ಅದಕ್ಕೆ ಸಂಬಂಧಿಸಿದ ಕಟ್ಟುಪಾಡುಗಳ ಆಚರಣೆಗೆ ಮಗುವನ್ನು ಶಾಲೆಯಿಂದ ಬಿಡಿಸಲಾಗುತ್ತದೆ. ನಂತರ ಮದುವೆ ಪ್ರಯತ್ನಗಳನ್ನು ಪ್ರಾರಂಭಿಸಲಾಗುತ್ತದೆ. ಒಂದು ವೇಳೆ ಕಲಿಕೆ ಮುಂದುವರೆದರೂ ಮುಟ್ಟಾಗುವ ಸಂದರ್ಭದ(ನಾಲ್ಕು ದಿನಗಳು) ಕಟ್ಟುಪಾಡು ಪಾಲನೆಗೆ ಪ್ರತಿ ತಿಂಗಳು ಶಾಲೆ ಬಿಡಬೇಕಾಗುತ್ತದೆ.

ಈ ಜನಾಂಗದ ಮಹಿಳಾ ಜನಸಂಖ್ಯೆ ಮತ್ತು ಸಾಕ್ಷರತೆಯ ಪ್ರಮಾಣದ ಅಂಕಿ–ಅಂಶಗಳು ಮುಂದಿನಂತಿವೆ.

| ಜನಸಂಖ್ಯಾ ಪ್ರಮಾಣ (ಲಕ್ಷಗಳಲ್ಲಿ) | | |
|---|---|---|
| **ಪುರುಷರು** | **ಮಹಿಳೆಯರು** | **ಒಟ್ಟು** |
| 3.86 | 3.00 | 6.86 |

ಈ ಅಂಕಿ–ಅಂಶಗಳನ್ನು ಪರಿಶೀಲಿಸಿದರೆ ಲಿಂಗಾನುಪಾತದಲ್ಲಿ ಅಂತರವಿರುವುದು ಕಂಡುಬರುತ್ತದೆ. ಒಟ್ಟು ಜನಸಂಖ್ಯೆ 6.86 ಲಕ್ಷಗಳಲ್ಲಿ ಮಹಿಳೆಯರ

ಸಂಖ್ಯೆ ಮೂರು ಲಕ್ಷಮಾತ್ರ ವಿರುವುದು ಅನುಪಾತದ ಅಸಮಾನತೆಯನ್ನು ಎತ್ತಿ ತೋರಿಸುತ್ತದೆ. ಅದೇ ರೀತಿ ಸಾಕ್ಷರತೆ ಪ್ರಮಾಣದಲ್ಲಿಯೂ ಮಹಿಳೆ ಪುರುಷರಿಗಿಂತ ಅತ್ಯಂತ ಕೆಳಮಟ್ಟದಲ್ಲಿರುವುದು ಕಂಡುಬರುತ್ತದೆ. ಪ್ರಾಥಮಿಕ ಶಿಕ್ಷಣ ಮುಗಿಸಿದವರ ಸಂಖ್ಯೆ ಮತ್ತು ಪದವಿ ಶಿಕ್ಷಣಕ್ಕೆ ಸೇರಿಕೊಂಡವರ ಸಂಖ್ಯೆಗೂ ಹೋಲಿಸಿದಾಗ ಮಧ್ಯದಲ್ಲಿ ಶಿಕ್ಷಣ ನಿಲ್ಲಿಸಿದವರ ಸಂಖ್ಯೆ ಹೆಚ್ಚಿರುವುದು, ಮಹಿಳಾ ಪದವೀಧರರ ಸಂಖ್ಯೆ ನಿರೀಕ್ಷಿತ ಮಟ್ಟದಲ್ಲಿ ಇಲ್ಲದೇ ಇರುವುದು ತಿಳಿದುಬಂದರೆ, ಉನ್ನತ ವ್ಯಾಸಂಗ ಮಾಡಿದವರಂತೂ ತೀರಾ ನಗಣ್ಯವಾಗಿದ್ದಾರೆ.

**ಪರಿಹಾರಗಳು**

ನಮ್ಮ ಹುಟ್ಟಿನ ಮೂಲ ಇರುವುದೇ ಋತುಸ್ರಾವದಲ್ಲಿ. ನಾವೆಲ್ಲ ಹುಟ್ಟುಸಾವು ಇರುವ ಆದರ್ಶ ವ್ಯಕ್ತಿಯನ್ನೇ ದೇವರೆಂದು ನಂಬುವುದಾದರೆ, ಆ ದೇವರು ಹುಟ್ಟುವುದು ಇದೇ ಋತುಸ್ರಾವದ ಮೂಲದಿಂದಲೇ. ಇದೊಂದು ಮಾನವನ ಹುಟ್ಟು ಸಾವುಗಳ ನಡುವಿನ ವಿಕಾಸದ ಪ್ರಕ್ರಿಯೆಯಲ್ಲಿ ತೀರಾ ಸಾಮಾನ್ಯ ಮತ್ತು ನೈಸರ್ಗಿಕ ಕ್ರಿಯೆ, ಇದರಲ್ಲಿ ಮೈಲಿಗೆ ಸೂತಕದ ಪ್ರಶ್ನೆಯೇ ಬರುವುದಿಲ್ಲ, ಈ ವಾಸ್ತವಿಕತೆಯ ಬಗ್ಗೆ ಸಮುದಾಯದಲ್ಲಿ ಜಾಗೃತಿ ಮೂಡಬೇಕಾಗಿದೆ. ತಲತಲಾಂತರಗಳಿಂದ ಆಚರಿಸಿಕೊಂಡು ಬಂದ ಆಚರಣೆಗಳನ್ನು ಬದಲಿಸಿಕೊಳ್ಳುವುದು ಸುಲಭವೇನು ಅಲ್ಲ, ಏಕೆಂದರೆ ಅವು ಆಳವಾಗಿ ಬೇರೂರಿರುತ್ತವೆ. ಆದರೆ ಇಚ್ಛಾಶಕ್ತಿ ಇದ್ದರೆ ಯಾವುದೂ ಅಸಾಧ್ಯವಲ್ಲ. ಈ ಜನಾಂಗದಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕೆಳಕಂಡಂತೆ ಕೆಲವು ಪರಿಹಾರ ಕ್ರಮಗಳನ್ನು ಪರಿಶೀಲಸಬಹುದಾಗಿದೆ.

1) **ಜನಾಂಗದ ಮುಖಂಡರ ಪಾತ್ರ:** ಆಚರಣೆಗಳನ್ನು ಪಾಲಿಸುವ ನಿಟ್ಟಿನಲ್ಲಿ ಜನಾಂಗದ ಮುಖಂಡರು(ಪೂಜಾರಿಗಳು) ಮುಖ್ಯ ಪ್ರಭಾವ ಬೀರುತ್ತಾರೆ. ಜನಸಮುದಾಯ ಮುಖಂಡರ ನಿಯಂತ್ರಣ ಮತ್ತು ಪ್ರಭಾವಗಳಿಗೆ ಒಳಗಾಗಿರುತ್ತಾರೆ. ಮುಖಂಡರು ಮೌಢ್ಯಾಚಾರಣೆಗಳನ್ನು ನಿಲ್ಲಿಸುವ ಇಚ್ಛಾಶಕ್ತಿ ಪ್ರದರ್ಶಿಸಿದರೆ ಬದಲಾವಣೆ ಸಾಧ್ಯವಾಗುತ್ತದೆ.

ಇದೇ ರೀತಿ ಈ ಜನಾಂಗದಲ್ಲಿನ ವಿದ್ಯಾವಂತರು,ಉದ್ಯೋಗಸ್ಥರು,ಪ್ರಗತಿಪರರು ಮುಂದೆ ಬಂದು ಮೌಢ್ಯಾಚರಣೆಗಳನ್ನು ಬದಾಲಾಯಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ,

2) **ನಾಗರಿಕ ಸಮುದಾಯದ ಪಾತ್ರ:** ಸಮುದಾಯದ ಹಕ್ಕು ಮತ್ತು ಸ್ವಾತಂತ್ರ್ಯ ಕಾಪಾಡುವಲ್ಲಿ ಜಾಗೃತಿ ಮೂಡಿಸುವಲ್ಲಿ, ಸಂಘ ಸಂಸ್ಥೆಗಳು ಸಮೂಹ ಮಾಧ್ಯಮಗಳು ಮತ್ತು ಬುದ್ಧಿಜೀವಿ–ಸಂಶೋಧಕರ ಪಾತ್ರ ಮುಖ್ಯವಿರುತ್ತದೆ. ಮೌಢ್ಯತೆ ಇರುವಕಡೆ ಜಾಗೃತಿ ಮೂಡಿಸುವ ಕೆಲಸ ಇವರಿಂದ ಆಗಬೇಕಾಗುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ಸ್ವಯಂ ಸೇವಾ ಸಂಸ್ಥೆಗಳು ಧರ್ಮಗುರುಗಳು ಮತ್ತು ಮಾಧ್ಯಮಗಳು ನಿರ್ವಹಿಸುತ್ತಿರುವ ಪಾತ್ರ ಶ್ಲ್ಯಾಘನೀಯ.





3) **ಸರ್ಕಾರದ ಪಾತ್ರ** : ನಾಗರೀಕ ಸೌಲಭ್ಯಗಳಿಂದ ವಂಚಿತರಾಗಿ ಊರುಗಳಿಂದ ದೂರ ತಮದೇ ಲೋಕದಲ್ಲಿ ಹುದುಗಿರುವ ಈ ಸಮುದಾಯಗಳಿಗೆ ಸರ್ಕಾರ ಅಗತ್ಯ ನಾಗರಿಕ ಸೌಲಭ್ಯಗಳನ್ನು ಒದಗಿಸಿ ಸಮಾಜದ ಮುಖ್ಯವಾಹಿನಿಗೆ ಬರುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ರಾಜ್ಯ ಸರ್ಕಾರ ಪ್ರಯತ್ನಗಳನ್ನು ಆರಂಭಿಸಿರುವುದು ಭರವಸೆಯನ್ನುಂಟುಮಾಡಿದೆ.

4) **ಶಿಕ್ಷಣದ ಪಾತ್ರ** : ಮೇಲೆ ವಿವರಿಸಿದ ಮೂರು ಪರಿಹಾರ ಕ್ರಮಗಳು ವ್ಯಕ್ತಿಯನ್ನು ಬಾಹ್ಯವಾಗಿ ಪ್ರಭಾವಿಸುತ್ತವೆ. ಬಾಹ್ಯವಾಗಿ ಪ್ರಭಾವಿಸುವ ಕ್ರಮಗಳಿಗೆ ಒಂದು ಮಿತಿಯಿರುತ್ತದೆ. ಅದೇನೆಂದರೆ ಈ ಪ್ರಭಾವಗಳು ಮಧ್ಯದಲ್ಲಿ ನಿಂತರೆ ವ್ಯಕ್ತಿಯೂ ತನ್ನ ಪ್ರತಿಕ್ರಿಯೆಯನ್ನು ನಿಲ್ಲಿಸುತ್ತಾನೆ.

ಆದರೆ ವ್ಯಕ್ತಿಯ ಒಳಗಿನಿಂದ ಅಂದರೆ ಅವನ ಅಂತರಂಗದಿಂದಲೇ ಪ್ರಭಾವಗಳು ಉಂಟಾಗುವಂತಿದ್ದರೆ ಅದು ಶಾಶ್ವತವಾದ ಪ್ರಭಾವವಾಗುತ್ತದೆ. ಇದು ಶಿಕ್ಷಣದಿಂದ ಮಾತ್ರ ಸಾದ್ಯ. ಈ ಜನಾಂಗದಲ್ಲಿ ನೂರರಲ್ಲಿ ಅರ್ಧದಷ್ಟು ಮಂದಿ ಅನಕ್ಷರಸ್ಥರಿದ್ದಾರೆ.

ಇವರಲ್ಲಿ ಮಹಿಳಾ ಶಿಕ್ಷಣವಂತರು ತುಂಬಾ ಕಡಿಮೆ. ಇವರೆಲ್ಲರನ್ನು ವಿದ್ಯಾವಂತರನ್ನಾಗಿ ಮಾಡುವ ಮೂಲಕ ಮೌಢ್ಯಾಚಾರಣೆಗಳಿಂದ ಹೊರ ಬರುವಂತೆ ಮಾಡಬಹುದು. ಪೂರ್ವಜನ್ಮದ ಕರ್ಮ, ಹಣೆ ಬರಹ, ಹೆಣ್ಣಾಗಿ ಹುಟ್ಟಬಾರದಿತ್ತು... ಇವೇ ಮೊದಲಾಗಿ ಹಳಿಯುತ್ತಾ ಕೂರದೆ ಮಹಿಳೆ ಅರಿವಿನ ಕಡೆಗೆ ಧಾವಿಸಬೇಕಾಗಿದೆ. ಭಯದ ಮೂಲ ಅಜ್ಞಾನ. ನಾವು ನಿರ್ಭಯರಾಗಿ ಪ್ರಗತಿಯ ಕಡೆ ಆತ್ಮ ವಿಶ್ವಾಸದಿಂದ ಅಡಿ ಇಡಬೇಕೆಂದರೆ ಜ್ಞಾನ ಸಂಪಾದಿಸಬೇಕು ಆದ್ದರಿಂದ ಮೌಢ್ಯದ ತಿಮಿರಕ್ಕೆ ಶಿಕ್ಷಣದ ಹಣತೆಯೆ ಬಹು ಮುಖ್ಯ ಪರಿಹಾರ. ❑

# ಮಹಿಳಾ ಸುಧಾರಣೆಯಲ್ಲಿ ಕುದ್ರೋಳಿಯ ಹೆಜ್ಜೆ

ಸ್ವಯಂಪ್ರಭಾ



**ಮಹಿಳೆಗೆ ಧಾರ್ಮಿಕ ಕ್ಷೇತ್ರದಲ್ಲಿ ಪುರುಷರಷ್ಟೇ ಸಮಾನವಾದ ಅವಕಾಶವನ್ನು ಯಾವ ಧರ್ಮದಲ್ಲಿಯೂ ನೀಡಿದಂತಿಲ್ಲ. ಇತ್ತೀಚೆಗಿನ ವರ್ಷಗಳಲ್ಲಿ ಮಂಗಳೂರಿನ ಕುದ್ರೋಳಿ ದೇವಸ್ಥಾನದಲ್ಲಿ ವಿಧವಾ ಮಹಿಳೆಯರಿಗೆ ಹೂವು, ಕುಂಕುಮ ಸೀರೆ ನೀಡುವ, ದಲಿತ ಅರ್ಚಕಿಯರಿಗೆ ಪೂಜೆಯ ಅವಕಾಶವನ್ನು ಕಲ್ಪಿಸುವ ಮೂಲಕ ಹಲವಾರು ಸುಧಾರಣಾ ಕಾರ್ಯಕ್ರಮಗಳು ನಡೆದವು. ಧಾರ್ಮಿಕ ಸುಧಾರಣೆ ಬಹಳ ಕಷ್ಟವೆನಿಸಿದ ಸಂದರ್ಭದಲ್ಲಿ ಕುದ್ರೋಳಿಯಲ್ಲಿ ನಡೆದ ಪ್ರಯತ್ನಗಳು ಶ್ಲಾಘನೀಯ.**

ಜಾತಿಯ ಭೀಕರತೆ ಢಾಳಾಗಿದ್ದ ಸಂದರ್ಭದಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಅವರು ಸ್ಥಾಪಿಸಿದ ದೇವಸ್ಥಾನ, ಮಂಗಳೂರಿನ ಕುದ್ರೋಳಿ ಶ್ರೀ ಗೋಕರ್ಣನಾಥ ದೇವಾಲಯ. ಒಂದೇ ಜಾತಿ, ಒಂದೇ ಮತ ಎಂಬ ಪರಿಕಲ್ಪನೆಯಡಿ ಆರಂಭವಾದ ದೇವಸ್ಥಾನದಲ್ಲಿ ಎಲ್ಲ ಜಾತಿಯವರಿಗೂ ಮುಕ್ತಪ್ರವೇಶ ಇರಬೇಕು ಎನ್ನುವುದು ಆರಂಭದ ಆಶಯವಾಗಿತ್ತು.

ಸುಧಾರಣೆಗಳು ಒಂದು ಕಾಲಘಟ್ಟಕ್ಕೆ ಸೀಮಿತವಾಗಿ ನಿಂತುಬಿಡುವುದಿದೆ. ಆಯಾ ಕಾಲದಲ್ಲಿ ಉಂಟಾದ ಸಾಮಾಜಿಕ ಪ್ರತಿರೋಧದ ಅಲೆಯಲ್ಲಿ ಸುಧಾರಣೆಗಳು ಪುಟಿದೆದ್ದು ಬಳಿಕ ತಣ್ಣಗಾಗುತ್ತವೆ. ಅದೇ ಆಶಯವನ್ನು ಮತ್ತೆ ಮುಂದುವರೆಸಲು ಉದಾರವಾದ ದೃಷ್ಟಿಕೋನದ ಅಗತ್ಯವಿರುತ್ತದೆ. ಕುದ್ರೋಳಿ ದೇವಸ್ಥಾನದಲ್ಲಿ ಇತ್ತೀಚಿಗಿನ ದಶಕದಲ್ಲಿ ಇಂತಹ ಕೆಲವು ಸುಧಾರಣೆಯ ಕ್ರಮಗಳು ನಡೆದಿವೆ. ಜಾತಿ ವ್ಯವಸ್ಥೆ ಅಳಿಯಬೇಕು ಎಂದು ಬಯಸುವ ಎಲ್ಲರಲ್ಲಿಯೂ ಮಾನವ ಸಮಾನತೆಯ ಮೂಲ ಆಶಯ ಇದ್ದೇ ಇರುತ್ತದಲ್ಲವೆ. ಅಂದ ಮೇಲೆ ಮಹಿಳೆ ಮತ್ತು ಪುರುಷರ ನಡುವಿನ ಅಸಮಾನ ವ್ಯವಸ್ಥೆಯೂ ಒಪ್ಪತಕ್ಕ ವಿಚಾರವಲ್ಲ. ಮಾತುಗಳಲ್ಲಿ, ಸಿದ್ಧಾಂತ ರೂಪದಲ್ಲಿ ಈ ಬಗ್ಗೆ ಎಷ್ಟೇ ಹೇಳಿದರೂ ಅದು ಪ್ರಾಯೋಗಿಕವಾಗಿ ಅತೀ ಅಪರೂಪ. ಹೆಣ್ಣು ಹೊನ್ನು ಮಣ್ಣು ವ್ಯಕ್ತಿಯ ಅಂದರೆ ಪುರುಷನ ಭೋಗ ಭಾಗ್ಯಗಳ ಪಟ್ಟಿಯಲ್ಲಿ ಸೇರಿದೆ. ಇವು ಮೂರನ್ನು ಸರಿಯಾಗಿ ನಿರ್ವಹಿಸುವುದು ಅಥವಾ ನಿಯಂತ್ರಿಸುವುದನ್ನು ತಿಳಿದಲ್ಲಿ ಸುಖ ಸಂತೋಷದಿಂದ ಬಾಳಬಹುದು ಎನ್ನುವ ನಂಬಿಕೆ ನಮ್ಮ ಸಮಾಜದಲ್ಲಿ ಆಳವಾಗಿ ಬೇರೂರಿದೆ. ನಿಯಂತ್ರಣಕ್ಕೊಳಪಡಬೇಕಾದ ಪಟ್ಟಿಯಲ್ಲಿ ಹೊನ್ನು ಮತ್ತು ಮಣ್ಣಿಗೆ ಜೀವವಿಲ್ಲ. ಆದರೆ ಹೆಣ್ಣಿಗೆ ಜೀವವಿದೆ, ಸಂವೇದನೆಯುಳ್ಳ ಹೃದಯವಿದೆ ಎನ್ನುವುದು ವಿಪರ್ಯಾಸ.

ಹಾಗಾಗಿ ಹೆಣ್ಣು ಸದಾ ನಿಯಂತ್ರಣಕ್ಕೊಳಗಾಗುತ್ತಾ ಬಂದವಳು. ಆಕೆಯ ವ್ಯಕ್ತಿತ್ವ ವಿಕಾಸವೂ ನಿಯಂತ್ರಣದ ಚೌಕಟ್ಟಿನಲ್ಲಿಯೇ ಉಳಿದುಕೊಂಡಿದೆಯೇ ಹೊರತು ಮುಕ್ತತೆಯ ಖುಷಿಯಲ್ಲಿ ಅರಳುವುದು ಸಾಧ್ಯವಾಗಿಲ್ಲ ಎಂದೇ ಹೇಳಬೇಕು. ನಿಯಂತ್ರಣ ಪ್ರಕ್ರಿಯೆಯಲ್ಲಿ ಸಾಮಾಜಿಕವಾಗಿ ಆಕೆಗೆ ಒಂದಷ್ಟು ನಿಯಮಗಳಿದ್ದರೆ, ಧಾರ್ಮಿಕವಾಗಿ ಮತ್ತಷ್ಟು ಕಟುವಾದ ನಿಯಮಗಳಿವೆ. ಸಾಮಾಜಿಕ ಸುಧಾರಣೆಗಳಿಗೆ ಬೆಂಬಲ ನೀಡುವವರ ದೊಡ್ಡಗುಂಪೇ ಇರುತ್ತದೆ. ಆದರೆ ಧಾರ್ಮಿಕ ಸುಧಾರಣೆಗಳಿಗೆ ಬೆಂಬಲ ನೀಡುವವರ ಸಂಖ್ಯೆ ತುಂಬಾ ಕಡಿಮೆ. ಧಾರ್ಮಿಕ ಆಚರಣೆಗಳು ವ್ಯಕ್ತಿಯ ವೈಯಕ್ತಿಕ ನಂಬಿಕೆಗಳಾದ್ದರಿಂದ ಅವುಗಳು ಬಾಲ್ಯದಿಂದಲೇ ಉಸಿರಿನಂತೆ ವ್ಯಕ್ತಿಯನ್ನು ಅಂಟಿಕೊಂಡಿರುತ್ತದೆ. ಆದ್ದರಿಂದ ಧಾರ್ಮಿಕ ಸುಧಾರಣೆಗಳು ಹಲವರಿಗೆ ಅಪಚಾರದಂತೆಯೇ ಭಾಸವಾಗಿಬಿಡುತ್ತದೆ. ಮಹಿಳಾ ಸುಧಾರಣೆಯ ಕ್ಷೇತ್ರದಲ್ಲಿ ಸಾಮಾಜಿಕ ಸುಧಾರಣೆಗಳಾದಷ್ಟೇ ಪ್ರಮಾಣದಲ್ಲಿ ಧಾರ್ಮಿಕ ಸುಧಾರಣೆಗಳು ನಡೆದಿಲ್ಲ. ಹೆಣ್ಮಕ್ಕಳು ಉದ್ಯೋಗಕ್ಕೆ ಹೋಗುವುದು, ವರದಕ್ಷಿಣೆಯ ವಿರುದ್ಧದ

ಹಿರಿಯ ಪತ್ರಕರ್ತೆ.

ಹೋರಾಟ, ರಾಜಕೀಯದಲ್ಲಿ ಮೀಸಲಾತಿಯಂತಹ ಸುಧಾರಣಾ ಕ್ರಮಗಳು ಆರಂಭದಲ್ಲಿ ಪ್ರತಿರೋಧಗಳನ್ನು ಕಂಡರೂ ಕಳೆದ ಶತಮಾನದಿಂದಲೇ ಅವುಗಳ ವಿರುದ್ಧದ ದನಿಯೂ ಗಟ್ಟಿಯಾಗಿಯೇ ಕೇಳಿಸಲಾರಂಭಿಸಿವೆ. ಆದರೆ ಧಾರ್ಮಿಕ ಕ್ಷೇತ್ರದಲ್ಲಿ ಅಂತಹ ಗುರುತರವಾದ ಸುಧಾರಣೆಗಳು ಆಗಿಲ್ಲ. ಅವುಗಳಿಗೆ ಸಮರೋಪಾದಿಯ ಬೆಂಬಲವೂ ಸಿಗುವುದು ಅಷ್ಟಕ್ಕಷ್ಟೆ. ಅಲ್ಲೊಂದು ಇಲ್ಲೊಂದು ಭರವಸೆಯ ಹೆಜ್ಜೆಗಳು ಕಾಣಿಸಿಕೊಂಡಿವೆ. ಅಂತಹ ಪ್ರಯತ್ನಗಳು ನಡೆದಾಗೆಲ್ಲ ಒಂದು ಬಾರಿಗೆ ಮಾತ್ರ ಸೀಮಿತವಾಗಿ ಉಳಿದ ಉದಾಹರಣೆಗಳೇ ಹೆಚ್ಚು. ನಿರಂತರತೆ ಇಲ್ಲದೇ ಇದ್ದಾಗ ಸುಧಾರಣಾ ಕ್ರಮಗಳು ಬರೆಯ ಸುದ್ದಿಯಾಗಿಯಷ್ಟೇ ಪ್ರಚಾರ ಪಡೆಯುತ್ತದೆ. ಮಂಗಳೂರಿನ ಕುದ್ರೋಳಿ ಗೋಕರ್ಣನಾಥ ದೇವಸ್ಥಾನದಲ್ಲಿ ಕಳೆದ ಕೆಲವು ವರ್ಷಗಳಿಂದ ಧಾರ್ಮಿಕ ಕ್ಷೇತ್ರದಲ್ಲಿ ಮಹಿಳಾ ಸುಧಾರಣೆಯ ಹಲವು ಕಾರ್ಯಕ್ರಮಗಳು ನಡೆದವು. ಸಾಂಪ್ರದಾಯಿಕ ಪುರೋಹಿತ ವರ್ಗದಿಂದ ಟೀಕೆಗಳು ವ್ಯಕ್ತವಾದರೂ, ಪುರಾತನ ಕಾಲದಿಂದಲೂ ಬಂಧಿಸಿಟ್ಟಿದ್ದ ಕಟ್ಟಳೆಗಳನ್ನು ಮುರಿಯುವ ಕ್ರಾಂತಿಯ ಕೆಲಸವನ್ನು ಅವು ಮಾಡಿವೆ. ಪ್ರತಿಯೊಂದು ಕಾರ್ಯಕ್ರಮ ಆದಾಗಲೂ ಹಲವಾರು ವೇದಿಕೆಗಳಲ್ಲಿ ಆ ಕುರಿತ ಚರ್ಚೆಗಳಾಗಿವೆ. ಮಹಿಳೆಗೆ ವಿಧಿಸಲಾದ ಧಾರ್ಮಿಕ ಹಕ್ಕುಗಳ ನಿಷೇಧದ ಹಿನ್ನೆಲೆ ಏನು ಎಂಬ ಚರ್ಚೆಯೂ ಆಗಿದೆ. ಆಧುನಿಕವಾದ ಈ ಕಾಲದಲ್ಲಿ ಮಹಿಳೆಗೆ ವಿಧಿಸಲಾದ ಧಾರ್ಮಿಕ ನಿಷೇಧವನ್ನು ಏಕೆ ತೆಗೆದು ಹಾಕಬಾರದು ಎಂಬ ಚರ್ಚೆಗಳು ನಡೆಯುವಂತೆ ಮಾಡಲು ಕುದ್ರೋಳಿಯಲ್ಲಿ ನಡೆದ ಘಟನೆಗಳು ಕಾರಣವಾಗಿವೆ. 2011ರ ಕುದ್ರೋಳಿ ದೇವಸ್ಥಾನದ ಸಭಾಂಗಣವೊಂದರಲ್ಲಿ ಬಿಲ್ಲವ ಸಮುದಾಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಕಾರ್ಯಕ್ರಮವೊಂದನ್ನು ಆಯೋಜಿಸಲಾಗಿತ್ತು. ಅಲ್ಲಿ ಮುಖ್ಯ ಅತಿಥಿಯಾಗಿದ್ದ ಕೇಂದ್ರದ ಮಾಜಿ ಸಚಿವ ಶ್ರೀ ಬಿ. ಜನಾರ್ದನ ಪೂಜಾರಿ ಅವರು ತಮ್ಮ ಭಾಷಣದಲ್ಲಿ ಸಮಾಜದಲ್ಲಿ ವಿಧವೆಯರನ್ನು ಕೀಳಾಗಿ ಕಾಣುವುದು, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಅವರನ್ನು ಅಪಶಕುನ ಎಂದು ಪರಿಗಣಿಸುವುದು ಸರಿಯಲ್ಲ ಎಂಬ



ಮಾತುಗಳನ್ನು ಹೇಳಿದರು. "ತಂದೆ ಇಲ್ಲವಾದಾಗ ತಾಯಿಯೇ ತನ್ನ ಮಕ್ಕಳನ್ನು ತಂದೆಯಾಗಿ ಜವಾಬ್ದಾರಿಯಿಂದ ಸಲಹುತ್ತಾಳೆ. ಆದರೆ ಅದೇ ಮಕ್ಕಳ ಮದುವೆಯಾಗುವಾಗ ಆ ಸಮಾರಂಭದಲ್ಲಿ ಮಾತ್ರ ಆಕೆ ಅಪಶಕುನ ಎನಿಸಿಕೊಳ್ಳುತ್ತಾಳೆ. ಇದು ಎಷ್ಟು ಸರಿ?" ಎಂದು ಪ್ರಶ್ನಿಸಿದ ಅವರು ಹೆಣ್ಣಾದವಳು ಹುಟ್ಟಿನಿಂದ ಸಾಯುವವರೆಗೆ ಎಂದೂ ಅಪವಿತ್ರಳಲ್ಲ. ಮುಟ್ಟಾದ ದಿನಗಳಲ್ಲಿಯೂ ಅವಳು ದೇವರ ಪೂಜೆಯನ್ನು ಮಾಡಬಾರದು ಎಂದು ನಿಷೇಧಗಳನ್ನು ಹೇರುವ ಅಧಿಕಾರ ಪುರುಷನಿಗೆ ಇಲ್ಲ ಎಂಬ ವಿಭಿನ್ನವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅವರ ಈ ಮಾತುಗಳು ಮರುದಿವಸ ಪತ್ರಿಕೆಗಳಲ್ಲಿ ಸುದ್ದಿಯಾದವು. ಮಹಿಳೆಯೊಬ್ಬರು ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ ತುಣುಕನ್ನು ಪೂಜಾರಿ ಅವರಿಗೆ ಕಳುಹಿಸಿ, ಅವರ ನಿಲುವನ್ನು ಶ್ಲಾಘಿಸಿದರು. ಅಲ್ಲದೆ ಅಂತಹ ಆಚರಣೆಗೆ ಶ್ರೀ ಜನಾರ್ದನ ಪೂಜಾರಿ ಅವರೇ ನೇತೃತ್ವ ವಹಿಸಿರುವ ಕುದ್ರೋಳಿ ದೇವಸ್ಥಾನವೇ ಮಾದರಿಯಾಗಬಹುದಲ್ಲ ಎಂಬ ಸಲಹೆಯನ್ನೂ ವ್ಯಕ್ತಪಡಿಸಿ ಪತ್ರವನ್ನು ಬರೆದಿದ್ದರು. ಈ ಪತ್ರದ ಸ್ಫೂರ್ತಿಯಿಂದ ಶ್ರೀ ಜನಾರ್ದನ ಪೂಜಾರಿ 2011ರ ದಸರಾ ಸಂದರ್ಭದಲ್ಲಿ ಸಾವಿರಾರು ಮಂದಿ ವಿಧವೆಯರಿಗೆ ಸೀರೆ ಹೂವು ಕುಂಕುಮ ಬಳೆಗಳನ್ನು ವಿತರಿಸಿದರು. ವಿಧವೆ ಮಹಿಳೆಯರೇ ಕುಳಿತು ಚಂಡಿಕಾ ಹೋಮವನ್ನು ಮಾಡಿ ಪೂರ್ಣಾಹುತಿ ನೀಡಿದರು. ವಿಧವೆ ಮಹಿಳೆಯರೇ ದೇವರ ಉತ್ಸವ ಮೂರ್ತಿಗಳನ್ನು ಹೊತ್ತ ಬೆಳ್ಳಿ ರಥವನ್ನು ದೇವಳದ ಪ್ರಾಕಾರದಲ್ಲಿ ಮೂರು ಸುತ್ತು ಎಳೆದರು. ದೇವಸ್ಥಾನದಲ್ಲಿ ತೀರ್ಥಪ್ರಸಾದ ಸ್ವೀಕರಿಸಿ ತೆರಳುವುದಕ್ಕಷ್ಟೇ ಸೀಮಿತವಾಗಿದ್ದ ಮಹಿಳೆಯರು ಪ್ರಥಮ ಬಾರಿಗೆ ಅಲ್ಲಿನ ಕೈಂಕರ್ಯಗಳಲ್ಲಿ ಭಾಗವಹಿಸಿ ಖುಷಿಪಟ್ಟರು. ಈ ಕ್ರಾಂತಿಕಾರಿ ಹೆಜ್ಜೆಯ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದವು. ಹೆಚ್ಚಿನ ವಿರೋಧವೇನೂ ಬರಲಿಲ್ಲ ಎಂದೇ ಹೇಳಬೇಕು. ಹೂವು ಕುಂಕುಮ ಮಂಗಳಸೂತ್ರ ಧರಿಸದ ವಿಧವೆಯರಿಗೆ ಅವುಗಳನ್ನು ಕೊಡುವುದಷ್ಟೇ ಸರಿಯೇ. ಗಂಡ ತೀರಿಕೊಂಡ ಮಾತ್ರಕ್ಕೆ ಅವೆಲ್ಲ ಅಲಂಕಾರವನ್ನೂ ಹೆಣ್ಣು ಏಕೆ ಮಾಡಿಕೊಳ್ಳಬಾರದು ಎಂಬ ದೃಷ್ಟಿಕೋನದಿಂದ ಸುಮಂಗಲಿಯರಿಗೆ ಪ್ರತಿಜ್ಞಾ ವಿಧಿಯನ್ನು 2012ರ ಜನವರಿ ಒಂದರಂದು ದೇವಸ್ಥಾನದಲ್ಲಿಯೇ ಆಯೋಜಿಸಲಾಯಿತು. ಹಲವಾರು ಮಂದಿ ಸುಮಂಗಲಿಯರು, ಒಂದುವೇಳೆ ತಮಗಿಂತ ಮುಂಚಿತವಾಗಿ ಪತಿ ತೀರಿಕೊಂಡಲ್ಲಿ, ಮಂಗಳಸೂತ್ರ, ಕುಂಕುಮ ಬಳೆಗಳನ್ನು ತೆಗೆದು ಹಾಕುವ ಆಚರಣೆಯನ್ನು ಆಚರಿಸುವುದಿಲ್ಲ ಎಂದು ಪ್ರತಿಜ್ಞೆ ಮಾಡಿದರು.

ನಂತರ ಮುಂದುವರೆದು 2013ರ ದಸರಾ ಸಂದರ್ಭದಲ್ಲಿ ವಿಧವೆ ಅರ್ಚಕರನ್ನು ದೇವರ ಪೂಜೆಗೆಂದು ನೇಮಿಸಿ, ದಲಿತ ಮಹಿಳೆಯೊಬ್ಬಳ ಪಾದ ಪೂಜೆಯನ್ನು ಸ್ವತಃ ಶ್ರೀ ಜನಾರ್ದನ ಪೂಜಾರಿ ಅವರೇ ಮಾಡಿದರು. 2014ರ ದಸರಾ ಸಂದರ್ಭದಲ್ಲಿ ದಲಿತ ಮಹಿಳೆಯೊಬ್ಬರಿಗೆ ಗರ್ಭಗುಡಿಗೆ ತೆರಳಿ ಪೂಜೆ ಮಾಡುವ ಅವಕಾಶ ದೊರೆಯಿತು. ದೀಪಾವಳಿಯಲ್ಲಿ ಮತ್ತೆ ಮಹಿಳೆಯರಿಂದ ಲಕ್ಷ್ಮೀ ಪೂಜೆ ನಡೆಯಿತು. ಕಳೆದ ಮೂರು ವರ್ಷಗಳಿಂದ ಈ ರೀತಿಯ ವಿಭಿನ್ನ ಆಚರಣೆಗಳು ನಡೆಯುತ್ತಿರುವ ಕುದ್ರೋಳಿ ದೇವಸ್ಥಾನ ಧಾರ್ಮಿಕ ಕ್ಷೇತ್ರದಲ್ಲಿ ಹೊಸ ಚರ್ಚೆಯನ್ನು ಹುಟ್ಟು ಹಾಕಿದೆ. ದಲಿತ ಅರ್ಚಕಿಯೊಬ್ಬರು ಗರ್ಭಗುಡಿ

ಪ್ರವೇಶಿಸಿದಾಗ ಆಕೆಗೆ ಪೂರ್ವ ಸಂಸ್ಕಾರಗಳಿಲ್ಲ ಎಂಬ ಆರೋಪಗಳು ಕೇಳಿಬಂದವು. ಅಂದರೆ ಪೂಜಾ ಮಂತ್ರಗಳ ಪಾಠ ಆಗದೇ ಇರುವ ಮಹಿಳೆ ಯಾವ ರೀತಿ ಪೂಜೆ ಮಾಡುವುದು ಸಾಧ್ಯ ಎಂಬ ಆಕ್ಷೇಪಗಳು ಪುರೋಹಿತ ವರ್ಗದಿಂದ ಕೇಳಿಬಂದವು. ಬ್ರಹ್ಮಶ್ರೀ ನಾರಾಯಣ ಗುರು ಅವರು ದೇವಸ್ಥಾನಗಳನ್ನು ಸ್ಥಾಪಿಸಿದಾಗ ಪುರೋಹಿತರು ಪೂಜೆಗಾಗಿ ಬರಲು ಸಿದ್ಧರಿರಲಿಲ್ಲ. ಆದ್ದರಿಂದ ನಿರ್ಮಲ ಮನಸ್ಸಿನ ಪೂಜೆಯೇ ನಿಜವಾದ ಸೇವೆ ಎಂಬ ಮಾತಿನೊಂದಿಗೆ ಈ ಚರ್ಚೆಗೆ ಅಲ್ಪವಿರಾಮ ಬಿದ್ದಿದೆ.

ಈ ಎಲ್ಲ ಸುಧಾರಣೆಗಳು ಚರ್ಚೆಯನ್ನು ಹುಟ್ಟುಹಾಕುವುದರ ಜೊತೆಗೆ ಕೆಲವು ಸೂಕ್ಷ್ಮಗಳನ್ನು ಒಳಗೊಂಡಿವೆ. ಇತ್ತೀಚೆಗಿನ ದಿನಗಳಲ್ಲಿ ಮಹಿಳೆ ಎದುರಿಸುತ್ತಿರುವ ಸಮಸ್ಯೆ, ಶೋಷಣೆಗಳಿಗೆ ಧಾರ್ಮಿಕ ಕ್ಷೇತ್ರದಲ್ಲಿ ಪರಿಹಾರ ದೊರೆಯುತ್ತದೆ ಎಂದು ಹೆಚ್ಚಿನವರು ನಂಬುವುದಿಲ್ಲ. ಕುದ್ರೋಳಿಯಲ್ಲಿ ನಡೆದ ಸುಧಾರಣಾ ಕಾರ್ಯಕ್ರಮಗಳು ಮೇಲ್ನೋಟಕ್ಕೆ ಸುಧಾರಣೆಯಂತೆ ಕಂಡರೂ ಅವು ಇಂದಿನ ಸಮಾಜದಲ್ಲಿ ನಿಜವಾಗಿಯೂ ಮಹಿಳೆಗೆ ಇಂದು ತುರ್ತಾಗಿ ಅಗತ್ಯವಾಗಿರುವ ಸುಧಾರಣೆಗಳು ಎನಿಸುವುದಿಲ್ಲ ಎಂಬ ಅಭಿಪ್ರಾಯವನ್ನು ಕವಯಿತ್ರಿ ಹಾಗೂ ಬರಹಗಾರ್ತಿ ಡಾ. ಪಿ. ಭಾರತೀದೇವಿ ವ್ಯಕ್ತಪಡಿಸುತ್ತಾರೆ. "ಧರ್ಮ ಯಾವತ್ತೂ ಮಹಿಳೆಯನ್ನು ಸಬಲಳನ್ನಾಗಿ ಮಾಡುತ್ತದೆ ಎಂದು ನಾನು ನಂಬುವುದಿಲ್ಲ. ಅದು ಮಹಿಳೆಗೆ ಇದು ಒಳ್ಳೆಯದು ಎಂದು ತಾನೇ ನಿರ್ಧರಿಸುತ್ತದೆ. ಆದ್ದರಿಂದ ಆಕೆಯ ವ್ಯಕ್ತಿತ್ವ ವಿಕಾಸಕ್ಕೆ ಅನುಕೂಲವಾದ ದಾರಿಗಳನ್ನು ಅದು ಕಲ್ಪಿಸುವುದಿಲ್ಲ" ಎಂಬುದು ಅವರ ನಿಲುವು. "ಅಂದರೆ ಕುದ್ರೋಳಿಯಲ್ಲಿ ವಿಧವೆಯರು ರಥ ಎಳೆಯುವುದರಿಂದ ಅಥವಾ ದೇವರಿಗೆ ಪೂಜೆ ಮಾಡುವುದರಿಂದ, ಚಂಡಿಕಾಯಾಗ ಮಾಡುವುದರಿಂದ ಆಕೆಯ ವೈಯಕ್ತಿಕ ಬದುಕಿನಲ್ಲಿ ಪ್ರತಿನಿತ್ಯ ಎದುರಿಸುವ ಸವಾಲುಗಳು ಬದಲಾಗುತ್ತವೆ ಎನಿಸುವುದಿಲ್ಲ. ಇದೊಂದು ಸಾಂಕೇತಿಕ ಪ್ರಯತ್ನ ಎಂಬ ನಿಟ್ಟಿನಲ್ಲಿ ಶ್ಲಾಘನಾರ್ಹವೇ ಹೊರತು ಇಂದಿನ ತುರ್ತಿಗೆ ಉತ್ತರ ಎನಿಸುವುದಿಲ್ಲ."

ವಿಧವೆಯರು ರಥ ಎಳೆಯುವ ಕಾರ್ಯಕ್ರಮದ ಸಂದರ್ಭದಲ್ಲಿ ಹೆಚ್ಚಿನ ಮಹಿಳೆಯರು ಅದು ವಿಧವೆಯರು ಎಳೆಯುವುದಕ್ಕಾಗಿಯೇ ಇರುವ ರಥ ಎಂದು ನಂಬಿದ್ದರು. ಧಾರ್ಮಿಕತೆಯು ನಂಬಿಕೆಯ ಮೇಲೆಯೇ ಬೆಳೆದುಕೊಂಡು ಬರುವುದರಿಂದ ದೇವಸ್ಥಾನದ ಪರಿಪಾಠಗಳೆಲ್ಲವೂ ವಿಧವೆಯರಿಗಾಗಿಯೇ ಇರುತ್ತವೇನೋ ಎಂಬಂತೆ ರೂಢಿಯಾಗುವ ಅಪಾಯವೂ ಇಲ್ಲದಿಲ್ಲ. ಸಾಮುದಾಯಿಕ ಸುಧಾರಣೆಯ ನಿಟ್ಟಿನಲ್ಲಿಯೂ ನೋಡುವುದಾದರೆ ಇಂತಹ ಕಾರ್ಯಕ್ರಮಗಳನ್ನು ನಡೆಸುವುದರ ಜೊತೆಗೆ ಸಮುದಾಯದವರಿಗೆ ಹೆಚ್ಚಿನ ತಿಳಿವಳಿಕೆ ನೀಡುವುದು ಅಗತ್ಯ. ಗರ್ಭಗುಡಿಗೆ ಅರ್ಚಕಿ ತೆರಳಿ ಪೂಜೆ ಸಲ್ಲಿಸಿದಾಗ ಸಮುದಾಯದವರೇ ಇದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದ್ದರು. ಅಂದರೆ ಬದಲಾವಣೆಯು ಅಂತರಂಗದಿಂದಲೂ ಆಗಬೇಕು. ಬಹಿರಂಗದಿಂದಲೂ ಆಗಬೇಕು ಎನಿಸುತ್ತದೆ. ರಾಜ್ಯದ ಇತರ ಭಾಗಗಳಿಗೆ ಹೋಲಿಸಿದರೆ ಕರಾವಳಿಯಲ್ಲಿ ಧಾರ್ಮಿಕತೆಯ ಚೌಕಟ್ಟು ಬಹಳ ಬಿಗಿ ಎಂದೇ ಅನಿಸುತ್ತದೆ. ಇತರೆಡೆಗಳಲ್ಲಿ ಮಹಿಳೆಯರು ದೇವರಿಗೆ ಆರತಿ ಮಾಡುವ ಪರಿಪಾಠವಿದ್ದರೂ ಕರಾವಳಿಯ ಮಟ್ಟಿಗೆ ದೇವರು ಮತ್ತು ಪೂಜಾ ವಿಧಾನಗಳು ಒದ್ದೆ ಬಟ್ಟೆಯುಟ್ಟುಕೊಂಡು ಪೂಜೆ ಸಲ್ಲಿಸುವ ಪುರೋಹಿತವರ್ಗಕ್ಕಷ್ಟೇ ಸೀಮಿತ. ಅಂತಹ ಸಂದರ್ಭಗಳಲ್ಲಿ ಈ ಎಲ್ಲ ಹೆಜ್ಜೆಗಳೂ ವಿಶೇಷವಾಗಿ ಪರಿಗಣಿಸಬೇಕಾದವುಗಳು ಎಂಬುದರಲ್ಲಿ ಎರಡು ಮಾತಿಲ್ಲ. ಹಿಂದಿನ ಕಾಲದಲ್ಲಿ ಅಧಿಕಾರಶಾಹಿಯನ್ನು ಅಧಿಕೃತವಾಗಿ ಪುರೋಹಿತಶಾಹಿ ವರ್ಗವೇ ನಿಯಂತ್ರಿಸುತ್ತಿತ್ತು. ಆದರೆ ಸ್ವಾತಂತ್ರ್ಯಾನಂತರ ಪರಿಸ್ಥಿತಿ ತುಂಬ ಬದಲಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಜನಸಾಮಾನ್ಯರೆಲ್ಲರಿಗೂ ಘನತೆ, ಗೌರವನ್ನು ಕಲ್ಪಿಸಿದೆ. ಅಧಿಕಾರದ ಸೂತ್ರಗಳು ಮುಕ್ತವಾಗಿವೆ. ಅಂತಹ ಸಂದರ್ಭದಲ್ಲಿ ಮಹಿಳೆಯು ಸಾಮಾಜಿಕ ಮತ್ತು ಆರ್ಥಿಕವಾಗಿ ಮುನ್ನೆಲೆಗೆ ಬರುವುದು ಬಹಳ ಅಗತ್ಯ. ಧಾರ್ಮಿಕತೆ ಏನಿದ್ದರೂ ವೈಯಕ್ತಿಕವಾದ ವಿಚಾರವಾಗಿ ಉಳಿದಿದೆಯೇ ಹೊರತು, ಅಲ್ಲಿ ಸಿಗುವ ಅಧಿಕಾರಗಳು, ಹಕ್ಕುಗಳು ಆಕೆಯ ಬದುಕನ್ನು ಉದ್ಧರಿಸಲಾರವು. ಇನ್ನೂ ಹೇಳಬೇಕೆಂದರೆ ಮಹಿಳೆ ಅಂತಹ ಚೌಕಟ್ಟಿನೊಳಗೆ ಸರಿದಷ್ಟೂ ಅದು ಕೊನೆಗೆ ಆಕೆಗೆ ಉಸಿರುಗಟ್ಟಿಸುವ ವಾತಾವರಣವನ್ನೂ ಸೃಷ್ಟಿಸೀತು. ಮಹಿಳೆಯ ವೈವಾಹಿಕ ಸ್ಥಿತಿಯೇ ಆಕೆಯ ಬದುಕನ್ನು ಅಳೆಯುವ ಮಾನದಂಡ ಎಂಬಂತೆ ಬಿಂಬಿಸುವ ವಿಚಾರಗಳಾಗಲೀ, ಧಾರ್ಮಿಕ ನಿಷ್ಠೆಯೇ ಆಕೆಗೆ ವಿಮೋಚನೆಯನ್ನು ಕರುಣಿಸುತ್ತದೆ ಎಂಬ ಹೇರುವಿಕೆಯಾಗಲೀ ಇಂದಿನ ತುರ್ತು ಅಲ್ಲ. ಇಂದು ಸಮಾಜ ಹೇಗಿದೆಯೆಂದರೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸದೃಢವಾಗಿರುವ ವ್ಯಕ್ತಿಗೆ ಧಾರ್ಮಿಕ ಕ್ಷೇತ್ರದಲ್ಲಿ ತಾನು ಅಪೇಕ್ಷೆ ಪಟ್ಟ ಸಾಧನೆಯನ್ನು ಮಾಡುವುದು ಕಷ್ಟವೇನಲ್ಲ.

ಅಧಿಕಾರ ಕ್ಷೇತ್ರಕ್ಕೆ ಧಾರ್ಮಿಕತೆಯೂ ಅಂಟಿಕೊಂಡಿದ್ದಾಗ ಮಹಿಳೆಗೆ ದೊರೆಯದ ಧಾರ್ಮಿಕ ಸ್ವಾತಂತ್ರ್ಯ, ಅಧಿಕಾರದಿಂದ ಧಾರ್ಮಿಕತೆ ವಿಮುಖವಾಗಿರುವ ಈ ಸಂದರ್ಭದಲ್ಲಿ ಆಕೆಗೆ ಅಲ್ಲಿ ಅವಕಾಶಗಳನ್ನು ಕಲ್ಪಿಸುವುದರಿಂದ ಆಕೆಯ ಬದುಕು ಉತ್ತರೋತ್ತರ ಅಭಿವೃದ್ಧಿ ಕಾಣುತ್ತದೆ ಎಂದು ಅನಿಸುವುದಿಲ್ಲ. ಉದ್ಯೋಗ, ಸಾಧನೆ, ಪುರುಷರ ನೆರಳಿನಿಂದ ದೂರವಾಗಿ ಸ್ವತಂತ್ರವಾಗಿ ಬೆಳೆಯುವ ಛಾತಿ ಹೊಂದಿರುವ ಮಹಿಳೆಯರು ಇಂದು ಇತರ ಮಹಿಳೆಯರಿಗೆ ಆದರ್ಶರಾಗಿದ್ದಾರೆ. ಅಂತಹ ಆರ್ಥಿಕ ಸಬಲತೆ ಮತ್ತು ಸಾಮಾಜಿಕ ಭದ್ರತೆಯನ್ನು ಕಲ್ಪಿಸುವ ಪ್ರಯತ್ನಗಳ ಅಗತ್ಯವಿದೆ. ❑


# ಯೋಜನಾ
## ಮಾರ್ಚ್ 2015 ವಿಶೇಷ ಸಂಚಿಕೆ ವಿಷಯ
# ಮುಂಗಡ ಪತ್ರ 2015-16

# ಮನದ ಮಲಿನವೂ ಪರಿಸರದ ಮಾಲಿನ್ಯವೂ

ಅರುಣ್ ಕುಮಾರ್



**ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು 2014ರ ಆಗಸ್ಟ್ 15ರಂದು ಮಾಡಿದ ಭಾಷಣದಲ್ಲಿ ಮಹಾತ್ಮ ಗಾಂಧೀಜಿಯವರ 150ನೇ (ಅಕ್ಟೋಬರ 2, 1869) ಜನ್ಮ ದಿನಾಚರಣೆ ಅಂದರೆ 2019 ರೊಳಗೆ ದೇಶದ ಎಲ್ಲಾ ಭಾಗಗಳು ಮಲಿನದಿಂದ ಮುಕ್ತಿಯನ್ನು ಹೊಂದಬೇಕಾಗಿ ಇಡೀ ರಾಷ್ಟ್ರಕ್ಕೆ ಕರೆಯನ್ನು ಕೊಟ್ಟಿದ್ದಾರೆ.**

ನಮ್ಮ ದೇಶದ ಸಂಸ್ಕೃತಿ ಅನೇಕ ಸಂಪ್ರದಾಯ, ಆಚಾರ, ವಿಚಾರ, ನಿಯಮ, ಪದ್ಧತಿ ಸಂಸ್ಕಾರಗಳ ತವರೂರು. ಒಂದು ಸಂಪ್ರದಾಯಸ್ಥ ಕುಟುಂಬದ ದಿನಚರಿಯು ನಿಗದಿತ ಕರ್ಮಾನುಷ್ಠಾನಗಳಿಂದ ಆರಂಭವಾಗುವುದು. ಈ ದೈನಂದಿನ ನಿತ್ಯಕರ್ಮಗಳಲ್ಲಿ ಶೌಚವು ತನ್ನದೆ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

ಶೌಚವು ನಮ್ಮ ಜೀವನವು ಈ ಬಾಲ್ಯ, ಯೌವ್ವನ, ಮುಪ್ಪು ಎಲ್ಲಾ ಅವಸ್ಥೆಗಳ ಒಂದು ಅವಿಭಾಜ್ಯ ಅಂಗವಾಗಿದೆ. ಬ್ರಹ್ಮಚರ್ಯೆಯ ಪಾಲನೆಯಲ್ಲಿ ಶೌಚಕ್ಕೆ ಹೆಚ್ಚು ಒತ್ತನ್ನು ನೀಡಲಾಗಿದೆ. ಶ್ರೀ ವಿಷ್ಣು ಪುರಾಣದಲ್ಲಿ ಈ ಕೆಳಗಿನ ಶ್ಲೋಕವು "ಶೌಚದ" ಬಗ್ಗೆ ಒಂದು ವ್ರತವೆಂದು ಪರಿಗಣಿಸಿ ಗುರುವಿನ ಶುಶ್ರೂಷೆಯನ್ನು ಮಾಡಿಕೊಂಡು ವೇದವನ್ನು ಗ್ರಹಿಸಬೇಕಾಗಿ ತಿಳಿಸಿಕೊಡುತ್ತದೆ.

**"ಶೌಚಾಚಾರ ವೃತಂ ಕಾರ್ಯಂ ಶುಶ್ರೂಣಂ ಗುರೋ:॥**
**ವೃತಾನಿ ಚರತಾ ಗ್ರಾಹ್ಯೋ ವೇದಶ್ವ ಕೃತ ಬುದ್ಧಿನಾ॥**

ಅಷ್ಟಾಂಗಯೋಗಕ್ಕೆಸಂಬಂಧಪಟ್ಟಂತೆ, ವಿವರಿಸಲಾಗಿರುವ ಯಮ, ನಿಯಮ, ಆಸನ ಮುಂತಾದ ಆಚಾರದಲ್ಲಿ 'ಶೌಚವು' ಒಂದು ಪ್ರಮುಖ ಸ್ಥಾನವನ್ನು ಗಳಿಸಿದೆ. ಅವುಗಳಲ್ಲಿ ಅಂತಃಶೌಚ ಹಾಗೂ ಬಹೀರ ಶೌಚಗಳು ಮಾನಸಿಕ ಮತ್ತು ದೈಹಿಕ ಶೌಚಗಳ ಮಹತ್ವವನ್ನು ತಿಳಿಸಿಕೊಡುತ್ತದೆ.

ಈ ಶೌಚದ ಆಚಾರ ವಿಚಾರಗಳ ಸಂಕೀರ್ಣವನ್ನೆ ನಮ್ಮ ಹಿರಿಯರು "ಆಚಾರವೇ ಸ್ವರ್ಗ ಅನಾಚಾರವೇ ನರಕ" ಎಂಬ ತಮ್ಮ ಅನುಭವಾಮೃತವನ್ನು ಮುಂದಿನ ಪೀಳಿಗೆಗೆ ನೀಡಿದ್ದಾರೆ. ಒಟ್ಟು ಆರೋಗ್ಯವಂತನ ದೇಹಕ್ಕೆ ಶುಚಿಯಾದ ಆಹಾರ, ಶುದ್ಧವಾದ ಗಾಳಿ, ಸಾತ್ವಿಕ ಚಿಂತನೆ ಎಷ್ಟು ಮುಖ್ಯವೊ, ಅದೇ ದೇಹದ ಮಲ, ಮೂತ್ರ, ಕಲ್ಮಷಗಳನ್ನು ವಿಸರ್ಜಿಸುವುದು ಅಷ್ಟೆ ಮುಖ್ಯ. ಒಬ್ಬ ರೈತ ತನ್ನ ಜಮೀನಿನಲ್ಲಿ ಉತ್ತಮವಾದ ಫಸಲನ್ನು ಪಡೆಯಲು ಕಳೆಯನ್ನು ಕಿತ್ತು ಭೂಮಿಯನ್ನು ಹದಮಾಡಿ ಉತ್ತಮವಾದ ಗೊಬ್ಬರ ಪೂರೈಸುತ್ತಾನೆ.

ಅದೇ ರೀತಿ ಒಂದು ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಸಮರ್ಪಕವಾದ ಶುದ್ಧವಾದ ನೀರು, ಗಾಳಿ, ಬೆಳಕು, ಶೌಚ ವ್ಯವಸ್ಥೆ ಅಗತ್ಯ. ಆರೋಗ್ಯದ ಜೀವನ ನಿರ್ವಹಣೆಗೆ ಅತ್ಯವಶ್ಯಕವಾದ ಅಚ್ಚುಕಟ್ಟಾದ (ನೀರು ಸರಬರಾಜು ವ್ಯವಸ್ಥೆ, ಒಳಚರಂಡಿ ವ್ಯವಸ್ಥೆ) ಭೌತಿಕ ಕೊಳೆಯನ್ನು ಹೊರಹಾಕುವ ಮೂಲಕ ನಮ್ಮ ಸುತ್ತಮುತ್ತಲಿನ ಪರಿಸರದ ನೈರ್ಮಲ್ಯವನ್ನು ಕಾಪಾಡುತ್ತದೆ, ಹಾಗೂ ನಾಗರಿಕ ಜೀವನದ ಗುಣಮಟ್ಟವನ್ನು ಎತ್ತಿ ಹಿಡಿಯುತ್ತದೆ.

ನಮ್ಮ ಚರಿತ್ರೆಯ ಹರಪ್ಪ ಮತ್ತು ಮೆಹೆಂಜೆದಾರೊ ನಗರಗಳ ಅವಶೇಷಗಳನ್ನು ಕಂಡಾಗ ನಮ್ಮ ಪೂರ್ವಿಕರು ನಿರ್ಮಿಸಿದ್ದ ಸುಸಜ್ಜಿತವಾದ ನಗರಗಳ ನಿರ್ಮಾಣ, ವಸತಿಕ್ಷೇತ್ರಗಳು ಅಚ್ಚರಿ ಮೂಡಿಸುತ್ತವೆ. ಕುಡಿಯುವ ನೀರಿನ ಸಮರ್ಪಕ ಬಳಕೆ, ಒಳಚರಂಡಿ ವ್ಯವಸ್ಥೆ, ರಸ್ತೆಗಳ ನಿರ್ಮಾಣದ ಬಗ್ಗೆ ಅವರಿಗಿದ್ದ ಅತ್ಯುನ್ನತ ಜ್ಞಾನವನ್ನು ಗಮನಿಸಿದಲ್ಲಿ ನಮ್ಮನ್ನು ಒಂದು ವಿಸ್ಮಯಕಾರಿ ಜಗತ್ತಿಗೆ ಕೊಂಡೊಯ್ಯುತ್ತವೆ. ನಮ್ಮ ಹಿರಿಯರು, ವ್ಯಕ್ತಿಯ ಅಥವಾ

ಹವ್ಯಾಸಿ ಲೇಖಕರು.

ಸಮಾಜದ ಶುಚಿತ್ವಕ್ಕೆ ತಮ್ಮದೆ ಆದ ಮಹತ್ವ ನೀಡಿರುವುದಕ್ಕೆ ಇಂದಿಗೂ ಈ ನಗರಗಳು ಸಾಕ್ಷಿಯಾಗಿ ಇಂದಿನ ಹಾಗೂ ಮುಂದಿನ ಪೀಳಿಗೆಗೆ ಸಂದೇಶ ಸಾರುವಂತಿದೆ.

ಅಕ್ಬರ್ ಬೀರ್‌ಬಲ್‌ನ್ ಅನೇಕ ಕಥೆಗಳು ನಾವು ಚಿಕ್ಕಂದಿನಲ್ಲಿ ಓದಿದ್ದೇವೆ ವಿದ್ಯಾರ್ಥಿ ದೆಸೆಯಲ್ಲಿ ಹೆಚ್ಚಾಗಿ ದೃಷ್ಟಾಂತ ಕಥೆಗಳಾಗಿ ಕೇಳಿದ್ದೇವೆ. ಸೂಜಿದಾರದಂತೆ ಅವಿನಾಭಾವ ಸಂಬಂಧ ಅವರಿಬ್ಬರದ್ದು.

ಅಕ್ಬರ್‌ನ ಆಡಳಿತಕ್ಕೆ ಸಂಬಂಧ ಪಟ್ಟಂತೆ ಅನೇಕ ಸಮಸ್ಯೆಗಳನ್ನು ಬೀರಬಲ್ ಅದಕ್ಕೆ ಸಮಂಜಸವಾದ ನಿದರ್ಶನಗಳೊಂದಿಗೆ ಮನ ನಾಟುವಂತೆ ಉತ್ತರ ನೀಡುತ್ತಿದ್ದ. ಅವರ ದೈನಂದಿನ ಕಾರ್ಯಕ್ರಮಗಳಲ್ಲಿ ನಗರ ಪರ್ಯಟನೆಯು ಒಂದಾಗಿತ್ತು ಅಕ್ಬರ್ ಬೀರಬಲ್‌ನನ್ನು ಕುರಿತು ಒಬ್ಬ ವ್ಯಕ್ತಿಯ ಮನಸ್ಸಿಗೆ, ಸಂತೋಷ ಆಹ್ಲಾದವನ್ನುಂಟು ಮಾಡುವುದು ಯಾವುದರಿಂದ ಎಂದು ಕೇಳಿದನು. ಬೀರ್‌ಬಲ್, ಅಕ್ಬರ್‌ನ ಯಾವುದೇ ಪ್ರಶ್ನೆಗಳಿಗೆ ಅಂದಿನ ವ್ಯವಸ್ಥೆಯ, ಆಡಳಿತ ಲೋಪದೋಷಗಳನ್ನು ಮನದಟ್ಟು ಮಾಡಿಕೊಂಡೇ ಉತ್ತರ ನೀಡುತ್ತಿದ್ದನು. ಅದಕ್ಕೆ ಬೀರ್‌ಬಲ್, ಪ್ರಭು ಒಬ್ಬ ವ್ಯಕ್ತಿಗೆ ತಮ್ಮ ದೈನಂದಿನ ಕಾರ್ಯಗಳಲ್ಲಿ ಮಲ ಮೂತ್ರ ವಿಸರ್ಜನೆಯಿಂದಾಗಿ ಮನಸ್ಸಿಗೆ ಸಂತೋಷ, ಆಹ್ಲಾದವುಂಟಾಗುವುದಾಗಿ ಹೇಳಿದನು.



ಅಕ್ಬರ್ ತನ್ನ ಈ ಉನ್ನತವಾದ ಪ್ರಶ್ನೆಗೆ ಬೀರ್‌ಬಲ್‌ನ ತುಚ್ಛವಾದ ಉತ್ತರದಿಂದ ಸಮಾಧಾನವಾಗದೆ ಕೋಪಗೊಂಡು ಒಂದು ವಾರದ ಆಸ್ಥಾನ ಬಹಿಷ್ಕಾರಗೊಳಿಸಿದನು. ವಾರದ ನಂತರ ಎಂದಿನಂತೆ ಅಕ್ಬರ್ ಬೀರ್‌ಬಲ್‌ನ ಅಪೂರ್ವ ಸಂಗಮ.

ಒಮ್ಮೆ ಪರ್ಯಟನೆ ಸಲುವಾಗಿ ಕೆಲವು ದಿನಗಳ ದೋಣಿ ವಿಹಾರಕ್ಕೆಂದು ಹೊರಟರು ಅಕ್ಬರ್ ಮತ್ತು ಬೀರ್‌ಬಲ್. ಹಲವು ದಿನಗಳ ಪ್ರಯಾಣ ಬೆಳೆಸಿದರೂ ತಾವು ಸೇರಬೇಕಾದ ಸ್ಥಳ ಕಾಣಿಸಲೇ ಇಲ್ಲ. ಈಗ ಅಕ್ಬರ್‌ನ ದೈನಂದಿನ ಶೌಚವಾಗದೆ ಮನಸ್ಸಿನ ಬಹುಭಾಗ ಮಲಿನವೇ ತುಂಬಿ ಹೋಗಿತ್ತು. ದೋಣಿಯ ಪ್ರಯಾಣದಿಂದಾಗಿ ಬಹಿರ್ದೆಸೆಗೆ ಅವಕಾಶವಿರಲಿಲ್ಲ. ಅಕ್ಬರ್‌ನ ಈ ಪ್ರಾಣಸಂಕಟ, ಧರ್ಮಸಂಕಟ ಉಭಯ ಸಂಕಟಗಳ ಹಿಂದೆ ಬೀರ್‌ಬಲ್‌ನ ನಿಯೋಜಿತ ಉಪಾಯ ಇತ್ತು.

ಕೊನೆಗೆ ಬೀರ್‌ಬಲ್ ದೋಣಿಯವನಿಗೆ ಸನ್ನೆ ನೀಡಿ ಹತ್ತಿರದ ದಡಕ್ಕೆ ಸೇರಿಸುವಂತೆ ತಿಳಿಹೇಳಿದನು. ಅಕ್ಬರ್ ದಡ ಸೇರಿದ ತಕ್ಷಣ ಬಹಿರ್ದೆಸೆಗೆ ಓಡಿಹೋಗಿ ತನ್ನ ಮೈ ಮನಸ್ಸಿನ ಮಲಿನದ ಬಾರ ಹೊರ ಹಾಕಿ ಬಂದನು. ಬೀರ್‌ಬಲ್‌ನನ್ನು ಕಂಡೊಡನೆ ಗಾಢವಾಗಿ ಆಲಂಗಿಸಿಕೊಂಡು, ಬೀರ್‌ಬಲ್! "ನನ್ನ ಮನಸ್ಸಿಗೆ ಈಗ ಸಂತೋಷ, ಆಹ್ಲಾದವುಂಟಾಗಿದೆ", ಎಂದನು.

ಆಗ ಬೀರ್‌ಬಲ್ ಮಹಾಪ್ರಭು, ತಮ್ಮ ಪ್ರಶ್ನೆಗೆ ನೀವು ಈಗ ನೀಡಿದ ಉತ್ತರವನ್ನು ನಾವು ಅಂದೇ ಹೇಳಿದ್ದೆವು ತಾವು ಕುಪಿತಗೊಂಡ ಬಹಿಷ್ಕಾರಗೊಳಿಸಿದಿರಿ ಎಂದನು. ಒಬ್ಬ ವ್ಯಕ್ತಿಗೆ ಸಂತೋಷ, ಆಹ್ಲಾದವುಂಟು ಮಾಡುವದರಲ್ಲಿ ಬಹಿರ್ದೆಸೆ ಶೌಚವು ಬಹಳ ಮುಖ್ಯ ಎಂದು ದೀನ ಸ್ವರದಲ್ಲಿ ಅಕ್ಬರ್‌ಗೆ ತಿಳಿಹೇಳಿದನು. ಅತ್ಯಂತ ಸಂತೋಷಗೊಂಡು ಅಕ್ಬರ್, ಬೀರ್‌ಬಲ್‌ನನ್ನು "ನಿಮಗೆ ಬಹುಮಾನವಾಗಿ ಏನು ಕೇಳಿದರೂ ನೀಡಲು ತಯಾರಾಗಿದ್ದೇವೆ" ಎಂದು ಹೇಳುತ್ತಾನೆ.

ಆಗ ಬೀರ್‌ಬಲ್ "ಮಹಾಪ್ರಭು ನೀವು ಅನುಭವಿಸಿದ ಈ ಶೌಚದ ಕಸಿವಿಸಿಯನ್ನು ನಮ್ಮ ರಾಜ್ಯದ ಪ್ರಜೆಗಳೂ ಅನುಭವಿಸುತ್ತಿದಾರೆ. ಈ ಸಮಸ್ಯೆಗೆ ನಮ್ಮ ರಾಜ್ಯದಲ್ಲಿ ಸಮರ್ಪಕವಾದ



ವ್ಯವಸ್ಥೆಯಾಗಬೇಕು ಇದೇ ನೀವು ರಾಜ್ಯದ ಜನತೆಗೆ ನೀಡಬೇಕಾದ ಬಹುಮಾನ" ಎನ್ನಲು ಅಪಾರ ಸಂತೋಷಗೊಂಡ ಅಕ್ಬರ್, ಬೀರ್‌ಬಲ್‌ನ ಈ ಜಾಣ್ಮೆಗೆ ಮೆಚ್ಚಿ, ಜನತೆಗೆ ಪೂರೈಸಬೇಕಾಗಿರುವ ಶೌಚಾಲಯದ ನಿರ್ಮಾಣ ಕಾರ್ಯ ವ್ಯವಸ್ಥೆಯನ್ನು ರಾಜ್ಯದ ಎಲ್ಲೆಡೆ ಅವಶ್ಯಕತೆಗೆ ತಕ್ಕಂತೆ ಕೈಗೊಂಡನು.



### ಗಾಂಧೀಜಿ ಸ್ವಚ್ಛ ಭಾರತ

1941 ರಲ್ಲಿ ಗಾಂಧೀಜಿಯವರು ದೆಹಲಿಯ ಕಾಲೋನಿಯಲ್ಲಿ ಉಳಿದಿದ್ದರು. ಆ ಸಮಯದಲ್ಲಿ ವಿದೇಶಿ ವರದಿಗಾರರೊಬ್ಬರು ಗಾಂಧೀಜಿಯವರನ್ನು ಒಂದು ಪ್ರಶ್ನೆ ಕೇಳಿದರು. ಗಾಂಧೀಜಿ ತಮ್ಮನ್ನು ಒಂದು ದಿನದ ಮೇರೆಗೆ ಭಾರತದ ಸರ್ವಾಧಿಕಾರಿಯನ್ನಾಗಿ ಮಾಡಿದರೆ ನೀವು ಏನು ಮಾಡುತ್ತೀರಿ? ಅದಕ್ಕೆ ಗಾಂಧೀಜಿ ಮೊದಲು "ನಾನು ಅದನ್ನು ಒಪ್ಪಿಕೊಳ್ಳುವುದಿಲ್ಲ ಆದರೂ ಅಕಸ್ಮಾತ್ ಆದರೆ ಆ ದಿವಸ ನಾನು ದೆಹಲಿಯ ಪರಿಶಿಷ್ಟರ ಕೇರಿಯನ್ನು ಸ್ವಚ್ಛ ಮಾಡುತ್ತೇನೆ" ಇದು ಅವರ ಸ್ವಚ್ಛತೆ ಮತ್ತು ಪರಿಶಿಷ್ಟರ ಬಗ್ಗೆ ಇದ್ದ ಭಾವನೆಯನ್ನು ತಿಳಿಸುತ್ತದೆ.

### ಕರ್ನಾಟಕ ರೆಡ್ ಕ್ರಾಸ್

ಭಾರತೀಯ ರೆಡ್ ಕ್ರಾಸ್ ಸಂಸ್ಥೆಯು ಭಾರತ ದೇಶದಲ್ಲಿ 1920ರಲ್ಲಿ ಸ್ಥಾಪನೆಯಾದ ವರ್ಷದಿಂದಲೂ ಇಲ್ಲಿಯವರೆಗೂ ಮಾನವೀಯ ಸೇವೆ ಸಲ್ಲಿಸುತ್ತಿದೆ.

ದೇಶದಲ್ಲಿನ ಭೀಕರ ಪ್ರವಾಹ, ಭೂಕಂಪ, ಸುನಾಮಿ, ಚಂಡಮಾರುತ, ಬರ ಪ್ರದೇಶಗಳು ಇತ್ತೀಚಿನ ಭೀಕರ ಭಯೋತ್ಪಾದನೆಯಿಂದಾದ, ಅಗ್ನಿ ಅವಘಡಗಳು, ತಾಜ್ ಹೋಟಲ್ ಮುಂಬೈ ಹೀಗೆ ಇನ್ನು ಅನೇಕ ಪ್ರಕೃತಿ ವಿಕೋಪಗಳು ಮತ್ತು ಮಾನವ ನಿರ್ಮಿತ



ಭಯೋತ್ಪಾದನೆಗಳ ಚಟುವಟಿಕೆಯಿಂದ ಅಮಾನವೀಯ ಕೃತ್ಯಗಳ ಸಂದರ್ಭಗಳಲ್ಲಿ ಸಂಸ್ಥೆಯು ಕಾರ್ಯ ಕ್ಷಮತೆ, ದಕ್ಷತೆ, ಶಿಸ್ತಿನಿಂದ ತನ್ಮಯ ಪರರಾಗಿ ರೆಡ್‌ಕ್ರಾಸ್ ಕಾರ್ಯಕರ್ತರು / ಸ್ವಯಂ ಸೇವಕರು ತಮ್ಮನ್ನು ತಾವು ಸೇವಾ ಕ್ಷೇತ್ರಗಳಲ್ಲಿ ಸಮರ್ಪಿಸಿ ಕೊಂಡಿದ್ದಾರೆ. ಸ್ವಚ್ಛತಾ ಕಾರ್ಯಗಳಲ್ಲಿನ ಪ್ರಕೃತಿ ವಿಕೋಪಗಳಾದ ಪ್ರವಾಹ, ಸುನಾಮಿ, ಚಂಡಮಾರುತಗಳಲ್ಲಿ ಪ್ರಮುಖವಾಗಿ ಎದುರಾಗುವ ಸಮಸ್ಯೆಯೆಂದರೆ ಕುಡಿಯಲಿಕ್ಕೆ ಯೋಗ್ಯವಾದ ನೀರು ಮತ್ತು ಶೌಚಾಲಯಗಳ ವ್ಯವಸ್ಥೆ. ಅತ್ಯಂತ ಆಧುನಿಕ ವೈಜ್ಞಾನಿಕ ಅಂಶಗಳಿಂದ ಕೂಡಿರುವ ಸಂಚಾರಿ ನೀರು ಶುದ್ಧೀಕರಣ ಘಟಕವಾದ ವಾಟ್ಸ್‌ಆನ್‌ನನ್ನು ರೆಡ್‌ಕ್ರಾಸ್ ಸಂಸ್ಥೆ ಹೊಂದಿದೆ.

ಈ ಘಟಕವು ಪ್ರತಿ ಗಂಟೆಗೆ 5,000ರ ಲೀಟರ್ ಅಶುದ್ಧ ನೀರನ್ನೆ ಮತ್ತೆ ಶುದ್ಧ ನೀರನ್ನಾಗಿ ಮಾಡುತ್ತದೆ. ಈ ವಾಟ್ಸ್‌ಆನ್ ಘಟಕಗಳು ದೇಶದ ಎಲ್ಲಾ ರೆಡ್‌ಕ್ರಾಸ್ ರಾಜ್ಯ ಘಟಕಗಳಲ್ಲೂ ಇದೆ. ಪ್ರತಿ ನೂರು ಜನತೆಗೆ ಎರಡರಂತೆ ತ್ವರಿತಗತಿಯ ಶೌಚಾಲಯಗಳನ್ನು ನಿರ್ಮಾಣ ಮಾಡುವಂತಹ ನುರಿತ ತಜ್ಞರ ತಂಡವನ್ನು ಇದು ಒಳಗೊಂಡಿದೆ. ಹೀಗೆ ಆರೋಗ್ಯ, ಶೌಚ, ಕುಡಿಯುವ ನೀರು ಸಮುದಾಯ ಆಧಾರಿತ ಕಾರ್ಯಗಳಲ್ಲಿ ಮತ್ತು ಅಂತಾರಾಷ್ಟ್ರೀಯ ಮಟ್ಟದ ಸಹಕಾರಗಳೊಂದಿಗೆ ಹಾಗೂ ಪ್ರಪಂಚದ ಯಾವುದೆ ಭಾಗಗಳಲ್ಲಿಯು ಪ್ರಕೃತಿ ವಿಕೋಪ ಮತ್ತು ಮಾನವ ನಿರ್ಮಿತ ಅವಘಡಗಳಲ್ಲಿಯು ತನ್ನ ಮಾನವೀಯ ಸೇವೆಯನ್ನು ಸಲ್ಲಿಸುತ್ತಾ ಬಂದಿರುತ್ತದೆ.

ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು 2014ರ ಆಗಸ್ಟ್ 15ರಂದು ಮಾಡಿದ ಭಾಷಣದಲ್ಲಿ ಮಹಾತ್ಮ ಗಾಂಧೀಜಿಯವರ 150ನೇ (ಅಕ್ಟೋಬರ 2, 1869) ಜನ್ಮ ದಿನಾಚರಣೆ ಅಂದರೆ 2019 ರೊಳಗೆ ದೇಶದ ಎಲ್ಲಾ ಭಾಗಗಳು ಮಲಿನದಿಂದ ಮುಕ್ತಿಯನ್ನು ಹೊಂದಬೇಕಾಗಿ ಇಡೀ ರಾಷ್ಟ್ರಕ್ಕೆ ಕರೆಯನ್ನು ಕೊಟ್ಟಿದ್ದಾರೆ.

ಇದರ ಅಂಗವಾಗಿ ದೇಶದ ಎಲ್ಲಾ ನದಿಗಳು, ಸರೋವರ ಶುದ್ಧೀಕರಣ ಕಾರ್ಯಕ್ಕೆ ಚಾಲನೆ ದೊರೆತಿದೆ, ಪ್ರಾರ್ಥನಾ ಸ್ಥಳಗಳು, ಮಂದಿರಗಳು, ಮಸೀದಿಗಳು, ಚರ್ಚ್‌ಗಳ ಆಡಳಿತ ಮಂಡಳಿ, ಸರ್ಕಾರದ ಆಡಳಿತ ಕಛೇರಿಗಳು, ಗ್ರಾಮಗಳು, ನಗರ, ಕಾರ್ಪೋರೆಟ್ ಸಂಸ್ಥೆಗಳು ಸ್ವಯಂ ಸೇವಾ ಸಂಸ್ಥೆಗಳು ಈ ನಿಟ್ಟಿನಲ್ಲಿ ಕಾರ್ಯನಿರತವಾಗಿವೆ. ❑

# ಡಿಜಿಟಲ್ ಯುಗದ ಮುಂಚೂಣಿಯಲ್ಲಿ ಕರ್ನಾಟಕ

ಎನ್.ಎಸ್. ಶ್ರೀಧರ ಮೂರ್ತಿ



"ಕರ್ನಾಟಕ ಮೊಬೈಲ್ ಒನ್" ಎನ್ನುವ ಯೋಜನೆಯನ್ನು ಜನಸಾಮಾನ್ಯರು ಆಂಡ್ರಾಯ್ಡ್ ಮತ್ತು ವಿಂಡೋಸ್ ಮೊಬೈಲ್‌ಗಳ ಮೂಲಕ ಡೌನ್‌ಲೋಡ್ ಮಾಡಿಕೊಂಡು ಸಂಪೂರ್ಣ ಪ್ರಯೋಜನ ಪಡೆದುಕೊಳ್ಳಬಹುದು.

ಭಾರತದ ರಾಷ್ಟ್ರಪತಿಗಳಾದ ಶ್ರೀ ಪ್ರಣಬ್ ಮುಖರ್ಜಿಯವರು 2014ರ ಡಿಸೆಂಬರ್ 8ರಂದು "ಕರ್ನಾಟಕ ಒನ್" ಎನ್ನುವ ಮಹತ್ವಾಕಾಂಕ್ಷಿ ಯೋಜನೆಗೆ ಚಾಲನೆ ನೀಡಿದರು. "ಎಂ ಒನ್" ಎನ್ನುವ ಪರಿಕಲ್ಪನೆಯ ಅಡಿಯಲ್ಲಿ ಸರ್ಕಾರದ 637 ಸೇವೆಗಳೂ ಸೇರಿದಂತೆ ನಾಲ್ಕು ಸಾವಿರ ಸೇವೆಗಳು ಈ ಯೋಜನೆಯಲ್ಲಿ ಕುಳಿತಲ್ಲಿಯೇ ಸಾರ್ವಜನಿಕರಿಗೆ ದೊರಕಲಿವೆ. ಮೊಬೈಲ್ ಫೋನ್, ಸ್ಥಿರ ದೂರವಾಣಿ, ಲ್ಯಾಪ್‌ಟಾಪ್, ಟ್ಯಾಬಲೆಟ್ ಹೀಗೆ ಡಿಜಿಟಲ್ ಯುಗದ ಯಾವುದೇ ಮಾಪಕಗಳನ್ನು ಬಳಸಿ ಈ ಯೋಜನೆಯ ಲಾಭವನ್ನು ಪಡೆದುಕೊಳ್ಳಬಹುದಾಗಿದೆ. ಎಸ್.ಎಂ.ಎಸ್ ಸೇವೆಯ ಮೂಲಕ ಕ್ಷಣ ಕಾಲದಲ್ಲಿ ಬಯಸಿದ ಮಾಹಿತಿ ನಿಮ್ಮದಾಗುತ್ತದೆ. ವಿದ್ಯುಚ್ಛಕ್ತಿ ಬಿಲ್ ಕಟ್ಟುವುದರಿಂದ ಹಿಡಿದು ಸರ್ಕಾರ ರೂಪಿಸುತ್ತಿರುವ ಹೊಸ ಯೋಜನೆಯವರೆಗೂ ಸಕಲವೂ ಸಾರ್ವಜನಿಕರಿಗೆ ಲಭ್ಯವಾಗುತ್ತಿದೆ. ಇದು ಕರ್ನಾಟಕ ಡಿಜಿಟಲ್ ಪ್ರಪಂಚದಲ್ಲಿ ಪ್ರಮುಖವಾದ ಸ್ಥಾನವನ್ನು ಪಡೆದು ಕೊಳ್ಳಲು ನೆರವಾಗಲಿದೆ. ಕಳೆದ ಮೂರು ದಶಕಗಳಲ್ಲಿ ಇಡೀ ಜಗತ್ತಿನ ವಿನ್ಯಾಸವೇ ಬದಲಾಗಿದೆ. ಮಾಹಿತಿ ತಂತ್ರಜ್ಞಾನದ ಜಾಲವು ಇಡೀ ಪ್ರಪಂಚವನ್ನು ವ್ಯಾಪಿಸಿ ಸಂವಹನವನ್ನು ಸರಳ ಮತ್ತು ಪರಿಣಾಮಕಾರಿಯಾಗಿಸಿದೆ. ಸೀಮೆ ಎಣ್ಣೆಗಾಗಿ ಮೈಲುದ್ದ ಕ್ಯೂ ನಿಲ್ಲುತ್ತಿದ್ದ, ಪತ್ರಕ್ಕಾಗಿ ಜಾತಕ ಪಕ್ಷಿಯಂತೆ ಅಂಚೆಕಚೇರಿಯ ಮುಂದೆ ಕಾದಿರುತ್ತಿದ್ದ, ವಿದ್ಯುತ್ ದೀಪವನ್ನು ಸಿರಿವಂತರ ಮನೆಗಳು ಮಾತ್ರ ಹೊಂದಿರುತ್ತಿದ್ದ ದಿನಗಳನ್ನು ನೆನಪಿಸಿ ಕೊಳ್ಳಿ. ಇದೆಲ್ಲಾವೂ ಯಾವುದೂ ಅನಾದಿ ಕಾಲದಲ್ಲಿ ಆದಂತೆ ಭ್ರಮೆ ಉಂಟಾಗುವಂತೆ ಜಗತ್ತು ವೇಗವಾಗಿ ಪರಿವರ್ತಿತವಾಗಿದೆ. ಆಧುನಿಕತೆಯನ್ನು ಆತಂಕದಿಂದಲೇ ನಮ್ಮ ದೇಶ ಸ್ವೀಕರಿಸಿತ್ತು. ಈ ಬದಲಾವಣೆಗಳಿಂದ ಪರಂಪರೆಗೆ ಎಲ್ಲಿ ಧಕ್ಕೆಯುಂಟಾಗುವುದೂ ಎನ್ನುವ ಆತಂಕ ಆಡಳಿತ ಯಂತ್ರದ ಉನ್ನತ ಸ್ಥಾನದಲ್ಲಿರುವವರಿಂದ ಹಿಡಿದು ಜನ ಸಾಮಾನ್ಯರವರೆಗೂ ಎಲ್ಲರಲ್ಲೂ ಉಂಟಾಗಿತ್ತು. ಆದರೆ ಆಧುನಿಕತೆ ಈ ಬೆಳವಣಿಗೆಯ ಅಗತ್ಯ ಮತ್ತು ಅನಿವಾರ್ಯವನ್ನು ಅತ್ಯಂತ ಸಮರ್ಥವಾಗಿ ಭಾರತೀಯರು ಗುರುತಿಸುವುದು ತಡವಾಗಲಿಲ್ಲ. ಅದರಲ್ಲಿಯೂ ಕರ್ನಾಟಕ ಈ ನಿಟ್ಟಿನಲ್ಲಿ ಒಂದು ಹೆಜ್ಜೆ ಮುಂದೆಯೇ ಇತ್ತು ಎನ್ನಬಹುದು. ಹೀಗಿದ್ದರಿಂದಲೇ ಡಿಜಿಟಲ್ ಯುಗ ಎನ್ನುವುದು ದೇಶದಲ್ಲೆಡೆಗಿಂತ ಕರ್ನಾಟಕದಲ್ಲಿಯೇ ತ್ವರಿತವಾಗಿ ಕಾಲಿಟ್ಟಿತು. ತೊಂಭತ್ತರ ದಶಕದಲ್ಲೇ ಬೆಂಗಳೂರು "ಮಾಹಿತಿ ತಂತ್ರಜ್ಞಾನ"ಗಳ ರಾಜಧಾನಿ ಎನ್ನಿಸಿ ಕೊಂಡಿತ್ತು. ಆಡಳಿತದ ಚುಕ್ಕಾಣಿ ಹಿಡಿದ ಪಕ್ಷಗಳು ಬದಲಾದರೂ ಬದಲಾವಣೆಯ ಗತಿ ಬದಲಾಗಲಿಲ್ಲ. ಇದು ನಮ್ಮ ರಾಜ್ಯದ ವೈಶಿಷ್ಟ್ಯ ಕೂಡ ಹೌದು. ಹೀಗಾಗಿಯೇ ರಾಷ್ಟ್ರ ಮಟ್ಟದಲ್ಲಿ ಇನ್ನೂ ಡಿಜಿಟಲ್ ಯುಗದ ಮಾತು ಘೋಷಣೆಯಲ್ಲಿದ್ದರೆ ಕರ್ನಾಟಕದಲ್ಲಿ ಈಗಾಗಲೇ ಅದು ಸಾಕಾರಗೊಳ್ಳುತ್ತಿದೆ. ಈ ಬೆಳವಣಿಗೆಯ ಒಂದು ಮಹಾನ್ ಜಿಗಿತವೇ ಈ "ಕರ್ನಾಟಕ ಒನ್" ಎನ್ನುವ ಯೋಜನೆ. ಅಂಗೈನಲ್ಲೇ ಆಡಳಿತ ಎನ್ನುವ ಪರಿಕಲ್ಪನೆ ಈ ಮೂಲಕ ಸಾಕಾರಗೊಂಡಿದೆ. ಈ ರೀತಿಯಲ್ಲಿ ಡಿಜಿಟಲ್ ಆಡಳಿತ ನೀಡುತ್ತಿರುವ ರಾಷ್ಟ್ರದ ಪ್ರಪ್ರಥಮ ಮತ್ತು ಏಕೈಕ ಎಂಬ ಹೆಗ್ಗಳಿಕೆಗೆ ಕರ್ನಾಟಕ ಈ ಮೂಲಕ ಪಾತ್ರವಾಗಿದೆ. ಈ ಯೋಜನೆಯ ಬೀಜಾಂಕುರ 2005ರಲ್ಲಿ "ಬೆಂಗಳೂರು ಒನ್" ಎಂಬ ಯೋಜನೆ

ಪತ್ರಕರ್ತರು.

ರೂಪುಗೊಂಡಾಗಲೇ ಆಗಿತ್ತು. 2013ರಲ್ಲಿ ಇದು ವಿಸ್ತಾರವಾದ ರೂಪವನ್ನು ಪಡೆಯಲು ಆರಂಭವಾಗಿ ಇಂದು ಈ ಯಶಸ್ಸಿನ ಹಂತವನ್ನು ತಲುಪಿದೆ. "ಕರ್ನಾಟಕ ಮೊಬೈಲ್ ಒನ್" ಎನ್ನುವ ಯೋಜನೆಯನ್ನು ಜನಸಾಮಾನ್ಯರು ಆಂಡ್ರಾಯ್ಡ್ ಮತ್ತು ವಿಂಡೋಸ್ ಮೊಬೈಲ್‌ಗಳ ಮೂಲಕ ಡೌನ್‌ಲೋಡ್ ಮಾಡಿಕೊಂಡು ಸಂಪೂರ್ಣ ಪ್ರಯೋಜನಯನ್ನು ಪಡೆದು ಕೊಳ್ಳಬಹುದು. ಇದರಿಂದ ದೊರಕುವ ಪ್ರಯೋಜನಗಳನ್ನು ಹೀಗೆ ಪಟ್ಟಿ ಮಾಡಬಹುದು.

* ನಾಗರೀಕರ ಸಮೀಕ್ಷೆ, ಮಾಹಿತಿ ಸಂಗ್ರಹಣೆ ವಿಭಾಗದ ಮೂಲಕ ಸರ್ಕಾರವನ್ನು ನೇರವಾಗಿ ನಾಗರೀಕರು ಸಂಪರ್ಕಿಸಬಹುದು. ಆರ್.ಟಿ.ಓ, ಬಿಬಿಎಂಪಿ ಸೇರಿದಂತೆ ಸರ್ಕಾರಿ ಸಂಸ್ಥೆಗಳಿಂದ ಪಡೆಯುವ ಸೇವೆಯನ್ನು ಪರಿಣಾಮಕಾರಿಯಾಗಿ ಪಡೆದು ಕೊಳ್ಳಬಹುದು. ಈ ಸೇವೆಯನ್ನು ಪಡೆಯಲು ಆಧಾರ್ ಸಂಖ್ಯೆಯನ್ನು ನೊಂದಾಯಿಸುವುದು ಕಡ್ಡಾಯವಾಗಿದೆ.
* "ವಕೀಲ ಸರ್ಚ್" ಮೂಲಕ ಕಾನೂನು ಸೇವೆಯನ್ನು ಪಡೆಯಬಹುದು. ಅಷ್ಟೇ ಅಲ್ಲದೆ ಅವುಗಳಿಗೆ ಸಂಬಂಧಿಸಿದ ಬೆಳವಣಿಗೆಯನ್ನೂ ಗಮನಿಸುತ್ತಿರಬಹುದು. ಇದಕ್ಕೆ ನಿಗಿದಿತ ಶುಲ್ಕವನ್ನು ನೀಡ ಬೇಕಾಗುತ್ತದೆ.
* ಪ್ರವಾಸವನ್ನು ಅಯೋಜಿಸುವಲ್ಲಿಯೂ ಈ ಯೋಜನೆ ನೆರವಾಗುತ್ತದೆ. ರಜಾದಿನಗಳಲ್ಲಿ ಕರ್ನಾಟಕ ಪ್ರವಾಸೋದ್ಯಮ ರೂಪಿಸಿರುವ ಪ್ರವಾಸಿ ಯೋಜನೆಗಳು ವಿವರಗಳು ಇಲ್ಲಿ ದೊರೆಯುವುದಲ್ಲದೆ ಅದಕ್ಕೆ ನೊಂದಾವಣಿಯನ್ನೂ ಸುಲಭವಾಗಿ ಮಾಡಿಸಬಹುದು.
* ಸರ್ಕಾರಿ ನೌಕರರು ತಾವು ಸೇವೆಗೆ ಸೇರಿದ ದಿನದಿಂದ ನಿವೃತ್ತಿ ಪಡೆಯುವವರೆಗೂ ಪಡೆಯಬಹುದಾದ ವಿವಿಧ ಸೌಲಭ್ಯಗಳ ವಿವರವನ್ನು ಎಚ್.ಆರ್. ಎಂ.ಎಸ್ ಎಂಬ ವ್ಯವಸ್ಥೆಯಿಂದ ಪಡೆದು ಕೊಳ್ಳಬಹುದು.
* ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿರುವ ಈ ದಿನಗಳಲ್ಲಿ ಈ ಸೇವೆಯು ಮಹಿಳೆಯರಿಗೆ ಸುರಕ್ಷತೆಯನ್ನು ಒದಗಿಸುತ್ತದೆ. ಸಂಕಷ್ಟದ ಸಮಯದಲ್ಲಿ ಮಹಿಳೆ ಮೊಬೈಲ್ ಮೂಲಕ "ಸೇಫ್" ಎಂಬ ಸಂದೇಶ ರವಾನಿಸಿದರೆ ಅದು ಹತ್ತಿರದ ಪೊಲೀಸರಿಗೆ ತಲುಪಿ ತಕ್ಷಣ ನೆರವು ದೊರಕುತ್ತದೆ.
* ರೈತರು ಬೆಳೆಯ ವಿವರಗಳನ್ನು ನೊಂದಾವಣೆ ಮಾಡಿದರೆ ಸರ್ಕಾರದಿಂದ ದೊರೆಯುವ ನೆರವು, ಮಾರುಕಟ್ಟೆಯ ಸೌಕರ್ಯಗಳು ಮೊದಲಾದ ಮಾಹಿತಿಯನ್ನು ಪಡೆದು ಕೊಳ್ಳಬಹುದು. ನೊಂದಣಿ ಮತ್ತು ಮುದ್ರಾಂಕ ಇಲಾಖೆ ಮೂಲಕ ಅಗತ್ಯವಾದ ದಾಖಲೆಗಳನ್ನು ಪಡೆದು ಕೊಳ್ಳ ಬಹುದು.
* ಜನನ-ಮರಣ ಪ್ರಮಾಣ ಪತ್ರ, ಧ್ವನಿವರ್ಧಕ ಪರವಾನಗಿ, ಹವಾಮಾನ ವಿವರ, ವಾಹನ ನೊಂದಾವಣಿ ಕುರಿತ ವಿವರಗಳು, ನೀರು, ಆದಾಯ, ಆಸ್ತಿ ತೆರಿಗೆ, ವಿದ್ಯುತ್, ದೂರವಾಣಿ ಬಿಲ್‌ಗಳನ್ನು ಈ ಮೂಲಕ ಪಾವತಿಸಬಹುದು.

**ಕರ್ನಾಟಕ ಒನ್ ಸೇವೆಯ ಕುರಿತ ವಿವರಗಳು**

* **ಅಂತರ್ಜಾಲ ವಿಳಾಸ:** http://www.mobile.karnataka.gov.in
* **ಸಹಾಯವಾಣಿ ಸಂಖ್ಯೆ 1800-425-425-425.**
* **ಸಾಮಾನ್ಯ ಮೊಬೈಲ್ ಆಗಿದ್ದರೆ 161 ಸಂಖ್ಯೆಗೆ ಪೋನ್ ಮಾಡಬೇಕು.**
* **ಸ್ಮಾರ್ಟ್ ಪೋನ್ ಆಗಿದ್ದರೆ 1800-425-425-425 ಈ ಸಂಖ್ಯೆಗೆ ಮಿಸ್ಡ್ ಕಾಲ್ ನೀಡಿದರೆ ಸೇವೆಯ ವಿವರಗಳು ದೊರಕುತ್ತವೆ. ಅದನ್ನು ಬಳಸಿಕೊಂಡು ನೊಂದಣಿ ಮಾಡಿಕೊಳ್ಳ ಬೇಕು'.**
* **ಆಪಲ್, ವಿಂಡೋಸ್, ಆಂಡ್ರಾಯ್ಡ್, ವಿಂಡೋಸ್, ಬ್ಲಾಕ್ ಬೆರ್ರಿ ಅಪರೇಟಿಂಗ್ ಸಿಸ್ಟಂಗಳ ಮೂಲಕ ಪ್ಲೇ ಸ್ಟೋರ್‌ನಲ್ಲಿ "ಕರ್ನಾಟಕ ಮೊಬೈಲ್ ಒನ್" ಎಂಬ ಆಪ್ ಡೌನ್ ಲೋಡ್ ಮಾಡಿಕೊಂಡು ನೊಂದಣಿ ಮಾಡಿಕೊಳ್ಳಬಹುದು.**
* **ಐಪೋನ್ ಹೊಂದಿರುವವರು "ಐಒಎಸ್"(ಐಪೋನ್ ಅಪರೇಟಿಂಗ್ ಸಿಸ್ಟಂ) ಮೂಲಕ ಸೇವೆಗಳನ್ನು ಪಡೆದು ಕೊಳ್ಳಬಹುದು.**
* **ಧ್ವನಿ ಆಧರಿತ ಸೇವೆಗೆ 161ಕ್ಕೆ ಕರೆ ಮಾಡಬೇಕು.**
* **ಸಂದೇಶ ಆಧರಿತ ಸೇವೆಗೆ *161#ಗೆ ಕರೆ ಮಾಡಬೇಕು.**

**ಇದರ ಪ್ರಯೋಜನ ಪಡೆಯುವುದು ಹೇಗೆ?**

www.mobile.karnataka.gov.in ಎಂಬ ವೆಬ್‌ಸೈಟ್ ಮೂಲಕ ಸೇವೆಯನ್ನು ಸುಲಭವಾಗಿ ಪಡೆಯಬಹುದು. ಮೊದಲು ಬಳಕೆದಾರ ತನ್ನ ಮೊಬೈಲ್ ಸಂಖ್ಯೆಯನ್ನು ನೊಂದಾಯಿಸಬೇಕು, ಆಗ ನಿಮಗೆ ಪಾಸ್‌ವರ್ಡ್ ಲಭಿಸುತ್ತದೆ. ಇದನ್ನು ಬಳಸಿ ವೆಬ್ ಪುಟಕ್ಕೆ ಲಾಗಿನ್ ಆಗಬಹುದು. ಅಲ್ಲಿ ಪ್ರವೇಶಿಸುತ್ತಿದ್ದಂತೆಯೇ ವಿವಿಧ ಶೀರ್ಷಿಕೆಯ ಅಡಿ ಆಪ್‌ಗಳು ಕಾಣ ಸಿಗುತ್ತವೆ. ಪ್ರತಿಪುಟವೂ ಆಕರ್ಷಕವಾಗಿ ಮತ್ತು ಗ್ರಾಹಕರಿಗೆ ಸುಲಭವಾಗಿ ಮಾಹಿತಿ ಪಡೆಯುವಂತೆ ವಿನ್ಯಾಸಗೊಂಡಿದ್ದು ಆ್ಯಪ್ ಮೂಲಕವೇ ಎಲ್ಲಾ ಸೇವೆಯನ್ನು ಪಡೆಯಬಹುದು. ಈ ಯೋಜನೆ ಲೋಕಾರ್ಪಣೆಗೊಂಡ ಕೇವಲ ಮೂರು ತಾಸಿನಲ್ಲಿ 33,000 ಮಂದಿ ಕರೆ ಮಾಡಿದ್ದಾರೆ. ಜೊತೆಗೆ 16,000 ಜನ ಎಸ್‌ಎಮ್‌ಎಸ್ ಮೂಲಕ ಡೌನ್‌ಲೋಡ್ ಮಾಡಿಕೊಂಡಿದ್ದರೆ, 15,000 ಮಂದಿ ಮೊಬೈಲ್ ಮೂಲಕ ಡೌನ್‌ಲೋಡ್ ಮಾಡಿ ಕೊಂಡಿದ್ದಾರೆ. ಇದು ಈ ಯೋಜನೆಯ ಸಫಲತೆಯನ್ನು ಸ್ಪಷ್ಟವಾಗಿ ತಿಳಿಸಿ ಕೊಟ್ಟಿದೆ. ಜನೋಪಯೋಗಿ ಈ ವೆಬ್‌ಸೈಟ್ ವಿನ್ಯಾಸದಲ್ಲಿ ರಾಜ್ಯದ ತಂತ್ರಜ್ಞರ ಜೊತೆಗೆ ಕೇಂದ್ರದ ಐ.ಎಂ.ಐ ಮೊಬೈಲ್ ಸೇವೆಯ ಸಹಭಾಗಿತ್ವವಿದೆ. ರಾಜ್ಯದ 64 ಮಿಲಿಯನ್ ನಾಗರೀಕರ ಪೈಕಿ 55 ಮಿಲಿಯನ್ ನಾಗರೀಕರ ಬಳಿ ಮೊಬೈಲ್ ಇದೆ ಎನ್ನುವುದು ಸಮೀಕ್ಷೆಯಿಂದ ದೃಢ ಪಟ್ಟಿರುವುದರಿಂದ ಈ ಯೋಜನೆ ಯಶಸ್ವಿಯಾಗುವುದು ಖಚಿತ ಎಂದೇ ಹೇಳಬಹುದು. ತಂತ್ರಜ್ಞಾನ ಕ್ರಾಂತಿಯಿಂದ ಇಂದು ಸಂವಹನ ಸುಲಭವಾಗುತ್ತಿದೆ. ಆಡಳಿತ ಪಾರದರ್ಶಕವಾಗುತ್ತಿದೆ. ಸಾಮಾನ್ಯ ಜನ ಮತ್ತು ಆಡಳಿತ ವ್ಯವಸ್ಥೆಯ ನಡುವಿನ ಅಂತರ ಕಡಿಮೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ "ಕರ್ನಾಟಕ ಮೊಬೈಲ್ ಒನ್" ಯೋಜನೆ ಸಕಾಲಿಕವಾದ ಯೋಜನೆಯಾಗಿದೆ ಈ ಮೂಲಕ ಕರ್ನಾಟಕದ ದೇಶದಲ್ಲಿಯೇ ಮಾದರಿ ರಾಜ್ಯವಾಗಿದೆ. ❑

# ಕೆರೆ ಹೂಳಿನ ಸದ್ಬಳಕೆ

ಪ್ರೊ|| ಎಂ. ರುದ್ರಾರಾಧ್ಯ




**ನೀರಾವರಿ ಹಾಗೂ ಕೆರೆ ಕಟ್ಟೆಗಳ ವಿಷಯ ಕುರಿತು ಚಿಂತಿಸುವಾಗ ಮೈಸೂರಿನ ರಾಜ ಒಡೆಯರ ಅದರಲ್ಲೂ ವಿಶೇಷವಾಗಿ "ರಾಜಾ ಪ್ರತ್ಯಕ್ಷ ದೇವತಾ" ಎನ್ನುವುದನ್ನು ಅನ್ವರ್ಥವಾಗಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆಯನ್ನು ಮರೆಯಲಾದೀತೆ? ಕೇವಲ ಕೆರೆಕಟ್ಟೆಗಳಿಗೆ ಸೀಮಿತವಾಗದೆ ಕೃಷ್ಣರಾಜಸಾಗರದ ಕನ್ನಂಬಾಡಿಕಟ್ಟೆ, ಶಿವನ ಸಮುದ್ರಂ ಮತ್ತು ಶಿಂಷಾಗಳಲ್ಲಿ ಜಲವಿದ್ಯುತ್ ಯೋಜನೆ, ಪಟ್ಟಿ ಮಾಡುತ್ತಾ ಹೋದರೆ ಕೊನೆ ಮೊದಲಿಲ್ಲ. ಶಿಕ್ಷಣ, ಕೈಗಾರಿಕೆ, ಸಾಮಾಜಿಕ ನ್ಯಾಯ ಮತ್ತು ಸಮಾನತೆ, ಕಲೆ, ಸಂಸ್ಕೃತಿ ಎಲ್ಲ ಕ್ಷೇತ್ರಗಳಿಗೂ ಕೊಡುಗೆ ನೀಡಿದ ಧೀಮಂತರು ಅವರು.**

ನೀರು ಸಂಗ್ರಹಣೆಗಾಗಿ ಶತಮಾನಗಳ ಹಿಂದೆ ಕಟ್ಟಲ್ಪಟ್ಟ ಕೆರೆಗಳು ಮಳೆಯ ಪ್ರಮಾಣ ಹಾಗೂ ಹಂಚಿಕೆಗಳಲ್ಲಾಗುವ ಏರು–ಪೇರುಗಳನ್ನು ಸರಿದೂಗಿಸುವುದು ಮಾತ್ರವಲ್ಲ, ಮಳೆಯ ನೀರಿನ ಸಂಗ್ರಹಣೆಯ ಜೊತೆಗೆ, ಒಂದು ಜಲಾನಯನ ಪ್ರದೇಶದಲ್ಲಿ ಹೆಚ್ಚುಮಳೆ ಬಿದ್ದಾಗ ಮಳೆಯ ಜೊತೆಗೆ ಕೊಚ್ಚಿಹೋಗುವ ಪೋಷಕಾಂಶಭರಿತ ಮೇಲ್ಪದರಗಳ ಮಣ್ಣನ್ನೂ ಸಂಗ್ರಹಿಸುವ ಆಗರಗಳಾಗಿ ರೈತರಿಗೆ ವರಪ್ರಸಾದವೆನಿಸಿವೆ. ಇದರಿಂದಾಗಿ ಕೆರೆಗಳು ಸ್ವಾಭಾವಿಕ ಸಂಪನ್ಮೂಲಗಳಾದ ಮಣ್ಣು ಮತ್ತು ಮಳೆ ನೀರಿನ ಸಂರಕ್ಷಣೆ ಮಾಡುವುದಷ್ಟೇ ಅಲ್ಲ, ನೀರಾವರಿ, ನೆರೆಯ ನಿಯಂತ್ರಣ, ಭೂಮಿಯ ಅಂತರ್ಜಲದ ಪುನಶ್ಚೇತನದ ಜೊತೆಗೆ ಇನ್ನಿತರ ಸಾಮಾಜಿಕ, ಆರ್ಥಿಕ ಹಾಗೂ ಪರಿಸರ ಸಂಬಂಧಿ ಕಾರ್ಯಗಳಲ್ಲಿ ನೆರವಾಗುತ್ತವೆನ್ನುವುದರಲ್ಲಿ ಎರಡು ಮಾತಿಲ್ಲ. ಮಳೆಗಾಲದಲ್ಲಿ ಆಗಿಂದಾಗ್ಗೆ ಬೀಳುವ ಅಧಿಕ ಮಳೆಯಿಂದಾಗುವ ಮಣ್ಣಿನ ಕೊಚ್ಚಣೆಯಿಂದಾಗಿ ಆ ಜಲಾನಯನ ಪ್ರದೇಶದ ಮೇಲ್ಪದರ ಮಣ್ಣಿನಲ್ಲಿರುವ ಅತ್ಯಮೂಲ್ಯ ಪೋಷಕಾಂಶಗಳೂ ನಷ್ಟವಾಗುತ್ತವೆ. ಕೃಷಿಯೋಗ್ಯವಲ್ಲದ ಭೂಮಿ ಹಾಗೂ ಮಳೆಯಾಶ್ರಿತ ಪ್ರದೇಶಗಳೆರಡರಿಂದಲೂ ಈ ರೀತಿ ಕೊಚ್ಚಿಬರುವ ನೀರು, ಮಣ್ಣು ಮತ್ತು ಪೋಷಕಾಂಶಗಳು ಕೆರೆಗಳಲ್ಲಿ ಸಂಗ್ರಹವಾಗಿ 'ಹೂಳು' ಎಂದು ಅಭಿದಾನ ಪಡೆಯುತ್ತವೆ. ಈ ಕಾರಣದಿಂದಾಗಿ, ಈ ರೀತಿ ಸಂಗ್ರಹವಾದ ಪೋಷಕಾಂಶಭರಿತ ಹೂಳನ್ನು ಕೃಷಿ ಜಮೀನುಗಳಿಗೆ ಸಾಗಿಸಿ ಸೇರಿಸುವುದರಿಂದ, ಅಂತಹ ಜಮೀನುಗಳ ಉದ್ಪಾದಕತೆ ಹೆಚ್ಚುವುದರ ಜೊತೆಗೆ ಕೆರೆಗಳ ಸಂಗ್ರಹಣಾ ಸಾಮರ್ಥ್ಯವನ್ನೂ ಉಳಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಹಾಗೆ ನೋಡಿದರೆ ದಕ್ಷಿಣ ಭಾರತದ ಕೃಷಿ ಕ್ಷೇತ್ರಕ್ಕೆ ನೈಜವಾಗಿ ಒಗ್ಗುವ ಸರಳ ನೀರಾವರಿ ವಿಧಾನವೆಂದರೆ –ಕೆರೆ ನೀರಾವರಿ. ಈ ಕೆರೆಗಳು ಮಳೆ ತೀವ್ರವಾಗಿದ್ದಾಗ ನೆರೆ ಹಾವಳಿ ತಗ್ಗಿಸಿ, ಬರ ಬಡಿದಾಗ ಅನಾಹುತಗಳನ್ನು ಮಿತಗೊಳಿಸಲು ಸಹಾಯಕಾರಿಯಾಗಿವೆ. ದಕ್ಷಿಣ ಭಾರತದಲ್ಲಿ ನೀರಾವರಿ ಪ್ರದೇಶದ 30% ಜಮೀನುಗಳು ಕೆರೆಗಳಿಂದಲೇ ನೀರು ಪಡೆಯುತ್ತವೆ. ದಕ್ಷಿಣ ಭಾರತದ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಪಾಂಡಿಚೇರಿಗಳು ಸೇರಿ ಇಡೀಭಾರತದ ಕೆರೆ ನೀರಾವರಿ ಪ್ರದೇಶದ 60% ನೀರಾವರಿ ಪ್ರದೇಶವನ್ನು ಪ್ರತಿನಿಧಿಸುತ್ತವೆ. ಶತಶತಮಾನಗಳಿಂದ ಈ ಕೆರೆಗಳು ಬರ ನಿರೋಧಕಗಳಾಗಿ, ಅಂತರ್ಜಲ ಪುನಶ್ಚೇತಕಗಳಾಗಿ, ಬೆಳೆಗಳಿಗೆ ನೀರು ಒದಗಿಸುವ ಕಲ್ಯಾಣಿಗಳಾಗಿ, ಒಂದು ಪ್ರದೇಶದ ಸ್ವಾಭಾವಿಕ ಪರಿಸರ ಉಳಿಸಿ ಬೆಳೆಸುವಲ್ಲಿ ಮಹತ್ತರ ಪಾತ್ರ ವಹಿಸಿವೆ. ಅಧುನಿಕತೆ ಬೆಳೆದಂತೆ ಕೆರೆಗಳ ನಿರ್ವಹಣೆಯಲ್ಲಿ ಸ್ಥಳೀಯ ವ್ಯವಸ್ಥೆಗಳು ವಿಫಲವಾಗಿ – ಕೆರೆಗಳು ಹೂಳು ತುಂಬಿ ಅವುಗಳ ಸಾಮರ್ಥ್ಯ ಗಣನೀಯವಾಗಿ ಕುಗ್ಗಿದೆ.

**ಸಾಮಾನ್ಯವಾಗಿ ಕೆರೆಹೂಳನ್ನು ಮಳೆಯಾಶ್ರಿತ ಕೃಷಿ ಭೂಮಿಗಳಿಗೆ ಹಾಗೂ ತೋಟದ ಜಮೀನುಗಳಿಗೆ ರಸಗೊಬ್ಬರಗಳಿಗೆ ಪರ್ಯಾಯವಾಗಿ ಅಥವಾ ರಸಗೊಬ್ಬರ ಬಳಕೆಯನ್ನು ಮಿತಗೊಳಿಸಲು ಬಳಸಲಾಗುತ್ತದೆ.**

ಯೋಜನಾ ಸಮನ್ವಯಾಧಿಕಾರಿಗಳು, ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



**ಮಳೆಯ ನೀರು ಕೊಚ್ಚಿ ಬರುವಾಗ ಜಲಾನಯನ ಪ್ರದೇಶದ ಮೇಲ್ಪದರದ ಮಣ್ಣು ಹೊತ್ತುತಂದು ಕೆರೆಯಲ್ಲಿ ಹೂಳು ತುಂಬಿರುವ ದೃಶ್ಯ.**

### ಕೆರೆಯ ಹೂಳಿನಲ್ಲಿ ಏನಿದೆ?

ಅನೇಕ ಸಂಶೋಧನೆಗಳಿಂದ "ಕೆರೆಗಳ ಹೂಳು ಅಂತಹ ಜಮೀನುಗಳಲ್ಲಿ ಬೆಳೆದ ಬೆಳೆಗಳಿಗೆ ಸಾರಜನಕದ ಪೂರ್ಣಾಂಶ ಒದಗಿಸುವುದಷ್ಟೇ ಅಲ್ಲದೆ, ಮರಳು ಮಿಶ್ರಿತ ಭೂಮಿ ಹಾಗೂ ಸವಳು ಭೂಮಿಗಳು ಸುಧಾರಣೆಯಾಗಲು ನೆರವಾಗುತ್ತದೆ" ಎಂದು ದೃಢಪಟ್ಟಿದೆ. ಬೆಳೆ ಉತ್ಪಾದನೆಯಲ್ಲಿ ನಿಜಕ್ಕೂ ಅದೊಂದು ಗೊಬ್ಬರದ ಮೂಲವಾಗಿದೆ. ನೀರಿನ ಸಮರ್ಥ ಬಳಕೆಗೆ ಹಾಗೂ ಉತ್ಪಾದಕತೆ ಹೆಚ್ಚಿಸುವುದಕ್ಕೆ ಸಹಕಾರಿ. ಕೆರೆಯ ಹೂಳಿನಲ್ಲಿ ಸಾವಯವ ಇಂಗಾಲ (9.1 ಗ್ರಾಂ./ಕೆ.ಜಿ.), ಸಾರಜನಕ (720 ಮಿ.ಗ್ರಾಂ./ಕೆ.ಜಿ.), ರಂಜಕ (320 ಮಿ.ಗ್ರಾಂ./ಕೆ.ಜಿ.), ಪೊಟ್ಯಾಸಿಯಂ (310 ಮಿ.ಗ್ರಾಂ./ಕೆ.ಜಿ), ಸೂಕ್ಷ್ಮಜೀವಿಗಳು ಒದಗಿಸುವ ಇಂಗಾಲ (308 ಮಿ.ಗ್ರಾಂ./ಕೆ.ಜಿ.), ಜಮೀನುಗಳಲ್ಲಿ ಬಳಸಿದ ಪೀಡೆ ನಾಶಕಗಳ ಶೇಷಾಂಶ ಇತ್ಯಾದಿ ಲಭ್ಯವಿರುತ್ತವೆ. ಅವುಗಳ ಪ್ರಮಾಣದಲ್ಲಿ ಕೆರೆಯಿಂದ ಕೆರೆಗೆ ವ್ಯತ್ಯಾಸವಿರುತ್ತದೆ. ಆದುದರಿಂದ ಅಂತಹ ಕೆರೆಹೂಳನ್ನು ಜಮೀನುಗಳಿಗೆ ಒದಗಿಸುವಾಗ, ಪ್ರಯೋಗಾಲಯಗಳಲ್ಲಿ ಹೂಳನ್ನು ಪರೀಕ್ಷೆಗೆ ಒಳಪಡಿಸಿದರೆ ಅಪಾಯಕಾರಿಯಾಗುವಷ್ಟು ವಿಷಮತೆಯೇನಾದರೂ ಹೂಳಿನಲ್ಲಿದ್ದಲ್ಲಿ, ಸರಿಪಡಿಸಲು ಸೂಕ್ತ ಶಿಫಾರಸು ಮಾಡಲು ಸಹಾಯವಾಗುತ್ತದೆ.

### ಕೃಷಿ ಭೂಮಿಗೆ ಕೆರೆ ಹೂಳಿನ ಸೇರ್ಪಡೆ

ದಕ್ಷಿಣ ಭಾರತದ ರೈತಾಪಿ ಜನರಲ್ಲಿ ಅಧಿಕ ಮಳೆಯಿಂದಾಗಿ ಮಣ್ಣಿನ ಕೊಚ್ಚಣೆಯಾಗಿ ಉಂಟಾಗುವ ಕೊರಕಲುಗಳನ್ನು ಮುಚ್ಚಿ ಅಂತಹ ಭೂಮಿಯ ಉತ್ಪಾದಕತೆಯನ್ನು ಕಾಯ್ದುಕೊಳ್ಳಲು ಕೆರೆಹೂಳನ್ನು ಜಮೀನಿಗೆ ಒದಗಿಸುವುದು ಬಹಳ ಹಿಂದಿನ ಕಾಲದಿಂದಲೂ ನಡೆದು ಬಂದಿರುವ ಒಂದು ಸಾಂಪ್ರದಾಯಿಕ ಪದ್ಧತಿ. ಅನೇಕ ಕಡೆ ಇತ್ತೀಚಿನವರೆಗೆ ರೈತರು ಕಾಂಪೋಸ್ಟು ಗುಂಡಿಗಳನ್ನು ತೋಡಿ, ತಮ್ಮ ಜಮೀನುಗಳಲ್ಲಿ ಒದಗಿಬರುವ ಕೃಷಿ ತ್ಯಾಜ್ಯ, ಸಗಣಿ, ಗಂಜಲ ಇತ್ಯಾದಿಗಳನ್ನು ಪದರ–ಪದರವಾಗಿ ಹಾಕಿ ಆ ಪದರಗಳ ನಡುವೆ ಕೆರೆಹೂಳನ್ನು ಸೇರಿಸುತ್ತಿದ್ದರು. ಅದೆಲ್ಲವೂ ಮಳೆಯ ನೀರಿನಲ್ಲಿ ತೊಯ್ಯುವ, ಬಿಸಿಲು ಮತ್ತು ಗಾಳಿಗಳಲ್ಲಿ ಒಣಗುವ ಕ್ರಿಯೆಗಳಿಂದಾಗಿ ಕಾಂಪೋಸ್ಟು ಚೆನ್ನಾಗಿ ಕಳಿಯುತ್ತದೆ. ಇಂತಹ ಕಾಂಪೋಸ್ಟನ್ನು ಮುಂಗಾರು ಹಂಗಾಮಿನ ಆರಂಭದ ದಿನಗಳಲ್ಲಿ ಭೂಮಿಗೆ ಸೇರಿಸಿದಾಗ, ಕಡಿಮೆಯಾಗಿದ್ದ ಪೋಷಕಾಂಶಗಳು ಭರ್ತಿಯಾಗಲ್ಪಡುವುದಲ್ಲದೆ, ಮಣ್ಣಿನ ರಚನೆಯೂ ಸುಧಾರಣೆಗೊಂಡು ಅದರ ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವೂ ಹೆಚ್ಚಿ. ಅಧಿಕ ಉತ್ಪಾದನೆಗೆ ನೆರವಾಗುತ್ತದೆ ಮಾತ್ರವಲ್ಲ, ಬಹುತೇಕವಾಗಿ ರಾಸಾಯನಿಕ ಗೊಬ್ಬರಗಳ ಬಳಕೆ ಅನಗತ್ಯವಾಗುತ್ತದೆ. ಸಾಮಾನ್ಯವಾಗಿ ಕೆರೆಹೂಳನ್ನು ಮಳೆಯಾಶ್ರಿತ ಕೃಷಿ ಭೂಮಿಗಳಿಗೆ ಹಾಗೂ ತೋಟದ ಜಮೀನುಗಳಿಗೆ ರಸಗೊಬ್ಬರಗಳಿಗೆ ಪರ್ಯಾಯವಾಗಿ ಅಥವಾ ರಸಗೊಬ್ಬರ ಬಳಕೆಯನ್ನು ಮಿತಗೊಳಿಸಲು ಬಳಸಲಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಕೃಷಿ ಜಮೀನುಗಳಿಗೆ ಕೆರೆ ಹೂಳು ಸೇರಿಸುವ ಪದ್ಧತಿ ಕ್ರಮೇಣವಾಗಿ ಕಣ್ಮರೆಯಾಗುತ್ತಿದೆ. ಹಾಗಾಗಲು ಕಾರಣವೆಂದರೆ :

* ಎತ್ತುಗಳು ಮತ್ತು ಎತ್ತಿನ ಗಾಡಿಗಳ ಬಳಕೆ ಕಡಿಮೆಯಾಗಿರುವುದು. ಸಗಣಿಗೊಬ್ಬರ ದೊರೆಯುವುದೇ ದುರ್ಲಭವಾಗಿದೆ. ಅನೇಕಸಲ ಸಣ್ಣರೈತರು ಅಂತಹ ಟ್ರಾಕ್ಟರುಗಳನ್ನು ಬಾಡಿಗೆಗೆ ಪಡೆದು ಕೆರೆ ಹೂಳನ್ನು ತಮ್ಮ ಜಮೀನಿಗೆ ಸಾಗಿಸಲು ಅಶಕ್ತರಾಗಿರುವುದೂ ಇದಕ್ಕೆ ಕಾರಣವಾಗಿದೆ.

* ರೈತಾಪಿ ಜನರು ಮಳೆಯಾಶ್ರಿತ ಕೃಷಿಯಲ್ಲಿ, ಕೆರೆ ಹೂಳು ಸಾಗಿಸಿ, ಭೂಮಿಗೆ ಸೇರಿಸಲು ಹೆಚ್ಚಿನ ವೆಚ್ಚ ಭರಿಸಬೇಕಾಗುತ್ತದೆ ಎಂದು ಭಾವಿಸುತ್ತಾರೆ.

* ರೈತರು ನೀಡುವ ಮತ್ತೊಂದು ಪ್ರಮುಖ ಕಾರಣವೆಂದರೆ, ಕೆರೆಯ ಹೂಳನ್ನು ತಮ್ಮ ಜಮೀನಿಗೆ ಸಾಗಿಸಲು ಸ್ಥಳೀಯ ಕಂದಾಯ ಇಲಾಖೆಯ ಸಿಬ್ಬಂದಿ ತಂದೊಡ್ಡುವ ಅಡಚಣೆ. ಇದು ತಮಗೆ ಗಾಯದ ಮೇಲೆ ಬರೆ ಎಳೆದಂತಾಗುತ್ತದೆ ಅನ್ನುತ್ತಾರೆ.

* ಇವೆಲ್ಲದರ ಜೊತೆಗೆ ಕೃಷಿ ಕಾರ್ಯಕ್ರಮಗಳಿಗೆ ಬಿಡುವಿರುವ ದಿನಗಳಲ್ಲಿ ಸರ್ಕಾರಗಳು ಕೈಗೊಳ್ಳುವ ಉದ್ಯೋಗಾವಕಾಶ ಕಾರ್ಯಕ್ರಮಗಳಿಂದಾಗಿ, ಕೆರೆಯ ಹೂಳು ಸಾಗಿಸಲು ಆಳುಗಳ ಅಥವಾ ಟ್ರಾಕ್ಟರುಗಳ ಅಲಭ್ಯತೆಯಿಂದಾಗಿ ವೆಚ್ಚ ಹೆಚ್ಚಾಗುವುದೂ ಒಂದು ಕಾರಣವಾಗಿದೆ.

ಅದೇನೇ ಇರಲಿ, ಇವೆಲ್ಲದರ ಒಟ್ಟಾರೆ ಪರಿಣಾಮವಾಗಿ, ಕೃಷಿಯಲ್ಲಿ ರಸಗೊಬ್ಬರಗಳ ಬಳಕೆ ಹೆಚ್ಚಾಗುವುದಕ್ಕೂ ಕಾರಣವಾಗಿದೆ. ನಿರಂತರವಾದ ರಸಗೊಬ್ಬರಗಳ ಬಳಕೆಯಿಂದ ಮಣ್ಣಿನ ಆರೋಗ್ಯ ಕೆಡುತ್ತದೆ. ಕೊಚ್ಚಣೆಯಾದ ಫಲವತ್ತಾದ ಮಣ್ಣು ಪುನರ್ ಸೇರ್ಪಡೆಯಾಗದೆ, ಅದರಿಂದಾಗುವ ಅನಾಹುತಗಳಿಗೆ ಎಡೆಯಾಗುತ್ತಿದೆ. ಆ ಕಾರಣ, ಸಾಂಪ್ರದಾಯಿಕವಾಗಿ ರೂಢಿಯಲ್ಲಿದ್ದ ಕೆರೆಹೂಳನ್ನು ಮಣ್ಣಿಗೆ ಸೇರಿಸುವ ಉತ್ತಮ ಪದ್ಧತಿಯನ್ನು ಪುನರಾವರ್ತಿಸಬೇಕಾಗಿದೆ. ❑

**ಬದಲಾದ ಪರಿಸ್ಥಿತಿ !**

**ನಾನು ಬಾಲಕನಾಗಿದ್ದಾಗ, ಶಾಲೆಗೆ ರಜಾ ದಿನಗಳು ಬಂದರೆ ಸಾಕು; ಒಂಟೆತ್ತಿನ ಜಲ್ಲೆ ಗಾಡಿಯನ್ನು ತೆಗೆದುಕೊಂಡು ಕೆರೆ ಹೂಳೆತ್ತಿ ನಮ್ಮ ತೋಟ ಹೊಲಗಳಿಗೆ ದಿನಕ್ಕೆ 5–6 ಗಾಡಿಗಳಂತೆ ಸಾಧ್ಯವಾದಷ್ಟೂ ಕೆರೆಹೂಳನ್ನು ಸಾಗಿಸುವುದು ನಮ್ಮ ದಿನನಿತ್ಯದ ಕಾಯಕವಾಗುತ್ತಿತ್ತು. ಅದರಲ್ಲಿ ಧನ್ಯತೆಯನ್ನು ಕಾಣುತ್ತಿದ್ದೆವು.**

**ಮೇಲಿನದನ್ನು ಹೇಳುವಾಗ, ನಾನು ದೊಡ್ಡವನಾದ ಮೇಲೆ ಕಾವೇರಿ ನೀರಾವರಿ ನಿಗಮದ ಮುಖ್ಯಸ್ಥರಾಗಿದ್ದ ಶ್ರೀ ತಿಮ್ಮೇಗೌಡರು ಹೇಳುತ್ತಿದ್ದ ಕಥೆ ಕಣ್ಮುಂದೆ ಕಟ್ಟುತ್ತದೆ. ನೀರಾವರಿ ನಿಗಮದ ಕಾರ್ಯಕ್ರಮದ ಅಡಿಯಲ್ಲಿ ಅವರು ಸಾಕಷ್ಟು ಕೆರೆಹೂಳು ಎತ್ತಿಸುತ್ತಿದ್ದರಂತೆ. ಅದನ್ನು ಕಲೆ ಹಾಕಿ ರಾಶಿಮಾಡಿ, ಸುತ್ತ ಮುತ್ತಲಿನ ರೈತರನ್ನು ಕರೆದು, ನೋಡಿ, ಇದರಲ್ಲಿ ಬಂಗಾರವೇ ಇದೆ; ನಿಮ್ಮ ಜಮೀನುಗಳಿಗೆ ಸಾಗಿಸಿಕೊಂಡು ಬಿಡಿ ಎಂದಾಗ ಆ ರೈತರು, ಸ್ವಾಮೀ, ಹೇಗೂ ಇಷ್ಟೆಲ್ಲಾ ಕಷ್ಟಪಟ್ಟು ಹೂಳು ತೆಗೆಸಿದೀರಾ, ನೀವೇ ಸ್ವಲ್ಪ ಹಾಗೇ ನಮ್ಮ ಜಮೀನಿಗೆ ಹಾಕಿಸಿಬಿಡಿ – ಎಂದರಂತೆ! ಇದು ದುರಂತವಲ್ಲದೆ, ಮತ್ತೇನು?**

## ನಿಮಗಿದು ತಿಳಿದಿದೆಯೇ?

### ಬ್ಯಾಂಕುಗಳ ಮರುಬಂಡವಾಳೀಕರಣ

ಆರ್ಥಿಕ ಗುರಿ ಸಾಧನೆಗಾಗಿ ಸಂಸ್ಥೆಯೊಂದರ ಆಸ್ತಿ ಮತ್ತು ಸಾಲದ ವ್ಯವಸ್ಥೆಯನ್ನು ಪುನರ್ ರೂಪಿಸುವುದಕ್ಕೆ ಮರುಬಂಡವಾಳೀಕರಣ ಎನ್ನುತ್ತಾರೆ. ಸಂಸ್ಥೆ ತಾನು ಹೊಂದಿರುವ ಆಸ್ತಿಗಾಗಿ ಕಟ್ಟಬೇಕಾದ ತೆರಿಗೆ ಹಣವನ್ನು ಮಿತಗೊಳಿಸಲು ಅಥವಾ ದೀವಾಳಿಯ ಹೊಣೆಯನ್ನು ನಿವಾರಿಸಲು ನಡೆಸುವ ಪುನರ್ಘಟನೆಯ ನಿಟ್ಟಿನಲ್ಲಿ ಇದು ಮೊದಲ ಹೆಜ್ಜೆಯಾಗಿದೆ.

ಈ ಪರಿಕಲ್ಪನೆ ಮೂಲತಃ ವ್ಯಾಪಾರ ವಹಿವಾಟುಗಳಿಗೆ ಸಂಬಂಧಿಸಿದ್ದಾದರೂ ಇದನ್ನು ಲಾಭೋದ್ದೇಶವಿರದ ಸಂಘಟನೆಗಳು, ಬ್ಯಾಂಕು ಅಥವಾ ಅಡಮಾನದಂತಹ ಹಣಕಾಸು ಸಂಸ್ಥೆಗಳು ಅಷ್ಟೇ ಏಕೆ ವೈಯಕ್ತಿಕ ಸ್ತರದಲ್ಲಿಯೂ ಈ ಪರಿಕಲ್ಪನೆಯನ್ನು ಅನ್ವಯಿಸಬಹುದಾಗಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಮರುಬಂಡವಾಳೀಕರಣ ಪ್ರಮುಖ ಬದಲಾವಣೆ ಮೂಲಕ ಬಂಡವಾಳ ಒದಗಿಸುವ ಕ್ರಮವಾಗಿದೆ. ಇದನ್ನು ಹೊಸದಾಗಿ ಶೇರು ಬಿಡುಗಡೆ ಮಾಡುವ ಮೂಲಕ ಅಥವಾ ಸರ್ಕಾರಿ ಸಾಲ ಪಡೆಯುವ ಮೂಲಕ ಮಾಡಬಹುದಾಗಿದೆ.

ಪ್ರಾಥಮಿಕವಾಗಿ ಮರು ಬಂಡವಾಳೀಕರಣದಲ್ಲಿ ಬ್ಯಾಂಕಿಗೆ ಹೊಸ ಬಂಡವಾಳ ತರಲಾಗುತ್ತದೆ. ಉದಾಹರಣೆಗೆ, ಹೊಸಶೇರುಗಳನ್ನು ಖರೀದಿಸಲು ಸರ್ಕಾರ ಸಮ್ಮತಿಸುವುದು. ಇದು ಬ್ಯಾಂಕನ್ನು ದಿವಾಳಿತನದಿಂದ ಹೊರತಂದು ಹಣಕಾಸು ಸ್ಥಿತಿಯನ್ನು ಸುಧಾರಿಸುತ್ತದೆ. ಇತ್ತೀಚೆಗೆ ಸಾರ್ವಜನಿಕ ರಂಗದ ಬ್ಯಾಂಕುಗಳ (ಪಿಎಸ್‌ಬಿ) ಅಗತ್ಯದ ಆಧಾರದ ಮೇಲೆ 2013–14 ರಿಂದ 2018–19ರ ಅವಧಿಯಲ್ಲಿ ಹೊಸ ಬಂಡವಾಳ ಹೊಂದಲು ಸರ್ಕಾರದಿಂದ 'ತಾತ್ವಿಕ' ಒಪ್ಪಿಗೆ ಪಡೆದವು. ಇದರಿಂದ ಆರ್ಥಿಕತೆಯ ಉತ್ಪಾದನಾ ರಂಗದ ಸಾಲ ಅಗತ್ಯಗಳನ್ನು ಪೂರೈಸಲು ಅನುಕೂಲವಾಗುತ್ತದೆ ಮತ್ತು ಸಾಲ ಒತ್ತಡ ನೀಗಲು ನೆರವಾಗುತ್ತದೆ. ಇದು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಬ್ಯಾಂಕಿಂಗ್ ಕಾರ್ಯಾಚರಣೆಗಳನ್ನು ಬಲಗೊಳಿಸಿ, ಹೂಡಿಕೆದಾರನ ವಿಶ್ವಾಸ ಹೆಚ್ಚಿಸುತ್ತದೆ ಮತ್ತು ಮಾರುಕಟ್ಟೆಯ ಸಂವೇದನೆ ಸಂರಕ್ಷಿಸಲು ನೆರವಾಗುತ್ತದೆ.

ಈಕ್ವಿಟಿ ಬಂಡವಾಳವನ್ನು ಸೇರಿಸುವುದರಿಂದ ವಿಸ್ತರಣೆಗೆ ಮತ್ತು ತಮ್ಮ ಕೇವಣಿ ಹೆಚ್ಚಿಸಲು ಅನುವಾಗುತ್ತದೆ. ಇದು ಅತಿ ಸಣ್ಣ ಸಣ್ಣ ಪ್ರಮಾಣದ ಉದ್ದಿಮೆಗಳು, ಕೃಷಿ, ರಫ್ತು ಮೊದಲಾದ ರಂಗಕ್ಕೆ, ಹೆಚ್ಚಿನ ಸಾಲ ಸೌಲಭ್ಯ ದೊರೆತು ಆರ್ಥಿಕ ಚಟುವಟಿಕೆ ವರ್ಧಿಸಿ, ದೇಶದ ಆರ್ಥಿಕತೆ ಬಲಗೊಳ್ಳಲು ಅವಕಾಶವಾಗುತ್ತದೆ. ಇತ್ತೀಚೆಗೆ ಸಾರ್ವಜನಿಕ ರಂಗದ ಬ್ಯಾಂಕುಗಳು ಬೇಸಲ್ – III ನಿಯಮಾವಳಿಯಲ್ಲಿರಲು ಬ್ಯಾಂಕಿನಲ್ಲಿ 2018ರ ವೇಳೆಗೆ 2,40,000 ಕೋಟಿ ರೂ. ಈಕ್ವಿಟಿ ಹೆಚ್ಚಿಸುವ ಅಗತ್ಯವಿದೆಯೆಂದು ಪ್ರಕಟಿಸಲಾಗಿದೆ.

### ಟ್ಯೂರಿಂಗ್ ಟೆಸ್ಟ್

ಕೃತಕ ಜಾಣ್ಮೆಯನ್ನು ಅಳೆಯಲು ಪ್ರಯೋಗಿಸಲಾಗುವ ಪರೀಕ್ಷೆಗೆ ಟ್ಯೂರಿಂಗ್ ಟೆಸ್ಟ್ ಎಂದು ಕರೆಯುತ್ತಾರೆ. ಮಾನವನ ಮೆದುಳಿನಂತೆ ಕಂಪ್ಯೂಟರ್ ಆಲೋಚಿಸಬಲ್ಲದೆ ಇಲ್ಲವೆ ಎಂಬುದನ್ನು ತಿಳಿಯಲು ಇಂಗ್ಲಿಷ್ ಗಣಿತಜ್ಞ ಆ್ಯಲನ್ ಎಂ ಟ್ಯೂರಿಂಗ್ ಈ ಪರೀಕ್ಷೆ ಅಭಿವೃದ್ಧಿ ಪಡಿಸಿದ. "ಆಲೋಚನೆ ಮಾಡುವುದನ್ನು" ವ್ಯಾಖ್ಯಾನಿಸಲು ಆತ ವಿಷಯಾಧಾರಿತ ಪರೀಕ್ಷೆಯೊಂದನ್ನು ರೂಪಿಸಿದ ಇದು ಅತ್ಯಂತ ಸರಳವಾಗಿತ್ತು.

ಇದರಲ್ಲಿ ಮೂರು ಅಂತಿಮ ಟರ್ಮಿನಲ್‌ಗಳಿರುತ್ತದೆ. ಎರಡು ಟರ್ಮಿನಲ್‌ಗಳನ್ನು ಮಾನವರು ಮತ್ತೊಂದನ್ನು ಕಂಪ್ಯೂಟರ್ ನಿರ್ವಹಿಸುತ್ತಾರೆ. ಪ್ರತಿ ಟರ್ಮಿನಲ್ ಪ್ರತ್ಯೇಕವಾಗಿದ್ದು, ಉಳಿದೆರಡು ಟರ್ಮಿನಲ್‌ಗಳಿಂದ ಬೇರ್ಪಟ್ಟಿದೆ. ಒಬ್ಬ ಮಾನವ ಪರೀಕ್ಷಕ ಪ್ರಶ್ನೆ ಕೇಳುತ್ತಾನೆ. ಮತ್ತೊಬ್ಬ ಮಾನವ ಮತ್ತು ಕಂಪ್ಯೂಟರ್ ಉತ್ತರಿಸುತ್ತಾರೆ. ಪ್ರಶ್ನೆಯನ್ನು ವಿಷಯ, ಸಂದರ್ಭ ಹಾಗೂ ಕೆಲ ಅವಧಿಗೆ ಸಂಬಂಧ ಪಟ್ಟಂತೆ ಕೇಳಲಾಗುತ್ತದೆ.

ನಿಗದಿತ ವೇಳೆ ನಂತರ ಉತ್ತರವನ್ನು ನೀಡುವವರು ಯಾರು – ಮಾನವನೊ ಅಥವಾ ಕಂಪ್ಯೂಟರೊ ಎಂಬುದನ್ನು ಪರೀಕ್ಷಕ ಗುರುತಿಸಬೇಕಾಗುತ್ತದೆ. ಪರೀಕ್ಷೆಯನ್ನು ಅನೇಕ ಬಾರಿ ಪುನರಾವರ್ತಿಸಲಾಗುತ್ತದೆ. ಈ ಪರೀಕ್ಷೆಯನ್ನು ಕಂಪ್ಯೂಟರ್‌ನಿಂದ ಆಲೋಚನಾ ಸಾಮರ್ಥ್ಯವನ್ನು ಪ್ರಮಾಣೀಕರಿಸಲು ಬಳಸಲಾಯಿತು.

ಅಂಕಿ–ಅಂಶಗಳ ವಿಷಯದಲ್ಲಿ ಕಂಪ್ಯೂಟರ್ ಉತ್ತರ ತತ್‌ಕ್ಷಣ ದೊರಕಿದರೂ ವಿಚಾರ ಮಾಡಿ ಹೇಳಬೇಕಾದ ವಿಷಯದಲ್ಲಿ ಕಂಪ್ಯೂಟರ್ ಸಾಧನೆ ಹಿಂದೆಯೇ ಇದೆ. ಆದರೆ, ಗೂಗಲ್, ಯಾಹೂ, ಅಲ್ಟಾ ವೀಸಾಗಳಂತಹ ಕಂಪ್ಯೂಟರ್ ಅನ್ವಯಿಕಗಳು ಮನುಷ್ಯನ ಸಾಧನೆಯನ್ನೇ ಬದಿಗೊತ್ತುವ ಸಾಮರ್ಥ್ಯ ಹೊಂದಿವೆ. ❑


## ಯೋಜನಾ ಚಂದಾದಾರರಲ್ಲಿ ಕೋರಿಕೆ

**ಯೋಜನಾ ಪತ್ರಿಕೆಯ ಚಂದಾದಾರರು ಹಾಗೂ ಹೊಸದಾಗಿ ಚಂದಾ ಬಯಸುವವರು ಜಿಲ್ಲೆ ಹಾಗೂ ಅಂಚೆ ಪಿನ್‌ಕೋಡ್ ಸಂಖ್ಯೆ ಸೇರಿದಂತೆ ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಒದಗಿಸಬೇಕು. ಈಗಾಗಲೇ ಹಣ ಸಂದಾಯ ಮಾಡಿದವರು ದೂರವಾಣಿ ಮೂಲಕವೂ ಈ ವಿವರ ನೀಡಿ ದೃಢಪಡಿಸಿಕೊಳ್ಳಬಹುದಾಗಿದೆ. ದೂರವಾಣಿ ಸಂಖ್ಯೆ : 080 25537244**

# ವಾರ್ತಾ ವಿಶೇಷ

ಕೇಂದ್ರಸರ್ಕಾರ ಯೋಜನಾ ಆಯೋಗವನ್ನು ರದ್ದುಗೊಳಿಸಿ ಅದಕ್ಕೆ ಬದಲಾಗಿ 'ನೀತಿ ಆಯೋಗ'ವನ್ನು ಅಸ್ತಿತ್ವಕ್ಕೆ ತಂದಿದೆ.

ಹೊಸ ವರ್ಷದ ಮೊದಲ ದಿನದಂದು ರಚನೆಗೊಂಡಿರುವ 'ಭಾರತ ಪರಿವರ್ತನಾ ರಾಷ್ಟ್ರೀಯ ಸಂಸ್ಥೆ' (ನ್ಯಾಷನಲ್ ಇನ್ಸ್‌ಟಿಟ್ಯೂಷನ್ ಆಫ್ ಟ್ರಾನ್ಸ್‌ಫಾರ್ಮಿಂಗ್ ಇಂಡಿಯಾ – ಎನ್ಐಟಿಐ) ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪ್ರಾತಿನಿಧಿಕ ನೀತಿ ನಿರೂಪಣಾ ಸಂಸ್ಥೆಯಾಗಿ ಕಾರ್ಯನಿರ್ವಹಿಸಲಿದೆ. 'ಬಲಾಢ್ಯ ರಾಜ್ಯ ಗಳಿಂದ ಬಲಾಢ್ಯ ರಾಷ್ಟ್ರ'ತತ್ವದಡಿ ಒಕ್ಕೂಟ ವ್ಯವಸ್ಥೆಗೆ ಪೂರಕವಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ 'ರಾಷ್ಟ್ರೀಯ ಕಾರ್ಯ ಸೂಚಿ' ರೂಪಿಸಲು ಈ 'ನೀತಿ ಆಯೋಗವು' ಮಾರ್ಗದರ್ಶನ ಮಾಡಲಿದೆ.

* * *

ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಮಾಡಲಾದ 'ಜಿಎಸ್ಎಲ್‌ವಿ– ಮಾರ್ಕ್ 3' ಉಡ್ಡಯನ ಪರೀಕ್ಷೆ ಯಶಸ್ಸು ಕಂಡಿದೆ. ಈ ಉಡಾವಣೆಯಲ್ಲಿ 'ಇಸ್ರೊ' ಎರಡು ಉದ್ದೇಶಗಳನ್ನು ಹೊಂದಿತ್ತು. ಭಾರಿ ತೂಕದ ಉಪಗ್ರಹಗಳ ಉಡಾವಣೆಯಲ್ಲಿ ಸ್ವಾವಲಂಬನೆ ಸಾಧಿಸುವುದು ಹಾಗೂ ಬಾಹ್ಯಾಕಾಶಕ್ಕೆ ಮಾನವರನ್ನು ಕಳುಹಿಸಲು ಸಾಧ್ಯವಾಗುವಂತಹ ಅಂತರಿಕ್ಷ ನೌಕೆಯನ್ನು ಉಡಾವಣೆ ಮಾಡಿ ಅದನ್ನು ಸುರಕ್ಷಿತವಾಗಿ ಭೂಮಿಗೆ ಮರಳಿ ತರುವುದು. 'ಜಿಎಸ್ಎಲ್‌ವಿ – ಮಾರ್ಕ್ 3' ನಾಲ್ಕು ಸಾವಿರ ಕೆ.ಜಿ.ಗೂ ಹೆಚ್ಚು ತೂಕದ ಉಪಗ್ರಹಗಳನ್ನು ಭೂಸ್ಥಿರ ಕಕ್ಷೆಗೆ ಕೊಂಡೊಯ್ಯುವ ಸಾಮರ್ಥ್ಯ ಹೊಂದಿದೆ. 'ಮಾನವರನ್ನು ಬಾಹ್ಯಾಕಾಶಕ್ಕೆ ಕಳುಹಿಸಲು ಉಡ್ಡಯನ ಅಂತರಿಕ್ಷ ನೌಕೆಯನ್ನು 126 ಕಿ.ಮೀ. ಎತ್ತರಕ್ಕೆ ಚಿಮ್ಮಿಸಿ ಅದಕ್ಕೆ ಯಾವುದೇ ಹಾನಿಯಾಗದಂತೆ ಕೆಳಕ್ಕೆ ಇಳಿಸಿರುವುದು ಮಹತ್ವದ ಘಟ್ಟ.

* * *



**ಮಹಾನ್ ಶಿಕ್ಷಣಜ್ಞ, ಸ್ವಾತಂತ್ರ್ಯ ಹೋರಾಟಗಾರ ದಿವಂಗತ ಪಂಡಿತ್ ಮದನ್ ಮೋಹನ್ ಮಾಳವೀಯ ಮತ್ತು ದೇಶದ ಹಿಂದಿನ ಪ್ರಧಾನಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರಿಗೆ ದೇಶದ ಅತ್ಯುತ್ತಮ ನಾಗರಿಕ ಸನ್ಮಾನ ಭಾರತ ರತ್ನ ಪುರಸ್ಕಾರ ಪ್ರಕಟಿಸಲಾಗಿದೆ.**

ಕರ್ನಾಟಕದ ಎಲ್ಲಾ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿಗೆ ಸುಧಾರಿತ ಸಂಸ್ಕರಣ ಘಟಕಗಳನ್ನು ಸ್ಥಾಪಿಸಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಶ್ರೀ ವಿನಯ್ ಕುಮಾರ್ ಸೊರಕೆ ಹೇಳಿದ್ದಾರೆ. ಇದಲ್ಲದೆ ತ್ಯಾಜ್ಯ ವಿಲೇವಾರಿ ನಿಗಮ ರಚಿಸಲಾಗುವುದು ಎಂದು ಅವರು ಹೇಳಿದ್ದಾರೆ. ❑


## Subscription Coupon

**[For New membership /Renewal/Change of Address]**

I want to subscribe to :

Yojana / Kurukshetra / Ajkal / : 1 yr. Rs.100/-; 2 yrs, Rs.180/- ; 3 yrs, Rs.250/-

Bal Bharati : 1 yr. Rs.80/-; 2 yrs, Rs.150/- ; 3 yrs, Rs.200/-

**(Circle the magazine of your choice and the period of subscription)**

DD/PO/MO No.______________________________ date ______________

Name (in block letters) : ______________________________

Subscriber's profile : Student / Academician / Institution / Others

Address : ______________________________

______________________________

PIN : ____________________

The amount may kindly be sent in the form of D.D. It should be drawn in favour of ADG (I/C), Publications Division, Min. of I & B, GOI and payable at New Delhi. The D.D. along with duly filled cupon may kindly be sent to The Business Manager (Journals), Publications Division, East Block-IV, Level-7, R.K.Puram, New Delhi – 110066. Ph : 011-26100207, 26105590

Please allow us 4 to 6 weeks for the dispatch of the first issue.
P.S. : For Renewal / change in address, please quote your subscription number